


ಪ್ರಬುದ್ಧ ಕರ್ನಾಟಕ

ವೃಷ ಸಂವತ್ಸರ] —೮೭— [ವಿನಾಯಕನ ಸಂಚಿಕೆ




ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೪೧

ಸಂಪುಟ ೨೩] [ಸಂಚಿಕೆ ೧

ವಿಷಯ ಸೂಚಿಕೆ



ವೀಣಾಧ್ವನಿ [ಪುಟ ೧೦



ವೃಷ ಸಂವತ್ಸರ — ೮೭ — ವಿನಾಯಕನ ಸಂಚಿಕೆ

ಮಳೆಬಿಲ್ಲು

೧

ಬಾನ ಮಿಕ್ಕು
ಹನಿಯ ಹೊಕ್ಕು
ಬಾನ ಕೊಳೆಯ ತೊಳೆಯಲೆಳಸಿ
ಬಾಳ ಗೋಳ ತಿಳಿಸಲೆಳಸಿ
ಮಳೆಯ ಬಿಲ್ಲು
ಕಲೆಯ ಬಿಲ್ಲು
ಬಾಗಿ ನಿಂದಿದೆ,
ಸೊಗದ ಕಾಲ ಸುಳಿಯಿತೆಂದು
ಬಳುಕಿ ನಿಂದಿದೆ.

೨

ಏಳು ಬಣ್ಣ
ತಾಳಿ ಕಣ್ಣ
ಪುಟ್ಟದೊಂದು ಮೇಳ ನಡೆಸಿ
ಚಟ್ಟನೊಂದು ಚಿಲುಮೆ ಹರಿಸಿ
ಬಾನ ಬಿಲ್ಲು
ಸೋನೆ ಬಿಲ್ಲು
ಚಿಮ್ಮಿನಿಂದಿದೆ,
ಬಾನ ಬೆಳಗಿ ಬಣ್ಣ ಹಚ್ಚಿ
ನಲಿದು ನಿಂದಿದೆ.

೩

ಬಣ್ಣ ಏಳು
ನೆಮ್ಮಿ ಬಾಳು
ರಾಗ ರತಿಯ ಮಿಂದು ಬಂದು
ಸಗ್ಗ ಸೊಗದ ಸೂರೆ ತಂದು
ಒಂದನೊಂದು ಒತ್ತಿ ನಲಿಸಿ
ಒಂದಕೊಂದು ಮುತ್ತು ಸಲಿಸಿ
ಅಪ್ಪಿ ನಿಂದಿವೆ,
ಹೋಳಿ ಚೆಲ್ಲಿ ಹೊಳೆಯ ಹರಿಸಿ
ಚಿಮ್ಮಿಯಾಡಿವೆ.

೪

ಕಲೆಯ ಜೇನ
ಮಾಡಿ ಪಾನ
ಹೋಳಿ ಬಿಲ್ಲು ಕಾಮ ಬಿಲ್ಲು
ವಿಶ್ವರಾಗ ರೂಪಧರಿಸಿ
ಸಗ್ಗಕೊಂದು ಸೇತು ನಿಲಿಸಿ
ಚಣದಿ ಜಗವ ನಲಿಸಿತೆಂದು
ನಾಕ ನರಕವೆರಡು ಕೂಡಿ
ತಣಿದುಹೋಗಿವೆ,
ಕಲಿಯ ಬಿಲ್ಲು ಕವಿಯ ಸೊಲ್ಲು
ಮೂಕವಾಗಿವೆ.

ಎ. ರಾಮಚಂದ್ರರಾವ್.

ಮಹಾಶ್ವೇತೆಯ ತಪಸ್ಸು

೧

ಮನುಷ್ಯನ ಮನಸ್ಸು ಊರ್ಧ್ವಮುಖಿ. ಅವನ ಕನಸು ಗಗನಗಾಮಿ. ಅವನ ಕಲ್ಪನೆ ನಕ್ಷತ್ರಯಾತ್ರಿ. ಆ ಊರ್ಧ್ವಮುಖದ, ಗಗನಗಮನದ ಮತ್ತು ನಕ್ಷತ್ರ ಯಾತ್ರೆಯ ಸಾಹಸಕ್ಕೆ ಮೊದಲನೆಯ ಸಾಕ್ಷಿ ಚರಿತ್ರೆ; ಎರಡನೆಯ ಸಾಕ್ಷಿ ಕಲೆ. ಒಂದು ಬಹಿರ್ಮುಖದ ಸಾಹಸವಾದರೆ ಮತ್ತೊಂದು ಅಂತರ್ಮುಖದ ಸಾಹಸ. ದಾರಿಗಳೆರಡಾದರೂ ಗುರಿಗಳೆರಡಲ್ಲ. ಇಂದಿಲ್ಲದಿದ್ದರೂ ಮುಂದೆ ಕೈಗೂಡಬಹುದೆಂದು ನಂಬಿರುವ ಸುಖಶಾಂತಿಗಳ ಸಂಪಾದನೆಯೆ ಮಾನವಸಾಹಸಕ್ಕೆ ಪರಮಗಂತವ್ಯ. ಆ ಸಾಹಸವು ಅಲೆಕ್ಸಾಂಡರನ ದಂಡಯಾತ್ರೆಯಾಗಿ, ಕಾಳಿದಾಸನ ಮೇಘದೂತವಾಗಿ, ಶ್ರವಣಬೆಳ್ಗೊಳದ ಗೋಮಟೇಶ್ವರವಾಗಿ ನಾನಾರೂಪಿಯಾಗಿ ವ್ಯಕ್ತವಾಗುತ್ತದೆ. ಆ ಸಾಹಸದ ಫಲವಾಗಿಯೆ ಕ್ರಿಸ್ತಬುದ್ಧರೂ ಆವಿರ್ಭವಿಸುತ್ತಾರೆ.

ಎಲ್ಲ ಕಲೆಗಳ ಗುರಿಯೂ ಆನಂದ, ರಸಾನುಭೂತಿ. ಆ ಆನಂದದ ಸ್ವರ್ಗಕ್ಕಾಗಿಯೆ ನಿರಂತರವೂ ಮರ್ತ್ಯವು ಅಮರ್ತ್ಯದ ಕಡೆಗೆ ಮುಖ ಚಾಚಿ ನೋಡುತ್ತದೆ, ಕೈನೀಡಿ ಬೇಡುತ್ತದೆ. ಒಮ್ಮೊಮ್ಮೆ, ಕಲ್ಪನೆ ಐಹಿಕಯಥಾರ್ಥವನ್ನೇ ಶೃಂಗರಿಸಿ ತನ್ನ ಸ್ವಪ್ನಸ್ವರ್ಗವನ್ನು ರಚಿಸಲು ಪ್ರಯತ್ನಿಸುತ್ತದೆ. ಒಮ್ಮೊಮ್ಮೆ, ಮರ್ತ್ಯದಿಂದ ಅಮರ್ತ್ಯಕ್ಕೆ ವರ್ಣವರ್ಣದ ಸ್ವರ್ಣಸೇತುವನ್ನು ಬೀಸಿ, ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಪಯಣಸೌಕರ್ಯವನ್ನು ಕಲ್ಪಿಸಿ, ಕಾಮಧೇನುವಿನ ಕೆಚ್ಚಲಸೋನೆಗೊಂದು ಕಾಲುವೆ ಮಾಡಿ, ಆ ಸೊದೆ ಮನೆಯಂಗಳದಲ್ಲಿರುವ ಹೊಂಗಿಂಡಿಗೆ ದುಮುಕುವಂತೆ ಮಾಡುತ್ತದೆ. ಆ ಕವಿಪ್ರತಿಭೆಯ ಭಾಗೀರಥಿಯಲ್ಲಿ ರಸಸ್ನಾನಮಾಡಿ, ಕ್ಷಣಿಕಮರ್ತ್ಯದ ಮಣ್ಣುದೂಳು ಬಿಸಿಲು ಕೆಸರುಗಳಿಂದ ಪಾರಾದ ಸಹೃದಯನ ಆತ್ಮಕ್ಕೆ ಗೋಚರವಾಗುತ್ತದೆ ಶಾಶ್ವತವಾದ ಆನಂದಾನುಭೂತಿ.

ಮಹಾಕವಿಪ್ರತಿಭೆಯ ಸ್ವಪ್ನಸುಂದರ ಸಾಹಸಗಳಲ್ಲಿ ಕಾದಂಬರೀ ಕಾವ್ಯವೂ ಒಂದದ್ಭುತ ಕೃತಿ. ಅದೊಂದು ಮೇಘಚುಂಬಿಯಾದ ಶೃಂಗಾರಗೋಪುರ. ಅದರ ತಳಹದಿ ಭೂಮಿಯ ಮೇಲಿರುವಂತೆ ಕಾಣುತ್ತದೆ. ಅದರ ತುದಿ ಬೆಳ್ಮುಗಿಲಿನ ಮುದ್ದಾಟದಲ್ಲಿ ಅರೆಮರೆಯಾಗಿದೆ. ಅದರ ಜಗತ್ತು ಹೊಸ ಮಳೆಯಲ್ಲಿ ಮಿಂದ ಮಲೆಗಳ ಮೇಲೆ ಮೂಡುವ ಸೂರ್ಯೋದಯದ ಚೈತ್ರಕಾನನ ಪಂಕ್ತಿಯ ವರ್ಣ

ವೈವಿಧ್ಯದಿಂದಲೂ ಖಚಿತರಚನಾವೈಖರಿಯಿಂದಲೂ ಶೋಭಿಸುತ್ತಿದ್ದರೂ ಬೆಳ್ದಿಂಗಳ ರಾತ್ರಿಯಂತೆ ಹೊಂಗನಸಿನ ಹೊದಿಕೆಯಲ್ಲಿ ಧ್ಯಾನಶೀಲವಾಗಿದೆ.

ಮಹತ್ತಾದ ಕಲೆಗೆ ಅತಿಸ್ಪಷ್ಟತೆ ಒಂದು ನ್ಯೂನತೆ; ಅತಿ ಅಸ್ಪಷ್ಟತೆ ಒಂದು ದೋಷ. ಕಾದಂಬರಿಯ ಕಥೆ ಆ ಕೊರತೆಯಿಂದಲೂ ಈ ಕುಂದಿನಿಂದಲೂ ಪಾರಾಗಿ, ಒಂದರ ಸೌಂದರ್ಯದಿಂದಲೂ ಮತ್ತೊಂದರ ಸತ್ಯದಿಂದಲೂ ಶೋಭಿಸುತ್ತಿದೆ.

ನರನಿಗೆ ಅಮರನಾಗಬೇಕೆಂಬ ಆಸೆ. ಆದರೆ ಮರ್ತ್ಯದ ಸುಖಸೌಂದರ್ಯಗಳನ್ನು ಕೈಬಿಡಲಾರದ ಮೋಹ. ಮತ್ತು ಐಹಿಕದ ಪ್ರೇಮ, ಸೌಂದರ್ಯ, ಸುಖ, ಭೋಗ ಇವುಗಳಿಗೆ ಸ್ವರ್ಗದ ಅಜರತೆ, ಅಮರತೆ, ನಿತ್ಯಯೌವನ ಮತ್ತು ಶಾಶ್ವತಾನಂದಗಳನ್ನು ಹೇಗಾದರೂ ಕೊಳ್ಳೆಹೊಡೆದು ತಂದು ಗಂಟುಹಾಕಬೇಕೆಂಬ ವೀರಸಾಹಸ. ಮಾನವನ ಆ ಬಯಕೆ ಪ್ರಪಂಚದ ಅನೇಕ ಕಲಾಕೃತಿಗಳಲ್ಲಿ ರೂಪಧಾರಣೆ ಮಾಡಿದೆ. ಕಾದಂಬರಿಯೂ ಆ ಹಂಬಲದೊಂದು ಹೊಂಗನಸು ; ಆ ಮೋಹದ ಒಂದು ಐಂದ್ರಜಾಲಿಕಸೃಷ್ಟಿ.

ಮಾನವನ ಸಂಕಲ್ಪಸಮಸ್ತಕ್ಕೂ ಪ್ರತಿನಿಧಿಯಾದ ಕವಿಪ್ರತಿಭೆ ಮಣ್ಣಿನಿಂದ ಮುಗಿಲಿಗೆ ಬೀಸಿರುವ ಆ ರಸಸೇತುವೆಯ ಕೃಪಾಶ್ರಯದಲ್ಲಿ ಮರ್ತ್ಯರಾದ ನರರು ಅಮರರಿಗೆ ಹೆಗಲೆಣೆಯಾಗಿದ್ದಾರೆ. ಮನುಷ್ಯರು ಗಂಧರ್ವಲೋಕಕ್ಕೆ ಏರಿದ್ದಾರೆ. ಗಂಧರ್ವರು ತಮ್ಮ ಮೇಘಜಗತ್ತಿನ ಹಮ್ಮುಬಿಮ್ಮುಗಳನ್ನು ನೀಗಿ ಪೃಥ್ವಿಗಿಳಿದು ಬಂದು ನರರಿಗೆ ನಂಟರಾಗಿದ್ದಾರೆ. ದೇವತಪಸ್ವಿಯಾದ ಪುಂಡರೀಕನಂತೆಯೆ ತ್ರಿಲೋಕವಂದಿತನಾದ ಚಂದ್ರನೂ ಮನುಷ್ಯ ಸತಿಯ ಗರ್ಭದಲ್ಲಿ ಅವತರಿಸಿದ್ದಾನೆ. ಕುಮಾರತಾಪಸ ಕಪಿಂಜಲನು ಗೆಳೆತನದ ಹಿರಿಮೆಗಾಗಿ ಕುದುರೆಯತನಕ್ಕೂ ಬಿದ್ದುಬಿಟ್ಟಿದ್ದಾನೆ. ಗಂಧರ್ವಕನ್ಯೆಯರಲ್ಲಿ ಅನರ್ಘ್ಯರತ್ನಗಳಾಗಿದ್ದ ಮಹಾಶ್ವೇತೆ ಮತ್ತು ಕಾದಂಬರಿಯರು ನಮ್ಮ ಭೂಮಿಯ ಗೃಹಿಣೀ ಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸಿ, ಮನುಷ್ಯತ್ವಕ್ಕೆ ಗೌರವವನ್ನು ನಿವೇದಿಸಿದ್ದಾರೆ. ಸ್ವರ್ಗಮರ್ತ್ಯಗಳನ್ನು ಒಂದುಮಾಡಿರುವ ಕಾವ್ಯಸೇತುವೆಯಲ್ಲಿ ಹಿಂದಕ್ಕೂ ಮುಂದಕ್ಕೂ ತಿರುತಿರುಗಾಡುವ ನಮಗೆ ಮರ್ತ್ಯರಿಗೂ ಗಂಧರ್ವರಿಗೂ ತಾರತಮ್ಯವೆ ಮರೆತುಹೋಗುತ್ತದೆ. ಅಮರರೂರಿಗೆ ನಂಟರಾಗಿ ಹೋದವರು ಅಮೃತಪಾನ ಮಾಡದೆ ಹಿಂತಿರುಗುವುದಿಲ್ಲವಾದ್ದರಿಂದ ನಾವು ಅಲ್ಲಿಗೆ ಹೋಗುವಾಗ ಮರ್ತ್ಯರೇ ಹೊರತು ಮರಳಿ ಬರುವಾಗ ಅಲ್ಲ.

ಮನುಷ್ಯನು ಸ್ವರ್ಗಕ್ಕೇರಿ, ಸ್ವರ್ಗವನ್ನು ಭೂಮಿಗೆ ಎಳೆತರುವ ಸಾಹಸ ಚಿತ್ರಗಳನ್ನು ಪರಂಪರೆಯಾಗಿ ಪ್ರದರ್ಶಿಸುವ ಕಾದಂಬರೀ ಕಾವ್ಯವು ಒಂದು ರಮಣೀಯ ಚಿತ್ರಶಾಲೆಯಾಗಿದೆ.

ಕಾದಂಬರಿ ಪ್ರೇಮದ ವಿಜಯಕಥೆ. ವೈರಾಗ್ಯವು ಶೃಂಗಾರಕ್ಕೆ ಶರಣಾದ ಕಥೆ. ದೈಹಿಕ ಕಾಮವು ಜನ್ಮಜನ್ಮಾಂತರಗಳ ಕ್ಲೇಶ ಕಷ್ಟ ವಿರಹಗಳ ಉಗ್ರತಪಸ್ಸಿನಿಂದ ಕಾಳಿಕೆಯನ್ನು ಕಳೆದುಕೊಂಡು ಅಚ್ಚ ಹೊನ್ನಾಗಿ ದೈವಿಕಪ್ರೇಮದಲ್ಲಿ ಸಾರ್ಥಕತೆಯನ್ನು ಸಂಪಾದಿಸಿದ ಪುಣ್ಯಕಥೆ. ಆ ಕಥೆ ಅಗ್ನಿಜ್ವಾಲೆಯಲ್ಲಿ ಬೇರ್ಗೊಂಡು ಚಂದ್ರಜ್ಯೋತ್ಸ್ನೆಯಾಗಿ ಹಣ್ಗೊಂಡಿದೆ. ಅಲ್ಲಿಯ ಶೃಂಗಾರವೂ ತಪೋಮಯವಾಗಿದೆ; ತಪಸ್ಸೂ ಶೃಂಗಾರಪೂರ್ಣವಾಗಿದೆ.

ಮೌನವನ್ನೇ ಮಿಡಿಮಿಡಿದು ಮಹಾ ಸಂಗೀತವನ್ನಾಗಿ ಮಾಡಿರುವ ಕವಿಪ್ರತಿಭೆ ನಮ್ಮನ್ನು ಬೆರಗುಗೊಳಿಸುತ್ತದೆ: ಎನಿತು ಕಿರಿದಾದ ಕನಸಿನಲ್ಲಿ ಎನಿತು ಹಿರಿದಾದ ಕಾವ್ಯಮಂದಿರವನ್ನು ಕಂಡರಿಸಿದ್ದಾನೆ! ಸಣ್ಣದೊಂದು ಪ್ರಣಯದ ಕಿಡಿಯಿಂದ ಪ್ರೇಮದಾವಾಗ್ನಿಯ ಮಹಾಜ್ವಾಲೆಯನ್ನು ಹೊತ್ತಿಸಿ, ಶಿಲಾಪರ್ವತವನ್ನು ಕೊರೆದು ಬೃಹತ್ತಾದ ವಿಹಾರಗಳನ್ನು ನಿರ್ಮಿಸುವ ದೈತ್ಯಶಿಲ್ಪಿಯಂತೆ, ಕವಿ ಆ ಜ್ವಾಲೆಯನ್ನೇ ಕೊರೆದು ಕಡೆದು ಮಹಾಕಾವ್ಯದ ಸುಧಾಸೌಧವನ್ನು ಸೃಜಿಸಿದ್ದಾನೆ.

ಕಾದಂಬರಿಯ ಕಥೆ ಕ್ರಿಯೆಗಿಂತಲೂ ಹೆಚ್ಚಾಗಿ ಕನಸನ್ನು ಹೋಲುತ್ತದೆ. ಅದರಲ್ಲಿ ಬರುವ ಕ್ರಿಯೆಯೂ ಸ್ವಪ್ನಕ್ರಿಯೆ. ರಾಮಾಯಣ ಮಹಾಭಾರತಗಳಂತೆ ಅದು ಪರ್ವತಕಂದರಗಳಲ್ಲಿ ಧುಮ್ಮಿಕ್ಕಿ, ನೆಲವನ್ನಪ್ಪಳಿಸಿ ಕೊಚ್ಚಿ ಕೆಡಹುತ್ತಾ ಅನೇಕ ಉಪನದಿಗಳನ್ನು ಕೂಡಿಕೊಳ್ಳುತ್ತಾ ನುಗ್ಗಿ ಹರಿಯುವ ಭೀಷ್ಮಪ್ರವಾಹವಾಗಿಲ್ಲ. ಅಲ್ಲಿ ಮನುಷ್ಯ ಹೃದಯದ ಭಯಂಕರಭಾವಗಳ ಘರ್ಷಣೆಘೋಷಣೆಗಳಿಲ್ಲ.

ಕಾದಂಬರಿಯ ಕವಿಯ ದರ್ಶನಕ್ಕೆ ಎರಡು ಕಣ್ಣುಗಳಿವೆ. ಒಂದು: ಸರಳ, ಗಂಭೀರ, ಅನಶ್ಲೀಲ, ಸುಂದರ ಶೃಂಗಾರ. ಮತ್ತೊಂದು: ಸದ್ಯಃ ಫಲಾಕಾಂಕ್ಷಿಯಲ್ಲದ, ಜನ್ಮಜನ್ಮಾಂತರದ ವರೆಗೂ ಕಾಯುವ ಸಾಮರ್ಥ್ಯವೂ ತಾಳ್ಮೆಯೂ ಶ್ರದ್ಧೆಯೂ ಇರುವ, ಪ್ರೇಮದ ನೀರವಧ್ಯಾನಮಯವಾದ ತಪಸ್ಸು. ಕಣ್ಣುಗಳೆರಡಾದರೂ ಕಾಣಿಕೆಯೆರಡಲ್ಲ. ಒಂದಕ್ಕೆ ಮತ್ತೊಂದು ಪೂರಕ ಮತ್ತು ಪೋಷಕ. ಪ್ರೇಮವು ತಪಸ್ಸಿನಿಂದಲೇ ಶುದ್ಧವಾಗಿ ಶಾಶ್ವತವಾಗಿ ಸಾರ್ಥಕವಾಗುತ್ತದೆ. ಭೋಗಕ್ಕೆ ತ್ಯಾಗದಿಂದಲೇ ಸಿದ್ಧಿ.

ಕಾದಂಬರೀ ಕಾವ್ಯದಲ್ಲಿ ಶೃಂಗಾರಕ್ಕೆ ತಪಸ್ಸು ಸಾಧನರಂಗವಾಗಿದೆ. ಅಲ್ಲಿ ಘಟನಾಪರಂಪರೆಗಳ ಅಟ್ಟಹಾಸಕ್ಕಿಂತಲೂ ಅನುಭೂತಿಯ ದೀರ್ಘತೆಯೇ ಉಜ್ವಲವಾಗಿದೆ. ಅಲ್ಲಿ ಕೌತುಕದ ಘಟನೆಗಳಿಗೇನೂ ಕಡಮೆಯಿಲ್ಲ. ಆದರೆ ಆ ಘಟನೆಗಳ ಚಲನೆ ಹೃದಯಾನುಭವದ, ಮನೋವೇದನೆಯ, ವ್ರತಪೂರ್ಣತಪಸ್ಸಿನ ನಿಶ್ಚಲತೆಯಲ್ಲಿ ಸಮಾಧಿಹೊಂದಿದೆ. ಉರಿಯುತ್ತಿರುವ ಹಣತೆಯ ಸೊಡರು ಓಡಿಯಾಡುವುದಿಲ್ಲ,

ಗಲಭೆಮಾಡುವುದಿಲ್ಲ. ಆದರೂ ಅದರ ನಿಶ್ಚಲತೆ ನೀರವತೆಗಳು ಅಕರ್ಮಸೂಚಕವಲ್ಲ. ಹೊಕ್ಕುನೋಡುವ ವಿಜ್ಞಾನಿಯ ಕಣ್ಣಿಗೆ ಅಲ್ಲಿ ಭಯಂಕರ ಕರ್ಮರಂಗವೊಂದು ಗೋಚರಿಸುತ್ತದೆ. ಆದರಂತೆಯೆ ಮಹಾಶ್ವೇತೆಯ ತಪಸ್ಸಿನ ನಿಶ್ಚಲತೆಯಲ್ಲಿ ವಿಶ್ವಶಕ್ತಿಗಳನ್ನೇ ತಿರ್ರನೆ ತಿರುಗಿಸುವ ಮಹಾಶಕ್ತಿಯನ್ನು ದರ್ಶಿಸುತ್ತೇವೆ. ಯಾವುದು ಸುಲಭಸಿದ್ಧಿಯಿಂದ ಕ್ಷಣಿಕವಾಗುತ್ತಿತ್ತೋ, ಯಾವುದು ಶೀಘ್ರತೃಪ್ತಿಯಿಂದ ತನ್ನ ಚಿರಚೇತನವನ್ನು ದೈನಂದಿನ ಬೇಸರಕ್ಕೆ ಸಮರ್ಪಿಸಿ ಅಲ್ಪವಾಗಿ ವಿಸ್ಮೃತವಾಗುತ್ತಿತ್ತೋ ಆ ಪ್ರಣಯವು ಕಾದಂಬರೀ ಕಾವ್ಯದಲ್ಲಿ ತಪಸ್ಸಿನಿಂದ ಶಾಶ್ವತವಾಗಿದೆ; ಮತ್ತು ಮಹತ್ತಾಗಿದೆ. ಕ್ಷಣಿಕಕಾಮವು ಕಷ್ಟದ ಮೂಷೆಯಲ್ಲಿ ಕರಗಿ, ಕಾಲದ ಒರೆಗಲ್ಲಿನಲ್ಲಿ ಪರೀಕ್ಷಿತವಾಗಿ, ಶಾಶ್ವತಪ್ರೇಮದಲ್ಲಿ ಪರಿಣಮಿಸಿದುದಕ್ಕೆ ಪುಂಡರೀಕ ಮಹಾಶ್ವೇತೆಯರ ಕಥೆ ನಿದರ್ಶನವಾಗಿದೆ.

ಆ ನಿದರ್ಶನದಲ್ಲಿ ಕವಿಯ 'ದರ್ಶನ' ಇಂಗಿತವಾಗಿದೆ.

೨

ಆ ದರ್ಶನ ನಮಗೆ ಅಪರಿಚಿತವಾದುದಲ್ಲ. ನಮ್ಮ ಪ್ರಾಚೀನ ಮಹಾ ಕವಿಗಳೆಲ್ಲರೂ ತಮ್ಮ ಅಮರಕಾವ್ಯಗಳಲ್ಲಿ ಅದೇ ದರ್ಶನವನ್ನು ಪ್ರತಿಪಾದಿಸಿದ್ದಾರೆ. ಉಪನಿಷತ್ತಿನ ಋಷಿಗಳಿಂದ ಪ್ರಣೀತವಾದ ನಮ್ಮ ಸಂಸ್ಕೃತಿ ತ್ಯಾಗಶೀಲವಲ್ಲದ ಭೋಗವನ್ನು ಅಲ್ಪವೆಂದು ಪರಿಗಣಿಸುತ್ತದೆ. ಅದು ಭೋಗವನ್ನು ಅಲ್ಲಗಳೆಯುವುದಿಲ್ಲ. "ಯೋ ವೈ ಭೂಮಾ ತತ್ಸುಖಂ; ನಾಲ್ಪೇ ಸುಖಮಸ್ತಿ." "ತೇನ ತ್ಯಕ್ತೇನ ಭುಂಜೀಥಾಃ" ಯಾವುದು ಭೂಮವೋ, ಎಂದರೆ ಮಹತ್ತಾದುದೋ, ಅದೇ ಸುಖ. ಅಲ್ಪದಲ್ಲಿ ಸುಖವಿಲ್ಲ. ಸಮಸ್ತ ಭೋಗವೂ ಭೂಮಕ್ಕೆತ್ತಿದ ತ್ಯಾಗದಾರತಿಯಾಗಬೇಕು. ಆಗ ಕ್ಷಣಿಕಭೋಗವೂ ಬ್ರಹ್ಮಾನಂದವಾಗಿ ಮಾರ್ಪಡುತ್ತದೆ.

ಕ್ಷುಧೆ ಮತ್ತು ಕಾಮ ಇವೆರಡೂ ಪ್ರಕೃತಿಯಲ್ಲಿ ಬಹು ದೊಡ್ಡ ರಂಗಗಳನ್ನು ನಿರ್ಮಿಸಿಕೊಂಡಿರುತ್ತವೆ. ಸರಸವಾದಾಗ, ಸಮರಸವಾದಾಗ, ಮೈತ್ರಿಯ ಔತಣಕೂಟಗಳೂ ಶೃಂಗಾರದ ವೈವಾಹಮಂಟಪಗಳೂ ನಿರ್ಮಾಣವಾಗುತ್ತವೆ. ವಿರಸವಾಗಿ, ಸ್ಪರ್ಧೆ ಪ್ರಾರಂಭವಾಯಿತೆಂದರೆ ರಣಚಂಡಿಯ ಭೈರವಲೀಲೆ ನಡೆದುಹೋಗುತ್ತದೆ: ರಾಮಾಯಣ, ಮಹಾಭಾರತ, ಈಲಿಯಡ್ ಮತ್ತು ಒಡೆಸ್ಸಿಗಳಿಗೆ ಸಾಮಗ್ರಿಯೊದಗುತ್ತದೆ. ಆಗ ನಿಸರ್ಗದ ರಾಜ್ಯದ ಜೊತೆಗೆ ಮಾನವನ ಮನಸ್ಸಾಮ್ರಾಜ್ಯವೂ ಗೋಚರವಾಗುತ್ತದೆ. ದೇಹಕ್ಕೂ ಧ್ಯೇಯಕ್ಕೂ ಹೋರಾಟ ನಡೆದು, ಧ್ಯೇಯಕ್ಕಾಗಿ ದೇಹ ಸಮರ್ಪಿತವಾದಾಗ ಅಥವಾ ಶರಣಾದಾಗ ಆತ್ಮದ 'ದರ್ಶನ' ವ್ಯಕ್ತವಾಗುತ್ತದೆ.

ಪ್ರಾಚೀನ ಯುಗದಲ್ಲಿ ಮನುಷ್ಯನ ಕ್ಷುಧಾಕಾಮಗಳು ಈಗಿರುವಂತೆಯೆ ಇದ್ದುವಾದರೂ ಜನಸಂಖ್ಯೆ ವಿರಳವಾಗಿದ್ದುದರಿಂದಲೂ ಭೂವಿಸ್ತಾರವು ವಿಪುಲ ವಾಗಿದ್ದುದರಿಂದಲೂ ಈಗ ನಡೆಯುತ್ತಿರುವಂತೆ ಕ್ಷುಧಾಕಾರಣಕ್ಕಾಗಿ ಮಹಾ ಸಮರಗಳು ಜರುಗುತ್ತಿದ್ದುದು ಕಡಮೆಯೆಂದೇ ತೋರುತ್ತದೆ. ಅಥವಾ ನಡೆದಿದ್ದರೂ ಸಾಹಿತ್ಯ ಅಂಥವುಗಳನ್ನು ಶಾಶ್ವತಗೊಳಿಸಲು ಇಷ್ಟಪಟ್ಟಿಲ್ಲ. ಆದರೆ ಕಾಮಕಾರಣ ಕ್ಕಾಗಿ ಬಹು ದೊಡ್ಡ ಯುದ್ಧಗಳು ಬಹುಕಾಲದ ವರೆಗೆ ನಡೆದಿರುವುದಕ್ಕೆ ಎಲ್ಲ ದೇಶಗಳ ಮಹಾಪುರಾಣಗಳೂ ಸಾಕ್ಷಿಯಾಗಿವೆ. ಇಂದು ಕಾಮಕ್ಕಾಗಿ ಅಂಥಾ ಮಹಾಯುದ್ಧಗಳು ನಡೆಯುವುದಿಲ್ಲ; ಎಂದರೆ, ದೇಶದೇಶದ ಜನರೇ ಪಕ್ಷಪ್ರತಿಪಕ್ಷ ಗಳಾಗಿ ನಿಂತು ಒಬ್ಬರನ್ನೊಬ್ಬರು ಕೊಲ್ಲುವುದಿಲ್ಲ. ಆದರೆ ಸಾಮಾನ್ಯವ್ಯಕ್ತಿಗಳ ಜೀವಿತದಲ್ಲಿ ಮನ್ಮಥನ ಮಥನ ಕೋಲಾಹಲವು ಯಥೇಚ್ಛವಾಗಿರುತ್ತದೆ. ಆ ಪ್ರಪಂಚ ವನ್ನು ಕುರಿತು ಬರೆದು ಬಣ್ಣಿಸುವ ಕಾರ್ಯ ಈಗ ಕಾದಂಬರಿಗಳಿಗೆ ವಿಾಸಲಾಗಿದೆ. ಹಿಂದಿನ ಮಹಾಪುರಾಣಗಳ ಸ್ಥಾನದಲ್ಲಿ ಇಂದು ಮಹಾ ಕಾದಂಬರಿಗಳು ನಿಂತಿವೆ.

ಮಹಾಪುರಾಣಗಳೆಲ್ಲವೂ ಒಂದೊಂದು ರೀತಿಯಲ್ಲಿ ಪ್ರಣಯ ಕಥೆಗಳಾಗಿವೆ. ಪ್ರಾಣಿಯ ಪ್ರಣಯ ಮೊದಲುಗೊಂಡು ಪರಮೇಶ್ವರನ ಪ್ರಣಯದವರೆಗೂ ಅಲ್ಲಿ ಚಿತ್ರಿತವಾಗಿವೆ. ಅಂತಹ ಚಿತ್ರಗಳಲ್ಲಿ ನಮ್ಮ ಆರಾಧನೆಗೆ ಪಾತ್ರವಾಗಿ, ನಮ್ಮ ಸಾಧನೆಗೆ ಸೂತ್ರವಾಗಿ, ಚಿರಕಾಲವೂ ನಮ್ಮ ಪ್ರೇಯಸ್ಸು ಶ್ರೇಯಸ್ಸುಗಳಿಗೆ ಆದರ್ಶವಾಗಿ ದೇವವೇದಿಕೆಯ ಮೇಲೆ ನಿಂತಿರುವ ದೇವಿಯರು ಕೆಲವರಿದ್ದಾರೆ: ಸೀತೆ, ಸಾವಿತ್ರಿ, ದಮಯಂತಿ, ಪಾರ್ವತಿ, ಚಂದ್ರಮತಿ, ಊರ್ಮಿಳೆ, ಶಕುಂತಳೆ, ವಾಸವದತ್ತೆ, ಇತ್ಯಾದಿ.

ಅವರ ಕೀರ್ತಿಗಳಲ್ಲಿ ತರತಮಾಂತರಗಳಿರಬಹುದು. ಅವರು ಸಹಿಸಿದ ಕಷ್ಟಗಳಲ್ಲಿ ರೂಪವ್ಯತ್ಯಾಸಗಳಿರಬಹುದು. ಆದರೆ ಅವರ ತಪಸ್ಸಿನ ಹೃದಯದಲ್ಲಿ ಸ್ಪಂದಿಸುವ ಭಾವತೀಕ್ಷ್ಣತೆಯಲ್ಲಿ ಹಿರಿಕಿರಿಯಿಲ್ಲ, ಮೇಲುಕೀಳಿಲ್ಲ. ಅವರಲ್ಲಿ ಒಬ್ಬೊಬ್ಬರ ಪ್ರೇಮವೂ ಒಂದೊಂದು ರೀತಿಯಲ್ಲಿ ವಿಧಿಯ ನಿಷ್ಠುರ ನಿರ್ದಾಕ್ಷಿಣ್ಯ ಪರೀಕ್ಷೆಗೆ ಒಳಗಾಗಿದೆ. ಒಬ್ಬೊಬ್ಬರೂ ಉತ್ತೀರ್ಣರಾಗಿ ಉಜ್ಜ್ವಲರಾಗಿದ್ದಾರೆ. ಇನಿಯರೊಡಗೂಡಿದ ಮೇಲೆ ಕೆಲವರ ತಪಸ್ಸು ಪ್ರಾರಂಭವಾಗುತ್ತದೆ. ಕೆಲವರದ್ದು ಅದಕ್ಕೆ ಪೂರ್ವದಲ್ಲಿಯೆ ಮೊದಲಾಗುತ್ತದೆ. ಜನಕನಂದಿನಿ ಸೀತೆ ರಾಮನೊಡಗೂಡಿ ಅಯೋಧ್ಯೆಯ ಅರಮನೆ ಯಲ್ಲಿ ಕೆಲಕಾಲ ಸುಖವಾಗಿದ್ದು, ತರುವಾಯ ಅರಣ್ಯವಾಸ ಮತ್ತು ಲಂಕಾವಾಸಗಳ ಅಗ್ನಿಸ್ನಾನದಿಂದ ಜಗದ್ವಂದ್ಯೆಯಾಗಿದ್ದಾಳೆ. ಗಿರಿರಾಜನಂದನೆ ಪಾರ್ವತಿಯಾದರೊ ತಪಸ್ಸಿನ ತರುವಾಯ ಅದರ ಫಲರೂಪವಾಗಿಯೆ ಚಂದ್ರಮೌಳಿಗೆ ಅರ್ಧಾಂಗಿ

ಯಾಗುತ್ತಾಳೆ. ಇನಿಯನ ಕೊರಳಿನಲ್ಲಿ ಮೃತ್ಯುಪಾಶದ ಛಾಯೆಯನ್ನು ಕಂಡೂ ಅವನನ್ನು ವರಿಸಿ, ತನ್ನ ಪ್ರೇಮದ ತಪಸ್ಸಿನಿಂದ ಯಮನನ್ನೂ ಒಲಿಸಿ, ತನ್ನ ಪ್ರಾಣೇಶ್ವರನನ್ನು ಗೆದ್ದುಕೊಂಡಿದ್ದಾಳೆ ಸಾವಿತ್ರಿ. ಪತಿ ತನ್ನ ಆದರ್ಶಕ್ಕಾಗಿ ಕೈಕೊಂಡ ತಪಸ್ಸಿನಲ್ಲಿ ಮನಃಪೂರ್ವಕವಾಗಿ ಭಾಗಿಯಾಗಿ, ಆತನಿಗೊಂದು ಬೆಂಬಲ ವಾಗಿ, ರಾಣಿಯಾಗಿದ್ದರೂ ಪಡಬಾರದ ಕಷ್ಟಾವಮಾನಗಳನ್ನೆಲ್ಲ ಸಹಿಸಿ, ಪೂಜಾರ್ಹ ಳಾಗಿದ್ದಾಳೆ ಚಂದ್ರಮತಿ. ಆಕೆಯ ತಂಗಿ—ದಮಯಂತಿ. ಊರ್ಮಿಳೆಯ ತಪಸ್ಸು ಎಲ್ಲರ ತಪಸ್ಸಿಗಿಂತಲೂ ಕಷ್ಟತರ. ಏಕೆಂದರೆ ಅದೊಂದು ಅನಂತ ನಿರೀಕ್ಷೆ. ಇತರರ ತಪಸ್ಸಿನಲ್ಲಿ ಕ್ರಿಯೆಯ ಮತ್ತು ಸಾಹಸದ ವಿರಾಮವಿದೆ. ಊರ್ಮಿಳೆಯ ತಪಸ್ಸಾದರೂ ನಿಶ್ಚಲತೆಯಿಂದಲೂ ನೀರವತೆಯಿಂದಲೂ ನಿರೀಕ್ಷೆಯ ದೀರ್ಘತೆಯಿಂದಲೂ ಅವಿರಾಮ ವಾಗಿದೆ. ಆಕೆಯದು ಅಹಲ್ಯೆಯ ತಪಸ್ಸಿನಂತೆ ಶಿಲಾತಪಸ್ಸು. ಶಕುಂತಳೆಯ ತಪಸ್ಸಿ ನಲ್ಲಿರುವಂತೆ ಕುಮಾರನ ಕಣ್ಬೆಳಕಿನ ತಂಪಿಲ್ಲ; ವಾಸವದತ್ತೆಯ ತಪಸ್ಸಿನಲ್ಲಿರುವಂತೆ ಪತಿಯ ಸಾಮೀಪ್ಯದ ಅಲಂಪಿಲ್ಲ. ಶಕುಂತಳೆಯ ಕಷ್ಟದ ಕಾರ್ಮೋಡಕ್ಕೆ ಸಂತಾನ ವಾತ್ಸಲ್ಯದ ಮಿಂಚಿನಂತಿದೆ. ವಾಸವದತ್ತೆಯ ಸಂಕಟದ ಸಮೀಪದಲ್ಲಿಯೆ ವೆಂಕಟ ರಮಣನಿದ್ದಾನೆ. ಆ ದೃಷ್ಟಿಯಿಂದ ನೋಡಿದರೆ ಊರ್ಮಿಳೆಯ ತಪಸ್ಸು ಅತ್ಯುಗ್ರವೂ ಅಸಹನೀಯವೂ ಆಗಿ ತೋರುತ್ತದೆ. ಆಕೆಯನ್ನು ಹೋಲುವ ಮತ್ತೊಬ್ಬ ಮಹಾ ಮಹಿಳೆಯೆಂದರೆ ಕಾದಂಬರಿಯ ಮಹಾಶ್ವೇತೆ.

ಅಂತೂ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಪ್ರಸಿದ್ಧರೂ ಪೂಜ್ಯರೂ ಆಗಿರುವ ಮಹಿಳೆಯರೆಲ್ಲರೂ ತಪಸ್ಸಿಲ್ಲದೆ ಆ ಮಹತ್ತಿಗೇರಿಲ್ಲ ಎಂಬುದು ನಿರ್ವಿವಾದವಾಗಿದೆ.

ಆಧುನಿಕ ನಾಗರಿಕತೆಗೆ ತಪಸ್ಸಿನಲ್ಲಿ ನಂಬುಗೆ ತಪ್ಪಿಹೋಗಿದೆ. ನಿಜವಾಗಿಯೂ ವಾಸ್ತವ ಜೀವನದಲ್ಲಿ ಅದು ತಪ್ಪಿಹೋಗಿಲ್ಲ. ತಪ್ಪುವುದಾದರೂ ಹೇಗೆ? ಪ್ರಕೃತಿ ಸಿದ್ಧವಾದ ನಿಯಮವದು. ಆದರೆ ಹೆಂಡಕುಡುಕನಿಗೆ ಪರಿಣಾಮದ ದುರಂತತೆಯ ಕಡೆಗೆ ಲಕ್ಷ್ಯವಿರುತ್ತದೆಯೆ? ಯಾರಾದರೂ ಎಚ್ಚರಿಸಿದರೂ ಅದು ಅವನಿಗೆ ರುಚಿಸು ತ್ತದೆಯೆ? ಅವನು ಬುದ್ಧಿವಂತನಾಗಿದ್ದರಂತೂ ಕುಡಿಯುವುದರ ಪರವಾಗಿ ನೂರಾರು ವಾದಗಳನ್ನು ತಂದೊಡ್ಡಿ ಎದುರಾಳಿಯನ್ನು ಮದ್ಯದ ಮಧ್ಯದಲ್ಲಿಯೇ ಮುಳುಗಿಸಿಬಿಡು ತ್ತಾನೆ. ಅದರಂತೆಯೆ ಇಂದ್ರಿಯ ಸುಖಗಳ ವಿಷಯದಲ್ಲಿ ಅಸಂಯಮಿಯಾದವನಿಗೆ ಅವನ ರುಚಿ ಅವನ 'ದರ್ಶನ'ಕ್ಕೆ ಮೂಲವಾಗುತ್ತದೆ. ಅಂಥವನು ಆಸೆಯನ್ನೇ ಆಲೋಚನೆ ಎಂದು ಭ್ರಮಿಸುತ್ತಾನೆ. ಚೆನ್ನಾಗಿ ಕುಡಿದಾಗ ಮದ್ಯಪಾಯಿಗೆ ತನ್ನ ಮನಸ್ಸು ಪೂರ್ಣವಾದಂತೆ ತೋರುತ್ತದೆ; ತನ್ನ ಆತ್ಮಕ್ಕೆ ಚಿರಂತನ ತೃಪ್ತಿ ಲಭಿಸಿದಂತೆ ತೋರುತ್ತದೆ; ತನಗೆ ಪ್ರಪಂಚದಲ್ಲಿ ಇನ್ನೇನೂ ಬೇಕಾಗಿಲ್ಲ ಎಂಬಂತೆ ತೋರುತ್ತದೆ.

ತನ್ನ ಪ್ರಾಣಪಾತ್ರೆ ಪೂರ್ಣವಾಯಿತು ಎಂದುಕೊಳ್ಳುತ್ತಾನೆ. ಶೃಂಗಾರ ರಸಪೂರ್ಣವಾಗಿಯೂ ಸುಪ್ರಸಿದ್ಧವಾಗಿಯೂ ಇರುವ ರವೀಂದ್ರನಾಥ ಕೃತ 'ಚಿತ್ರಾ' ನಾಟಕದ ಕೊನೆಯಲ್ಲಿ ಚಿತ್ರಾಂಗದೆಯ ಆಲಿಂಗನದಿಂದ ಅಮರರಸಪಾನ ಮಾಡಿದಂತೆ ಸುಖಮೂರ್ಛೆಗೆ ಸಂದ ಅರ್ಜುನನು "ಕಮಲನೇತ್ರೆ, ಪೂರ್ಣವಾಯ್ತೆಂದು ನನ್ನ ಪ್ರಾಣಪಾತ್ರೆ," ಎಂಬರ್ಥದ ವಾಕ್ಯವನ್ನು ಹೇಳುತ್ತಾನೆ. ಆ ವಾಕ್ಯದಿಂದಲೇ ಆ ನಾಟಕ ಮುಗಿಯುತ್ತದೆ. ಅದನ್ನು ಓದಿದಾಗಲೆಲ್ಲ ನನಗೆ ಕಂಠಪೂರ್ತಿಯಾಗಿ ಕುಡಿದ ಮದ್ಯಪಾಯಿಯ ನೆನಪಾಗುತ್ತದೆ. "ಮುಂದೆ?" ಎಂಬ ಪ್ರಶ್ನೆ ಅನಿವಾರ್ಯವಾಗಿ ತುಟಿಮೀರುತ್ತದೆ. ಆ ಪ್ರಶ್ನೆಗೆ ಲಕ್ಷ್ಮೀಶಕವಿ ಒಂದು ರೀತಿಯಾಗಿ ಉತ್ತರ ಹೇಳಿದ್ದಾನೆ. ಆ ಉತ್ತರದಲ್ಲಿ ಪ್ರಾಣಪಾತ್ರೆ ಅಷ್ಟು ಸುಲಭವಾಗಿ ಪೂರ್ಣವಾಗುವುದಿಲ್ಲ ಎಂಬುದು ವ್ಯಕ್ತವಾಗುತ್ತದೆ. ಎಷ್ಟೇ ಪರಿಶುದ್ಧವಾದುದಾಗಲಿ, ಎಷ್ಟೇ ಮುಗ್ಧವಾದುದಾಗಲಿ, ತಪಸ್ಸಿನಿಂದ ಪರೀಕ್ಷಿತವಾಗಿ ಚಂಚಲತಾ ವಿಮುಕ್ತವಾಗದಿದ್ದರೆ, ಪರಿಷ್ಕೃತವಾಗಿ ಪರಿಪಕ್ವವಾಗದಿದ್ದರೆ, ತಾರುಣ್ಯದ ತರಳಭೋಗಕ್ಕೆ ಚಿರಪ್ರೇಮದ ಮಹತ್ತ್ವಾಗಲಿ ಗೌರವವಾಗಲಿ ದೊರೆಯುವುದಿಲ್ಲ. ಹೀಗೆಂಬುದು ನಮ್ಮ ಪ್ರಾಚೀನ ಕವಿದರ್ಶನದ ಕಾವ್ಯವಾಣಿ.

ಹೊಸ ಕಲೆ ಒಪ್ಪದಿದ್ದರೂ ಹೊಸ ಬಾಳು ಆ ದರ್ಶನವನ್ನು ಹುಸಿಗೈಯಲಾಗಲಿ ವಂಚಿಸಲಾಗಲಿ ಸಮರ್ಥವಾಗಿಲ್ಲ. ತರುಣರಾದ ಪ್ರಿಯ ಪ್ರೇಯಸಿಯರು ತಮ್ಮ ಪಿತೃಗಳಿಗೆ ತಿಳಿಯದಂತೆ ಓಡಿಹೋಗಿ ಆಲಿಂಗಿಸುವ ಅಥವಾ ಚುಂಬಿಸುವ ಚಿತ್ರವನ್ನೇ ಕೊನೆಯ ವಿಷಯವನ್ನಾಗಿ ಮಾಡಿ ಸಾಹಿತ್ಯವನ್ನು ಕೊನೆಮುಟ್ಟಿಸುವ ಕಿರಿಯ ಕಥೆಗಳೂ ಕಿರಿಯ ನಾಟಕಗಳೂ ಅಗ್ಗದ ಚಲಚ್ಚಿತ್ರಗಳೂ ಸತ್ಯವನ್ನು ಮರೆಮಾಚಿದರೂ, ಕೋರ್ಟಿನಲ್ಲಿ ನಡೆಯುವ ಮೊಕದ್ದಮೆಗಳ ಪತ್ರಿಕಾವರದಿಗಳಾದರೂ ಪ್ರಾಚೀನ ಕವಿದರ್ಶನದ ಅಬಾಧಿತ ಸತ್ಯಕ್ಕೆ ಸಾಕ್ಷಿಗಳಾಗಿರುತ್ತವೆ.

೩

ಕಲ್ಪನೆಯ ಜೆನ್ನೇರಿ ಸೌಂದರ್ಯವನ್ನು ಬೆನ್ನಟ್ಟಿ ಬೇಟೆಯಾಡುತ್ತಾ ಮುನ್ನುಗ್ಗುವ ಕವಿಯಾತ್ಮಕ್ಕೆ ತನ್ನ ಪ್ರಯತ್ನ ವಿಫಲವಾದಂತೆ ತೋರುತ್ತದೆ; ಆ ಬೇಟೆಯನ್ನುಳಿದು, ಆ ಜೆನ್ನಿಂದಿಳಿದು, ಸೋತು, ದಣಿದು ತಟಸ್ಥವಾಗುತ್ತದೆ; ಹಾಗಿರುವಾಗಲೆ ತಟಕ್ಕನೆ ಅದಕ್ಕೆ ಕೇಳಿಸುತ್ತದೆ ಸತ್ಯದ ರಸವಾಣಿ. ಅದರಂತೆ, ಕಿನ್ನರ ಮಿಥುನವನಟ್ಟಿ, ಸೋತು, ಇಂದ್ರಾಯುಧದಿಂದಿಳಿದು, ಹರನ ನೋಟಕ್ಕೆ ಕೈಲಾಸವೇ ಕರಗಿದಂತೆ ಹಬ್ಬಿಯೂ, ರುದ್ರಾಟ್ಟಹಾಸವೆ ಜಲವಾದಂತೆ ಬೆಳಗಿಯೂ, ತ್ರೈಲೋಕ್ಯ

ಗಳಲ್ಲಿ. ನಮ್ಮ ಚೇತನ ಸಾಷ್ಟಾಂಗಪ್ರಣಾಮ ಮಾಡುವುದು ಶ್ವೇತಕೇತು ವ್ರತಿಗಳ ಚರಣತಲದಲ್ಲಿ. ಅಲ್ಲಿ ನಮ್ಮ ಪ್ರಾಣಕ್ಕೆ ನಿತ್ಯಸಂಗಿ ಕಪಿಂಜಲ ಮಹರ್ಷಿ. ಈ ಮಹಾ ಶ್ವೇತವಾತಾವರಣದ ಸಂಪೂತ ಮಹಿಮೆಯಿಂದಲೇ ಕಾದಂಬರಿಯ ಓಕುಳಿಯ ವರ್ಣವೂ ಹಾಲ್‌ಬೆಳ್ಳಿಗೆ ತಿರುಗಿದೆ: ರುಚಿರಶೃಂಗಾರದ ಅಚಿರತೆಯೂ ಅಕ್ಷಯ ಶಾಂತಿಯ ಕ್ಷೀರಕಾಂತಿಯಿಂದ ಶೋಭಿಸುತ್ತಿದೆ.

ಮಹಾಶ್ವೇತೆ: ಮಹಾಶ್ವೇತಾಶ್ರಮ: ಹೆಸರಾಲಿಸಿದರೆ ವಿಷಯಬೋಧೆಯಾಗುತ್ತದೆ!

ಪೃಥ್ವಿಯ ದೈನಂದಿನ ಜೀವನದ ಧೂಳೀ ಧೂಸರ ವಕ್ಷಸ್ಥಲದಿಂದ ಬಹುದೂರವಾಗಿದ್ದೇವೆ. ಬಹು ಎತ್ತರಕ್ಕೇರಿದ್ದೇವೆ. ಹೈಮಾಚಲದ ಸ್ಫಟಿಕನಿಕಾಶ ಅನಿಲ ಮಂಡಲ. ಅಚ್ಛೋದ ಸರೋವರದ ಶೀತಲನಿರ್ಮಲ ವಾರಿವಿಸ್ತಾರ. ಕಂಪಿಂಪು ತಂಪಿಡಿದು ತೀಡುತಿದೆ ಬೈಗುಗಾಳಿ:

> ಕುಮುದರಜಂಗಳೊಳ್ ಪೊರೆದು ವಾಃಕಣಜಾಲಮನಾಂತು ಕೂಡೆ ವಿ
> ಶ್ರಮಿಸಿ ತರಂಗಮಾಲಿಕೆಗಳೊಳ್ ಕಲಹಂಸನಿನಾದ ಬಂಭ್ರಮದ್
> ಭ್ರಮರರವಂಗಳೊಳ್ ಬೆರಸಿ ಮಾರುತನೊಯ್ಯನೆ ಬಂದು ತೀಡಿದ
> ತ್ತಮರ್ದೊಸೆದಪ್ಪಿಕೊಂಡು ಕರೆವಂತೆವೊಲಾ ಮನುಜೇಂದ್ರ ಚಂದ್ರನಂ.
>
> (ಕಾ. ಸಂ. ೩–೧೧)

> ಅಂಚೆಗಳಿಂಚರದಿಂ ತಣ್ಪಿಂ ಚೆಲ್ಪಿಂ ಸವಿಯಿನಬ್ಜಘನಸೌರಭದಿಂ
> ಕಾಂಚನಕಮಳಾಕರಮಿದು ಪಂಚೇಂದ್ರಿಯಸುಖಮನೆನಗೆ ಪಡೆದಪುದೀಗಳ್.
>
> (ಕಾ. ಸಂ. ೩–೧೬)

ವೈರಾಗಿಗಳ ಆದರ್ಶದೇವನಾದ ಗೌರೀವಲ್ಲಭನಿಗೂ ಮೋಹ ಹುಟ್ಟಿಸುವಂತಿದೆ ಆ ಚೇತೋಹಾರಿಯಾದ ದೃಶ್ಯ.

ಎಲ್ಲಿ ನೋಡಿದರೂ ಬಿಳಿಯ ಬಣ್ಣ. ಎತ್ತ ಕಣ್ಣೋಡಿದರೂ ರಜತ ನವನೀತ ಶುಭ್ರ ತುಹಿನ ರಾಶಿ. ಆ ಶ್ವೇತಶುಭ್ರತೆಯಲ್ಲಿ ಮಿಂದು ಶುದ್ಧಚೇತನನಾದ ಚಂದ್ರಾಪೀಡನು ಬೀಣೆಯಿಂಚರದ ಬಟ್ಟೆವಿಡಿದು ಮುಂಬರಿದು ನೋಡುತ್ತಾನೆ: ಅದೊ ಸಿದ್ಧಾಯತನಂ ಮನಂಗೊಳಿಸಿ ತೋರುತ್ತಿರ್ಪುದು! ಅಲ್ಲಿ ರತ್ನಪೀಠಘಟಿತವೂ ದೇದೀಪ್ಯಮಾನಪ್ರಭವೂ ಚತುರ್ವಕ್ತ್ರಸುಂದರವೂ ಆದ ನಿರ್ಮಲ ದಿವ್ಯಮೌಕ್ತಿಕ ಶಿಲಾಲಿಂಗವೊಂದು ಗೋಚರಿಸುತ್ತದೆ. ಇಲ್ಲಿ ಕವಿಯ ವರ್ಣನೆ, ಬೆಳ್ಪಿನ ಮೇಲೆ ಬೆಳ್ಪನ್ನು ಹೇರಿ, ಬೆಳ್ಳಿಯ ಬೆಟ್ಟಕ್ಕೆ ಪ್ರತಿಸ್ಪರ್ಧಿಯಾಗಿ ನಿಂತಿದೆ: ಹರಹಾಸದ ಅವಯವಗಳಂತೆ! ಅನಂತಾನಂತ ಭೋಗಗಳಂತೆ! ಪೂರ್ಣೇಂದು ಕಲಾಳಿಯಂತೆ! ಮುತ್ತಿನ ಶಿಲೆಯ ದಿವ್ಯಲಿಂಗವನ್ನು ಮುತ್ತಿವೆಯಂತೆ ಬೆಳ್ದಾವರೆಯ ಸೇನೆ!

ಲಕ್ಷ್ಮೀಮಣಿಮುಕುರದಂತೆ ನೈರ್ಮಲ್ಯ ಶೋಭಾಕಲಿತವಾಗಿಯೂ ಇದ್ದ ಅಚ್ಛೋದ ಸರೋವರದ ತೀರದ ಲಲಿತಲತಾಗೃಹದ ಇಂದೂಪಲದ ಮೇಲೆ ಪಟ್ಟಿರ್ದ ಚಂದ್ರಾಪೀಡನಿಗೆ ಕೇಳಿಸಿತು—ವೀಣಾಧ್ವನಿ! ತನ್ನ ತೇಜಿಯೆ ಮುರಿದ ಕೊರಲಾಗಿ, ಬಳಲ್ದೆಳಪಲಾಟಿಪ ಮೆಯ್ಯಾಗಿ, ಕಡೆವಾಯ ಲೋಳೆಯೊಳ್ ಪೊರೆದುಗುತರ್ಪ ಪಚ್ಚಪಸಿಯುಚ್ಚಗಟಿಂಕೆಯಾಗಿ, ಮರಲ್ದ ದಿಟ್ಟಿಯಾಗಿ, ಕತ್ತರಿಮೊನೆಗೊಂಡೆಳಲ್ವ ಕಿವಿಯಾಗಿ ಸೋಲ್ತ ಭಾವವನ್ನು ಸೂಚಿಸುತ್ತಿತ್ತು ಎಂದಮೇಲೆ ವೀಣಾವಿದ್ಯಾಧರನಾದ ರಾಜಕುಮಾರನಿಗೆ ಆ ವಿಪಂಚೀನಾದವು ಪೆಣ್ದುಂಬಿಯ ಗಾವರಂಬೊರೆದು ಪೊಣ್ಮುತ್ತಿರ್ದ ಪುಷ್ಪಾಸ್ತ್ರ ಚಾಪಲತಾ ಜ್ಯಾರವದಂತೆ ಅಮಾನುಷವಾದ ಓಜೆಯಿಂದ ಗಂಧರ್ವರಸ್ನು ಸೋಲಿಸುತ್ತಾ ಪಳಂಚಲೆದಂತೆ ಇಂಪಾದುದರಲ್ಲಿ ಅಚ್ಚರಿಯೇನಿದೆ? ಅದೂ ಅಲ್ಲದೆ ಮನುಜರಿಗೆ ಅಗೋಚರವಾದ ಹರಾದ್ರಿಯ ತಪ್ಪಲಿನಲ್ಲಿ ಆ ಗೇಯದ ದನಿ! ಕುತೂಹಲಿತ ಮಾನಸನಾದ ಆ ನರೇಂದ್ರನಂದನನು ಕುದುರೆಯ ಬೆನ್ಗೆ ಬಂದು ಮುಂದುವರಿದನು—ಮೃಗ ಸೂಚಿತ ಗೇಯಮಾರ್ಗದಿಂ.

ಚಂದ್ರಾಪೀಡ ಮಹಾಶ್ವೇತೆಯರ ಸಂದರ್ಶನದ ಸನ್ನಿವೇಶಕ್ಕೆ ಕವಿಪ್ರತಿಭೆ ಉದಾರವೂ ಉತ್ತುಂಗವೂ ತುಷಾರಶುಭ್ರವೂ ಆಗಿರುವ ಎಂತಹ ಅಭ್ರವೇದಿಕೆಯನ್ನು ವಿರಚಿಸಿದೆ!

ಕಾದಂಬರೀ ಕಾವ್ಯದಲ್ಲಿ ಪ್ರಧಾನ ಸನ್ನಿವೇಶಗಳು ಮಾತ್ರವಲ್ಲದೆ ಸಮಗ್ರ ಕಥಾಭಿತ್ತಿಯೂ ತಪೋವನಗಳ ಪರಿವೇಷದಿಂದ ಸಂವೃತವಾಗಿದೆ. ಶೂದ್ರಕನ ಆಸ್ಥಾನವಾಗಲಿ, ತಾರಾಪೀಡನ ರಾಜಧಾನಿಯಾಗಲಿ, ಅಥವಾ ಗಂಧರ್ವಲೋಕದ ಹೇಮಕೂಟದ ಕಾದಂಬರಿಯ ಕನ್ಯಾಂತಃಪುರದ ಕಾಂಚನಮಯ ತೋರಣಗಳ ಮಂಟಪವಾಗಲಿ ನಮ್ಮ ಮನಸ್ಸನ್ನು ಚಿರಕಾಲವೂ ಸೆಳೆದಿಡಲು ಸಮರ್ಥವಾಗುವುದಿಲ್ಲ. ಅವೆಲ್ಲವೂ ಸೋಪಾನಗಳೆ ಹೊರತು ದೇವಮಂದಿರವಲ್ಲ. ಸೋಪಾನಪಂಕ್ತಿಯ ಮನೋಹರತೆ ದೇವನಿಕೇತನದ ಪವಿತ್ರತೆಗೆ ಸಮರ್ಪಿತ. ಬಾಗಿಲಲ್ಲಿ ಕಣ್ಸೋಳಿಸುವ ತೋರಣವು ಕಾಂಚನದ್ದಾದರೂ ಅದು ಅಂತರ್ವಲಯದ ಗರ್ಭಗುಡಿಯಲ್ಲಿರುವ ಭಗವದಿಂದುಮೌಳಿಯ ಹಾಲ್ಗಲ್ಲಿನ ಪ್ರತಿಮೆಗೆ ಪ್ರತೀಹಾರಿ.

ಕಾವ್ಯಲೋಕದಲ್ಲಿ ನಮ್ಮ ಮನಸ್ಸು ಅಲೆಯುವ, ಒಲಿಯುವ, ವಿಹರಿಸುವ, ವ್ರತಗೈಯುವ ಸ್ಥಾನಗಳೆಂದರೆ: ಅರಣ್ಯ, ಆಕಾಶ, ನದಿ, ನಿರ್ಝರ, ಪರ್ವತ, ತಪೋವನ. ನಮ್ಮಾತ್ಮ ಯಾತ್ರೆಗೈವುದು ವಿಂಧ್ಯಾಚಲ ಹಿಮಾಚಲಗಳಲ್ಲಿ. ನಮ್ಮ ಕಲ್ಪನೆ ತೀರ್ಥಸ್ನಾನ ಮಾಡುವುದು ಅಚ್ಛೋದ ಪಂಪಾ ಸರೋವರಗಳಲ್ಲಿ. ನಮ್ಮ ಹೃದಯ ಧ್ಯಾನವಿಹಾರಿಯಾಗುವುದು ಜಾಬಾಲಿ ಮತ್ತು ಮಹಾಶ್ವೇತೆಯರ ಆಶ್ರಮ

ಗಳಲ್ಲಿ. ನಮ್ಮ ಚೇತನ ಸಾಷ್ಟಾಂಗಪ್ರಣಾಮ ಮಾಡುವುದು ಶ್ವೇತಕೇತು ವ್ರತಿಗಳ ಚರಣತಲದಲ್ಲಿ. ಅಲ್ಲಿ ನಮ್ಮ ಪ್ರಾಣಕ್ಕೆ ನಿತ್ಯಸಂಗಿ ಕಪಿಂಜಲ ಮಹರ್ಷಿ. ಈ ಮಹಾ ಶ್ವೇತವಾತಾವರಣದ ಸಂಪೂತ ಮಹಿಮೆಯಿಂದಲೇ ಕಾದಂಬರಿಯ ಓಕುಳಿಯ ವರ್ಣವೂ ಹಾಲ್‌ಬೆಳ್ಳಿಗೆ ತಿರುಗಿದೆ: ರುಚಿರಶೃಂಗಾರದ ಅಚಿರತೆಯೂ ಅಕ್ಷಯ ಶಾಂತಿಯ ಕ್ಷೀರಕಾಂತಿಯಿಂದ ಶೋಭಿಸುತ್ತಿದೆ.

ಮಹಾಶ್ವೇತೆ: ಮಹಾಶ್ವೇತಾಶ್ರಮ: ಹೆಸರಾಲಿಸಿದರೆ ವಿಷಯಬೋಧೆಯಾಗುತ್ತದೆ!

ಪೃಥ್ವಿಯ ದೈನಂದಿನ ಜೀವನದ ಧೂಳೀ ಧೂಸರ ವಕ್ಷಸ್ಥಲದಿಂದ ಬಹುದೂರವಾಗಿದ್ದೇವೆ. ಬಹು ಎತ್ತರಕ್ಕೇರಿದ್ದೇವೆ. ಹೈಮಾಚಲದ ಸ್ಫಟಿಕನಿಕಾಶ ಅನಿಲ ಮಂಡಲ. ಅಚ್ಛೋದ ಸರೋವರದ ಶೀತಲನಿರ್ಮಲ ವಾರಿವಿಸ್ತಾರ. ಕಂಪಿಂಪು ತಂಪಿಡಿದು ತೀಡುತಿದೆ ಬೈಗುಗಾಳಿ:

ಕುಮುದರಜಂಗಳೊಳ್ ಪೊರೆದು ವಾಃಕಣಜಾಲಮನಾಂತು ಕೂಡೆ ವಿ
ಶ್ರಮಿಸಿ ತರಂಗಮಾಲಿಕೆಗಳೊಳ್ ಕಲಹಂಸನಿನಾದ ಬಂಭ್ರಮದ್
ಭ್ರಮರರವಂಗಳೊಳ್ ಬೆರಸಿ ಮಾರುತನೊಯ್ಯನೆ ಬಂದು ತೀಡಿದ
ತ್ತ್ರಮದೊಸೆದಪ್ಪಿಕೊಂಡು ಕರೆವಂತೆವೊಲಾ ಮನುಜೇಂದ್ರ ಚಂದ್ರನಂ.

(ಕಾ. ಸಂ. ೩–೧೧)

ಅಂಚೆಗಳಿಂಚರದಿಂ ತಣ್ಪಿಂ ಚೆಲ್ಪಿಂ ಸವಿಯಿನಬ್ಜಘನಸೌರಭದಿಂ
ಕಾಂಚನಕಮಳಾಕರಮಿದು ಪಂಚೇಂದ್ರಿಯಸುಖಮನೆನಗೆ ಪಡೆದಪುದೀಗಳ್.

(ಕಾ. ಸಂ. ೩–೧೬)

ವೈರಾಗಿಗಳ ಆದರ್ಶದೇವನಾದ ಗೌರೀವಲ್ಲಭನಿಗೂ ಮೋಹ ಹುಟ್ಟಿಸುವಂತಿದೆ ಆ ಚೇತೋಹಾರಿಯಾದ ದೃಶ್ಯ.

ಎಲ್ಲಿ ನೋಡಿದರೂ ಬಿಳಿಯ ಬಣ್ಣ. ಎತ್ತ ಕಣ್ಣೋಡಿದರೂ ರಜತ ನವನೀತ ಶುಭ್ರ ತುಹಿನ ರಾಶಿ. ಆ ಶ್ವೇತಶುಭ್ರತೆಯಲ್ಲಿ ಮಿಂದು ಶುದ್ಧಚೇತನನಾದ ಚಂದ್ರಾಪೀಡನು ಬೀಣೆಯಿಂಚರದ ಬಟ್ಟೆವಿಡಿದು ಮುಂಬರಿದು ನೋಡುತ್ತಾನೆ: ಅದೊ ಸಿದ್ಧಾಯತನಂ ಮನಂಗೊಳಿಸಿ ತೋರುತ್ತಿರ್ಪುದು! ಅಲ್ಲಿ ರತ್ನಪೀಠಘಟಿತವೂ ದೇದೀಪ್ಯಮಾನಪ್ರಭವೂ ಚತುರ್ವಕ್ತ್ರಸುಂದರವೂ ಆದ ನಿರ್ಮಲ ದಿವ್ಯಮೌಕ್ತಿಕ ಶಿಲಾಲಿಂಗವೊಂದು ಗೋಚರಿಸುತ್ತದೆ. ಇಲ್ಲಿ ಕವಿಯ ವರ್ಣನೆ, ಬೆಳ್ಪಿನ ಮೇಲೆ ಬೆಳ್ಪನ್ನು ಹೇರಿ, ಬೆಳ್ಳಿಯ ಬೆಟ್ಟಕ್ಕೆ ಪ್ರತಿಸ್ಪರ್ಧಿಯಾಗಿ ನಿಂತಿದೆ: ಹರಹಾಸದ ಅವಯವಗಳಂತೆ! ಅನಂತಾನಂತ ಭೋಗಗಳಂತೆ! ಪೂರ್ಣೇಂದು ಕಲಾಳಿಯಂತೆ! ಮುತ್ತಿನ ಶಿಲೆಯ ದಿವ್ಯಲಿಂಗವನ್ನು ಮುತ್ತಿವೆಯಂತೆ ಬೆಳ್ದಾವರೆಯ ಸೇನೆ!

ಆ ಸಿದ್ಧಾಯತನವನ್ನಾಗಲಿ ಆ ಮೌಕ್ತಿಕ ಶಿಲಾಲಿಂಗವನ್ನಾಗಲಿ ಚಿತ್ರಿಸಿಕೊಳ್ಳುವುದರಲ್ಲಿ ಕಾರ್ಪಣ್ಯದೂರವಾಗಿರಬೇಕು ನಮ್ಮ ಕಲ್ಪನೆ. ಅಲ್ಲಿ ಅಲ್ಪಕ್ಕೆ ಸ್ಥಾನವಿಲ್ಲ. ಎಲ್ಲವೂ ಹೈಮಾಚಲಸಂಗಿಗಳೆ,

"ಎಲ್ಲವು ಎಲ್ಲಿಯು ಮಹತ್ತೆ ಇಲ್ಲಿ
ಈ ಸಹ್ಯ ಮಹಾ ಬೃಹತ್ತಿನಲ್ಲಿ !"

ಎಂಬಂತೆ. ಅಸೀಮದ ಸೀಮೆಯಲ್ಲಿ ಭೂಮವೇ ಸಾಧಾರಣ ಮತ್ತು ಸಾಮಾನ್ಯ. ಚರಾಚರಗುರುವಪ್ಪ ಶೂಲಪಾಣಿ ದೇವರ ಮಹಾಪ್ರತಿಮೆಯ ಧವಳಬೃಹತ್ತು ಎಷ್ಟು ವಿರಾಟಾಗಿತ್ತೆಂದರೆ, ಅದನ್ನು ಆಶ್ರಯಿಸಿ 'ಭಕ್ತಿಯೆ ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದ' ಮಹಾಶ್ವೇತೆ ರಾಜಕುಮಾರನ ಕಣ್ಣಿಗೆ ತಟಕ್ಕನೆ ಬೀಳಲಿಲ್ಲ.

ಆ ತಪಸ್ವಿನಿಯ ವರ್ಣನೆಯಲ್ಲಿಯೂ ಕವಿಯ ಕುಂಚಿಕೆ ಅಮೃತದಲ್ಲಿ ಅದ್ದಿ ಹೋಗಿದೆ. ಅಮೃತಾಂಭೋರಾಶಿ ಪೂರಪ್ರತಿಮ ನಿಜ ತಪಸ್ಸಂಚಯಂ ಪರ್ವಿತೋ ಲೋಕಮನ್—ಎಂಬಂತಿದೆ ಆಕೆಯ ದೇಹಾಂಶು. ಅತನುಹರನನ್ನು ಆರಾಧಿಸುತ್ತಿರ್ದ ಆ 'ಅತ್ಯುತ್ತಮ ದಿವ್ಯಾಕಾರೆ' ಶಂಖದಿಂದ ಕಡೆದಂತಿದ್ದಾಳೆ; ಮುತ್ತಿನಿಂದ ತೆಗೆದಂತಿದ್ದಾಳೆ; ಮೃಣಾಳದಿಂದ ಪಡೆದಂತಿದ್ದಾಳೆ. ಅಮೃತಾಂಶು ರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂದೊಡೆದರೊ—ಎಂಬಂತಿದ್ದಾಳೆ.

ಆಗತಾನೆ ಮಿಂದು ಮಡಿಯುಟ್ಟು ಬಂದಿದ್ದಾಳೆ ಆಕೆ. ಎಳಮಿಂಚಿನ ಬಳ್ಳಿಗಳ ಬಣ್ಣದ ಕೂದಲನ್ನು ಕೆದರಿ ಬಿಟ್ಟಿದ್ದಾಳೆ. ಆ ತಪಸ್ವಿನಿಯ ಚೆದರ್‌ಮುಡಿ ಬಾಚದೆ, ಹಿಕ್ಕದೆ, ಜಡೆಗೊಂಡು, ನಸುಕೆಂಬಣ್ಣಕ್ಕೂ ತಿರುಗಿದೆ. ಹೊಸ ಮಿಹದ ತುಂತುರು ಹನಿಗಳೂ ಅಲ್ಲಲ್ಲಿ ಸಿಕ್ಕಿಕೊಂಡಿವೆ. ಆಕೆ ಹಿಡಿದಿದ್ದ ಜಪಸರವೂ ಮುತ್ತಿನದು. ಆಕೆಗೆ ಬ್ರಹ್ಮಸೂತ್ರವೂ ಇದೆ. ವಯಸ್ಸು ? ದೇವತೆಗಳಿಗೆ ವಯಸ್ಸೆ ? ವಯಸ್ಸಿಲ್ಲ. ಆದರೂ

ದಿವಿಜತೆಯಿಂ ದಿವಸಂಗಳ
ಪವಣರಿಯಲ್ಬಾರದಾದೊಡಂ ಸೊಗಯಿಸಿ ತೋ
ರ್ಪವಯುವದಿಂದಂ ಪದಿನೆಂ
ಟು ವರಿಸದಾಕೃತಿಯಿನಬ್ಜಮುಖಿ ಕಣ್ಗೆಸೆದಳ್.

ಮನುಷ್ಯರೀತಿಯಾಗಿ ಆಕಾರವನ್ನು ನೋಡಿ ವಯಸ್ಸು ಹೇಳಬಹುದಾದರೆ: ಆಕೆಗೆ ಹದಿನೆಂಟು ತುಂಬಿತ್ತು.

ಆಕೆಯಲ್ಲಿ ತರಳೆಯ ಲಾವಣ್ಯವಿದ್ದಿತೆ ಹೊರತು ಲಾಘವವಿರಲಿಲ್ಲ. ಆ ತಪಸ್ವಿನಿಯನ್ನು ನೋಡಿದೊಡನೆ ಚಕ್ರೇಶ್ವರನ ಕುಮಾರನಾಗಿದ್ದ ಚಂದ್ರಾಪೀಡನ ಹೃದಯದಲ್ಲಿಯೂ ಭಯಮಿಶ್ರಿತ ಭಕ್ತಿಸಂಚಾರವಾಗುತ್ತದೆ. ಅವಿವಾಹಿತನಾಗಿದ್ದರೂ ಯೌವನ

ತುಂಬಿದವನಾಗಿದ್ದರೂ ಶಕುಂತಳೆಯನ್ನು ಕಂಡ ದುಷ್ಯಂತನಂತಾಗಲಿಲ್ಲ. ಮುಂದೆ ಹೇಮಕೂಟದಲ್ಲಿ ಕಾದಂಬರಿಯನ್ನು ಕಂಡಾಗ ಯಾವ ಭಾವಸಂಚಾರದಿಂದ ಆತನ ಮನಸ್ಸು ಉಲ್ಲೋಲಕಲ್ಲೋಲವಾಯಿತೋ ಆ ಭಾವಕ್ಕೆ ಇಲ್ಲಿ ಎಡೆಯೆಲ್ಲಿ ?

ಅತಿ ಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಲ ಧೈರ್ಯಾದಿ ಗುಣಾ
ನ್ವಿತೆಯಂ ದೃಢಪಾಶುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ.

ಕಂಡು, ಕುದುರೆಯಿಂದಿಳಿದು, ಅದನ್ನೊಂದು ಮರದ ಕೊಂಬೆಗೆ ಕಟ್ಟಿ, ದೂರದಿಂದಲೆ ಭಗವದಿಂದುಮೌಳಿಗೆ ಪೊಡವಟ್ಟು, ರಮಣೀಯ ದೇವಾಯತನದ ನೂತ್ನ ಸ್ತಂಭವನ್ನು ನೆಮ್ಮಿನಿಂದು, ಆ ದಿವ್ಯ ಕಾಂತೆಯನ್ನು ಮತ್ತೆ ಸಂವೀಕ್ಷಿಸುತ್ತಾನೆ. ಭಗವದಾರಾಧನೆಯಲ್ಲಿ ತಲ್ಲೀನೆಯಾಗಿದ್ದಾಕೆಯಲ್ಲಿ ರಾಜಕುಮಾರನಿಗೆ ಹೊಳೆದ ಗುಣಗಳೆಂದರೆ : ರೂಪಸಂಪತ್ತಿ, ಕಾಂತಿ, ಉಪಶಾಂತಿ.

ವಿಸ್ಮಯ ಕುತೂಹಲಗಳಿಂದ ನೋಡುತ್ತಿದ್ದ ಚಂದ್ರಾಪೀಡನಿಗೆ ಏನೇನೊ ಆಲೋಚನೆ: ಆರ್ಗೆ ಸತಿ ? ಪೆಸರೇನ್ ? ಇಂತು ತೋರ್ಪ ಜವ್ವನದೊಳಗೆ ಈ ತಪಕ್ಕೆ ಗುರಿಮಾಡಿದ ಉಬ್ಬೆಗವಾವುದು ? ಮನುಜನನ್ ಎನ್ನನ್ ಈಕ್ಷಿಸಿ ಭವಾದ್ರಿಯನೇರದಿರ್ದೊಡೆ, ಅಥವಾ ತೊಟ್ಟನೆ ಕೊಳೆ ಮಾಯವಾಗದಿರ್ದೊಡೆ ಒಯ್ಯನೆ ಬೆಸಗೊಳ್ವೆನ್.

ಹೀಗೆಲ್ಲಾ ಬಗೆಯುತ್ತಾ ನಿಂತಿರುವಾಗಲೆ ಆ ತಪಸ್ವಿನಿಯ ಪೂಜೆ ಪೂರೈಸುತ್ತದೆ. ಆಕೆ ಆಕಾಶಕ್ಕೆ ಒಗೆಯುಲೂ ಇಲ್ಲ, ಮಾಯುವಾಗಲೂ ಇಲ್ಲ. ಅದಕ್ಕೆ ಬದಲಾಗಿ

ಒಸೆದಾಶ್ವಾಸಿಸುವಂತೆ ಪುಣ್ಯತತಿಯಿಂದಂ ಮುಟ್ಟುವಂತಚ್ಛತೀ
ರ್ಥ ಸಮೂಹಾಂಬುಗಳಿಂದವಂದಭಿಷವಂ ಮಾಳ್ಪಂತೆ ಪೂತತ್ವಮಂ
ಪಸರಿಪ್ಪಂತೆ ಬರಂಗಳಂ ಪದಪಿನಿಂದೀವಂತೆ ದೃಕ್ತೃಪ್ತಿ ರಾ
ಜಿಸೆ ದಿವ್ಯಾಂಗನೆ ನೋಡಿದಳ್ ತಗುಳ್ದು ಚಂದ್ರಾಪೀಡಭೂಪಾಲನಂ.

ಕಣ್ಣಿನ ಆಮಂತ್ರಣವೆ ಅನಿತೊಂದು ಹಿತಕರವಾಗಿತ್ತು. ಜೊತೆಗೆ ಅತ್ಯುತ್ತಮವಾದ ಸಂಸ್ಕೃತಿಯ ಜೇನು ಸೋರುವಂತೆ ಸವಿನುಡಿಯ ಸ್ವಾಗತವೂ ಬೆಂಬಲವಾಯಿತು :

ಸ್ವಾಗತಮೇ ನಿನಗೆ ಮಹಾ
ಭಾಗನೆ ಮದ್ಭೂಮಿಗೆಂತು ಬಂದಯ್ ನೀನ
ಭ್ಯಾಗತನಾಗಲ್ವೇಳ್ಕೆಂ
ದಾಗಳ್ ನೃಪಸುತನನಟ್ಟಿಯಿಂ ಸತಿ ನುಡಿದಳ್.

ಮಾತನಾಡಿಸಿದುದೆ ಸಾಕು ಕೃತಾರ್ಥನಾದೆನೆಂದು ರಾಜಕುಮಾರನೂ "ದೇವಿಯರ್ ಬೆಸಸಿದಂತೆ ಗೆಯ್ವೆನ್" ಎಂದು 'ಜೆಂಬಳಿವಿಡಿದು ನಡೆಯುವ ಶಿಷ್ಯನಂತೆ' ಆಕೆಯನ್ನು ಹಿಂಬಾಲಿಸುತ್ತಾನೆ.

ಆ ಜೋಗಿನಿಯ ಸೋಂಪಿಯ ಗುಹೆಯಲ್ಲಿ ಆಕೆಯ ಆತಿಥ್ಯದಿಂದ ಅನುಗೃಹೀತನಾಗಿ ಚಂದ್ರಾಪೀಡನು 'ತನ್ನ ಬಂದ ವೃತ್ತಾಂತಮನೆಲ್ಲಮಂ ನೆರೆಯೆ ಪೇಳ್ದು' ಬಹಳ ಸಂಕೋಚದಿಂದಲೆಂಬಂತೆ ಆಕೆಯ ವಿಚಾರವನ್ನು ಪ್ರಸ್ತಾಪಿಸುತ್ತಾನೆ. ಅಲ್ಲಿಯೂ ಎಷ್ಟು ವಿನಯ: ಹಿರಿದಾದ ತಮ್ಮ ಪ್ರಸಾದವನ್ನು ಪಡೆದ ಬಂದು ಗರ್ವದಿಂದ ಪರಿಚಿತನಂತೆ ಬಿನ್ನವಿಸಲು ಪ್ರಯತ್ನಿಸುತ್ತಿದ್ದೇನೆ. 'ಅಧೀರರಪ್ಪ ಮನುಜರ್ ಪ್ರಭುಗಳ್ ದಯೆಯಿಂದೆ ತಮ್ಮನ್ ಆದರಿಸಿದೊಡೆ, ಆಗಳ್ ಅಂತೆ ಗಳಪಲ್ ಬಗೆದರ್ಪುದಿದಾವ ವಿಸ್ಮಯಂ!' ನಾನು ಮನುಜ. ಮನುಜನಾದವನಿಗೆ ನಾ ಕಂಡ ಇದೆಲ್ಲವೂ ಅತ್ಯಾಶ್ಚರ್ಯಕರ ಮಾತ್ರವಲ್ಲದೆ ಕೌತುಕಾವಹವೂ ಆಗಿದೆ. . . .

ಆಕೆ ಪ್ರಶ್ನೆಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಮೌನವಾದಳು. ಅತಿಯಾದ ಯಾತನೆಯನ್ನು ಸಂಯಮಿಸುವಂತೆ ಕಣ್ಮುಚ್ಚಿದಳು. ಕಣ್ಣೀರು ಬಳಬಳನೆ ಹನಿ ಹರಿಯಿತು. ಇಕ್ಕಿದ ಬಿರ್ದ್ದನುಂಡು ತೆಪ್ಪಗಿರುವುದು ಬಿಟ್ಟು 'ಇದೆತ್ತೆತ್ತಲೀಗಳ್ ಬೆಸಗೊಂಡೆನ್' ಎಂದು ಚಂದ್ರಾಪೀಡನು ತನ್ನನ್ನು ತಾನೆ ಹಳಿದುಕೊಂಡನು.

ಅಷ್ಟೇ ಅಲ್ಲ, ಅವನಿಗೆ ಇನ್ನೊಂದು ಆಶ್ಚರ್ಯ. ಯಾವ ವ್ಯಕ್ತಿಯನ್ನು ನೋಡಿದೊಡನೆ ಶಾಂತಿಯ ನಿಧಿ ಎಂದು ಭಾವಿಸಿದ್ದನೋ, ಯಾರ ವಾಣಿಯನ್ನು ಆಲಿಸಿದಂದು ಪರಮತೃಪ್ತಿಯ ಧ್ವನಿ ಎಂದು ಊಹಿಸಿದ್ದನೋ, ಯಾರ ಕಣ್ಣಿನ ಬೆಳಕಿನಲ್ಲಿ ದುಃಖಾತೀತವಾದ ಆನಂದದ ಕಾಂತಿಯನ್ನು ಸಂದರ್ಶಿಸಿದೆನೆಂದು ತಿಳಿದಿದ್ದನೋ ಅಂತಹ ಮಹಾಶ್ವೇತೆ ಅಳುತ್ತಿದ್ದಾಳೆ! 'ಇಂತಪ್ಪವರುಂ ಅಳುವಂದಂ ಅದ್ಭುತಂ!'

ಎಂತಹರಿಗೂ ಒಮ್ಮೊಮ್ಮೆ ಹಾಗೆನ್ನಿಸುತ್ತದೆ: ಇಂತಪ್ಪವರುಂ ಅಳುವಂದಂ ಅದ್ಭುತಂ.

೪

ಇದೇ ಕವಿ ತನ್ನ ತಪೋಮಯ ಶೃಂಗಾರದ ಕಥೆಗೆ ಕಟ್ಟಿರುವ ಹಿನ್ನೆಲೆ: ಸಿದ್ಧಾಯತನದಲ್ಲಿ, ವಿರೂಪಾಕ್ಷದೇವನ ಮಹಿಮೆಯ ಸಾನ್ನಿಧ್ಯದಲ್ಲಿ, ಗುಹಾಂಗಣದ ತಪಸ್ಸಾಧನ ರಂಗದಲ್ಲಿ ತಪಸ್ವಿನಿಯಾಗಿದ್ದ ಮಹಾಶ್ವೇತೆ ತನ್ನ ಪ್ರಣಯ ಕಥೆಯನ್ನು ತಾನೇ ಹೇಳುವಂತೆ ಮಾಡಿದ್ದಾನೆ.

ಕಥೆಯಲ್ಲಿ ಪ್ರಧಾನ ಪಾತ್ರ ವಹಿಸಿರುವ ಗಿಳಿಯ ರೂಪದ ಪುಂಡರೀಕನ ಸಮ್ಮುಖದಲ್ಲಿ ವಾಚಂಯಮಿ ವರೇಣ್ಯನಾದ ಜಾಬಾಲಿ ಮಹರ್ಷಿಯ ಗಂಭೀರ ವಾಣಿಯನ್ನು ಕೇಳುತ್ತಿರುವ ಕುಮಾರತಾಪಸ ಸಂಘದಂತೆ ಚಂದ್ರಾಪೀಡನೂ ಕಿವಿಯಾಗಿ ಕೇಳಿದುದರಲ್ಲಿ ಆಶ್ಚರ್ಯವೇನಿದೆ?

ಮಹಾಶ್ವೇತೆ ಬರಿದೆ ವರದಿಯೊಪ್ಪಿಸುವುದಿಲ್ಲ. ಪುನರನುಭವಿಸಿ ಹೇಳುತ್ತಾಳೆ. ಅನುಭವಿಸಿ ಹೇಳಿದುದೆಲ್ಲ ಸಾಹಿತ್ಯ. ಉಳಿದುದೆಲ್ಲ ವರದಿ.

ಆ ಆತ್ಮಕಥೆಯಲ್ಲಿ ಎಳೆಯ ಒಲವು ಮೊತ್ತಮೊದಲು ಮೊಳೆಯಿಣುಕಿದುದು ಚಿತ್ರಿತವಾಗಿದೆ. ಅಲ್ಲಿಯ ಶೃಂಗಾರವು ತಪಸ್ಸಿನಲ್ಲಿ ಇರ್ಮೆ ಸೋಸಿ ಬರುತ್ತದೆ. ಮಹಾಶ್ವೇತೆಯ ಅನುರಾಗದ ತಪಸ್ಸಿನಲ್ಲಿ ಒಮ್ಮೆ; ಕುಮಾರ ತಪಸ್ವಿಗಳಿಗೆ ಕಥೆ ಹೇಳುವ ಜಾಬಾಲಿಯ ವಿರಾಗದ ಸಂಯಮದಲ್ಲಿ ಮತ್ತೊಮ್ಮೆ. ಆದ್ದರಿಂದಲೇ ಕಾವ್ಯದುದ್ದಕ್ಕೂ ಪ್ರೇಮದ ಜಯಡಿಂಡಿಮಕ್ಕಿಂತಲೂ ಅದನ್ನು ತೂರಿ ವಿಾರಿ ನಮಗೆ ಕೇಳಿಬರುತ್ತದೆ—ತಪಸ್ಸಿನ ವೀಣಾಧ್ವನಿ. ಕಟ್ಟಕಡೆಯಲ್ಲಿಯೂ ಕಾವ್ಯಕೈಲಾಸದ ನೆತ್ತಿಯ ಮೇಲೆ ಶೃಂಗಾರದ ದಿಗ್ವಿಜಯದ ಧ್ವಜವೇನೋ ಹಾರಾಡುತ್ತದೆ. ಆದರೆ ಕಣ್ಣಿಟ್ಟು ನೋಡುವವರಿಗೆ ಗೊತ್ತಾಗುತ್ತದೆ—ಆ ಧ್ವಜವಸ್ತ್ರ ವಲ್ಕಲದ್ದು; ಅದರ ಬಣ್ಣ ಕಾವಿ!

ಪುಂಡರೀಕ ಮಹಾಶ್ವೇತೆಯರ ಕಥೆಯಲ್ಲಿ ಪ್ರತಿಷ್ಠಿತವಾಗಿರುವುದು—ಕರ್ಮಫಲ ರೂಪಿಯಾದ ವಿಧಿಯ ವಜ್ರನಿಯತಿ. ಆ ಋತದ ನಿಷ್ಠೆಗೆ ಕಾಲತ್ರಯವೇದಿ ಶ್ವೇತಕೇತು ಪ್ರತಿಗಳ ಕುಮಾರನೆಂಬ ದಾಕ್ಷಿಣ್ಯವಿಲ್ಲ. ಜೇಡನ ಜಟಿಲಕಲೆಯ ತಂತುಕೃತಿಯಲ್ಲಿ ಸೆರೆಯಾದ ಉಷಃಕಾಲದ ಹಿಮಬಿಂದುವಿನಂತೆ ಲಲಿತೆ, ಕೋಮಲೆ, ಗಂಧರ್ವಕನ್ಯೆ ಎಂಬ ಪಕ್ಷಪಾತವಿಲ್ಲ. ಪ್ರಣಯಿಗಳಿಬ್ಬರೂ ತುದಿಯಲ್ಲಿ ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಾರೆ: ಕಷ್ಟರೂಪದಲ್ಲಿ ತಪಸ್ಸಿನ ರೂಪದಲ್ಲಿ ತಪ್ಪುಗಾಣಿಕೆ ತೆತ್ತು ಅರ್ಹರಾದ ಮೇಲೆ. ವ್ರತಭ್ರಷ್ಟತೆ ಎಷ್ಟು ಲಲಿತವಾಗಿದ್ದರೇನು? ಎಷ್ಟು ರುಚಿಕರವಾಗಿದ್ದರೇನು? ಮತ್ತೆಷ್ಟು ಕಲಾಪೂರ್ಣವಾಗಿದ್ದರೇನು? ಆದಕ್ಕೆ ತಪ್ಪಿದ್ದಲ್ಲ ಋತದ ಶಿಕ್ಷೆ.

ಕಥೆ ಹೇಳುತ್ತಿದ್ದ ಗುರು ಜಾಬಾಲಿಯ ಕಣ್ಣಿನ ಕಾಂತಿಯಲ್ಲಿ ಮತ್ತು ಮುಖದ ಶಾಂತಿಯಲ್ಲಿ ಹಾರೀತ ಮೊದಲಾದ ತರುಣ ತಪಸ್ವಿಗಳಿಗೆ ಏನು ದರ್ಶನವಾಗುತ್ತದೆ? ಪವಿತ್ರಪ್ರೇಮದ ಮಹಿಮೆ ಮಾತ್ರವಲ್ಲ; ಸಂಯಮದ ಹಿರಿಮೆ ಮತ್ತು ಋತದ ಗರಿಮೆ.

ಆ ಆತ್ಮಕಥೆಗೂ ಅಚ್ಛೋದ ಸರಸ್ತೀರವೇ ರಂಗಭೂಮಿ. ತಾಯೊಡನೆ ಮಜ್ಜನಕ್ಕೆಂದು ಅಲ್ಲಿಗೆ ಬಂದಿದ್ದ ಗಂಧರ್ವಕನ್ಯೆ, ಮಹಾಶ್ವೇತೆ ಕುಮಾರ ತಪಸ್ವಿ

ಯಾದ ಪುಂಡರೀಕನನ್ನೂ ಅವನಿಗೆ ಅನುರೂಪವೆಂಬಂತೆ ಜತೆಯೊಳಿದ್ದ ಕೆಳೆಯ ಕಪಿಂಜಲನನ್ನೂ ನೋಡುತ್ತಾಳೆ. ನೋಡಿದೊಡನೆ ಪುಂಡರೀಕನಲ್ಲಿ ಪ್ರೇಮಪರವಶೆಯಾಗುತ್ತಾಳೆ, ಉಚಿತ ಅನುಚಿತಗಳ ಎಣಿಕೆಯಿಲ್ಲದೆ. ಪುಂಡರೀಕನ ಕೈಯಲ್ಲಿದ್ದ ಪಟಿಕದ ಮಣಿಯ ಜಪಸರವೂ ಮಹಾಶ್ವೇತೆಗೆ 'ಮನೋಜವಿನಾಶದಿನಳ್ವ ತನ್ಮನೋಹರಿಯ ಪೊದಳ್ದ ಕಣ್ಬನಿಗಳಂತೆ' ತೋರುತ್ತದೆ.

> ನಿಯತೇಂದ್ರಿಯನೊಳ್ ತೇಜೋಮಯನೊಳ್ ರೂಪೈಕಪಕ್ಷಪಾತದೆ ನೆಱೆ ನೀ
> ತಿಯನುಟಿದು ಮುನಿಪನೊಳ್ ನಿರ್ಭಯನಂಗಜನೆನ್ನನಿಂತಿರಲ್ ಸೋಲಿಕುಮೇ ?

ತನ್ನೊಳೆಸೆದ ಮನ್ಮಥವಿಕಾರವನ್ನು ನೋಡಿ ಮುನಿಕುಮಾರನು ಎಲ್ಲಿ ಶಪಿಸುತ್ತಾನೆಯೋ ಎಂದು ಗಂಧರ್ವಕನ್ಯೆ ಹೆದರುತ್ತಾಳೆ. ಆದರೂ ಪೂಜಾರ್ಹರನ್ನು ಅವಜ್ಞೆಗೆಯ್ಯಲಾಗದೆಂದು 'ಎವೆಯಿಕ್ಕದಾಂ ಮನಂಗೊಳಿಪ ಮುನೀಂದ್ರನಾನನವನೀಕ್ಷಿಸುತುಂ ಪೊಡೆವಟ್ಟೆನಕ್ಕರಿಂ.' ಪರಿಣಾಮ : 'ಗಾಳಿಗೊಡ್ಡಿದ ದೀಪಾಂಕುರದಂತೆ ತನ್ಮನಿಯುಮಂ ಕಾಮಂ ಚಲಂ ಮಾಡಿದಂ.'

ಮುಂದೆ ನಡೆದ ಕಥೆಯನ್ನು ಮಹಾಶ್ವೇತೆ ಸ್ವತಃ ಅನುಭವಿಸಿದವರಿಗೆ ಮಾತ್ರ ಸಾಧ್ಯವಾಗುವ ಮುದ್ದುಮೋಹದಿಂದ ವರ್ಣಿಸುತ್ತಾಳೆ. ಕೃತ್ತಿಕಾತಾರಾಸ್ತಬಕಾನುಕಾರಿಣಿಯಾದ ತನ್ನ ಕರ್ಣಪೂರದ ಪುಷ್ಪಮಂಜರಿಯನ್ನು ಮಹಾಶ್ವೇತೆಗೆ ತೊಡಿಸುವ ಅವಸರದಲ್ಲಿ ಉಂಟಾದ ಕದಂಪಿನ ನನುನೋಂಕಿಗೆ ಸೋತ ಮುನಿಕುಮಾರನ ಕೈಯಿಂದ ಅಕ್ಷಮಾಲೆ ಬಿದ್ದುಹೋಗುತ್ತದೆ. ನೆಲಕ್ಕೆ ಬೀಳುವ ಮೊದಲೇ ಅದನ್ನು ಕರಪಲ್ಲವದೊಳಾಂತು 'ತೊಳಗುವ ಹಾರಮಂ ತಳೆವಂತೆ ಕೊರಲೊಳ್ ತಳೆದು' ಸುಖಿಸುತ್ತಿರುವ ವ್ಯತಿಕರದಲ್ಲಿ ಕೆಳದಿಯರು ಆಕೆಯನ್ನು ಮಿಾಹಕ್ಕೆ ಕರೆದೊಯ್ಯುತ್ತಾರೆ, 'ಪೊಸತಪ್ಪದೊಂದು ಪಿಡಿಗಂಕುಶವಿಟ್ಟು ಮರಳ್ಚುವಂದದಿಂ.'

ಪುಂಡರೀಕನ ಧೈರ್ಯಸ್ಖಲನೆಯನ್ನು ಕಂಡು ಕಪಿಂಜಲನು ವ್ರತಿಯನ್ನು ಎಚ್ಚರಿಸುತ್ತಾನೆ. ಆ ಉಪದೇಶವೂ ಕೆರೆ ನಿಂತ ಅವಿವೇಕಕ್ಕೆ ಕೋಡಿ ಹೊಡೆಯುವ ಕೆಲಸವನ್ನೆ ಮಾಡುತ್ತದೆ. ಶ್ವೇತಕೇತು ಮಹಾಮುನಿಗಳ ಕುಮಾರನು ಜಪಸರವನ್ನು ಇಸುಕೊಳ್ಳಲು ಹೋಗಿ ಗಂಧರ್ವಕನ್ಯೆಯ ಕೊರಳಹಾರವನ್ನು ತಳೆಯುತ್ತಾನೆ. ಅಂತೂ ಅಕ್ಷಮಾಲೆಯೆ ಪ್ರಣಯಪಾಶವಾಗಿ ಪರಿಣಮಿಸುತ್ತದೆ. ಜಪಸರ ಮತ್ತು ಹಾರಗಳ ಅದಲುಬದಲಾವಣೆಯಿಂದ ಒಬ್ಬರ 'ವೃತ್ತಿ'ಯನ್ನು ಮತ್ತೊಬ್ಬರು ಕೈಕೊಳ್ಳುವ 'ಧ್ವನಿ' ಇಂಗಿತವಾಗಿದೆ.

ಆಜನ್ಮಮಿತ್ರನ ಪ್ರಾಣರಕ್ಷಣೆಗಾಗಿ ಕಪಿಂಜಲನು ಪ್ರಣಯ ರಾಯಭಾರವನ್ನು ನಿರ್ವಹಿಸುತ್ತಾನೆ. ತುಂಬು ಬೆಳ್ದಿಂಗಳ • ಗಾಂಧರ್ವರಾತ್ರಿಯಲ್ಲಿ ಮಹಾಶ್ವೇತೆ

ಕೆಳದಿ ತರಳಿಕೆಯೊಡನೆ ಪ್ರಿಯನ ಪ್ರಾಣಪಾಲನೆಗಾಗಿ ಗುಪ್ತಯಾತ್ರಿಯಾಗುತ್ತಾಳೆ. ಆದರೇನು ? ದುಂಬಿ ಹೋಗುವುದರಲ್ಲಿಯೆ ಮಕರಂದ ಬತ್ತಿರುತ್ತದೆ. ಪುಂಡರೀಕನು ಪರಾಸುವಾಗಿರುತ್ತಾನೆ.

ನಡೆದ ಸಂಗತಿಯೆಲ್ಲವನ್ನೂ ಕಪಿಂಜಲನಿಂದ ತಿಳಿದು ಚಿತಾರೋಹಣಗೆಯ್ಯಲು ಪ್ರಯತ್ನಿಸುತ್ತಿರುವ ಮಹಾಶ್ವೇತೆಗೆ ಚಂದ್ರಮಂಡಲದಿಂದ ಮೈದೋರಿದ ಪ್ರಭಾಮೂರ್ತಿ

ಬಗೆಗೆಟ್ಟು ಸಾವ ಬಗೆಯಂ
ಮಗಳೆ ಮಹಾಶ್ವೇತ ಬಗೆಯದಿರ್ ಕೂಡುವೆ ನೀಂ
ಮಗುಳೆಯುಮಿಾತನನೆನುತುಂ
ಮಗುಳ್ದಾತಂ ಬೆರಸು ಗಗನಮಾರ್ಗಕ್ಕೊಗೆದಂ.

ಕಪಿಂಜಲನೂ ಸಖನ ಶರೀರವನ್ನು ಒಯ್ಯುತ್ತಿದ್ದಾತನ ಬೆಂಬಾಲಿಸಿ ಅಂತರಿಕ್ಷಕ್ಕೆ ಚಿಮ್ಮುತ್ತಾನೆ. ಆಮೇಲೆ ಮಹಾಶ್ವೇತೆ ಆ ಆಕಾಶಪುರುಷನ ಆಶಾವಾಣಿಯನ್ನು ನೆಮ್ಮಿ, ಪ್ರಿಯನ ಅಕ್ಷಾವಳಿಯನ್ನೂ ವಲ್ಕಲವನ್ನೂ ಕಮಂಡಲುವನ್ನೂ ತಳೆದು ತಪಸ್ವಿನಿಯಾಗುತ್ತಾಳೆ :

ಮನಮಂ ನಿಗ್ರಹಿಸುತ್ತ ಸದ್ವಿಷಯದತ್ತಲ್ ಪೊರ್ದದಂತಾಗೆ ಮಾ
ಡಿ ನಿರುದ್ಧೇಂದ್ರಿಯೆಯಾಗಿ ಬಂಧುಜನಮಂ ತಾಯ್ತಂದೆಯಂ ಪತ್ತುವಿ
ಟ್ಟೆನಗಿನ್ನೊರ್ವರುಮೇವರೆಂಬ ಬಗೆಯಂ ನಿಶ್ಚೈಸಿ ಲೋಕೈಕನಾ
ಥನನಾನಾಗಳನಾಥೆಯೆಂ ಶರಣೆನುತ್ತಾಶ್ರೈಸಿದೆಂ ಸ್ಥಾಣುವಂ.

ಕಡೆ ಹೇಳಿದ ಮಹಾಶ್ವೇತೆ ಪೂರ್ವದುಃಖವನ್ನೆಲ್ಲ ಮತ್ತೊಮ್ಮೆ ಅನುಭವಿಸಿ ಅತಿ ದಾರುಣವಾಗಿ ರೋದಿಸುತ್ತಾಳೆ. ಚಂದ್ರಾಪೀಡನು ಹಲವಾರು ಸಂತೈಕೆಗಳಿಂದ ಹೊಗೆ ಸುತ್ತಿದ್ದ ಆಕೆಯ ಪ್ರತ್ಯಾಶೆಯ ಕೊಳ್ಳಿ ಹೊತ್ತಿಕೊಳ್ಳುವಂತೆ ಮಾಡುತ್ತಾನೆ.

೫

ಯಾವ ವ್ರತವಾದರೂ ಆತ್ಮದ ಶ್ರೇಯಸ್ಸಿಗೆ ಆವಶ್ಯಕವಾಗಿದ್ದರೆ ಜಯಶೀಲವಾಗುತ್ತದೆ. ಒಬ್ಬರು ಮಾಡಿದ್ದಾರೆಂದು ಮತ್ತೊಬ್ಬರು ಅನುಕರಿಸುವ ವ್ರತ ಹುಟ್ಟಿಬಂಧ ಮಿಾಸೆಯಂತಿರುವುದಿಲ್ಲ, ಕಟ್ಟಿಕೊಂಡ ಗಡ್ಡದಂತಿರುತ್ತದೆ. ನಸುಜಗ್ಗಿದರಾಯ್ತು ಕಿತ್ತುಬರುತ್ತದೆ.

ಮಹಾಶ್ವೇತೆ ತಾನು ಕೈಕೊಂಡಿದ್ದ ಬೆಂಕಿನೋಂಪಿಯನ್ನು ಅನುಕರಿಸಲು ತೊಡಗಿದ್ದ ತನ್ನ ತಂಗಿ ಕಾದಂಬರಿಗೆ ಮೊದಲು ಬುದ್ಧಿಹೇಳಿ ಕಳುಹಿಸುತ್ತಾಳೆ.

ಕಡೆಗೆ, ತಂಗಿಯ ತರಳ ಮುಗ್ಧ ವ್ರತರೂಪಿಯಾದ ಛಲಕ್ಕೆ ಅಪ್ರತಿಹತ ಪ್ರತಿವಾದ ರೂಪವಾಗಿ ಚಂದ್ರಾಪೀಡನನ್ನೇ ಹೇಮಕೂಟಕ್ಕೆ ಕರೆದೊಯ್ಯುತ್ತಾಳೆ.

ಅಲ್ಲಿ ಕವಿ ರಾಜಕುಮಾರನನ್ನೆಂತೋ ನಮ್ಮನ್ನೂ ಅಂತೆಯೇ ಶೃಂಗಾರಮಂಚದ ಉಯ್ಯಾಲೆಯಲ್ಲಿಟ್ಟು ತೂಗುತ್ತಾನೆ. ಕಾಮನಬಿಲ್ಲಿನ ಬಣ್ಣಬಣ್ಣದೋಕುಳಿ ಎರಚುತ್ತಾನೆ. ನಯ ಮತ್ತು ಸಂಸ್ಕೃತಿಗಳ ಅಮರಕಲಾಜಾಲವನ್ನೇ ನೇಯುತ್ತಾನೆ. ಆ ಸಂಸ್ಕೃತಿಯ ಸ್ನಿಗ್ಧಚ್ಛಾಯೆಯಲ್ಲಿ ಕಂಚುಕಿಯಾಗಲಿ ಪ್ರತೀಹಾರಿಯಾಗಲಿ ಆಳಾಗಲಿ ಅರಸಾಗಲಿ ನಯಮೂರ್ತಿಗಳಾಗಿ ಕಾಣುತ್ತಾರೆ. ಕುಮಾರವ್ಯಾಸನ ಕೃತಿಯ ವೀರವೊರಟಾಗಲಿ ಚಾಮರಸನ ಪ್ರಭುಲಿಂಗಲೀಲೆಯ ಬೀದಿಯೊರಟಾಗಲಿ ಅಲ್ಲಿ ಸುಳಿಯುವುದಿರಲಿ ಇಣುಕುವುದು ಕೂಡ ಇಲ್ಲ. ಅಲ್ಲಿಯ ಶ್ರೀಮಂತತೆಯ ಸಿಹಿ ಅತಿಯಾಗಿ ಅತಿಥಿಗಳಿಗೆ ಎಲ್ಲಿ ಅರೆಯಾಗುತ್ತದೆಯೋ ಎಂದು ಹೆದರಿಕೆಯಾಗುತ್ತದೆ.

ಗಂಡುಹೆಣ್ಣುಗಳಿಬ್ಬರೂ ಒಬ್ಬರನ್ನೊಬ್ಬರು ನೋಡಿ, ಮೆಚ್ಚಿ, ಒಲಿಯುತ್ತಾರೆ. ಚಂದ್ರಾಪೀಡನು ತಂದೆಯಾಣತಿಯನ್ನೇ ಇಂದ್ರಾಯುಧಕ್ಕೆ ವಾಘೆರಾಘೆಯನ್ನಾಗಿ ಮಾಡಿಕೊಂಡು ಉಜ್ಜಯಿನಿಗೆ ಹಿಂತಿರುಗಿದ ಮೇಲೆ, ಕಾದಂಬರಿಯ ಪೊಳ್ಳು ನೋಂಪಿಯ ಕೊನೆಗಾಣ್ಕೆಗೆ ಮನಸ್ಸು ನೆಮ್ಮದಿಯಾದರೂ ರಾಜಕುಮಾರನು ಯಾವುದನ್ನೂ ಸ್ಪಷ್ಟಗೊಳಿಸದಿದ್ದುದಕ್ಕೆ ಅಳಲಿಂದ 'ಇಂತುಟೆವಲಂ' ಎಂದುಕೊಂಡು ಮಹಾಶ್ವೇತೆ ಮರಳಿ ತನ್ನಾಶ್ರಮಕ್ಕೆ ತೆರಳಿ ಘೋರತರ ತಪಶ್ಚರಣೆಯಲ್ಲಿ ನಿರತಳಾಗುತ್ತಾಳೆ.

೬

ಕುಮಾರನೊಬ್ಬನು ಕನ್ಯೆಯೊಬ್ಬಳನ್ನು ನೋಡಿ ಮೋಹಗೊಂಡ ಮಾತ್ರಕ್ಕೆ ಅದು ಮಹಾಪರಾಧವಾಗುವುದಿಲ್ಲ. ಅದಕ್ಕೆ ಪ್ರಾಯಶ್ಚಿತ್ತದ ಆವಶ್ಯಕತೆಯೂ ಅನಿವಾರ್ಯವಾಗುವುದಿಲ್ಲ. ಆದರೆ ಪುಂಡರೀಕನು ವ್ರತಿ. ನಿಯತಿಯ ವಜ್ರದೃಷ್ಟಿಯಲ್ಲಿ ವ್ರತಚ್ಯುತಿ ಶಿಕ್ಷಾರ್ಹ. ಶಿಕ್ಷೆಗೋಸ್ಕರ ಶಿಕ್ಷೆಯಲ್ಲ. ಅದರಲ್ಲಿ ಪ್ರತೀಕಾರ ಭಾವನೆಯಿಲ್ಲ; ಶುದ್ಧೀಕರಣ ಭಾವನೆಯಿದೆ. ಪುಂಡರೀಕನ ಮನಸ್ಸಿನಲ್ಲಿ ಮಹಾಶ್ವೇತೆಯನ್ನು ಕಂಡೊಡನೆ ತಟಕ್ಕನೆ ಸಂಭವಿಸಿದ್ದು ಶರೀರಜ ಕಾಮವೋ ಅಥವಾ ಆತ್ಮಜ ಪ್ರೇಮವೋ? ಪರೀಕ್ಷೆಯಾಗಬೇಕು. ಆ ಪರೀಕ್ಷೆ ಕಾಲವಿಳಂಬನ ರೂಪದಿಂದ ಮಾತ್ರವಲ್ಲದೆ ಕಷ್ಟರೂಪದಿಂದಲೂ ನಡೆದಿದೆ. ಮಹಾಶ್ವೇತೆಯ ತಪಸ್ಸು ಕಾಲರೂಪಿ ಮತ್ತು ಸ್ಥಾಣುಶೀಲ. ಪುಂಡರೀಕನದು ಭ್ರಮಣೆ, ಭ್ರಮಣೆ, ಮತ್ತೂ ಭ್ರಮಣೆ. ಜನ್ಮಜನ್ಮಾಂತರಗಳಲ್ಲಿ ಭ್ರಮಣೆ: ದೇವತ್ವದಿಂದ ಮನುಷ್ಯತ್ವಕ್ಕೆ; ಮನುಷ್ಯತ್ವದಿಂದ ತಿರ್ಯಗ್ಜಾತಿಗೆ. ಆದರೆ ಎಲ್ಲೆಲ್ಲಿ ಎಷ್ಟೆಷ್ಟು ಉರುಳಿದರೂ ಆತನ ಪ್ರೇಮವು

ಪ್ರಜ್ವಲಿಸುತ್ತದೆಯೇ ಹೊರತು ಒಂದಿನಿತೂ ಮಸುಳುವುದಿಲ್ಲ. ಜಾಬಾಲಿ ಮಹರ್ಷಿ ಕಥೆ ಹೇಳಿದುದನ್ನೆಲ್ಲ ಕೇಳಿ ಜಾತಿಸ್ಮರತೆಯುಂಟಾದ ಮೇಲೆ ಗಿಳಿಯಾಗಿದ್ದ ಪುಂಡರೀಕನು ಹೇಳುವುದೇನು? "ಭವದೀಯ ಪದಾಸನ್ನತೆಯಿಂದ ಮುನ್ನಿನ ಭವಗಳನ್ನೂ ಬಂಧುಗಳನ್ನೂ ನೆಱೆ ತಿಳಿವಱಿತಮಾಯ್ತು. ಆದೊಡಮೇಂ, ಮುನೀಂದ್ರ ನಾಣ್ಚದೆ ಮತ್ತಂ ಬಿನ್ನವಿಸಿದಪೆನ್ :

ಜಾತಿಸ್ಮರತೆ ವಿರಕ್ತಿಗೆ
ಹೇತುವೆನುತ್ತಿರ್ಪ್ಪುದರಿದುವೆ ಪುಸಿಯಾಗಿ ಮಹಾ
ಶ್ವೇತೆಯೊಳಾದೊಂದನುರಾ
ಗಾತಿಶಯಂ ಪೆರ್ಚಿದಪುದು ಮುನ್ನಿಂದೀಗಳ್.

ವಿರಕ್ತಿಗೆ ಹೇತುವಾಗಬೇಕಾಗಿದ್ದ ಜಾತಿಸ್ಮರತೆ ಮಹಾಶ್ವೇತೆಯ ಮೇಲಣ ರಾಗಾತಿಶಯಕ್ಕೆ ಕಾರಣವಾಗುತ್ತದೆ. ಆದರೂ ರಾಗವು ವಿರಾಗದ ನಿಷ್ಠೆಗೆ ಸಿಲುಕಿ ಅದರಿಂದ ಹದಗೊಳ್ಳುವವರೆಗೂ ಪುಂಡರೀಕನಿಗೆ ಇಷ್ಟಾರ್ಥಸಿದ್ಧಿಯಾಗಲಿ ಕಷ್ಟವಿಮುಕ್ತಿಯಾಗಲಿ ಕೈಗೂಡುವುದಿಲ್ಲ.

ಪುಂಡರೀಕನ ಉದ್ಧಾರಕ್ಕೆ ಎಷ್ಟು ಕಡೆಗಳಲ್ಲಿ ಪ್ರಯತ್ನ ನಡೆಯುತ್ತಿದೆ! ಮತ್ತೆಷ್ಟು ದಿಕ್ಕುಗಳಿಂದ ಸಹಾಯ ಒದಗುತ್ತದೆ! ಹಲವರ ಆಕಾಂಕ್ಷೆ, ಹಲವರ ಆಶೀರ್ವಾದ, ಹಲವರ ತಪಸ್ಸು. ಆ ಕೃಪಾಹಸ್ತವು ಕೈಯಾನದಿದ್ದರೆ ಅವನ ಪತನದ ಹಾದಿಯ ಇಳಿಜಾರು ಇನ್ನೂ ಎಷ್ಟು ಕಡಿದಾಗುತ್ತಿತ್ತೊ? ಅವನ ಏಳ್ಗೆ ಮತ್ತೆಷ್ಟು ದೂರಾಂತರವಾಗುತ್ತಿತ್ತೊ ಹೇಳಬಲ್ಲವರಾರು? ಒಂದುಕಡೆ ಮಹಾಶ್ವೇತೆ, ಒಂದುಕಡೆ ಕಪಿಂಜಲ; ಒಂದುಕಡೆ ತಾಯಿ ಲಕ್ಷ್ಮಿ; ಮತ್ತೊಂದುಕಡೆ ತಂದೆ ಶ್ವೇತಕೇತುಪ್ರತಿ; ಜೊತೆಗೆ ತಾರಾಪೀಡಾದಿಗಳ ಕ್ಷೇಮಚಿಂತನೆಯ ನೋಂಪಿ ಬೇರೆ. ಅವನ ಉದ್ಧಾರಕ್ಕೆ ಮಿತ್ರಸ್ನೇಹ, ಪುತ್ರವಾತ್ಸಲ್ಯ, ಸತೀಪ್ರೇಮ ಎಲ್ಲವೂ ಕಂಕಣಕಟ್ಟಿ ನಿಲ್ಲುತ್ತವೆ. ಮತ್ತು, ಆತನ ಹೃದಯರಾಗದ ನಿಶ್ಚಲ-ಉತ್ಕಟ-ಏಕಾಗ್ರತೆಯೂ ತನ್ನ ಶ್ರೇಯಸ್ಸಿಗಾಗಿ ವಿಧಿಯ ವಜ್ರಮುಷ್ಟಿಯೊಡನೆ ಹಣಾಹಣಿಯಾಗಿ ಹೋರಾಡುವುದನ್ನೂ ನೋಡುತ್ತೇವೆ.

ಚಂಡಾಲವನಿತೆಯ ವೇಷದಲ್ಲಿದ್ದ ಅವನ ತಾಯಿ ಅವನನ್ನು ಪಂದೊವಲಿನ ಪಂಜರದಲ್ಲಿಟ್ಟು 'ಕಾಮಪರತೆಯಿಂದಮ್ ಕೆಟ್ಟಯ್' ಎಂದು ಭರ್ತ್ಸನೆ ಮಾಡುತ್ತಾಳೆ. ಬರಿಯ ಬುದ್ಧಿವಾದದಿಂದ ಯಾರುತಾನೆ ತಿದ್ದುಪಡೆಯುತ್ತಾರೆ? ಅನುಭವ ಮಾಗಿದಾಗ ಚಿಕ್ಕದೊಂದು ನುಡಿ ಬಾಳಬಟ್ಟೆಯನ್ನೇ ಬದಲಾಯಿಸಲು ಸಮರ್ಥವಾಗುತ್ತದೆ. ತನ್ನ ಹಿಂದಿನ ದುರಂತಕಥೆಯೆಲ್ಲವನ್ನೂ ಮರಳಿ ತಿಳಿದ ಶುಕರೂಪಿಗೆ ಆಗ ಅರಿವು ಮೊಳೆಯುತ್ತದೆ. ಆಗ ಜಾನಿಸುತ್ತಾನೆ :

ಸುರಲೋಕಭ್ರಷ್ಟನೆಂ ಮರ್ತ್ಯರೊಳುದಯಿಪ ತಿರ್ಯಕ್ತ್ವದೊಳ್ ನಿಲ್ವ ಚಂಡಾ
ಲರ ಕಯ್ಯೊಳ್ ಬೀಳ್ವ ತೋಲ್ಪಂಜರದ ಪಡಕೆಯೊಳ್ ನಿಲ್ವ ದುರ್ವಾರದುಃಖೋ
ತ್ಕರಮೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂ ದಲಿನ್ ವಾರದಂತಾ
ಗಿರಿಸಲ್ವೇಳ್ಕೆಂದವಂ ನಿಗ್ರಹಿಪ ನಿಯಮದಿಂ ಮೌನದಿಂದಿರ್ದನಾಗಳ್.

ನಿಖಿಲೇಂದ್ರಿಯ ನಿಗ್ರಹಕ್ಕೆ ನಿಶ್ಚಯಂಗೆಯ್ದ ಮೇಲೆಯೆ ಪುಂಡರೀಕನ ಜೀವನ ಪಥವು ಅಧಃಪತನವನ್ನು ಳಿದು ಊರ್ಧ್ವಗಾಮಿಯಾಗುತ್ತದೆ; ಕಾಮದ ಹಂದೊವಲಿನ ಹೇಸಿಗೆಯ ಪಂಜರವು ಪ್ರೇಮದ ಕನತ್ಕನಕ ಪಂಜರವಾಗಿ ಪರಿಣಮಿಸುತ್ತದೆ. 'ಅನಂತರವೆ ತೋರಿತಿಂದ್ರಪುರದಂತಿರಾ ಪಕ್ಕಣಂ.'

೭

ಕಾವ್ಯದ ಉತ್ತರಭಾಗದಲ್ಲಿ ಮಹಾಶ್ವೇತೆಯ ತಪಸ್ಸು ಕಾದಂಬರಿಯ ತಪಸ್ಸಿಗೆ ಶ್ರದ್ಧೆ ಜೀವ ಉತ್ಸಾಹಗಳನ್ನು ದಾನಮಾಡುವ ಹೊಣೆಯನ್ನು ಹೊತ್ತುಕೊಳ್ಳ ಬೇಕಾಗುತ್ತದೆ. ಪುಂಡರೀಕನು ಎರಡು ಜನ್ಮವೆತ್ತಿ, ಬಾಳಿ, ಮರಳಿ, ಹಿಂತಿರುಗುವ ವರೆಗೂ ಕಾಯಬೇಕಾದ ಬಹು ದೀರ್ಘಕಾಲಾವಕಾಶದಲ್ಲಿ ಸ್ವತಃ ಮಹಾಶ್ವೇತೆಯೂ ಕೂಡ ಕೆಲವೊಮ್ಮೆಯಾದರೂ ಸಂದೇಹಗ್ರಸ್ತಳಾಗಿದ್ದಳೆಂದರೆ ಅದರಿಂದ ಆಕೆಯ ತಪಸ್ಸಿನ ಮೇಲ್ಮೆ ಒಂದಿನಿತೂ ಕೀಳ್ಪಡುವುದಿಲ್ಲ. ಏಕೆಂದರೆ ಧರ್ಮಜೀವನದಲ್ಲಿ ಶ್ರದ್ಧೆ ಉಚ್ಛ್ವಾಸದಂತಿದ್ದರೆ ಸಂದೇಹ ನಿಃಶ್ವಾಸದಂತೆ. ಸಾಮಾನ್ಯರ ಬಾಳಿನಲ್ಲಿ ಕೆಲವರ್ಷಗಳ ನಿರೀಕ್ಷಣೆಯೇ ಅತಿ ಕಠೋರವಾಗಿ ಕಾಣುತ್ತದೆ. ಅನೇಕ ನರಪ್ರಾಣಿ ಗಳು ಸೋತು, ಮನಸ್ಸು ಸೋತು, ಪ್ರಾಣಿಗಳಾಗಿ, ಆದರ್ಶದ ಅತೃಪ್ತಿಯಿಂದ ಪಾರಾಗುತ್ತಾರೆ. ತಮಗೆ ಅತಿಯೂ ಅಸಹ್ಯವೂ ಆಗಿರುವ ಮೇಲ್ಮಟ್ಟದ ಕುದಿಹದಿಂದ ಕೆಳಮಟ್ಟದ ತಣ್ಪಿಗಿಳಿದು, ಸಂಸ್ಕೃತಿಯ ಸಾಹಸವನ್ನು ಪ್ರಕೃತಿಯ ಸಾಧಾರಣತೆಗೆ ಶರಣುಮಾಡುತ್ತಾರೆ. ಆ ದೃಷ್ಟಿಯಿಂದ ನೋಡಿದರೆ, ಜನ್ಮಾಂತರಗಳ ವರೆಗೂ ಕಾಯುವ ಮಹಾಶ್ವೇತೆಯ ಶ್ರದ್ಧೆ ಸಾಹಸಗಳ ಚರಣತಲದಲ್ಲಿ ಆದರ್ಶೋನ್ಮುಖಿಗಳೆ ಲ್ಲರೂ ಚಂದ್ರಾಪೀಡನಂತೆ ಶಿಷ್ಯತ್ವವನ್ನು ಅಂಗೀಕರಿಸಿ ಹಣೆಮಣಿಯಬೇಕಾಗುತ್ತದೆ.

ಮಹಾಶ್ವೇತೆಯ ಅನುರಾಗವು ಬರಿಯ ಅತನುರಾಗವಾಗಿ ಇದ್ದಿದ್ದರೆ, ಆಕೆಯ ಪ್ರೇಮವು ಅಳೀಕಕಾಮವಾಗಿ ಇದ್ದಿದ್ದರೆ, ಆಕೆಗೆ ತನ್ನ ಗುರಿಯಲ್ಲಿ ಆಶಂಕೆ ಸಂಜನಿಸಿ ನಂಬುಗೆ ಸಡಿಲವಾಗಿದ್ದಿದ್ದರೆ, ವೈಶಂಪಾಯನನು ಬಂದು ತನ್ನೆದುರು ಶೃಂಗಾರ ಭಿಕ್ಷು ವಾಗಿ ನಿಂತಂದೇ ಕಥೆಗೂ ವ್ಯಥೆಗೂ ಆದರ್ಶತೆಗೂ ಎಲ್ಲಕ್ಕೂ ತಿಲಬಲಿಯಾಗುತ್ತಿತ್ತು.

ವೈಶಂಪಾಯನನು ಪುಂಡರೀಕನೇ ಎಂದು ಕಟ್ಟಕಡೆಗೆ ಗೊತ್ತಾಗಿದ್ದರೂ ಮೇಲಿನ ವಿಮರ್ಶೆ ನಿಲ್ಲುತ್ತದೆ.

ಸೌಂದರ್ಯದಲ್ಲಾಗಲಿ ತೇಜಸ್ಸಿನಲ್ಲಾಗಲಿ ವೈಶಂಪಾಯನನು ಪುಂಡರೀಕನಿಗೆ ಕಡಮೆಯಲ್ಲ. ಮಹಾಶ್ವೇತೆ ಮಾಡಿರುವ ಅವನ ವರ್ಣನೆಯೆ ಅದಕ್ಕೆ ಸಾಕ್ಷಿ.

ಅವನು ತನ್ನನ್ನು ನೋಡಿದ ರೀತಿಯನ್ನೂ ತನ್ನನ್ನು ಮಾತಾಡಿಸಿದ ರೀತಿಯನ್ನೂ ಮಹಾಶ್ವೇತೆ ಹೇಗೆ ಚಿತ್ರಿಸಿ ಬಣ್ಣಿಸಿದ್ದಾಳೆ! ಆದರೂ ಆಕೆ 'ಪುಂಡರೀಕದೇವನ ವೃತ್ತಾಂತದಿಂ ಅಪೇತಕೌತುಕೆ ಮತ್ತು ಅಪಗತಸುಖೆ.' ಆದ್ದರಿಂದ ಅವನು ಯಾರು ಏನು ಎಂದು ಕೂಡ ವಿಚಾರಿಸಲೆಳಸಲಿಲ್ಲ. ಅವನನ್ನು ನಿವಾರಿಸುವಂತೆ ತರಳಿಕೆಗೆ ಆಣತಿಯಿತ್ತಳಷ್ಟೆ.

ಆ ಇರುಳು 'ನಿರ್ಮಲ ಚಂದ್ರದ್ಯುತಿ ವರ್ಷಹರ್ಷಿತ ಚಕೋರಾನಂದ ವಾರ್ಧಿಂದು ಸಂಕುಲದೊಳ್' ಮಿಂದು ಬಂದ ತಂಗಾಳಿಗೆ ತನುವೊಡ್ಡಿ ಶಿಲಾಪಟ್ಟದಲ್ಲಿ ಪಟ್ಟಿರ್ದು, 'ಮಿಸುಗುವ ಚಂದ್ರಮಂಡಲದಿನ್ ಅಂದು ಇಳಿತಂದನ ದಿವ್ಯವಾಣಿಯುಂ ಪುಸಿಯೆನಿಸಿತು ಮಾಯ್ದೆನಗೆ ಪಾಪಿಗೆ' ಎಂದು ಮೊದಲಾಗಿ ಆಶಂಕೆಯ ಆಂದೋಳನ ದಲ್ಲಿ ಆಲೋಚಿಸುತ್ತಿದ್ದಾಗಲೇ ಆ ದ್ವಿಜಕುಮಾರನೂ ಅಲ್ಲಿಗೆ ಐತರುತ್ತಾನೆ:

"ಅಪ್ಪುವಟಿಯಾಸೆಯಿಂ ದೂರದೊಳ್ ನಿಮಿರ್ವ ನಿಡುದೋಳ್ಗಳುಂ ತನ್ನೊಳ್ ತೋಱೆ ಯುಕ್ತಾಯುಕ್ತ ವಿವೇಕಕ್ಕೆ ಪಿಂತೆಗೆದುನ್ಮತ್ತನಂತೆ ಅಚ್ಚ ಬೆಳ್ದಿಂಗಳೊಳೊಯ್ಯ ನೊಯ್ಯನೆ ಬರುತಿರ್ದನ್."

ಆಗ ಮಹಾಶ್ವೇತೆ "ಇವನೆನ್ನಂ ಕಯ್ಯೊಳಂ ಬಂದು ಮುಟ್ಟಲೊಡಂ ಪತ್ತುವಿಡಲ್ಕೆ ವೇಳ್ಕುವಸುವಂ . . . ನಿಷ್ಫಲವಾಯ್ತುಕ್ಕಟ ಮಂದಭಾಗ್ಯೆಗೆನಗೀ ಪ್ರಾಣಸಂಧಾರಣಂ" ಎಂದು ಕಳವಳಿಸುತ್ತಿರಲು ಜನ್ಮಜನ್ಮಾಂತರದ ಪ್ರೇಮದಿಂದ ಪ್ರೇರಿತನಾಗಿ ವೈಶಂಪಾಯನನು ಹುಚ್ಚನಂತೆ ಮುಂಬರಿದು ಕೋರುತ್ತಾನೆ:

"ಎಲೇ ಕುಮುದನೇತ್ರೆ ಮನ್ಮಥಸಹಾಯನೀ ಚಂದ್ರಮಂ
ಕೊಲಲ್ ಬಗೆದನೆನ್ನನಾರ್ತನನನಾಥನಂ ದುಃಖಿಯಂ
ಪಲುಂಬಿ ಮರೆವೊಕ್ಕೆನಾಂ ನಿನಗಧೀನಮೀ ಜೀವಿತಂ
ವಿಲಂಬಿಸದೆ ರಕ್ಷಿಸೆನ್ನನಱಿಯೆಂ ಪ್ರತೀಕಾರಮಂ"

ಅದನ್ನು ಕೇಳಲೊಡನೆ ನೆತ್ತಿಯಲ್ಲಿ ಉರಿಮಸಗಿತು. ಕಿನಿಸು ಕಯ್ಗಣ್ಮಿತು. 'ಕಣ್ಬನಿಗಿಡಿಗಳಿಂದುರಿವುವಂತವನಂ ನೀಡುಂ ನೋಡುತ್ತಾವಿಷ್ಟೆಯಂತೆನ್ನನಾನಱಿಯದೆ

'ನುಡಿವನ್ನಮೆನ್ನನೀ ಪರಿ
ಸಿಡಿಲೇತಕೆ ಕೆಡೆದುದಿಲ್ಲ ನಿನ್ನಯ ಸಿರದೊಳ್
ಉಡುಗಿದುದಿಲ್ಲ ಮುಸಿರ್
ನೂರ್ಮಡಿಯೆನಲೀ ಜಹ್ವೆ ಬಿರಿದುದಿಲ್ಲ ದುರಾತ್ಮಾ.'

ಎಂದು ನುಡಿದು, ಚಂದ್ರಾಭಿಮುಖಿಯಾಗಿ ಕಯ್ಗಳಂ ಮುಗಿದು 'ಮಹಾಭಾಗ, ಸಕಲ ಭುವನ ಚೂಡಾಮಣಿಯಪ್ಪ ರೋಹಿಣೀರಮಣ, ಪುಂಡರೀಕನನಾಂ ನೋಡಿದಂದಿನಿಂ ಮತ್ತೊರ್ವ ಪುರುಷನಂ ಮನದೊಳಾದೊಡಂ ಭಾವಿಸದಿರ್ದುದು ನನ್ನಿಯಪ್ಪೊಡೆ ಈ ಅಳೀಕಕಾಮಿ ಗಿಳಿಯಾಗಿ ಪುಟ್ಟುಗೆ' ಎಂದು ಶಪಿಸಿದಳು. ಮದನಜ್ವರ ವೇಗದಿಂದಲೋ ಪಾಪಪರಿಪಾಕದಿಂದಲೋ ಅಥವಾ ತೀವ್ರಶಾಪವಾಙ್ಮಹಿಮೆ ಯಿಂದಲೋ ಆತನಂದು 'ಕಡಿದಿಕ್ಕಿದ ಪೆರ್ಮರನಂತೆವೋಲದೇನಹಹ ನಿರೂಪಿಪೆಂ ಕೆಡೆದುಪೊಂದಿದನಾ ಯಿಳೆಯುಲ್ಲಚೇತನಂ.'

ಹಿಂದೆಲ್ಲಿಯೂ ಮಹಾಶ್ವೇತೆಯ ಕೋಪವನ್ನು ಕಂಡರಿಯದ ನಾವು ಭಯ ಭ್ರಾಂತರಾಗುತ್ತೇವೆ. ಇದ್ದಕ್ಕಿದ್ದ ಹಾಗೆ ಕೋಮಲ ಹೂವು ಕಠೋರ ಸಿಡಿಲಾಗು ತ್ತದೆ. ಪವಿತ್ರ ಪ್ರೇಮಕ್ಕಾಗಿಯೇ ಮಹಾಶ್ವೇತೆ ತಕ್ಕನೆ ಮಹಾಕಾಳಿಯಾಗು ತ್ತಾಳೆ. ತಪಸ್ವಿನಿಯಾದ ಅಬಲೆಯ ಬಲವೇನೆಂಬುದನ್ನು ತೋರುತ್ತಾಳೆ. ಮಹಾಶ್ವೇತೆ ಬರಿಯ ಜಲಜಮುಖಿ ಮಾತ್ರವಲ್ಲ; ಸಮಯ ಬಂದರೆ ಪ್ರಲಯಮುಖಿಯೂ ಆಗುತ್ತಾಳೆ. ಆಗ ಆಕೆಯ ಲಾವಣ್ಯವು ಭವ್ಯತೆಗೇರುತ್ತದೆ. ಲಾಲಿತ್ಯವು ರೌದ್ರಸಂಗಿ ಯಾಗಿ ಭಕ್ತಿಗೌರವಭಾಜನವಾಗುತ್ತದೆ. ಅಲ್ಪತೆ ಮಹತ್ತಿಗೇರುತ್ತದೆ: ಯಾವುದು ಅಪರೀಕ್ಷಿತವಾಗಿದ್ದಿದ್ದರೆ ಸುರಕ್ಷಿತವಾದ ಅಲ್ಪತೆಯೇ ಆಗಿ ಉಳಿಯುತ್ತಿತ್ತೋ ಅದೇ ಪರೀಕ್ಷಿತವಾಗಿ ಮಹತ್ತಿಗೇರುತ್ತದೆ.

ಆಹಾರ ಲಭಿಸದಿದ್ದುದರಿಂದ ಹೊಟ್ಟೆಗಿಲ್ಲದೆ ಸತ್ತರೆ ಅದನ್ನು ನಿರಶನವ್ರತ ವೆಂದಾಗಲಿ ಪ್ರಾಯೋಪವೇಶವೆಂದಾಗಲಿ ವಿಷಯ ತಿಳಿದವರಾರೂ ಕರೆಯುವುದಿಲ್ಲ. ಉಣಿಸು ಒಳಿಸಾರಿ ಉಣ್ಣೆಂದು ಬೇಡುತ್ತಿದ್ದರೂ ಹಸಿವೆಯ ಯಮಯಾತನೆಯನ್ನು ತಡೆದುಕೊಂಡು ವ್ರತಾಚಾರಿಯಾಗಿರುವಾತನೆ ನಿಜವಾದ ವ್ರತಿ. ಪ್ರಲೋಭದ ಸೆಳೆತವಿಲ್ಲದಿದ್ದರೆ ಇಂದ್ರಿಯನಿಗ್ರಹವೂ ಜಡರೂಢಿಯಾಗಬಹುದು; ಪಾತಿವ್ರತ್ಯವೂ ಪದ್ಧತಿಯಾಗಬಹುದು; ವ್ಯಾಕುಲತೆಯೂ ಆಕಳಿಸಬಹುದು.

ಸ್ವರ್ಗವೇಷಿಯಾದ ಪ್ರಲೋಭನವು ಅಪ್ಪು ಬಾ ಎಂದು ತೋಳ್‌ನೀಡಿ ಮುಂದೆ ನಲಿದಂದು ಅದನ್ನು ಕಡೆಗಣ್ಣಿನಿಂದಲೂ ನೋಡದೆ ವಿಸರ್ಜಿಸಿದಾಗ ಮಾತ್ರ ಸಾಮಾನ್ಯ ಸ್ತ್ರೀ ಮಹಾಮಹಿಳೆಯಾಗುತ್ತಾಳೆ. ಲಂಕೇಶ್ವರನನ್ನು ಜುಗುಪ್ಸಾ ಗದೆಯಿಂದ ಚೂರ್ಣೀಕೃತನನ್ನಾಗಿ ಮಾಡಿ, ತಿರಸ್ಕಾರದ ಸಮ್ಮಾರ್ಜನಿಯಿಂದ ಗುಡಿಸಿ, ಕಸದ ಮೂಲೆಗೊತ್ತಿದಂದು ಸೀತೆ ಲೋಕಪೂಜ್ಯೆಯಾಗಿದ್ದಾಳೆ. ಸ್ಫುರದ್ರೂಪಿ ಯಾದರೂ ಅಳೀಕಕಾಮಿಯಾದ ವೈಶಂಪಾಯನನನ್ನು ವಿಸರ್ಜಿಸಿ ಈ ಮಹಾಶ್ವೇತೆ ಆ ಜನಕ ಕನ್ಯೆಗೆ ಹೆಗಲೆಣೆಯಾಗಿದ್ದಾಳೆ.

೮

ವಿವಾಹ ತತ್ವಗಳಲ್ಲಿಯೂ ನರನಾರಿಯರ ಸಂಬಂಧದ ವಿಷಯಗಳಲ್ಲಿಯೂ ಹೊಸಹೊಸ ಬಿರುಕುಗಳೂ ಸಡಿಲಗಳೂ ಸಂದೇಹಗಳೂ ಮೊಗದೋರುತ್ತಿರುವ ಈ ಸಮಯದಲ್ಲಿ ನಮ್ಮ ಮನಸ್ಸು ಪ್ರಾಚೀನಕಾಲದ ಮಹಾಮಹಿಳೆಯರ ಚರಣತಲ ಕ್ಷೇತ್ರಕ್ಕೆ ಯಾತ್ರೆ ಹೋಗಲು ನಾಚುತ್ತಿರುವುದೇನೊ ಅರ್ಥವಾಗುತ್ತದೆ. ಆದರೆ ಆ ಯಾತ್ರೆ ಸಂಪೂರ್ಣವಾಗಿ ನಿಂತುಹೋದರೆ ಎಲ್ಲಿ ಅನರ್ಥವುಂಟಾಗುತ್ತದೆಯೋ ಎಂದು ಹೆದರಿಕೆಯೂ ಆಗುತ್ತದೆ.

ಕಾವ್ಯಗಳನ್ನೆಲ್ಲ ಗಂಡಸರು ಬರೆದಿದ್ದಾರೆ; ಅಲ್ಲಿ ಬರುವ ಹಿರಿಯ ಹೆಣ್ಣುಗಳೆಲ್ಲ ಅವರ ಕೈಗಾರಿಕೆ; ಸೀತೆ, ಸಾವಿತ್ರಿ, ದಮಯಂತಿ, ಮಹಾಶ್ವೇತೆಯರೆಲ್ಲ ಪುರುಷ ಹೃದಯದ ಆಶಾಸೂಚಿಗಳೇ ಹೊರತು ಸ್ತ್ರೀಹೃದಯದ ವಿಷಯಸೂಚಿಗಳಲ್ಲ. ಸ್ತ್ರೀಯರೇ ಕಾವ್ಯಗಳನ್ನು ಬರೆದಿದ್ದ ಪಕ್ಷದಲ್ಲಿ ಅಥವಾ ಬರೆಯುವ ಪಕ್ಷದಲ್ಲಿ ಕಥಾನಾಯಿಕೆಯರ ರೀತಿ ಬೇರೆಯಾಗಿರುತ್ತಿತ್ತು. ಅದೂ ಅಲ್ಲದೆ, ಗಂಡಸರೆಲ್ಲ ಹೆಂಗಸರು ಸೀತೆ ಮಹಾಶ್ವೇತೆಯರಾಗಿರಬೇಕೆಂದು ಬೋಧಿಸುತ್ತಾರೆಯೆ ಹೊರತು ತಾವು ಶ್ರೀರಾಮ ಪುಂಡರೀಕರಂತೆ ಇರಬೇಕೆಂದು ಆಗ್ರಹಪಡುವುದಿಲ್ಲ.—ಇಂತಹ ಟೀಕೆಯಲ್ಲಿ ಸ್ವಲ್ಪಮಟ್ಟಿಗೆ ಸತ್ಯವಿರಬಹುದಾದರೂ ಶ್ರೇಯಸ್ಸಿನ ದೃಷ್ಟಿಯಿಂದ ಅದು ಅಪ್ರಕೃತ. ಇಬ್ಬರೂ ರೋಗಿಗಳೆಂದು ಆರೋಗ್ಯವನ್ನೇ ಹಳಿಯುವುದೂ, ಇಬ್ಬರೂ ಸುಳ್ಳುಗಾರರೆಂದು ಸತ್ಯವನ್ನೇ ಅಲ್ಲಗಳೆಯುವುದೂ, ನಿದರ್ಶನಗಳು ಅಪೂರ್ವವೆಂದು ಆದರ್ಶವನ್ನೇ ತಿರಸ್ಕರಿಸುವುದೂ ಪ್ರೇಮದ ದಿವ್ಯತೆಗೆ ಲಕ್ಷಣವಲ್ಲ. ಮತ್ತು, ಬಹುಸಂಖ್ಯೆಯ ಜನರು ಅನುಸರಿಸಲಾರದ ಮಾತ್ರಕ್ಕೆ ಬಹುಕಾಲದಿಂದ ಸವೆದುಬಂದ ಒಂದು ದಾರಿಯನ್ನೇ ತ್ಯಜಿಸುವುದು ಕ್ಷೇಮಂಕರ ಬುದ್ಧಿಯಲ್ಲ. ಎತ್ತರಗಳಿರುವುದು ಎಲ್ಲರೂ ಹತ್ತುತ್ತಾರೆಂದಲ್ಲ, ಎಲ್ಲರೂ ಹತ್ತಬೇಕೆಂದು.

ತನ್ನ ಪ್ರಾಣಮಿತ್ರ ವೈಶಂಪಾಯನನು ಮಹಾಶ್ವೇತೆಯ ಶಾಪದಿಂದ ತೀರಿ ಕೊಂಡುದನ್ನು ನೋಡಿ ವಿಗತಪ್ರಾಣನಾದ ಚಂದ್ರಾಪೀಡನಿಗಾಗಿ ರೋದಿಸುತ್ತಿದ್ದ ತಂಗಿ ಕಾದಂಬರಿಗೆ ಹೀಗೆಂದು ಉಪದೇಶಿಸುತ್ತದೆ ಮಹಾಶ್ವೇತೆಯ ಶ್ರದ್ಧೆ:

ಎನಗಿದು ದೈವಮೆಂದು ಮನದೊಳ್ ಪರಿಭಾವಿಸಿ ಕಲ್ಲ ಮಣ್ಣ ರೂ
ಪನೆ ಗಡ ಪೂಜಿಸುತ್ತುಮಿರೆ ಸನ್ನಿದವಾದಪುದೆಂದೊಡಕ್ಕ ನೆ
ಟ್ಟನೆ ಮನುಜೇಂದ್ರಚಂದ್ರವೆಸರಿಂದೆಸೆವಗ್ಗದ ಚಂದ್ರಮೂರ್ತಿಯಂ
ಮನಮೊಸೆದರ್ಚಿಸುತ್ತುಮಿರೆ ಸನ್ನಿದನಪ್ಪುದಿದಾವ ಸಂದೆಗಂ ?

ಕೆ. ವಿ. ಪುಟ್ಟಪ್ಪ.

ರಸಿಕನ ಪಿಸುಮಾತು

೧

ತೊಳಗುವ ತಿಂಗಳಿಸಂಗಳಕೇರುತ
ಬೆಳಗುವೆವಾವೂ ಬಾರೆ ಸಖಿ,
ಮೋಡದೊಳಾಡುವ ಚಂದಿರಸಂದದಿ
ಚಂದದಿ ಸಲಿಯುವೆವಿಂದುಮುಖಿ.

೨

ಚಂದಿರಸಂದದಿ ಬಾಂದಳದಾಳದಿ
ನಾವೊಲಿದಲೆವೆವು ಕೇಳೆ ಸತಿ.
ತೇಲುತ, ಕಾಮನ ದೂತರ ಹೋಲುತ,
ರಸಿಕರಸೇಳಿಪೆವೇಳೆ ರತಿ.

೩

ಕಾರ್ತರಿಗಿಂತಹ ಬೆಳುದಿಂಗಳಿಸಲಿ
ವಾರ್ತೆಯಸೊಯ್ವುದೆ ನಮಗೆ ಸುಖ
ಒಲ್ಮೆಯು ಚಿಮ್ಮುವ ಚಿಲುಮೆಯ ತೆರದಲಿ
ಸೊಗಸಿರೆ ನಿನ್ನಯ ರಮ್ಯಮುಖ.

ಎಂ. ರಾಮರಾವ್.

ಮೊದಲನೆಯ ಕೀರ್ತಿವರ್ಮನ ಗೊಡಚಿಯ ತಾಮ್ರಪಟಗಳು: ಶಾ. ಶಕ ೫೦೦

ಗೊಡಚಿಯು ಕೊಲ್ಹಾಪುರ ಸಂಸ್ಥಾನಕ್ಕೆ ಸಂಬಂಧಿಸಿದ ತೊರಗಲ್ಲು ಜಹಾಗೀರ ದೊಳಗಿನ ಒಂದು ಸಣ್ಣ ಹಳ್ಳಿ. ಇದು ಬೆಳಗಾವಿಯಿಂದ ಪೂರ್ವಕ್ಕೆ ಸುಮಾರು ೪೮ ಮೈಲು ದೂರದಲ್ಲಿರುವುದು. ಈ ಊರಲ್ಲಿ ವೀರಭದ್ರದೇವರ ದೇವಸ್ಥಾನವಿದ್ದು ವರ್ಷಕ್ಕೆ ಎರಡು ಸಾರೆ ಜಾತ್ರೆಯಾಗುವುದು. ಜಾತ್ರೆಗೆ ಬಹು ದೂರದಿಂದ ಎಲ್ಲ ಜಾತಿಯ ಜನರು ಬರುವರು. ಅವರಲ್ಲಿ ಲಿಂಗವಂತರು ವಿಶೇಷವಾಗಿರುವರು. ಈ ಊರು ಪ್ರಾಚೀನಕಾಲದಲ್ಲಿ ಒಂದು ದೊಡ್ಡ ಸ್ಥಳವಾಗಿರಬಹುದೆಂದು ಇಲ್ಲಿ ದೊರೆಯುವ ಹಳೆ ಗುಡಿಗಳು ಶಿವಲಿಂಗಗಳು ವೀರಗಲ್ಲುಗಳು ಮಹಾಸತಿ ಕಲ್ಲುಗಳು ಶಿಲಾಶಾಸನದ ಅವಶೇಷಗಳು ಮೊದಲಾದವುಗಳಿಂದ ಗೊತ್ತಾಗುವುದು. ಈ ಊರಲ್ಲಿ ಅಲ್ಲಲ್ಲಿ ಒಡೆದ ಶಿಲಾಶಾಸನಗಳು ದೊರೆಯುವವು. ಸುಮಾರು ೧೨-೧೩ ನೆಯ ಶತಮಾನಕ್ಕೆ ಸಂಬಂಧಿಸಿದ ಒಂದು ಶಿಲಾಶಾಸನದ ಭಾಗವನ್ನು ನೀರು ತುಂಬುವ ಬಾವಿಯ ಪಾವಟಿಗೆಗೆ ಹಾಕಿರುವರು. ಈ ಊರ ಮಠದ ಸ್ವಾಮಿಗಳ ಹತ್ತಿರ ತಾಮ್ರಪಟಗಳುಂಟೆಂದು ಕೇಳಿದ್ದೆನು. ಕೊಲ್ಹಾಪುರದ ದೊಡ್ಡ ಅಧಿಕಾರಿಗಳೂ ನನ್ನ ಆಪ್ತರೂ ಆದ ಶ್ರೀಯುತ ಸಿದ್ಧರಾಮಯ್ಯನವರು ಸ್ವಾಮಿ ಹಿರೇಮಠ, ಬಿ.ಎ., ಇವರ ಸಹಾಯದಿಂದ ಮತ್ತು ಕಟಕೋಳ ಹಿರೇಮಠದ ಸ್ವಾಮಿಗಳ ಸಹಾಯದಿಂದ ಈ ಪಟಗಳನ್ನು ದೊರಕಿಸಿದೆನು. ಈ ಪಟಗಳು ಸ್ವಾಮಿಗಳ ಕಡೆಗೆ ಹೇಗೆ ಬಂದಿರುವು ವೆಂಬುದು ಗೊತ್ತಾಗುವುದಿಲ್ಲ. ಅವರು ಅವು ತಮ್ಮ ಮಠದಲ್ಲಿ ವಂಶಪರಂಪರೆಯಿಂದ ಬಂದಿರುವುವೆಂದು ಹೇಳುವರು.

ಇವು ಮೂರು ಪಟಗಳಿರುವವು. ಮೊದಲನೆಯ ಮತ್ತು ಮೂರನೆಯ ಪಟದಲ್ಲಿ ಒಂದೇ ಮಗ್ಗಲಿಗೂ ೨ನೆಯ ಪಟದಲ್ಲಿ ಎರಡೂ ಮಗ್ಗಲಿಗೂ ಅಕ್ಷರಗಳಿರುವವು. ಸುಮಾರು ಒಂದು ಅಂಗುಲ ಬಿಡುವು ಇರುವುದು. ಬಿಡುವಿನ ಮಧ್ಯದಲ್ಲಿ ಪಟಗಳನ್ನು ಪೋಣಿಸುವ ಬಳೆಯ ತೂತುಗಳಿವೆ. ಬಳೆಯು ಕಳೆದುಹೋಗಿದೆ.

ಮೊದಲನೆಯ ಪಟವು ೧೩೦ ಗ್ರಾಮು ಅಂದರೆ ೧೧.೪೬ ತೊಲೆಗಳು
ಎರಡನೆಯ ಪಟವು ೧೧೨ ಗ್ರಾಮು ಅಂದರೆ ೯.೮೮ ತೊಲೆಗಳು
ಮೂರನೆಯ ಪಟವು ೧೧೦ ಗ್ರಾಮು ಅಂದರೆ ೯.೭೦ ತೊಲೆಗಳು

ತೂಕ ಭಾರವಾಗಿರುವವು. ಪಟಗಳು ೬⅞ ಇಂಚು ಉದ್ದ; ೨⅜ ಇಂಚು ಅಗಲವಾಗಿರುವವು. ಬರಹವು ಬಿಡುವು ಬಿಟ್ಟು ಉಳಿದ ಸ್ಥಳದಲ್ಲೆಲ್ಲಾ ಇರುವುದು. 'ಸ್ವಸ್ತಿ' ಎಂಬ ಮೊದಲನೆಯ ಶಬ್ದವನ್ನು ಮಾತ್ರ ಮೊದಲನೆಯ ಪಟದ ಆರಂಭದಲ್ಲಿ ಬಿಡುವಿನಲ್ಲಿ ಬರೆದಿರುವರು. ಅಕ್ಷರಗಳು ಕನ್ನಡ ಆರನೆಯ ಶತಮಾನದ ಅಕ್ಷರಗಳಿಗೆ ಸರಿಹೋಲುವವು. ಇವುಗಳೊಡನೆ ಬಾದಾಮಿಯ ಗುಹೆಗಳೊಳಗಿನ ಶಾಸನಗಳ ಅಕ್ಷರಗಳನ್ನು ಹೋಲಿಸಿನೋಡಬಹುದು.[1] ಎಲ್ಲಕ್ಕೂ ದೊಡ್ಡ ಅಕ್ಷರವು ಸುಮಾರು .೪×.೬ ಇಂಚು ಇರುವುದು.[2] ಎಲ್ಲಕ್ಕೂ ಸಣ್ಣ ಅಕ್ಷರವು .೧×.೨ ಇಂಚು ಇರುವುದು.[3] ಕೆಳಗಿನ ಅಕ್ಷರಗಳು ಲಕ್ಷ್ಯದಲ್ಲಿಡತಕ್ಕಂಥವಿವೆ :—

ಸ್ತಿ (ಸಾಲು ೧ ಬಿಡುವು); ಹ, ಮ, ಸು (ಸಾ. ೧); ನ, ತಿ, ಲು, ಅಗ್ನಿ (ಸಾ. ೨); ಬ, ಪೌಂಡರಿಕ,[4] ಮೇ, ಧ, ಜ, ಪೆ (ಸಾ. ೩); ಸ, ರಿಹ (ಸಾ. ೫); ಕು, ಬು, ಬೋ (ಸಾ. ೬); ಪೊ (ಸಾ. ೭); ರ್ತ್ತಿ (ಸಾ. ೮); ದೆ (ಸಾ. ೯); ನೆ (ಸಾ. ೧೦); ಖ್ಯ (ಸಾ. ೧೧); ಳ್ಗ, ಊ (ಸಾ. ೧೩); ಇ್ಯ, ಫ (ಸಾ. ೧೭).

ಅಕ್ಷರಗಳ ಮೇಲೆ ಸಣ್ಣ ವರ್ತುಳವನ್ನಿಟ್ಟು 'ಇ' ಕಾರವನ್ನೂ, ವರ್ತುಳವನ್ನು ಒಡೆದು ಅದರ ತುದಿಯನ್ನು ಸ್ವಲ್ಪ ಮಣಿಸಿ 'ಈ' ಕಾರವನ್ನೂ ಮಾಡಿರುವರು. "ಹಾರಿತೀ ಪುತ್ರಾಣಾಂ" (ಸಾಲು ೨) ಇದರಲ್ಲಿಯ "ರಿ" ಮತ್ತು "ತೀ" ಇವುಗಳನ್ನೂ "ಪವಿತ್ರೀಕೃತಶರೀರಸ್ಯ" (ಸಾಲು ೪) ಇದರಲ್ಲಿಯ "ತ್ರೀ" ಮತ್ತು "ರೀ" ಇವುಗಳನ್ನೂ, "ನೀತಿಶಾಸ್ತ್ರವಿಶಾರದೇನ" (ಸಾಲು ೯) ಇದರಲ್ಲಿಯ "ನೀ" ಇದನ್ನೂ ನೋಡಬೇಕು. 'ತ' ಮತ್ತು 'ನ' ಅಕ್ಷರಗಳ ಒತ್ತುಗಳನ್ನು ಈಗ ರೂಢಿಯಲ್ಲಿರುವ ಒತ್ತುಗಳ ಸಂಗಡ ಹೋಲಿಸಿ ನೋಡಬೇಕು.

'ಅಭಿಷಿಕ್ತ' (ಸಾ. ೧) ಇದರಲ್ಲಿಯ 'ಕ್ತ'; 'ಕತ್ತಿ' (ಸಾ. ೫) ಇದರಲ್ಲಿಯ 'ತ್ತಿ'; 'ಕಾರ್ತ್ತಿಕ' (ಸಾ. ೮) ಇದರಲ್ಲಿಯ 'ರ್ತ್ತಿ'; 'ಶಾಸ್ತ್ರ' (ಸಾ. ೯) ಇದರಲ್ಲಿಯ 'ಸ್ತ್ರ'; 'ನಿವರ್ತ್ತನಂ' (ಸಾ. ೧೪) ಇದರಲ್ಲಿಯ

---

[1] *Ind. Ant.*, Vol. X, p. 58. ಈ ಪುಟದ ಮೇಲಿರುವ ಪಟವನ್ನು ನೋಡಬೇಕು.

[2] ಐದನೆಯ ಸಾಲಿನಲ್ಲಿರುವ 'ಪ್ರೀ' ಅಕ್ಷರವನ್ನು ನೋಡಬೇಕು.

[3] ಐದನೆಯ ಸಾಲಿನಲ್ಲಿರುವ 'ನ' ಅಕ್ಷರವನ್ನು ನೋಡಬೇಕು.

[4] ಮೂರನೆಯ ಸಾಲಿನಲ್ಲಿರುವ "ಪೌಣ್ಡರೀಕ" ಶಬ್ದದೊಳಗಿನ 'ಪೌ' ಅಕ್ಷರವನ್ನೂ ಒಂಬತ್ತನೆಯ ಸಾಲಿನಲ್ಲಿರುವ "ಪೌರ್ಣ್ಣಮಾಸ್ಯಾಂ" ಶಬ್ದದೊಳಗಿನ 'ಪೌ' ಅಕ್ಷರದೊಡನೆ ಹೋಲಿಸಬೇಕು.

'ರ್ತ್ರ್'; 'ಸಂಯುಕ್ತೋ' (ಸಾ. ೧೭) ಇದರಲ್ಲಿಯ 'ಕ್ತೋ'; 'ಅಗ್ನಿಷ್ಟೋಮಾಗ್ನಿಚಯನ' (ಸಾ. ೨) ಇದರಲ್ಲಿಯ 'ಗ್ನಿ'; 'ಸ್ನಾನ' (ಸಾ. ೩) ಇದರಲ್ಲಿಯ 'ಸ್ನಾ' ಇವುಗಳನ್ನು ಲಕ್ಷಿಸಬೇಕು.

ಕೆಳಗಿನ ಅಕ್ಷರಗಳ ಭಾಗಕ್ಕೆ ಈಗಿನಂತೆ 'ಉ' ಕಾರದ ಚಿಹ್ನವನ್ನು ಬದಿಗೆ ಹಚ್ಚದೆ ಅಕ್ಷರಗಳ ಕೆಳಗೆ ಹಚ್ಚಿರುವರು.

'ಅನುಧ್ಯಾತ' (ಸಾ. ೧) ಇದರೊಳಗಿನ 'ನ', 'ನಾನುರಂಜಿತ' (ಸಾ. ೮) ಇದರೊಳಗಿನ 'ನ' 'ಬಹುಸುವರ್ಣ್ಣ' (ಸಾ. ೨) ಇದರೊಳಗಿನ 'ಹ' ಮತ್ತು 'ಸ', 'ಬುದ್ಧಿನಯ' (ಸಾ. ೬) ಇದರೊಳಗಿನ 'ಬ', 'ಪುತ್ರಾಣಾಂ' (ಸಾ. ೨) ಇದರೊಳಗಿನ 'ಪ' ಮತ್ತು 'ಸಂಯುಕ್ತೋ' (ಸಾ. ೧೭) ಇದರೊಳಗಿನ 'ಯ' ಅಕ್ಷರಗಳನ್ನು ನೋಡಬೇಕು.

'ರ್' ಕಾರದ ಹಿಂದಿನ ವ್ಯಂಜನವು ದ್ವಿತ್ವವಾಗಿದೆ. 'ಸುವರ್ಣ್ಣ' (ಸಾ. ೩), 'ವಿಕ್ರಮವರ್ಮ್ಮ' (ಸಾ. ೪), 'ಸರ್ವ್ವ' (ಸಾ. ೫–೮) 'ನಿವರ್ತ್ತನ' (ಸಾ. ೧೪) ಆದರೆ 'ವರ್ಷ' (ಸಾ. ೧೯) ಇದರಲ್ಲಿಯ 'ಷ' ದ್ವಿತ್ವವಾಗಿಲ್ಲ.

ಶಾಸನದ ಭಾಷೆಯು ಸಂಸ್ಕೃತ. ಒಂದೆರಡು ಕನ್ನಡ ಶಬ್ದಗಳಿವೆ. ೫ನೆಯ ಸಾಲಿನಲ್ಲಿರುವ 'ಕತ್ತಿ ಅರಸನಾಮಧೇಯಃ' ಎಂಬುದರಿಂದ ಜನರಾಡುವ ಭಾಷೆಯು ಕನ್ನಡವಿತ್ತೆಂದು ಊಹಿಸಬಹುದು. ಜನರು ತಮ್ಮ ರಾಜನನ್ನು 'ಕತ್ತಿ ಅರಸ' (ಖಡ್ಗರಾಜ)ನೆಂದೇ ಕರೆಯುತ್ತಿರಬಹುದು. ಈ ರಾಜನ ಹೆಸರು ಸಂಸ್ಕೃತದಲ್ಲಿ 'ಕೀರ್ತಿರಾಜ'ನೆಂದು ಎರಡನೆಯ ಪುಲಿಕೇಶಿಯ ನೇರೂರಶಾಸನದಿಂದ ತಿಳಿಯುವುದು.[5] ಸಂಸ್ಕೃತ 'ಕೀರ್ತಿ' ಶಬ್ದದ ಪ್ರಾಕೃತರೂಪವು 'ಕಿತ್ತಿ' ಎಂದಾಗುವುದು. ಕಿತ್ತಿಯೆಂದರೆ ಸಾಮಾನ್ಯರಿಗೆ ಅರ್ಥವಾಗುವುದಿಲ್ಲಾದುದರಿಂದ ಅದನ್ನು ಕತ್ತಿಯೆಂದು ಮಾಡಿಕೊಂಡು ಕನ್ನಡ 'ಅರಸ' ಶಬ್ದವನ್ನು ಜೋಡಿಸಿರಬಹುದು. ಅಥವಾ 'ಕತ್ತಿ ಅರಸ' ಎಂಬುದು 'ಕೀರ್ತಿರಾಜ' ಎಂಬುದರ ಅಪಭ್ರಂಶವಾದರೂ ಆಗಿರಬಹುದು. ಸಾಲು ಹದಿಮೂರರಲ್ಲಿಯ 'ಸತೋಟ್ಟಂ' ಎಂಬುದು 'ತೋಟಸಹಿತ' ಎಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. 'ತೋಟ' ಎಂಬ ಕನ್ನಡ ಶಬ್ದಕ್ಕೆ 'ಸ' ಎಂಬ ಸಂಸ್ಕೃತ ಪ್ರತ್ಯಯವನ್ನು ಹಚ್ಚಿ 'ಸತೋಟ್ಟಂ' ಎಂದು ಸಂಸ್ಕೃತಿಸಿರುವರು. ಇವಲ್ಲದೆ "ಮಱುಮನ್ನಂ" "ಸುಟ್ಟಾಲ" ಮೊದಲಾದುವು ವಿವೇಚಿಸತಕ್ಕವಿವೆ.

---

[5] *Ind. Ant.*, Vol. VIII, p. 43.

ಹದಿನಾರನೆಯ ಸಾಲಿನಲ್ಲಿದ್ದ 'ದತ್ತಂ' ಎಂಬ ಶಬ್ದದ ಹಿಂದೆ 'ತೇನ ರಾಜ್ಞಾ' ಎಂಬುದನ್ನು ಜೋಡಿಸಿಯಾಗಲಿ ಅಥವಾ 'ದತ್ತವಾನ್' ಎಂದು ಮಾಡಿಕೊಂಡಾಗಲಿ ವಾಕ್ಯವನ್ನು ಪೂರ್ಣಮಾಡಿಕೊಂಡರೆ ಸರಿಯಾಗುವುದು.

ಶಾಸನದಲ್ಲಿ ಸುಪ್ಗಾಲಗ್ರಾಮದ ಉಲ್ಲೇಖವಿದೆ. ಸುಪ್ಗಾಲವೆಂಬುದು ಗೊಡಚಿಗೆ ಸಮಾನಾರ್ಥಕವೋ ಹೇಗೆಂಬುದು ಗೊತ್ತಾಗದು. ಆದುದರಿಂದ ಆ ಊರುಎಲ್ಲಿರುವುದೆಂಬುದನ್ನು ನಿರ್ಣಯಿಸಲು ಸಾಧ್ಯವಿಲ್ಲ. ಒಂದುವೇಳೆ ಗೊಡಚಿಯೇ ಆಗಿರಬಹುದು.

ಚಾಲುಕ್ಯವಂಶದ ಮಹಾರಾಜ ರಣವಿಕ್ರಮನ ಮಗನಾದ ಕತ್ತಿ ಅರಸನು ವ್ಯಾಘ್ರಸ್ವಾಮಿಯ ವಿಜ್ಞಾಪನೆಯ ಪ್ರಕಾರ ತನ್ನ ರಾಜ್ಯದ ೧೨ನೆಯ ವರ್ಷದ ಕಾರ್ತಿಕ ಪೌರ್ಣಮಾಸಿ ದಿವಸ ಕೌಂಡಿನ್ಯಗೋತ್ರದ ಕೃಷ್ಣಸ್ವಾಮಿಗೆ ಮನೆಯನ್ನೂ ಹೊಲವನ್ನೂ ದಾನವಾಗಿ ಕೊಟ್ಟನೆಂಬುದು ಈ ಶಾಸನದ ವಿಷಯ. ವ್ಯಾಘ್ರಸ್ವಾಮಿಗೆ 'ನೀತಿಶಾಸ್ತ್ರವಿಶಾರದ, ಸಪದವ್ಯಾಕರಣ ನ್ಯಾಯಕಾವ್ಯನಾಟಕೇತಿಹಾಸ ಗಾಂಧರ್ವ ಪುರಾಣೇಷ್ವಸಾಧಾರಣವ್ಯಾಖ್ಯಾನಸಂಪತ್, ಅದ್ಯಕಾಲ ಬೃಹಸ್ಪತಿ, ರಾಜ್ಯಸರ್ವಸ್ವ ಧುರಂಧರ ಮೊದಲಾದ ವಿಶೇಷಣಗಳಿವೆ. ಇವುಗಳಿಂದ ಈತನು ದೊಡ್ಡ ವಿದ್ವಾಂಸನೂ ಅಧಿಕಾರಿಯೂ ಆಗಿರಬೇಕೆಂದು ಊಹಿಸಬಹುದು.

ಈ ಶಾಸನವು ಬಾದಾಮಿಯ ಚಾಲುಕ್ಯವಂಶದ ರಣವಿಕ್ರಮನೆಂದು ಹೆಸರುಳ್ಳ ಮೊದಲನೆಯ ಪುಲಿಕೇಶಿಯ ಮಗನಾದ ಮೊದಲನೆಯ ಕೀರ್ತಿವರ್ಮನ ದಾನಪತ್ರವು. ಐದನೆಯ ವಿಕ್ರಮಾದಿತ್ಯನ ಕೌಥೆಮ್ ಶಾಸನದಿಂದ[6] ಚಾಲುಕ್ಯರು ಉತ್ತರದಿಂದ ಬಂದವರೆಂದೂ ಜಯಸಿಂಹವಲ್ಲಭ ಅಥವಾ ಮೊದಲನೆಯ ಜಯಸಿಂಹನು ರಾಷ್ಟ್ರಕೂಟ ರಾಜನಾದ ಇಂದ್ರನನ್ನು ಸೋಲಿಸಿ ಚಾಲುಕ್ಯರ ಚಕ್ರಾಧಿಪತ್ಯವನ್ನು ನೆಲೆಗೊಳಿಸಿದನೆಂದೂ, ಅವನ ಮಗನು ರಣರಾಗನೆಂದೂ, ಮೊಮ್ಮಗನು ಮೊದಲನೆಯ ಪುಲಿಕೇಶಿಯೆಂದೂ, ಮರಿಮಗನು ಕೀರ್ತಿವರ್ಮನೆಂದೂ ತಿಳಿಯುವುದು. ಈ ಕೀರ್ತಿವರ್ಮನೇ ಈ ದಾನವನ್ನು ಕೊಟ್ಟವನು. ಈತನಿಗೆ ಕೀರ್ತಿರಾಜನೆಂದೂ ಹೆಸರುಂಟು. ಈತನ ಬಿರುದುಗಳಲ್ಲಿ ಮಹತ್ವವಾದುವು[7] ಪುರುರಣವಿಕ್ರಮ, ಸತ್ಯಾಶ್ರಯ, ವಲ್ಲಭ ಅಥವಾ ಪೃಥಿವೀವಲ್ಲಭ, ಮಹಾರಾಜ ಮೊದಲಾದುವು. ಈತನ ಹೆಂಡತಿಯು ಸೇಂದ್ರಕ ವಂಶದ ರಾಜಾಶ್ರೀ ವಲ್ಲಭ ಸೇನಾನಂದನ ಭಗಿನಿಯು. ಈತನೇ ವಾತಾಪಿಯನ್ನು ಮೊದಲು ನಿರ್ಮಿಸಿದವನೆಂಬುದು "ವಾತಾಪ್ಯಾಃ ಪ್ರಥಮ ವಿಧಾತಾ" ಎಂದು

---

[6] *Ind. Ant.*, Vol. XVI.

[7] Dr. Fleet—'The Dynasties of the Kanarese Districts of the Bombay Presidency' published in the *Bombay Gazetteer*, Vol. I, Part II, p. 345.

ಚಿಪಳೂಣ ದಾನಪತ್ರದಲ್ಲಿ[8] ಬಂದ ವಾಕ್ಯದಿಂದ ಗೊತ್ತಾಗುವುದು. ಈತನ ಕಾಲದಲ್ಲಿಯೆ ಬಾದಾಮಿಯ ಮೇಣಬಸದಿಯೊಳಗಿನ ವೈಷ್ಣವಗವಿಯು ಸಂಪೂರ್ಣವಾಯಿತು.[9] ಈತನು ನಳ ಮೌರ್ಯ ಕದಂಬರನ್ನು ಗೆದ್ದು ಚಾಲುಕ್ಯರ ರಾಜ್ಯವನ್ನು ವಿಸ್ತಾರಗೊಳಿಸಿದನು.[10] ಮೇಲೆ ಹೇಳಿದ ಕೌಠೆಮ್ ಶಾಸನದಲ್ಲಿ ಈತನ ವರ್ಣನೆಯು ಹೀಗಿದೆ.[11]

ನಲನಿಲಯವಿಲೋಪೀ ಮೌರ್ಯನಿರ್ಯಾಣಹೇತುಃ
ಪ್ರಥಿತಪೃಥು ಕದಂಬಸ್ತಂಭಭೇದೀ ಕುಠಾರಃ
ಭುವನಭವನಭಾಗಾಪೂರಣಾರಂಭಭಾರ
ವ್ಯವಸಿತ ಸಿತಕೀರ್ತಿಃ ಕೀರ್ತಿವರ್ಮಾ ನೃಪೋಭೂತ್

ಮಹಾಕೂಟ ಶಾಸನದಲ್ಲಿ[12] ಈತನು ವಂಗ, ಅಂಗ, ಕಳಿಂಗ, ವಟ್ಟೂರ, ಮಗಧ, ಮದ್ರಕ, ಕೇರಳ, ಗಂಗ, ಮುಷಕ, ಪಾಂಡ್ಯ, ದ್ರಮಿಳ, ಚೋಳಿಯ, ಅಲೂಕ ಮತ್ತು ವೈಜಯಂತಿಯ ರಾಜರನ್ನು ಗೆದ್ದಂತೆ ಹೇಳಿದೆ. ಡಾ|| ಫ್ಲೀಟರವರು ಇದು ಇವನ ಹೆಚ್ಚಳವನ್ನು ಸಾರುವ ಹೊಗಳಿಕೆಯಲ್ಲದೆ ನಿಜವಾದ ಸಂಗತಿಯಲ್ಲವೆಂದು ಹೇಳುವರು.[13] ಮಹಾಕೂಟ ಶಾಸನದಲ್ಲಿ ಈತನು ಬಹು ಸುವರ್ಣ ಅಗ್ನಿಷ್ಟೋಮ ಯಾಗಗಳನ್ನು ಮಾಡಿದಂತೆ ಹೇಳಿದೆ. ಈ ದಾನಪತ್ರದಲ್ಲಿ ಈತನು ಶೂರನೂ, ಜಾಣನೂ, ಜನಪ್ರಿಯನೂ ಆದ "ಕತ್ತಿ ಅರಸ"ನಾಗಿರುವನು. "ಸರ್ವಶಾಸ್ತ್ರಾರ್ಥಪಾರಗಹನಾವಬೋಧಸ್ಮೃತಿಧಾರಣಕುಶಲಬುದ್ಧಿನಯಪ್ರತಾಪೋತ್ಸಾದಿತಸಕಲದಾಯಾದಃ ವರ್ಣಾಶ್ರಮನ್ಯಾಯಪರಿಪಾಲನಾನುರಂಜಿತಸರ್ವಪ್ರಕೃತಿಃ" ಎಂಬುದಾಗಿ ಇದರಲ್ಲಿ ಈತನ ವರ್ಣನೆಯಿದೆ. ಈತನ ತಂದೆಯಾದ ರಣವಿಕ್ರಮವರ್ಮ ಮಹಾರಾಜನು ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಬಹುಸುವರ್ಣ, ಪೌಂಡರೀಕಯಾಗಗಳನ್ನು ಮಾಡಿದಂತೆ ಈ ದಾನಪತ್ರಗಳಲ್ಲಿ ಉಲ್ಲೇಖವಿದೆ. ಈತನು ಕ್ರಿ.ಶ. ೫೬೬–೬೭ರಿಂದ ೫೯೭–೯೮ರ ವರೆಗೆ ಆಳಿದನು.[14] ಈತನ ತರುವಾಯ ಈತನ ಮಗನು ಚಿಕ್ಕವನಿದ್ದುದರಿಂದ ಈತನ ತಮ್ಮನಾದ ಮಂಗಲೀಶನು ರಾಜನಾದನು.[15] ಅತಿ ಪ್ರಸಿದ್ಧನೂ ಕನ್ನಡಿಗರ ಅಭಿಮಾನದ ಪುತ್ಥಳಿಯೂ ಆದ ಎರಡ

---

8 Dr. Fleet—*Bomb. Gaz.*, Vol. I, Part II, p. 345.
9 *Ind. Ant.*, Vols. III and X, Plate on p. 58.
10 Dr. Fleet—*Bomb. Gaz.*, Vol. I, Part II, p. 345.
11 *Ind. Ant.*, Vol. XVI, p. 21.
12 *Ind. Ant.*, Vol. XIX.
13 Dr. Fleet—*Bomb. Gaz.*, Vol. I, Part II, p. 346.
14 Dr. Fleet—*Bomb. Gaz.*, Vol. I, Part II, pp. 344, 346.
15 Dr. Fleet—*Bomb. Gaz.*, Vol. I, Part II, pp. 344, 346.

ನೆಯ ಪುಲಕೇಶಿಯು ಈತನ ಮಗನು. ಪುಲಕೇಶಿಯು ತನ್ನ ಕಕ್ಕನಾದ ಮಂಗಲೀಶನಿಂದ ರಾಜ್ಯವನ್ನು ಕಿತ್ತುಕೊಂಡು ಕ್ರಿ.ಶ. ೬೦೯ರಿಂದ ೬೪೨ರ ವರೆಗೆ ಬಾದಾಮಿಯಲ್ಲಿ ರಾಜ್ಯಭಾರಮಾಡಿದನು.[16] ಉತ್ತರಾಪಥವನ್ನೆಲ್ಲ ವ್ಯಾಪಿಸಿ ದಕ್ಷಿಣಾಪಥದ ಕಡೆಗೆ ಹೊರಳಿದ ಹರ್ಷವರ್ಧನನ ಸೇನಾಸಮುದ್ರವನ್ನು ನರ್ಮದೆಯ ದಂಡೆಯ ಮೇಲೆ ಚದರಿಸಿ ಹಿಂದೂಡಿದ ವೀರನೇ ಈ ಪುಲಕೇಶಿಯು.[17] ಈತನ ಆಸ್ಥಾನಕ್ಕೆ ಇರಾಣದ ರಾಜನಾದ ಎರಡನೆಯ ಖುಸ್ರು ಎಂಬುವನು ರಾಯಭಾರಿಯನ್ನೂ ಕಾಣಿಕೆಗಳನ್ನೂ ಕ್ರಿ.ಶ. ೬೨೫–೨೬ರಲ್ಲಿ ಕಳಿಸಿದ್ದನು.[18]

ಈ ಶಾಸನದ ಮಹತ್ವವು ಕೆಳಗಿನ ಕಾರಣಗಳಿಂದ ಸ್ಪಷ್ಟವಾಗುವದು :

೧. ಈ ಶಾಸನದ ಕಾಲವು ಚಾಲುಕ್ಯ ಚಕ್ರವರ್ತಿ ಮೊದಲನೆಯ ಕೀರ್ತಿವರ್ಮನ ರಾಜ್ಯದ ೧೨ನೆಯ ವರ್ಷದ ಕಾರ್ತಿಕ ಪೌರ್ಣಮಾಸಿ. ಇದು ಬಾದಾಮಿಯ ಮೇಣಬಸದಿಯಲ್ಲಿ ವೈಷ್ಣವಗವಿಯ ಮುಂದಿರುವ ಶಾಸನದ ಕಾಲವನ್ನು ಸಮರ್ಥಿಸುವುದು. ಅದರಲ್ಲಿ ವೈಷ್ಣವಗವಿಯ ಕೆಲಸವು ಸಂಪೂರ್ಣವಾಗಿ ವಿಷ್ಣುವಿನ ಪ್ರತಿಮೆಯನ್ನು ಸ್ಥಾಪಿಸಿದ ವಿಷಯವಿದೆ.[19] "ಮಂಗಲೀಶ್ವರೋ ರಣವಿಕ್ರಾಂತಃ" ಎಂಬ ಶಬ್ದಗಳಿಂದ ಅದು ಮಂಗಲೀಶನು ರಾಜನಿದ್ದಾಗ ಬಿಟ್ಟ ಶಾಸನವೆಂದು ಡಾ|| ಫ್ಲೀಟರವರೂ, ಮಂಗಲೀಶನು ತನ್ನ ಅಣ್ಣನಾದ ಕೀರ್ತಿವರ್ಮನು ರಾಜ್ಯವಾಳುವಾಗ ತಾನೊಬ್ಬ ದೊಡ್ಡ ಅಧಿಕಾರಿಯಾಗಿದ್ದು ಈ ಶಾಸನವನ್ನು ಬರೆಸಿದನೆಂದು ಡಾ|| ಭಂಡಾರಕರರೂ ಅಭಿಪ್ರಾಯಪಟ್ಟಿದ್ದರು.[20] ಮುಂದೆ ಡಾ|| ಫ್ಲೀಟರವರು ತಮ್ಮ ಅಭಿಪ್ರಾಯವನ್ನು ತಿದ್ದಿಕೊಂಡು ಡಾ|| ಭಂಡಾರಕರರ ಅಭಿಪ್ರಾಯವೇ ನಿಜವೆಂದು ಒಪ್ಪಿಕೊಂಡರು.[21] ಗೊಡಚಿಯ ತಾಮ್ರಪಟಗಳು ಇವರ ಕೈಗೆ ಸಿಕ್ಕಿದ್ದರೆ ಈ ವಿವಾದಕ್ಕೆ ಆಸ್ಪದ ಉಳಿಯುತ್ತಿದಿಲ್ಲ. ಬಾದಾಮಿಯ ಶಾಸನವು ಶಕವರ್ಷವನ್ನೂ ರಾಜನ ರಾಜ್ಯಾರಂಭದಿಂದ ಗತಿಸಿದ ವರ್ಷಗಳನ್ನೂ ಕೂಡಿ ಹೇಳುವುದರಿಂದ ಬಹಳೇ ಮಹತ್ವದ್ದಾಗಿರುವುದು. ಇವೆರಡು ಶಾಸನಗಳು ಒಂದೇ ಕಾಲ

---

[16] Dr. Fleet—*Bomb. Gaz.*, Vol. I, Part II, p. 344–346.

[17] *Bomb. Gaz.*, Vol. I, Part II, pp. 351, 359.

[18] *Bomb. Gaz.*, Vol. I, Part II, pp. 350 and 352.

[19] "ಭಗವತಃ ಪ್ರಲಯೋದಿತಾರ್ಕ ಮಂಡಲಾಕಾರಚಕ್ರಕ್ಷಪಿತಾಪಕಾರಪಕ್ಷಸ್ಯ ವಿಷ್ಣೋಃ ಪ್ರತಿಮಾಪ್ರತಿಷ್ಠಾಪನಾಭ್ಯುದಯೇ" *Ind. Ant.*, Vol. III, p. 305.

[20] *Ind. Ant.*, Vol X, pp. 57–58.

[21] *Bomb. Gaz.*, Vol. I, Part II, p. 338.

ವನ್ನು, ಅಂದರೆ ರಾಜ್ಯದ ೧೨ನೆಯ ವರ್ಷ, ಶಕವರ್ಷ ೫೦೦ (ಕ್ರಿ.ಶ. ೫೭೮) ಉಲ್ಲೇಖಿಸುವವು. ಆದುದರಿಂದ ಇವೆರಡು ಶಾಸನಗಳ ಮಹತ್ವವು ಬಹಳವಾಗಿದೆ.

೨. ಗೊಡಚಿಯ ತಾಮ್ರಪಟಗಳ ಶಾಸನವು ಮೊದಲನೆಯ ಕೀರ್ತಿವರ್ಮನ ಕಾಲದ ಮತ್ತೊಂದು ಲೇಖವು. ಬಾದಾಮಿಯ ಶಾಸನದ ಹೊರತು ಬೇರೊಂದು ಈ ರಾಜನ ಶಾಸನವು ದೊರೆತಿಲ್ಲವೆಂದು ಡಾ|| ಫ್ಲೀಟರು ಹೇಳಿರುವರು.[22]

೩. ಇದರಲ್ಲಿ ಕತ್ತಿ ಅರಸ, ತೋಟ್ಟ, ಮಱುಮನ್ನ ಮೊದಲಾದ ಕನ್ನಡ ಶಬ್ದಗಳಿವೆ. ಕನ್ನಡವು ಆ ಕಾಲದಲ್ಲಿ ಜನರಾಡುವ ಭಾಷೆಯಾಗಿದ್ದಿತೆಂದು ಈ ಶಾಸನ ದಿಂದ ದೃಢವಾಗುವುದು. ಬಾದಾಮಿಯ ಮೇಣಬಸದಿಯಲ್ಲಿ ಇನ್ನೊಂದು ಶಾಸನವುಂಟೆಂದೂ, ಅದು ಕನ್ನಡ ಭಾಷೆಯಲ್ಲಿ ಇರುವುದೆಂದೂ, ಮೇಲೆ ಉಲ್ಲೇಖಿಸಿದ ವೈಷ್ಣವಗವಿಯ ಶಾಸನದ ವಿಷಯವು ಜನರಿಗೆ ತಿಳಿಯ ಲೆಂದು ಅದನ್ನು ಕನ್ನಡ ಭಾಷೆಯಲ್ಲಿ ಬರೆಸಿರಬೇಕೆಂದೂ, ಅದು ಕನ್ನಡ ದಲ್ಲಿದ್ದ ಶಾಸನಗಳಲ್ಲಿ ಮೊದಲನೆಯದೆಂದೂ ಡಾ|| ಫ್ಲೀಟರ ಅಭಿಪ್ರಾಯ. ಇವಲ್ಲದೆ ಸ್ವಲ್ಪ ಹೆಚ್ಚುಕಡಿಮೆ ಇದೇ ಕಾಲದವಾದ ಕನ್ನಡ ಭಾಷೆಯ ಶಾಸನಗಳು ಬಾದಾಮಿಯ ಸುತ್ತುಮುತ್ತು ದೊರೆಯುವವು.[23]

೪. ಈ ಶಾಸನದಲ್ಲಿ ವೇದವೇದಾಂಗಗಳಲ್ಲದೆ ಕಾವ್ಯ, ನಾಟಕ, ಪುರಾಣ, ಇತಿಹಾಸ, ಗಾಂಧರ್ವ, ಸಪದವ್ಯಾಕರಣ ಮೊದಲಾದವುಗಳ ಉಲ್ಲೇಖ ವಿದೆ. ಇದರಿಂದ ಕ್ರಿ.ಶ. ೫೭೮ರಲ್ಲಿ ಈ ಭಾಗದಲ್ಲಿ ಈ ಎಲ್ಲ ಸಂಸ್ಕೃತ ಸಾಹಿತ್ಯವು ಪ್ರಚಾರದಲ್ಲಿದ್ದು ಜನರು ಅದನ್ನು ಆಸ್ಥೆಯಿಂದ ಅಭ್ಯಾಸ ಮಾಡುತ್ತಿದ್ದರೆಂದು ಸಿದ್ಧವಾಗುವುದು. ಸಂಸ್ಕೃತ ಭಾಷೆಯ ಮತ್ತು ಸಾಹಿತ್ಯದ ಉದ್ಧಾರವು ಹರ್ಷವರ್ಧನನ ಕಾಲದಲ್ಲಿ ಆಯಿತೆಂದೂ, ಏಳನೆಯ ಶತಮಾನವನ್ನು ಸಂಸ್ಕೃತದ ಸಾಹಿತ್ಯದ ಪುನರುದ್ಧಾರ (Renaissance) ಕಾಲವೆಂದೂ ಪಾಶ್ಚಾತ್ಯ ಪಂಡಿತರಲ್ಲಿ ಅನೇಕರು ತಿಳಿದಿರುವರು. ಈ ತಿಳುವಳಿಕೆಯು ಸರಿಯಲ್ಲವೆಂದೂ, ಅತಿ ವಿಪುಲವಾದ

---

[22] *Bomb. Gaz.*, Vol. I, Part II, p. 346.

[23] ಕನ್ನಡವು ಜನರಾಡುವ ಭಾಷೆಯಾಗಿತ್ತೆಂಬುದಕ್ಕೆ ಹೆಚ್ಚಿನ ಆಧಾರ—"ಇತ್ತೊದಾನ್ ಅಳಿವೊನ್ ಪಞ್ಚಮಹಾಪಾತಕನ್ ಅಕ್ಕುಂ ಏಳನೆಯ ನರ್ಕದಾವುಳು ಅಕ್ಕುಂ". ಬಾದಾಮಿಯ ಸಮೀಪದ ಒಂದು ಶಾಸನದಿಂದ ಈ ವಾಕ್ಯವನ್ನು ತೆಗೆದುಕೊಳ್ಳಲಾಗಿದೆ. Vide. *Ind. Ant.*, Vol. X, pp. 60-61.

ಸಂಸ್ಕೃತ ಸಾಹಿತ್ಯವು ಏಳನೆಯ ಶತಮಾನಕ್ಕೂ ಮೊದಲು ಪ್ರಚಾರ ದಲ್ಲಿತ್ತೆಂದೂ ಈ ಶಾಸನವು ತಿಳಿಸುವುದು.

ಮುಂದೆ ಪಟಾನುಸಾರಿಯಾದ ಶಾಸನ ಪಾಠವನ್ನು ಕೊಟ್ಟಿದೆ.

ಶಿ. ಚ. ನಂದೀಮಠ.

ಪಟ ೧

೧. ಸ್ವಸ್ತಿ ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾಭಿಷಿಕ್ತಾನಾಮ್ಮಾನವ್ಯ ಸ—
೨. ಗೋತ್ರಾಣಾಂ ಹಾರಿತೀಪುತ್ರಾಣಾಂ ಚಲುಕ್ಯಾನಾಂ ಅಗ್ನಿಷ್ಟೋಮಾಗ್ನಿಚಯನ—
೩. ವಾಜಪೇಯ ಬಹುಸುವರ್ಣ್ಣ ಪೌಣ್ಡರೀಕಾಶ್ವಮೇಧಾವಭೃಥಸ್ನಾನಪ—
೪. ವಿತ್ರೀಕೃತ ಶರೀರಸ್ಯ ರಣವಿಕ್ರಮವರ್ಮ್ಮ ಮಹಾರಾಜಸ್ಯ
೫. ಪ್ರಿಯತನಯಃ ಕತ್ತಿ ಅರಸ ನಾಮಧೇಯಃ ಸರ್ವ್ವಶಾಸ್ತ್ರಾರ್ಥ—

ಪಟ ೨ (ಅ)

೬. ಪಾರಗಹನಾವಬೋಧಸ್ಮೃತಿಧಾರಣಾಕುಶಲಬುದ್ಧಿನಯ ಪ್ರ—

೭. ತಾಪೋತ್ಪಾದಿತಸರ್ವ್ವದಾಯಾದಃ ವರ್ಣಾಶ್ರಮನ್ಯಾಯಪರಿಪಾಲ—

೮. ನಾನುರಂಜಿತಸರ್ವ್ವಪ್ರಕೃತಿಃ ಸ್ವರಾಜ್ಯ ಸಂವತ್ಸರೇ ಕಾರ್ತ್ತಿ—

೯. ಕ ಪೌರ್ಣ್ಣಮಾಸ್ಯಾಂ ವೇದವೇದಾಂಗಪಾರಗೇನ ನೀತಿಶಾಸ್ತ್ರವಿಶಾರದೇನ

೧೦. ಸಪದವ್ಯಾಕರಣ ನ್ಯಾಯಕಾವ್ಯನಾಟಕೇತಿಹಾಸ ಗಾನ್ಧರ್ವ್ವಪುರಾಣೇ

ಪಟ ೨ (ಬ)

೧೧. ಷ್ಯಸಾಧಾರಣ ವ್ಯಾಖ್ಯಾನಸಂಪದಾ ಅದ್ಯಕಾಲ ಬೃಹಸ್ಪತಿನಾ ರಾ—

೧೨. ಜ್ಯಸರ್ವ್ವಸ್ವಧುರನ್ಧರೇಣ ವ್ಯಾಘ್ರಸ್ವಾಮಿನಾ ಮಹಾಬ್ರಾಹ್ಮಣೇನ ವಿ—

೧೩. ಜ್ಞಾಪಿತಃ ನುಡ್ಡಿಗ್ಗಲಗ್ರಾಮಸ್ಯ ಮಱಿಮನ್ನಂ ಸರ್ವ್ವಜತಕಂಸ ತೋಟ್ಟಂ ಸಜ್ಜೀರ—

೧೪. ಕಂ ಸಪಾನೀಯಂ ಸನಿವೇಶಂ ರಾಜಮಾನೇನ ಪಞ್ಚವಿಂಶತಿ ನಿರ್ವತ್ತನಂ

೧೫. ಕ್ಷೇತ್ರಂ ಕೌಣ್ಡಿನ್ಯಸಗೋತ್ರಾಯ ವೇದವೇದಾಂಗಪಾರಗಾಯ

ಪಟ ೩

೧೬. ಸದ್ಬ್ರಾತಿಥಯೇ ಕೃಷ್ಣಸ್ವಾಮಿನೇ ದತ್ತಂ ದಾನಂ (।) ಯ ಏನಂ ಹರತಿ

೧೭. ಸ ಪಞ್ಚ ಮಹಾಪಾತಕಸಂಯುಕ್ತೋ ಭವತಿ (।) ಯ ಏನ ಮನುಪಾ—

೧೮. ಲಯತಿ ಸ ಪುಣ್ಯಫಲಭಾಗ್ಭವತಿ (॥) ಸ್ವದತ್ತಾಂ ಪರದ

೧೯. ತ್ತಾಂ ವ್ವಾ ಯೋ ಹರೇತ ವಸುನ್ಧರಾಂ ಷಷ್ಟಿವರ್ಷಸ—

೨೦. ಹಸ್ರಾಣಿ ನರಕೇ ಪಚ್ಯತೇ ತು ಸಃ (॥।)

—ಪ್ರಬುದ್ಧ ಕರ್ಣಾಟಕ, ಸಂಪುಟ ೨೩, ಸಂಚಿಕೆ ೧.

ಗಗ್ಗಯ್ಯನ ಗಡಿಬಿಡಿ

ಅಥವಾ

ಗೌರಿಯ ಗಂಡ

(ಒಂದು ಸಾಮಾಜಿಕ ಪ್ರಹಸನ)

ಮೋಲಿಯರ್ ಅವರ *Monseiur de Pourceaugnac* ಎಂಬ
ನಾಟಕದ ಆಧಾರದ ಮೇಲೆ

ನಾ. ಕಸ್ತೂರಿ, ಎಂ.ಎ., ಬಿ.ಎಲ್.
ಅವರು ಬರೆದದ್ದು

ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಆಡಿದ್ದು
೧೯೪೨

ಪಾತ್ರವಿವರ

೧. ಮೂಗಯ್ಯ .... ವೃದ್ಧರು, ಶ್ರೀಮಂತರು, ಜಿಪುಣರು
೨. ಗಗ್ಗಯ್ಯ .... ೩೦ ವರ್ಷದ ಹಸುಗೂಸು, ವರ
೩. ಕಿಟ್ಟು .... } ೨೨ ವರ್ಷದ ಯುವಕರು, ಸಂಕ್ಷೇಪ, ಚಾಣಕ್ಯರು ;
೪. ಪುಟ್ಟು .... } ನಂಟರು
೫. ಗೌರಿ .... ೧೬ ವರ್ಷದ ಹಸುಳೆ, ಮೂಗಯ್ಯನ ಮಗಳು
೬. ಡಾಕ್ಟರ್ ದಂಡಯ್ಯ .... ೪೮ ವರ್ಷದ ಏನೂ ತಿಳಿಯದ ಪಂಡಿತ, ಕಪಿಮುಷ್ಟಿ

ಪಾತ್ರ ವಹಿಸಿದ ನಟರ ವಿವರ

೧. ಮೂಗಯ್ಯ .... ನಾ. ಕಸ್ತೂರಿ, ಎಂ.ಎ., ಬಿ.ಎಲ್.
೨. ಗಗ್ಗಯ್ಯ .... ಎಸ್. ಮುರುಘೇಂದ್ರಸ್ವಾಮಿ, ಎಂ.ಎ.
೩. ಕಿಟ್ಟು .... ಎಂ. ವಿ. ರಾಜಗೋಪಾಲ್, ಬಿ.ಎ. (ಆನರ್ಸ್).
೪. ಪುಟ್ಟು .... ಸಿ. ಬಿ. ಜಯರಾವ್, ಬಿ.ಎ., ಬಿ.ಟಿ.
೫. ಗೌರಿ .... ಹೆಚ್. ಕೆ. ರಂಗನಾಥ
೬. ಡಾಕ್ಟರ್ ದಂಡಯ್ಯ .... ಎಲ್. ಕರಿಯಪ್ಪಗೌಡ, ಬಿ.ಎ.

ಗಗ್ಗಯ್ಯನ ಗಡಿಬಿಡಿ

ದೃಶ್ಯ ೧

ಮಹೀಪುರದ ಒಂದು ಬೀದಿ, ರಾತ್ರಿ ೭-೩೦ ಗಂಟೆ

[ಕಿಟ್ಟು ಪ್ರವೇಶಿಸಿ ಬಿರುಬಿರನೆ ನಡೆಯುವನು ; ಪುಟ್ಟು ಅವನ ಹಿಂದೆಯೇ ಪ್ರವೇಶಿಸಿ. . .]

ಪುಟ್ಟು—ಎಲ್ಲಿಗಯ್ಯಾ ಸವಾರಿ ಇಷ್ಟು ಹೊತ್ತಿನಲ್ಲಿ ? ಊರಿನವರೆಲ್ಲ ಗೂಡು ಸೇರಿಕೊಳ್ಳುವ ಗಳಿಗೆಯಲ್ಲಿ ? [ಕಿಟ್ಟು ದಿಗ್ಭ್ರಾಂತನಾಗಿ ನಿಂತಿದ್ದನ್ನು ಕಂಡು, ಕನಿಕರದಿಂದ] ಏನೋ ಕಿಟ್ಟು ? ಯಾಕೋ ಮಂಕು ಬಡಿದಿದೆಯೇನೋ ? [ಹಾಸ್ಯ ಮಾಡುತ್ತಾ] ನಿನ್ನ ವದನಾರವಿಂದವು ಕಳೆಗುಂದಿರಲು ಕಾರಣವಾದರೂ ಏನು ? [ರೇಗಿ] ಲೋ ! ಮೂತಿಗೆ ಯಾರಾದರೂ ಮಂಗಳಾರತಿ ಎತ್ತಿದರೇನೋ ?

ಕಿಟ್ಟು [ಜೋಲುಬಿದ್ದು]—ನನ್ನನ್ನ ಹಾಸ್ಯಮಾಡಬೇಡ ಕಣೋ, ತಡೆಯಲಾರೆ. ಹರಕೊಲ್ಲಲ್ ಪರಕಾಯ್ವನೇ ಅಂದ ಹಾಗೆ ನೀನೇ ಹೀಗೆ ನನ್ನ ಗಾಯಕ್ಕೆ ಗಾರೆ ಮೆತ್ತಿದರೆ. . .

ಪುಟ್ಟು [ಚಕಿತನಾಗಿ]—ಅಯ್ಯೋ, ಗ್ರಹಚಾರವೇ ! ನಿನ್ನ ಗಾಯದ ಗತಿ ಮುಗಿಯಲಿಲ್ಲ ಅಂತ ನನಗೆ ಹೇಗೆ ಗೊತ್ತಾಗಬೇಕು? ನಿಧಾನವಾಗಿ ಹೇಳೋ. . . . ಹತ್ತು ಜನರೆದುರು ಅತ್ತರೆ ಸುಸ್ತೆಲ್ಲ ಪರಿಹಾರ ಅಂತ ಗಾದೆ ಕೇಳಿಲ್ಲವೆ ನೀನು ?

ಕಿಟ್ಟು [ಹತ್ತಿರ ಬಂದು]—ಒಬ್ಬರಿಗೂ ತಿಳಿಯಬಾರದು, ಪುಟ್ಟು ! ಗೋಪ್ಯವಾಗಿಟ್ಟಿರಬೇಕು. . . ಗುಟ್ಟಾತ್ ಗುಟ್ಟತರಂ. . . ಜೋಕೆ. . . . ನೋಡೋ ಇಲ್ಲಿ. . . ಗೌರಿಯನ್ನ ಅವಳ ತಂದೆ ತೆಗೆದುಕೊಂಡು ಹೋಗಿ ಯಾವುದೋ ಒಂದು ಕಾಡುಮೃಗದ ಕೊರಳಿಗೆ ಕಟ್ಟುವುದರಲ್ಲಿದ್ದಾನೆ. . ನನಗೆ ಅಂತ ಮಾತುಕತೆ ಆಗಿದ್ದುದನ್ನೆಲ್ಲಾ ಮರೆತೇಬಿಟ್ಟಿದಾನೆ ಆ ಜಾಂಬವಂತ. ಪಾಪ, ಈ ಕಾರ್ಕೋಟಕನನ್ನ ಅವಳು ಕಂಡಿಲ್ಲ, ಕೇಳಿಲ್ಲ ; ಮುದುಕಯ್ಯನಿಗೆ ಗೊತ್ತಂತೆ, ದೂರದ ಸಂಬಂಧವಂತೆ. . . ಅಯ್ಯೋ, ಆಸಾಮಿ ಹೇಗಿದಾನೆ ಅಂತೀಯಾ ? ಅವನು ಕಳುಹಿಸಿದ್ದ ಒಂದು ಫೋಟೋನ ಗೌರಿ ನನಗೆ ತೋರಿಸಿದಳು. . . ಅಬ್ಬಬ್ಬ. . . ಆಂಜನೇಯ ದೂರ್ವಾಸ ಹಿಡಿಂಬಾಸುರ ನಮ್ಮ ಕಾಲೇಜಿನಲ್ಲಿದ್ದ ಕೇಡಿಕೇಶವಯ್ಯ, ಇವರೆಲ್ಲರನ್ನೂ ಬೆರೆಸಿ ಕರಗಿಸಿ ಎರಕ ಹುಯ್ದು ನಿಲ್ಲಿಸಿದ ಭಯಂಕರ ಮೂರ್ತಿ ಕಣೋ ! ಗೌರಿ ಪಾಪ ಏನುಮಾಡುತ್ತಾಳೆ ? ಈಗ ಅವಳು

ಒಲ್ಲೆಗಿಲ್ಲೆ ಬಾವಿಗೀವಿ ಅಂತ ಗೋಳುಗೀಳು ಆಡಿದಳೋ ಮುದುಕ ಮೂಗಯ್ಯ ತಾನೇ ಹಿಡಿದು ಬಾವಿಯೊಳಕ್ಕೆ ತಳ್ಳಿದರೂ ತಳ್ಳಿದ . . . ಕೆರಳಿಬಿಟ್ಟರೆ ಅವನು ಕೆಂಡ, ಕೆಂಡವೇನು . . . ಅಗ್ನಿಪರ್ವತ. . . .

ಪುಟ್ಟು—. . . ಜಗವೊಂಡು! ನನಗೆ ಗೊತ್ತಿಲ್ಲವೆ? ಮೊನ್ನೆ ನಾನೂ ಅವನೂ ಒಂದೇ ಬಸ್ಸಿನಲ್ಲಿ ಬರುತ್ತಿದ್ದೆವು. . . . ಹೋಗಲಿ . . ಅದನ್ನೆಲ್ಲಾ ಈಗ ಹೇಳಿ ಪ್ರಯೋಜನವೇನು? ಸದ್ಯಕ್ಕೆ ಗೌರಿಯ ಗೋಳನ್ನು ನಿಲ್ಲಿಸುವುದು ಹೇಗೆ? ನೀನು ಏನು ಮಾಡಬೇಕು ಅಂತ ಇದೀಯಾ?

ಕಿಟ್ಟು [ಬಿಸುಸುಯ್ಯುತ್ತಾ]—ನಾನೇನೋ ಸ್ಪಷ್ಟವಾಗಿ . . ಕೆರೆ ಏರಿ ಮೇಲೆ ಹೋಗಿ ನಿಂತು . . . ಶ್ರೀಮದ್ರಮಾರಮಣ ಗೋವಿಂದಾ. . . . ಗೋವಿಂದ!

ಪುಟ್ಟು—ಬಿದ್ದುಬಿಡೋ! ಪೀಡೆ ಕಳೆಯಿತು. ಬುದ್ಧಿವಂತ ಕಣಯ್ಯ ನೀನು! . . . ಅಲ್ಲ, ಕಿಟ್ಟು, ನಿನ್ನ ಮಟ್ಟಿಗೆ ನೀನು ನೋಡಿಕೊಳ್ಳುತ್ತಾ ಇದೀಯಲ್ಲೋ . . . ಗೌರಿ ಗತಿ ಏನು? ಚಿನ್ನದಂತಹ ಆ ಹುಡುಗಿಯನ್ನ ಚೇತರಿಸುವವರು ಯಾರೋ? . . . ಹತ್ತಿರ ಬಾರೋ, ಹಯಗ್ರೀವಾ! ಮುದುಕ ಗೊತ್ತು ಮಾಡಿರುವ ಗೃಧ್ರನ ಹೆಸರೇನು? ಯಾವ ಊರು ಅವನದು?

ಕಿಟ್ಟು [ನಿರುತ್ಸಾಹದಿಂದ]—ಊರೇ? ಕುದುರೆಗೊಂದಿ . . . . ಎಲ್ಲೋ ತುಂಗಾ ನದಿಗೂ ಭದ್ರಾ ನದಿಗೂ ಆಚೆಯಿದೆ ಅಂತೆ ಅದು . . . . ಹಾಳು ಕೊಂಪೆ . . . . ಅಲ್ಲಿ ಲಾಯರು ಕೆಲಸ ಅವನಿಗೆ . . . . ತಿಂಗಳಿಗಿಪ್ಪತ್ತೇಕಾದಶಿ . . . . ಗಗ್ಗಯ್ಯ ಅಂತ ಹೆಸರು . . . .

ಪುಟ್ಟು [ಥಟಕ್ಕನೆ]—ಹಾಗಾದರೆ ನಮ್ಮ ಕೆಲಸ ಸುಲಭವಾಯಿತು, ಬಿಡು.

ಕಿಟ್ಟು—ಯಾವ ಕೆಲಸ . . . .

ಪುಟ್ಟು—ಗೌರಿಯನ್ನುಳಿಸುವ ಕೆಲಸ . . . .

ಕಿಟ್ಟು—ಅದು ಹೇಗೋ? ಮುದುಕನ ಮೂಗು ಹಿಂಡಿ ವರದಕ್ಷಿಣೆ ಕರಾರು ಮಾಡಿಕೊಳ್ಳುವುದಕ್ಕೆ ಇವತ್ತು ರಾತ್ರಿ ಬರುತ್ತಾನಂತೆ ಆತ . . . . ಇಷ್ಟು ಹೊತ್ತಿಗೆ ಬಂದಿದಾನೋ ಏನೋ?

[ಪ್ರವೇಶ: ಗೌರಿ]

ಪುಟ್ಟು—ಓಹೋ! ಮಿಸಿಸ್ ಗಗ್ಗಯ್ಯ! ನಿಮ್ಮ ವಿಷಯವನ್ನೇ ಮಾತನಾಡುತ್ತಿದ್ದೇವೆ. . . .

ಗೌರಿ—ಅಂತು ನಿಮಗೆಲ್ಲಾ ಹಾಸ್ಯಮಾಡುವುದಕ್ಕೆ ನಾನೊಬ್ಬಳು ಹುಟ್ಟಿದೆನಲ್ಲಾ . . .

ಪುಟ್ಟು—ತಪ್ಪಾಯಿತು . . . . ತಪ್ಪಾಯಿತು . . . . ರೇಗಬೇಡಮ್ಮ, ತಾಯಿ, ಗಗ್ಗಯ್ಯ ಅಂದರೆ ಅತ್ತುಬಿಡುತ್ತಿಯಲ್ಲಾ. . . .

ಗೌರಿ—ಇವರಿಗೆ ಈ ಊರಲ್ಲಿ ನಿನ್ನ ಹಾಗೆ ಇನ್ನೂ ಅನೇಕ ಸ್ನೇಹಿತರಿದಾರೆ. . . . ಎಲ್ಲರೂ ಸೇರಿ ನನ್ನನ್ನು ಳಿಸುವುದಕ್ಕೆ ಏನಾದರೂ ಒಂದು ತಂತ್ರ ಹೂಡಬಾರದೆ? ಆ ಕುದುರೆಗೊಂದಿ ಕುರೂಪಿಗೆ ಏನಾದರೂ ಒಂದು ಮಂತ್ರ ಹಾಕಿ ಬಂದ ದಾರಿಯಿಂದಲೇ ಬೆದರಿಸಿ ಕಳುಹಿಸಬಾರದೆ? ಅದೀಗ ನಿಮ್ಮ ಜಾಣತನ . . . . ನಿಮ್ಮ ಗೆಳೆತನಕ್ಕೆ ತಕ್ಕ ಸಹಾಯ. . . .

ಕಿಟ್ಟು—ಅದನ್ನೇ ನಾನೂ ಪುಟ್ಟೂ ಇಬ್ಬರೂ ಸೇರಿ ಮಾತನಾಡುತ್ತಿದ್ದೆವು. . . .

ಪುಟ್ಟು—ನಿನಗೂ ಆ ಪಿತೂರಿಯಲ್ಲಿ ಒಂದು ಪಾರ್ಟು ಕೊಡುತ್ತೇವೆ. . . .

ಗೌರಿ—ಓಹೋ! ಸಿದ್ಧಳಾಗಿದೇನೆ . . . . ನಾನೇನು ಮಾಡಬೇಕು . . . . ಹೇಳಿ. . . .

ಪುಟ್ಟು—ನಡಿ . . . . ಹಾಗೆಯೇ ಯೋಚನೆಮಾಡುತ್ತಾ ಹೋಗೋಣ . . . . ನಡುರಸ್ತೆಯಲ್ಲಿ ನಿಂತರೆ ತೊಂದರೆ . . . . (ಹೊರಡುವರು.)

[ತೆರೆ]

ದೃಶ್ಯ ೨

ಅದೇ ಬೀದಿ . . . . ಅದೇ ರಾತ್ರಿ, ೮ ಗಂಟೆ

[ಪುಟ್ಟು ಕಿಟ್ಟು ಇಬ್ಬರೂ ಮಾತನಾಡುತ್ತಿರುವರು]

ಪುಟ್ಟು [ಗುಟ್ಟಾಗಿ]—ಎಲ್ಲರಿಗೂ ಅವರವರ ಪಾತ್ರ ಏನು ಅಂತ ಹೇಳಿ ಅಲ್ಲಲ್ಲಿ ಸರಿಯಾಗಿ ನಿಲ್ಲಿಸಿದೆ ತಾನೆ? ರಾಮುವಿಗೆ ಒಂದು ಒಟ್ಟಲು ಕಾಫಿ ಕುಡಿಸಿದರೆ ಚೆನ್ನಾಗಿತ್ತೋ ಏನೋ? ಅವನ ವಾನರಸೇನೆಗೆ ಏನಾಯಿ?

ಕಿಟ್ಟು—ನನಗೆ ಗೊತ್ತಿಲ್ಲವೆ? ರಾಮುವಿಗೆ ಈಗೊಂದು ಕೊಡಿಸಿದೆ; ಎಲ್ಲಾ ಮುಗಿದ ಮೇಲೆ ಕಾಫಿ ಕಡಾಯಿಯಲ್ಲೇ ಮುಳುಗಿಸುತ್ತೇನೆ ಅಂತ ಮಾತು ಕೊಟ್ಟಿದೇನೆ. . . . ಆ ಡಾಕ್ಟರು ಮಾತ್ರ ಇನ್ನೂ ಸಿಗಲಿಲ್ಲ.

ಪುಟ್ಟು—ಒಳ್ಳೆಯದೇ ಆಯಿತು. . . . ನಾವು ಹೇಳುವುದನ್ನೆಲ್ಲಾ ಆತ ನಿಜ ಅಂತ ತಿಳಿದುಕೊಳ್ಳುತ್ತಾನೆ, ಅಷ್ಟೆ. . . .

ಕಿಟ್ಟು—ಹೂಂ, ಅದೂ ಒಂದು ವರಸೆ. . . . [ಥಟಕ್ಕನೆ] ಪುಟ್ಟು! ಪುಟ್ಟು! ನೋಡಲ್ಲಿ . . . . ಅಲ್ಲಿ . . . . ಆತ . . . . ಅವನೇ ಗಗ್ಗಯ್ಯ . . . . ಅದೇ ಅವತಾರ . . . ಅನುಮಾನವೇ ಇಲ್ಲ . . . ಒಂದು ಸಲ ಅವನ ಫ್ಲೋಟೋ ನೋಡಿದರೆ ಸಾಕು ಎಂತಹ ದಸರಾ ದೊಂಬಿಯಲ್ಲೂ ಗುರುತುಹಿಡಿಯಬಹುದು. . .

ಪುಟ್ಟು [ಅತ್ತಕಡೆ ನೋಡುತ್ತಾ]—ಬರಲಿ ಬರಲಿ ಭೂಪತಿರಂಗ! . . . ಕಿಟ್ಟು . . . ನೀನು ಮೆತ್ತಗೆ ಇಲ್ಲಿಂದ ಕಂಬಿಕೀಳು . . . ಮೂರು ನಿಮಿಷ ಮರೆ ಯಲ್ಲಿದ್ದು ಮತ್ತೆ ಬಾ ಇಲ್ಲಿಗೆ . . . ಅಷ್ಟರೊಳಗೆ ನಾನು ಅವನನ್ನ ನನ್ನ ಕಿಸೆಯೊಳಗೆ ಇಳಿಬಿಟ್ಟಿರುತ್ತೇನೆ. . . . ನೀನೂ ಕೂಡ ಅವನ ಹಳೆಯ ಸ್ನೇಹಿತ ಅಂತ ನಟನೆಮಾಡುತ್ತಾ ಬಾ [ನೂಕುತ್ತಾ] ತೊಲಗೋ ಬೇಗ . . . ಕೆಲಸ ಕೆಡಿಸಬೇಡ . . . [ಕಿಟ್ಟು ಓಡುವನು].

[ಒಳಗೆ ಹುಡುಗರು ಗೇಲಿಮಾಡುವ ಗದ್ದಲವೋ ಗದ್ದಲ . . . ಗಗ್ಗಯ್ಯನ ಪ್ರವೇಶ]

ಗಗ್ಗಯ್ಯ [ಹಠಾತ್ತಾಗಿ ಹಿಂತಿರುಗಿ ತನ್ನನ್ನು ಹಿಂಬಾಲಿಸಿ ಹೀಯಾಳಿಸುವ ಹುಡುಗರನ್ನು ಹೆದರಿಸುತ್ತಾ]—ಯಾಕ್ರೋ . . . . ಯಾಕ್ರೋ . . . . ಇಲ್ಲಿ ಏನು ಕೋತಿ ಕುಣಿಯುತ್ತಾ ಇದೆಯೇ? ಯಾರಾದರೂ ಇಲ್ಲಿ ಕರಡಿ ಕಟ್ಟಿದಾರೆಯೇ? [ದೈನ್ಯದಿಂದ] ಹೋಗ್ರೋ, ಹೋಗ್ರೋ, ಕತ್ತಲಾಯಿತು. . . . ನಿಮಗೇನು ಅಪ್ಪ ಅಮ್ಮ ಅಂಕೆ ಅಂಕುಶ ಯಾವುದೂ ಇಲ್ಲವೆ? [ಒಂದು ಹೆಜ್ಜೆ ಮುಂದಕ್ಕಿಟ್ಟು ಕೂಗನ್ನು ಕೇಳಿ ರೇಗುತ್ತಾ] ಮತ್ತೆ ಬರುತ್ತೀರಾ ನನ್ನ ಹಿಂದೆ! [ರೇಗದೆ] ಬೇಡಿರಪ್ಪ . . ಹಿರಿಯರ ಹಿಂದೆ ಹಲ್ಲುಕಿರಿಯಬಾರದು; ಅವರ ಮುಂದೆ ಬಂದು ನಮಸ್ಕಾರ ಮಾಡಬೇಕು ಕಣ್ರೋ! . . . [ರೇಗಿ] ಯಾಕ್ರೋ ಕೂಗುತ್ತೀರಿ? . . . ನನಗೆ ರೇಗಿತು ಅಂದರೆ ಅಪ್ಪಳಿಸಿಬಿಟ್ಟೇನು . . . ಹುಷಾರ್! . . .

ಪುಟ್ಟು [ಗಗ್ಗಯ್ಯನ ಪಕ್ಷವಹಿಸಿ ಅದೇ ಗುಂಪನ್ನು ಸಂಬೋಧಿಸಿ . . .]—ಏನ್ರೋ ಹುಡುಗರಿರಾ! ಯಾಕಪ್ಪ ಹಾರಾಡುತ್ತೀರಿ . . . ಇವರಿಗೇನು ಕೋಡಿದೆಯೇ? ಇವರೇನು ಕೋಡಂಗಿಯೇ? ಥೂ . . . ಊರಿಗೊಬ್ಬರು ದೊಡ್ಡಮನುಷ್ಯರು ಬಂದರೆ ಪುಂಡರು ತುಂಟರು ದಂಡೋಪದಂಡವಾಗಿ ಸೇರಿಕೊಂಡು ಅವರಿಗೆ ಅವಮಾನ ಮಾಡುತ್ತೀರಾ? . . .

ಗಗ್ಗಯ್ಯ [ತನಗೆ ತಾನೇ]—ಕಡೆಗೂ ಒಬ್ಬರು ಸಜ್ಜನರು ಸಿಕ್ಕಿದರಲ್ಲಾ ಈ ಊರಲ್ಲಿ . . .

ಪುಟ್ಟು [ಅದೇ ಗುಂಪಿಗೆ]—ಎಂತಹ ಕಾಡುಕುರುಬರೂ ಕೂಡ ನಿಮ್ಮ ಹಾಗೆ ಕೂಗುವುದಿಲ್ಲ, ಗೊತ್ತೆ?

ಗಗ್ಗಯ್ಯ [ತನಗೆ ತಾನೇ]—ಶಾಂತಂ ಪಾಪಂ . . . ಸರಿಯಾದ ಮಾತು. . . .

ಪುಟ್ಟು [ಅತ್ತ ಕಡೆಯವರಿಗೆ]—ಈ ಮಹಾನುಭಾವರನ್ನು ಕಂಡರೆ ಕುರುಡನೂ ಕೂಡ ನಗುವುದಿಲ್ಲ. . . . [ನಗು, ಕೂಗು, ಅಟ್ಟಹಾಸ ಕೇಳಿಸುತ್ತಲೇ ಇರುವುದು].

ಗಗ್ಗಯ್ಯ [ಒಳಗೊಳಗೆ]—ಆಹಾ ! ಈತನಿಗೆಷ್ಟು ವಿನಯ. ಈತನ ಸತ್ಕಾರದಲ್ಲಿ ಎಂತಹ ಚಮತ್ಕಾರ. . . .

ಪುಟ್ಟು [ಹುಡುಗರ ಹಾಹಾಕಾರವನ್ನಡಗಿಸಲು ಯತ್ನಿಸುತ್ತಾ]—ಯಾಕ್ರೋ . . . ಇವರೂ ಕೂಡ ಹೆಚ್ಚುಕಡಿಮೆ ನಮ್ಮ ಹಾಗಲ್ಲವೇನ್ರೋ ?

ಗಗ್ಗಯ್ಯ [ಧೈರ್ಯದಿಂದ ಹುಡುಗರ ಕಡೆ, ಅಂದರೆ ರಂಗದ ಪಕ್ಕಕ್ಕೆ, ತಿರುಗಿ]—ನಾನೇನು ಗುಮ್ಮನೆ? . . . ನನಗೇನು ಗೂನೇ ?

ಪುಟ್ಟು [ಅದೇ ಗುಂಪಿಗೆ]—ಲ್ರೋ . . . ಶ್ರೀಮಂತರನ್ನೂ ಧೀಮಂತರನ್ನೂ ಕಂಡ ಕೂಡಲೇ ಕೈಮುಗಿಯಬೇಕು, ಕಣ್ರೋ . . .

ಗಗ್ಗಯ್ಯ [ಆ ಕಡೆ ನೋಡುತ್ತಾ]—ಅದೇ ಧರ್ಮ. . . . ಇಹಕ್ಕೂ ಪರಕ್ಕೂ ಸಾಧನ. . . .

ಪುಟ್ಟು [ಹುಡುಗರಿಗೆ]—ಇವರು ಶ್ರೀಮಂತರು ; ದೊಡ್ಡ ಧೀಮಂತರು . . .

ಗಗ್ಗಯ್ಯ [ಎದೆ ಚಾಚಿ]—ಕುದುರೆಗೊಂದಿ ಲಾಯರು ನಾನು.

ಪುಟ್ಟು [ಅನುಕರಿಸುತ್ತಾ]—ಕುದುರೆಗೊಂದಿ ಲಾಯರು ಅವರು.

ಗಗ್ಗಯ್ಯ [ಠೀವಿಯಿಂದ]—ಬಿ.ಎ., ಎಲ್ಎಲ್.ಬಿ.

ಪುಟ್ಟು [ಮಾರುಲಿಯುತ್ತಾ]—ಬಿ.ಎ., ಎಲ್ಎಲ್.ಬಿ. . . . ಕೇಳಿಸಿತೇನ್ರೋ ಇಂತಹ ತೇಜೋವಂತರು ತಿರುಗಾಡಿದರೆ ನಮ್ಮ ಬೀದಿಗೆ ಭೂಷಣ . . . ನಮ್ಮೂರು ಕೀಲೆಣ್ಣೆ ರಸ್ತೆಗೆ . . . ಕೀರ್ತಿ.

ಗಗ್ಗಯ್ಯ [ನಾಚುತ್ತಾ]—ಥೆ . . . ಥೆ . . .

ಪುಟ್ಟು [ಕೈ ನೀಡಿ ಗಗ್ಗಯ್ಯನ ಕೈಯನ್ನು ಹಿಡಿದು ಕುಲುಕುತ್ತಾ]—ಸ್ವಾಮಿ! ಈ ಕಪಿಗಳ ಕಿರಲಾಟದಿಂದ ತಮಗೆ ತುಂಬಾ ತೊಂದರೆಯಾಗಿರಬಹುದು . . . ಗಿರಬಹುದು ಏನು ? ಗಿದೆ. [ಕೈ ಮುಗಿದು] ಇಕೋ ! ನಮ್ಮೂರು ಮುನಿಸಿಪಲ್ ಕೌನ್ಸಿಲ್ಲಿನ ಪರವಾಗಿ ಅದರ ಅಧ್ಯಕ್ಷ ಉಪಾಧ್ಯಕ್ಷ ಸಭಾಸದ ಸಮಸ್ತ ಪರಿವಾರದ ಪರವಾಗಿ ಈ ಯಃಕಶ್ಚಿತ್ ನಾನು ತಮಗೆ . . . ಮಹಾನುಭಾವರಾದ ತಮಗೆ . . . ತಲೆತಗ್ಗಿಸಿ ಕ್ಷಮಾಭಿಕ್ಷೆ ಬೇಡುತ್ತೇನೆ . . . ಕನಿಕರಿಸಬೇಕು. . .

ಗಗ್ಗಯ್ಯ [ಪುಟ್ಟುವನ್ನು ತಡೆದು]—ಏನು ? ಏನು ? ಮುನಿಸಿಪಲ್ ಕೌನ್ಸಿಲ್ಲಿನ ಪರವಾಗಿ! ಥೆ . . . ಥೆ . . . ಅಂತಹ ಪ್ರಮಾದವೇನೂ ನಡೆದಿಲ್ಲ. . . . [ಗಂಭೀರ

ವಾಣಿಯಿಂದ] ಇರಲಿ . . . ದಯವಿಟ್ಟು ನಿಮ್ಮೂರು ಕೌನ್ಸಿಲ್ಲಿಗೂ ಅದರ ಅಶೇಷ ಪರಿವಾರಕ್ಕೂ . . . ನಾನು ಕ್ಷಮಿಸಿದ್ದೇನೆ . . . ಅಂತ ತಿಳಿಸಿಬಿಡಿ [ಗಾಂಭೀರ್ಯ ಕೊಂಚ ಇಳಿಸಿ] ಆದರೆ, ಬನ್ನಿ ಇಲ್ಲಿ . . . ಗುಟ್ಟಾಗಿಟ್ಟಿರಿ . . . ನಿಮಗೆ ಮಾತ್ರ ಹೇಳುತ್ತೇನೆ . . . ನನಗಿದೇನೂ ಹೊಸದಲ್ಲ . . . ಮಹಾನುಭವ ಅಂದರಲ್ಲ . . . ಅದು ಸರಿ . . . . ಎಲ್ಲಿ ಹೋದರೂ ನನಗೆ ಇದೇ ಅನುಭವವೇ! . . . . ಹ . . . ಹ್ಹ . . . [ಹುಡುಗರ ಕೇಕೆ.]

ಪುಟ್ಟು [ರಸ್ತೆಯಿಂದ ಒಂದು ಕಲ್ಲನ್ನು ಆರಿಸಿ ಅದನ್ನೆಸೆಯಲೆಂದು ಅತ್ತಕಡೆ ಓಡಿ, ಕೇಕೆ ನಿಂತುಹೋದುದನ್ನು ಕಂಡು ಸಮಾಧಾನಕ್ಕೆ ಬಂದು . . . . ಹಿಂದಕ್ಕೆ ಬರುತ್ತಾ] ತಿಳಿಯದ ಹೈಕಳು, ಸ್ವಾಮಿ! ನೋಡಿ! ತಮ್ಮಂತಹವರು ನಮ್ಮೂರಿಗೆ ದಯಮಾಡಿ ಸುವುದೇ ಅಪರೂಪ. ಹೊಸಾಹೊಸ ಮುಖ; ನವನವೀನ ರೂಪು. . . . ತಮ್ಮ ಯೋಗ್ಯತೆ ಏನೂ ಅಂತ ಗೊತ್ತಿಲ್ಲ. ಆದರೆ ನನಗೆ ಗೊತ್ತಾಗಿಹೋಯಿತು. ತಾವು ಈಗ ೭-೩೦ರ ಗಾಡಿಯಲ್ಲಿ ಬಂದು ಇಳಿದಾಗ ನಾನೂ ನಿಂತಿದ್ದೆ ಸ್ಟೇಷನ್ನಲ್ಲೇ . . . ಒಬ್ಬ ಸ್ನೇಹಿತನನ್ನ ಸ್ವಾಗತಿಸುವುದಕ್ಕೆ ಅಂತ. ಆದರೆ ಆಹಾಹಾ! ತಮ್ಮ ಆ ಇಂಪಾದ ಇಳಿತ! ನಾಜೋಕಿನ ನಡೆತ! ತಾವು ಟಿಕೀಟು ಕೊಟ್ಟ ಠೇಂಕಾರ! ಜೋಬಿಗೆ ಕೈಹಾಕಿದ ಜೋರು! ಇದನ್ನೆಲ್ಲಾ ಕಂಡು ಬೆರಗಾಗಿ ಬಾಯಿಬಿಟ್ಟುಕೊಂಡು ನಿಂತುಬಿಟ್ಟೆ . . . ನನ್ನ ಸ್ನೇಹಿತ ನನ್ನನ್ನು ಶಪಿಸುತ್ತಾ ಇಳಿದು ಹೋಗಿರಬೇಕು. . . . ತಮ್ಮ ಸೇವೆಮಾಡುವುದೇ ಈ ಜನ್ಮಕ್ಕೆ ಸಾರ್ಥಕ ಅಂತ ನಾನೂ ಸಂಕಲ್ಪಮಾಡಿಕೊಂಡೆ . . . [ಕೈಜೋಡಿಸಿ] ಇಕೋ! ತಮ್ಮ ಕೈಂಕರ್ಯ ಮಾಡಲು ಕಾತರನಾಗಿ ನಿಂತಿದ್ದೇನೆ. . . . ಏನಪ್ಪಣೆ?

ಗಗ್ಗಯ್ಯ—ಅಯ್ಯೋ, ಅಯ್ಯೋ! ನನ್ನ ವಿಷಯದಲ್ಲಿ ಅಷ್ಟು ದೊಡ್ಡ ಮಾತನ್ನ ಹೇಳಬೇಡಿ ಅಂದ್ರೆ. . . .

ಪುಟ್ಟು—ಎಂತಹ ಸುಮುಖರು ನೀವು! ನಿಮ್ಮ ಸುತ್ತ ಸದಾ ಸುಳಿದಾಡು ತ್ತಿರಬೇಕು ಅನ್ನಿಸುತ್ತಾ ಇದೆ, ಸ್ವಾಮಿ, ಸುಳ್ಳಲ್ಲ . . .

ಗಗ್ಗಯ್ಯ—ಮುಖ್ಯ . . . ತಮ್ಮ ಗುಣ ಚೆನ್ನ . . . ಅಷ್ಟೆ. . .

ಪುಟ್ಟು—ಒಂದು ವಿಲಕ್ಷಣವಾದ ಕಾಂತಿ ಇದೆ ತಮ್ಮಲ್ಲಿ . . .

ಗಗ್ಗಯ್ಯ—ಛೆ . . . ಛೆ . . .

ಪುಟ್ಟು—ಎಂತಹ ಶಾಂತಿ. . . .

ಗಗ್ಗಯ್ಯ—ಅಯ್ಯೋ . . . ಅಯ್ಯೋ . . .

[ಕಿಟ್ಟು ಓಡೋಡಿ ಬರುವನು. ಗಗ್ಗಯ್ಯನನ್ನು ಗುರುತಿಸಿ . . . ಬೇಗ ಬೇಗನೆ ಹತ್ತಿರ ಬಂದು . . . ಕೈ ಹಿಡಿದು ಕುಲುಕುತಾ . . . ಹಳೆಯ ಸ್ನೇಹಿತನಂತೆ ಸ್ವಾತಂತ್ರ್ಯವಹಿಸಿ]

ಕಿಟ್ಟು—ಓಹೋ ಹೋ! ಯಾವಾಗ ಬರೋಣವಾಯಿತು? ಏನಿದು ಗಗ್ಗಯ್ಯನವರೇ! ಇಂತಹ ಅನ್ಯಾಯಮಾಡಿಬಿಡುವುದೇ ನೀವು? ಆ? ಊರಿಗೆ ಬರುವ ಮೊದಲು ಆಪ್ತಸ್ನೇಹಿತನಿಗೆ ಒಂದು ಕಾಗದ ಬರೆಯಬಾರದೆ? [ಗಗ್ಗಯ್ಯನ ಕಕ್ಕಾಬಿಕ್ಕಿಯನ್ನು ಕಂಡು] ಏನಿದು . . . ಹೀಗೆ . . . ? ತಾವು ಗಗ್ಗಯ್ಯನವರು ತಾನೆ? ಕುದುರೆಗೊಂದಿ ಲಾಯರು, ಬಿ.ಎ., ಎಲ್‌ಎಲ್.ಬಿ., ತಾನೆ? [ಮತ್ತೆ ಕೈಹಿಡಿದಲ್ಲಾಡಿಸುತ್ತಾ] ತಮಾಷೆ ಮಾಡಬೇಡಿ ಗಗ್ಗಯ್ಯನವರೇ! . . . ನನ್ನ ಗುರುತು ಹಿಡಿಯಲಿಲ್ಲವೇ ತಾವು? . . . ಇನ್ನೂ . . . ?

ಗಗ್ಗಯ್ಯ [ಕಂಗೆಟ್ಟು]—ಆ . . . . ಆ . . . . . ಆ . . . . ಗೊತ್ತಾಗದೆ ಏನು? . . . ಓಹೋ . . . ತುಂಬಾ ಸಂತೋಷ . . .

ಕಿಟ್ಟು—ನಾವಿಬ್ಬರೂ ನಿಮ್ಮೂರಲ್ಲಿ ಎಷ್ಟು ಇಷ್ಟಮಿತ್ರರಾಗಿದ್ದೆವು, ಏನು ಕಥೆ! ಅದನ್ನೆಲ್ಲಾ ನೆನೆಸಿಕೊಂಡರೆ ಯಾವುದೋ ಕನಸಿದ್ದ ಹಾಗಿದೆ ಅಲ್ಲವೇ, ಗಗ್ಗಯ್ಯನವರೇ!

ಗಗ್ಗಯ್ಯ—ಹೌದು . . . ಹೌದು . . . [ಪುಟ್ಟು ಕಡೆ ತಿರುಗಿ] ಇವರು ಯಾರು ಅಂತ ನೆನಪೇ ಬರುವುದಿಲ್ಲವಲ್ಲಾ, ಹಾಳು!

ಕಿಟ್ಟು [ಆತನ ಭುಜದ ಮೇಲೆ ಕೈ ಇಟ್ಟು . . .]—ಅಲ್ಲಾ, ಗಗ್ಗಯ್ಯನವರೇ, ನನ್ನನ್ನ ಇಷ್ಟು ಬೇಗ ಮರೆತುಬಿಡೋದೇ . . . ಇಷ್ಟೇನೆ ನಿಮ್ಮ ಸ್ನೇಹದ ಆಳ?

ಗಗ್ಗಯ್ಯ—ಛೆ . . . ಛೆ . . . ಮರೆಯೋಣ ಅಂದರೇನು? ಹಳೆಯ ಸ್ನೇಹ ಇದ್ದೇ ಇದೆ . . . [ಪುಟ್ಟು ಕಡೆ ತಿರುಗಿ] ಯಾರು ಸ್ವಾಮಿ ಇವರು?

ಕಿಟ್ಟು [ಪುಟ್ಟುವಿಗೆ]—ನಾನು ನಿನ್ನ ಹತ್ತಿರ ಹೇಳುತ್ತಿರಲಿಲ್ಲವೆ? ಕುದುರೆಗೊಂದಿಯಲ್ಲಿ ನನಗೊಬ್ಬರು ಗಳಸ್ಯ ಕಂಠಸ್ಯ ಇದಾರೆ ಅಂತ . . . ನೋಡು! ಇವರೇ ಅವರು! ಚೆನ್ನಾಗಿ ನೋಡು. ಚಿನ್ನದಂತಹ ಮನುಷ್ಯ! ಮನಸ್ಸೋ . . . ಬೆಣ್ಣೆ! [ಗಗ್ಗಯ್ಯನನ್ನು ಸಂಬೋಧಿಸಿ] ಸ್ವಾಮಿ! ನಿಮ್ಮೂರಲ್ಲಿ ನಾವು ದಿನವೂ ಸೇರುತ್ತಾ ಇದ್ದದ್ದು . . . ಯಾವ ಹೋಟಲು ಅದು . . . ಇನ್ನೂ ಇದೆಯೋ . . . ಸೊಗಸಾದ ಮೆಂತ್ಯದ ದೋಸೆ ಮಾಡುತ್ತಿದ್ದನಲ್ಲಾ ಬೆಳಗಿನ ಹೊತ್ತು . . . ಆ ಹೋಟಲಿನ ಹೆಸರೇನು!

ಗಗ್ಗಯ್ಯ—ಮಿಾಸೆ ಮಂಗೇಶನ ಹೋಟಲೋ. . . . ?

ಕಿಟ್ಟು—[ಪುಟ್ಟುಕಡೆ ತಿರುಗಿ] ಅಲ್ಲೇ ಪುಟ್ಟು ನಾವಿಬ್ಬರೂ ಸೇರುತ್ತಿದ್ದದ್ದು . . . ಅಲ್ಲಿ ಇದ್ದದ್ದೇ ಒಂದು ಮೋಜು. ಇವರೊಂದುಕಡೆ ನಾನೊಂದು ಕಡೆ . . . ತಿಂದದ್ದೂ ತಿಂದದ್ದೇ . . . ಚಟ್ನಿ . . . ಚಟ್ನಿ ಅಂತ ಕೂಗಿದ್ದೂ

ಕೂಗಿದ್ದೇ . . . ಆ ಮೇಲೆ ಪುಟ್ಟು ಸಾಯಂಕಾಲವಾಯಿತು ಅಂದರೆ ನಾವಿಬ್ಬರೂ . . . ನೆನಪಿದೆಯೇ, ಸ್ವಾಮಿ . . . ಯಾವುದದು ನಿಮ್ಮೂರಲ್ಲಿ ಜನರು ವಾಕಿಂಗ್ ಹೋಗುವ ರಸ್ತೆ . . . ನನ್ನ ಮೊಂಡು ಮೆದುಳಿಗೆ ಸಾಣೆ ಹಿಡಿಯಬೇಕು. . . .

ಗಗ್ಗಯ್ಯ—[ಬಲೆಗೆ ಬೀಳುತ್ತಾ] ಖಾಖಾಹಳ್ಳಿ ರಸ್ತೇನೇ ? ಮೊನ್ನೆ ರಿಪೇರಿ ಮಾಡಿದರಲ್ಲಾ . . . ಆ ರಸ್ತೇನೇ ? . . .

ಕಿಟ್ಟು—ಹುಂ. ಹುಂ. ಕೆಲವು ದಿನ ಆ ರಸ್ತೆ . . . ಬೇಜಾರಾದರೆ ಈ ರಸ್ತೆ . . . ನಾವಿಬ್ಬರೂ ಪುಟ್ಟು . . . ನಡೆದದ್ದೂ ನಡೆದದ್ದೇ . . . ಕಾಲು ಸೋತುಬಿದ್ದಾಗ ಕೂತದ್ದೂ ಕೂತದ್ದೇ.

ಗಗ್ಗಯ್ಯ—[ಮೆಲ್ಲಗೆ . -. ಪುಟ್ಟು ಕಿವಿಯಲ್ಲಿ] ಇವರು ಯಾರು ಅಂತ ಜ್ಞಾಪಕವೇ ಬರುವುದಿಲ್ಲವಲ್ಲಾ . . .

ಪುಟ್ಟು—[ಗಗ್ಗಯ್ಯನಿಗೆ] ದೊಡ್ಡ ಮನುಷ್ಯರಿಗೆ ಕೆಲವು ವೇಳೆ ಹೀಗಾಗುವುದುಂಟು. . .

ಕಿಟ್ಟು—[ಗಗ್ಗಯ್ಯನವರ ಭುಜದ ಮೇಲೆ ಕೈಯಿಟ್ಟು] ಬನ್ನಿ, ಸ್ವಾಮಿ ; ನೀವು ಮರೆತರೂ ನಾನು ಬಿಡುವುದಿಲ್ಲ . . . ಕೈ ಕೊಡಿ . . . [ಅದನ್ನು ಕಟಕಟನೆ ಕುಲುಕುತ್ತಾ] ಅಂತೂ ಗಗ್ಗಯ್ಯನವರೇ ಕುದುರೆಗೊಂದಿಯಲ್ಲಿ ಕುಡಿಬಿಟ್ಟ ನಮ್ಮ ಸ್ನೇಹ ಈ ಊರಲ್ಲಿ ಚಿಗುರಿ ಪಲ್ಲವಿಸಿ ಫಲಿಸಲಿ! [ಗಗ್ಗಯ್ಯನು ಬೆರಗಾಗುವನು.]

ಪುಟ್ಟು—[ಗಗ್ಗಯ್ಯನಿಗೆ] ಸ್ವಾಮಿ ! ಇವನು ತಮಗೆ ಬಹುದಿವಸದ ಗೆಳೆಯನಿರಬೇಕು. . .

ಗಗ್ಗಯ್ಯ—[ದಿಕ್ಕುತೋಚದೆ] ಇರಬೇಕು . . . ಇರಬೇಕು . . . ಇರಲೇಬೇಕು.

ಕಿಟ್ಟು—ಅದಿರಲಿ . . . ಇನ್ನು ತಡಮಾಡಲು ಸಾಧ್ಯವಿಲ್ಲ . . . ತಮ್ಮ ಮನೆಯವರ ಯೋಗಕ್ಷೇಮ ವಿಚಾರಿಸಬೇಕು ಈಗ . . . ಒಬ್ಬೊಬ್ಬರದಾಗಿ . . . ನಿಮ್ಮ . . . ಅವರು . . . ಹೇಗಿದಾರೆ? ಯಾರಪ್ಪಾ ಅವರು ? ಸದಾ ನಗು ನಗುತ್ತಾ. . .

ಗಗ್ಗಯ್ಯ—ನನ್ನ ತಮ್ಮ . . . ಪೋಸ್ಟ್ ಮಾಸ್ಟರೇ. . .

ಕಿಟ್ಟು—ಹುಂ . . . ಹುಂ . . . ಅವರ ಆರೋಗ್ಯ ಹೇಗಿದೆ ? . . .

ಗಗ್ಗಯ್ಯ—ಅವನು ಐದಾರು ತಿಂಗಳಿಂದ ಹುಷಾರಿಲ್ಲ . . . ಆಫೀಸಿನಲ್ಲಿ ಕೂತುಕೂತು ತಿಂದು ತೇಗುತ್ತಿದ್ದರೆ ಹಾಗಾಗುತ್ತೆ ಅಂತ ಹೇಳಿ ಡಾಕ್ಟರು

ಶಿಫಾರ್ಸು ಮಾಡಿದರೋ ಏನೋ ತಿಳಿಯದು . . . ಈಗ ಅವನನ್ನ ಪೋಸ್ಟ್ ಮ್ಯಾನ್ ಆಗಿ ವರ್ಗಮಾಡಿದಾರೆ.

ಕಿಟ್ಟು—ಒಳ್ಳೆಯ ಕೆಲಸ . . . ಒಳ್ಳೆಯ ಕೆಲಸ . . . ನಡೆಯಲಿ . . . ಅವರಿಗೆ ನನ್ನ ವಂದನೆಗಳನ್ನು ಶೋಚಿಸಿ. . . ಆ ಮೇಲೆ ಮತ್ತೊಬ್ಬರಿದ್ದರಲ್ಲಾ . . . ದಪ್ಪಗೆ . . . ಗುಂಡಗೆ . . . ಸದಾ ಗೊರಕೆ ಹೊಡೆಯುತ್ತಾ . . . ಒರಗಿದ ಕಡೆ ನಿದ್ದೆ ಮಾಡುವರಲ್ಲಾ . . . ಇಸ್ಪೀಟು ಅಂದರೆ ಪ್ರಾಣ . . . ಅವರ ಹೆಸರೇ ನಪ್ಪಾ . . . ನೀರುಮಜ್ಜಿಗೆ . . . ಅಂತ. . . .

ಗಗ್ಗಯ್ಯ—ಗೆಜ್ಜಯ್ಯನೇ. . . .

ಕಿಟ್ಟು—ಅವರೇ ! ಅವರು ಹೇಗಿದಾರೆ? . . .

ಗಗ್ಗಯ್ಯ—ಗೆಜ್ಜಯ್ಯನಿಗೇನೂ ಇಲ್ಲ . . . ಸ್ವಸ್ಥವಾಗಿದಾನೆ. . . .

ಕಿಟ್ಟು—ಆ ಮೇಲೆ . . . ಓ . . . ನಿಮ್ಮ ದೊಡ್ಡಪ್ಪನವರ ವಿಷಯ ಕೇಳಲೇ ಇಲ್ಲವಲ್ಲಾ. . . . ಅವರ ಆರೋಗ್ಯ ಹೇಗಿದೆ? . . . ಕೊಂಚ ವಾಸಿಯೇ ? . . .

ಗಗ್ಗಯ್ಯ—ಯಾರು ? ದೊಡ್ಡಪ್ಪನೇ ? ನನ್ನ ದೊಡ್ಡಪ್ಪನೇ ?

ಕಿಟ್ಟು—ಹುಂ . . . ಸ್ವಾಮಿ! [ಪುಟ್ಟು ಕಡೆ ತಿರುಗಿ] ನಿನಗೆ ಹೇಳುತ್ತಿರಲಿಲ್ಲ ವೇನೋ ನಾನು? ಕುದುರೆಗೊಂದಿಯಲ್ಲಿ ಒಬ್ಬರು ಖಾಯಿಲೆ ಬಿದ್ದಿದಾರೆ ಅಂತ . . . ಅದೇ . . . ಅವರ ವಿಷಯವನ್ನೇ ಈಗ ಇವರನ್ನ ಕೇಳುತ್ತಾ ಇದೇನೆ. . . .

ಗಗ್ಗಯ್ಯ—ನನ್ನ ದೊಡ್ಡಮ್ಮ ಇರಬೇಕು ನೀವು ಹೇಳುವುದು . . . . ದೊಡ್ಡಪ್ಪನೇ ಇಲ್ಲ ನನಗೆ. . . .

ಕಿಟ್ಟು—ದೊಡ್ಡಮ್ಮ ಅಂತ ಇವನೆದುರು ಪ್ರಸ್ತಾಪಮಾಡಿದರೆ . . . ಆಕೆ ಏನಾದರೂ ಕೋಪಿಸಿಕೊಂಡಾಳು ಅಂತ ನಾನು ದೊಡ್ಡಪ್ಪ ಅಂದೆ . . . ನನಗೆ ಗೊತ್ತಿಲ್ಲವೇ . . . ನಾನೇನು ನಿಮ್ಮ ಮನೆಗೆ ಹೊಸಬನೇ? . . . ಆಕೆಗೆ . . . ಹೇಗಿದೆ ?

ಗಗ್ಗಯ್ಯ—ಯಥಾಸ್ಥಿತಿ !

ಕಿಟ್ಟು—ಹೆಚ್ಚೂ ಇಲ್ಲ. . . .

ಗಗ್ಗಯ್ಯ—ಕಡಿಮೆಯೂ ಇಲ್ಲ. . . .

ಕಿಟ್ಟು—ಅಂತು ಹಾಗೆಯೇ ಇದೇ ಈಗಲೂ . . . ತ್ಸು . . . ತ್ಸು . . . ತ್ಸು . . . ಎಷ್ಟು ದಿನ ಅಂತ ಹೀಗೆ ?

ಗಗ್ಗಯ್ಯ—[ಗಗನದ ಕಡೆ ಕೈ ತೋರಿಸಿ ನಿಟ್ಟುಸಿರುಬಿಡುವನು] . . . [ಪುಟ್ಟು ಕಡೆ

ತಿರುಗಿ] ಇವರಿಗೆ ನನ್ನ ಮನೆಯವರ ಪರಿಚಯ ಚೆನ್ನಾಗಿದೆಯಲ್ಲಾ . . . ಯಾರು ಅಂತ ಮಾತ್ರ ಪತ್ತೆ ಆಗಲಿಲ್ಲ ನನಗೆ. . . .

ಪುಟ್ಟು—ಪ್ರಚಂಡ, ಸ್ವಾಮಿ, ಅವನು. ನಿಮಗಿಂತ ಚೆನ್ನಾಗಿ ಗೊತ್ತು ನಿಮ್ಮ ಮನೆ ಸಮಾಚಾರ . . . ಅವನಿಗೆ. . . .

ಗಗ್ಗಯ್ಯ [ಕಿಟ್ಟು ಕಡೆ ತಿರುಗಿ]—ನನ್ನ ತಂಗಿಗೆ ಮದುವೆಯಾದಾಗ ನೀವು ಕುದುರೆಗೊಂದಿಯಲ್ಲಿದ್ದರೇನು ?

ಕಿಟ್ಟು—ಅಯ್ಯೊ! ಅಯ್ಯೊ! ಇದು ಏಕೆ, ಸ್ವಾಮಿ, ಹೀಗೆ ಕೇಳುತ್ತೀರಿ? . . . ಇಷ್ಟುಬೇಗ ಮರೆತುಬಿಟ್ಟರೆ ಬಡವರ ಪಾಡೇನಾಗಬೇಕು? ಓಹೋಹೋ! ಆ ಮದುವೆ ಮಹೋತ್ಸವದ ಅವಾಂತರ, ಅದರ ಅಡಾಉಡಿ, ಈಗಲೂ ಕಣ್ಣಿಗೆ ಅಂಜನ ಹಾಕಿದ ಹಾಗಿದೆ, ಗಗ್ಗಯ್ಯನವರೇ! ಕಿವಿಯೊಳಗೆ ಮೊಳಗುತ್ತಾ ಇವೆ ಆ ಬ್ಯಾಂಡು ಆ ಓಲಗ, ಆ ಅಳಿಯನ ಆರ್ಭಟ, ಆ ಮಂಗಳಾಂಗಿಯರ ಜಗಳ, ಆ ತರಳೆಗಳ ತಾಪತ್ರಯ! ಅಬ್ಬಬ್ಬ!

ಪುಟ್ಟು [ಅಡ್ಡಬಂದು]—ಸ್ವಾಮಿ! ನಿಮ್ಮ ತಂಗಿ ಮದುವೆಯಿಂದ ನಮ್ಮ ಊರಿಗೇ ಅವಮಾನ ಮಾಡಿಬಿಟ್ಟಿರಿ, ಸ್ವಾಮಿ, ನೀವು. . . .

ಗಗ್ಗಯ್ಯ—ಛೆ . . . ಛೆ . . . ಅದು ಹೇಗೆ. . . .

ಪುಟ್ಟು—ಹೇಳುತ್ತೇನೆ ಕೇಳಿ . . . ಗಗ್ಗಯ್ಯನವರೇ! ನಿಮ್ಮೂರು ಮದುವೆ ನೋಡಿಕೊಂಡು ಬಂದನೋ ಇಲ್ಲವೋ ಇವನು? ಆ ಮೇಲೆ ಇದೇ ಊರಿನಲ್ಲಿ ಒಂದು ಸಾವಿರ ಮದುವೆ ನಡೆದಿವೆ; ಲಕ್ಷಾಂತರ ರೂಪಾಯಿ ಖರ್ಚಾಗಿದೆ. ಯಾವ ಮದುವೆಗೆ ಹೋದರೂ ಇವನು . . . ಚಪ್ಪರ ಕಾಣುತ್ತಲೂ . . . ಬಿಡೋ ಇದೇನು ಮಹಾ ಚಪ್ಪರ . . . ವಾದ್ಯ ಕೇಳುತ್ತಲೂ . . . ಬಿಡೋ ಇದೆಂತಹ ಬಾಜಾಬಜಂತ್ರಿ . . . ತ್ಸ . . . ತ್ಸ . . . ತ್ಸ . . . ಅದೇನು ಇಂದ್ರಲೋಕವನ್ನೇ ಇಳಿಸಿಬಿಟ್ಟಿದ್ದಿರಾ ನೀವು ಕುದುರೆಗೊಂದಿಗೆ?

ಕಿಟ್ಟು—ಅದನ್ನೆಲ್ಲಾ ಆ ಮೇಲೆ ನಿಧಾನವಾಗಿ ಹೇಳೋಣ. . . . [ಗಗ್ಗಯ್ಯನಿಗೆ] ಅದಿರಲಿ. . . ಈಗ ತಾವು ಎಲ್ಲಿ ಬಿಡಾರಮಾಡೋಣವಾಗಿದೆ? ಇನ್ನೆಲ್ಲಿಗೂ ಹೋಗ ಬಾರದು. . . . ನನ್ನ ಕುಟೀರವನ್ನೇ ತಮ್ಮ ಕುದುರೆಗೊಂದಿ ಅಂತ ಭಾವಿಸಿ. . . .

ಗಗ್ಗಯ್ಯ—ಛೆ . . . ಛೆ . . .

ಕಿಟ್ಟು [ಒತ್ತಾಯದಿಂದ]—ಛೇನೂ ಇಲ್ಲ . . . . ಛೂನೂ ಇಲ್ಲ . . . . ತಮ್ಮಂತಹವರು ಕೈಗೆ ಸಿಕ್ಕಿರುವಾಗ ನಾವು ಬಿಟ್ಟೇವೆ? . . . ತಮ್ಮ ಸಾಮಾನೆಲ್ಲಿ? . . . ಹಾಸಿಗೆ . . . ಅಲ್ಲ . . . ಹೋಲ್ಡಾಲು. . . .

ಗಗ್ಗಯ್ಯ—ರೈಲು ಸ್ಟೇಷನ್ನಲ್ಲೇ ಇರಿಸಿದೇನೆ. . . . . ಒಬ್ಬರ ಮನೆ ಹುಡುಕುತ್ತಾ. . . .

ಪುಟ್ಟು—ಅಯ್ಯೋ, ಅಯ್ಯೋ, ತಾವು ಬೇರೆ ಮನೆ ಹುಡುಕಲೇ ಕೂಡದು. . . . ಆ ಮನೆ ಪತ್ತೆ ಆಗುವುದರೊಳಗೆ ನೀವು ನಮಗೆ ಸಿಕ್ಕಿದ್ದು ನಮ್ಮ ಪುಣ್ಯ. . . .

ಕಿಟ್ಟು—ತಾವು ತಮ್ಮ ಸಾಮಾನುಗಳನ್ನೆಲ್ಲ ರೈಲು ಸ್ಟೇಷನ್ನಲ್ಲಿರಿಸಿದ್ದು ತಮ್ಮ ದೂರಾಲೋಚನೆಗೆ ದೃಷ್ಟಾಂತ. . . . ಈ ಊರಲ್ಲಿ . . . ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ . . . . ಸ್ವಾಮಿ. . . . . ಕಳ್ಳರೂ ಕಾಕರೂ ವಿಪರೀತ. . . .

ಪುಟ್ಟು—ಬನ್ನಿ, ಗಗ್ಗಯ್ಯನವರೇ, ಸ್ಟೇಷನಿಗೆ ಹೋಗೋಣ. . . . ನಾನೂ ಬರುತ್ತೇನೆ. . . . ಹೆದರಬೇಡಿ. . . . [ಕೈ ಹಿಡಿದೆಳೆಯುವನು].

ಕಿಟ್ಟು—ಸರಿ! ನೀವಿಬ್ಬರೂ ಬರುವುದರೊಳಗೆ ನಾನು ನನ್ನ ಸ್ನೇಹಿತರಿಗೆ ಒಂದು ಬಿಡಾರ ಸಿದ್ಧಪಡಿಸಿರುತ್ತೇನೆ. . . . ಬೇಗ ಹೊರಡಿ [ಪುಟ್ಟು ಗಗ್ಗಯ್ಯ ಇಬ್ಬರೂ ಹೊರಡುವರು]. . . . ಈಗ ಮುಂದಿನ ಕೆಲಸ. . . . [ಪಕ್ಕಕ್ಕೆ ತಿರುಗಿ] ಓ! ಗೌರಿಯ ಪುಣ್ಯ! ನನ್ನ ಪುಣ್ಯ! [ಅತ್ತಕಡೆ ಹೋಗಿ] ಪಂಡಿತರೇ! ಪಂಡಿತರೇ! ಅಲ್ಲ, ಕ್ಷಮಿಸಿ! ಡಾಕ್ಟರ್! ಡಾಕ್ಟರ್! . . . ದಯವಿಟ್ಟು . . . ಡಾಕ್ಟರ್! . . . ಒಂದು ನಿಮಿಷ. . . .

[ಡಾಕ್ಟರ್ ದಂಡಯ್ಯನವರ ಪ್ರವೇಶ]

ಡಾಕ್ಟರ್—ನಮಸ್ಕಾರ! ಇದೇನಿದು ಇಲ್ಲಿ ನಿಂತಿದ್ದೀರಿ. . . . ಏನು ವಿಶೇಷ. . . .

ಕಿಟ್ಟು—ತಮಗೊಂದು ಕೇಸು ಕೊಡೋಣ ಅಂತ ಕರೆದೆ. ದಂಡಯ್ಯನವರೇ! ಇಲ್ಲಿ ಯಾರೂ ಇಲ್ಲ. . . . ಆದರೂ ಹತ್ತಿರ ಬನ್ನಿ . . . ಹೇಳುತ್ತೇನೆ. ಪಾಪ . . . ಕಣ್ಣಲ್ಲಿ ನೀರು ಬರುತ್ತದೆ, ಪಂಡಿತರೇ, ಅಲ್ಲ, ಡಾಕ್ಟರೇ! ಅವನನ್ನ ನೋಡಿದರೆ ಹೊಟ್ಟೆಯೊಳಗೆ ಏನೋ ಒಂದು ತರಹ ಸಂಕಟವಾಗುತ್ತದೆ. . . . ದಿನದಿನಕ್ಕೂ ಪ್ರವರ್ಧಮಾನಕ್ಕೆ ಬರುತ್ತಿದೆಯೇ ಹೊರತು ಗುಣಮುಖ ಕಾಣೆ! . . . ಮೆದುಳೇ ಹಳಸಿಹೋಗಿದೆ. . . . ಸಂಪೂರ್ಣ ಹುಚ್ಚು, ಪಾಪ. . . .

ಡಾಕ್ಟರ್—ಹುಚ್ಚು? ಪರಮಸಂತೋಷ . . . ನನಗೆ ಬೇಕಾಗಿದ್ದದ್ದೇ ಸಿಕ್ಕಿದ ಹಾಗಾಯಿತು.

ಕಿಟ್ಟು—ಹೊರನೋಟಕ್ಕೆ ಹುಚ್ಚು ಅಂತ ಯಾರೂ ಪತ್ತೆ ಹಚ್ಚುವುದಿಲ್ಲ. . . . ಬಾಯಿ ಬಿಡಿಸಿದರೆ ಬಣ್ಣ ಬಯಲಾಗುತ್ತದೆ. ನೀನು ಯಾರಪ್ಪಾ ಅಂದರೆ

ಗಗ್ಗಯ್ಯ ಅಂತಾನೆ; ಎಲ್ಲಿಂದ ಬಂದೆ ಅಂದರೆ ಕುದುರೆಗೊಂದಿಯಿಂದ ಅಂತಾನೆ; ಯಾಕೆ ಬಂದೆಯೋ ಅಂದರೆ . . . ಇಲ್ಲಿ ಕೇಳಿ, ಡಾಕ್ಟರ್ . . . ಎಲ್ಲಾ ಬಿಟ್ಟು ಸಾಹುಕಾರ್ ಮೂಗಯ್ಯನವರ ಮಗಳನ್ನ ಮದುವೆಯಾಗುವುದಕ್ಕೆ ಅಂತಾನೆ. . . .

ಡಾಕ್ಟರ್—ಅಯ್ಯೋ . . . ಹುಚ್ಚು . . .

ಕಿಟ್ಟು—ಬಾಕಿ ಭ್ರಾಂತು. ಹೇಗಾದರೂ ಇರಲಿ! ಸ್ವಾಮಿ! ಆ ಹುಡುಗಿ ಗೌರಿ ವಿಷಯದ ಮಾತನ್ನು ಮಾತ್ರ ನೀವು ನಿಲ್ಲಿಸಲೇಬೇಕು. . . .

ಡಾಕ್ಟರ್—ತಿಳಿಯಿತು . . . ತಿಳಿಯಿತು. ಆದರೆ ಹುಚ್ಚು ಬಿಡಿಸುವುದಕ್ಕೆ ನನ್ನ ಗುರುಗಳು ಹೇಳಿಕೊಟ್ಟಿರುವ ಕ್ರಮವೇ ಬೇರೆ. . . . ನಮ್ಮ ಚರಕ ಶುಶ್ರುತ ನಿದಾನಾದಿ ಮಹರ್ಷಿಗಳ ಮುಂದೆ ಈಗಿನ ಎಂ.ಬಿ., ಬಿ.ಎಸ್.ಗಳು ಮುಸುಕು ಹಾಕಿಕೊಂಡು ಮೂಲೆಯಲ್ಲಿ ಕೂಡಬೇಕು. . . . ನನಗೂ ಕ್ಯಾಟು ರ್‍ಯಾಟು ಎ ಮ್ಯಾಡ್ಮಾನ್ ರಾ಼ ಅಟ್ ಅ಼ ಆಕ್ಸ್ ಅಂತ ಎಲ್ಲಾ ಬರುತ್ತೆ. . . . ನಾನೂ ಇಂಗ್ಲೀಷ್ ಕಲಿತಿದೇನೆ. . . . ಆದರೂ ಈ ಇಂಗ್ಲೀಷ್ ಡಾಕ್ಟರುಗಳ ಹಾಗೆ ಹುಚ್ಚನ್ನ ಹುಚ್ಚು ಅಂತ ಹೇಳುವುದಕ್ಕೆ ನಾನು ಹೆದರುವುದಿಲ್ಲ. ಅವರು ಹೇಳುತ್ತಾರೆ, ಅದು ಮಾನಸಿಕ ರೋಗವಂತೆ! ಸುಪ್ತ ಚೇತನದ ಗುಪ್ತಕ್ರಿಯೆ ಯಂತೆ! ಸ್ವಪ್ನ ಚೇತನದ ಸೋಜಿಗವಂತೆ! ನನ್ನ ಗುರುಗಳು ಹಾಗೇನೂ ಹೇಳಿಲ್ಲ. "ಗಗನಂ ಗಗನಾಕಾರಂ; ಸಾಗರಂ ಸಾಗರೋಪಮಂ" ಅಷ್ಟೆ. ಹುಚ್ಚು ಅಂದರೆ ಹುಚ್ಚು . . . ಹೆದರಿಕೆ ಏನು? . . .

ಕಿಟ್ಟು—ಚಿಕಿತ್ಸೆ . . .?

ಡಾಕ್ಟರ್—ನನ್ನ ಕ್ರಮ ಗೊತ್ತಿಲ್ಲವೇ? "ದಂಡಂ ದಶಮಣಂ ಭವೇತ್" ಹತ್ತು ಮಣ ಕಟ್ಟಿಗೆ . . .

ಕಿಟ್ಟು—ಈತನಿಗೆ ನಿಮ್ಮ ಚಿಕಿತ್ಸೆಯೇ ಸರಿ. ದಂಡಯ್ಯನವರೇ! ಒಪ್ಪಿದೆ. ಹುಚ್ಚು ಹೋಗುವುದು ಮುಖ್ಯ; ಮೈಗೆ ಕೊಂಚ ನೋವಾದರೇನಂತೆ. . . . ಆಮೇಲೆ ಮತ್ತೊಂದು ಮಾತು! ಮನುಷ್ಯ ನೋಡಿದರೆ ಪಶುವಿನ ಹಾಗಿದಾನೆ. ಆದರೆ ಅದನ್ನು ನಂಬಿ ಮೋಸ ಹೋಗಬಾರದು. . . . ಪೂರ್ತ ವಾಸಿಯಾಗು ವುದರೊಳಗೆ ಎದ್ದುಬಿಟ್ಟಾನು. ಕೊಠಡಿಯೊಳಗೆ ಕೂಡಿಟ್ಟು ಬೀಗ ಹಾಕಿ. . . . ಇಕೋ . . . ಪುಟ್ಟು ಕರೆದುಕೊಂಡು ಬರುತ್ತಾ ಇದಾನೆ. . . . ಅಯ್ಯೋ! ಪಾಪ! ಇಂತಹ ಕಷ್ಟ ಯಾರಿಗೂ ಕೊಡಬಾರದು ದೇವರು. . . . ಮುಖ್ಯ, ಪೂರ್ವಜನ್ಮದಲ್ಲಿ ಇವನು ಯಾರಿಗೆ ಯಾವ ಹುಚ್ಚು ಹಿಡಿಸಿದ್ದನೋ? . . .

[ಪುಟ್ಟು ಗಗ್ಗಯ್ಯ ಇಬ್ಬರೂ ಪ್ರವೇಶ. . . . ಹಾಸಿಗೆ ಸಮೇತ. . . . ಮುಂದೆ ಮಾತಿನ ನಡುವೆ ಪುಟ್ಟು ಜಾರಿಕೊಳ್ಳುತ್ತಾನೆ. . . .]

ಗಗ್ಗಯ್ಯನವರೇ! [ಡಾಕ್ಟರ ಕಡೆ ಕಣ್ಣು ಸನ್ನೆಮಾಡುವನು] ಇವರು ನನ್ನ ಸ್ನೇಹಿತರು. . . . ಇವರು ನಿಮ್ಮನ್ನ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಈ ದಿನ ರಾತ್ರಿ ತಾವು ಅವರಲ್ಲೇ ಬಿಡಾರಮಾಡಿ . . . ಬೆಳಗಾಗುತ್ತಲೂ ಬೇಕಾದರೆ ಆ ಮನೆ ಹುಡುಕೋಣ. ಈಗ ಎಂಟೂವರೆಯಾಗುತ್ತಾ ಬಂತು. . . . ಊಟದ ಹೊತ್ತು . . . ಸ್ವಾಮಿ! ಇವರ ವಿಷಯವನ್ನೇ ನಾನು ಹೇಳು ತ್ತಿದ್ದದ್ದು. . . . ಇವರೇ ಆ ಲಾಯರು [ಕಣ್ಣು ಸನ್ನೆ] ಕುದುರೆಗೊಂದಿಯಿಂದ ಬಂದಿದಾರೆ. . . .

ಡಾಕ್ಟರ್—ನೀವೇನೂ ಯೋಚಿಸಬೇಡಿ. . . . ನನ್ನ ಹತ್ತಿರ ಬಿಡಿ. . . . ನನ್ನ ಶಕ್ತಿ ಮೀರಿ ನಾನು ಅವರ ಶುಶ್ರೂಷೆ ಮಾಡುತ್ತೇನೆ. . . .

ಗಗ್ಗಯ್ಯ [ಕಿಟ್ಟುವಿಗೆ]—ಇವರು ಯಾರು? ಪ್ರೊಪ್ರೈಟರು ಅಂತ ಕಾಣು ತ್ತದೆ. . . .

ಕಿಟ್ಟು [ಅಡ್ಡಬಂದು]—ಹೌದು! ಹೌದು! [ದಂಡಯ್ಯನವರ ಕಡೆ ತಿರುಗಿ ಪಾಪ, ಕ್ಷಮಿಸಿ ಅಂತ ಸನ್ನೆಯಲ್ಲೇ ಹೇಳುವನು] [ಡಾಕ್ಟರ ಹತ್ತಿರ ಬಂದು] ಈ ಹದಿನೈದು ರೂಪಾಯಿ ನಿಮ್ಮಲ್ಲಿರಲಿ. . . .

ಗಗ್ಗಯ್ಯ [ಮುಂದಕ್ಕೆ ಹಾರಿ]—ಛೆ. . . ಛೆ . . . ನನ್ನ ಪರವಾಗಿ ನೀವು ವೆಚ್ಚಮಾಡಬಾರದು, ನನ್ನ ಹತ್ತಿರ ಹಣವಿದೆ.

ಕಿಟ್ಟು [ಕನಿಕರದಿಂದ]—ಚಿಂತೆ ಇಲ್ಲ, ಗಗ್ಗಯ್ಯನವರೇ! ಇಲ್ಲಿ ನೋಡಿ ಇಲ್ಲಿ! ನೀವು ಕೊಂಚವೂ ಕಳವಳಪಡಬಾರದು. ದಯವಿಟ್ಟು ಸಮಾಧಾನವಾಗಿರಿ, ನಿಮಗೆ ಈಗ ಬೇಕಾದದ್ದು ವಿಶ್ರಾಂತಿ . . . ಶುಶ್ರೂಷೆ! ಈ ಹಣ ಬೇರೆ ವಿಷಯಕ್ಕೆ . . . ನಾನು ಈಗ ಒಂದು ತುರುತಿನ ಕೆಲಸದ ಮೇಲೆ ಹೋಗಬೇಕಾಗಿದೆ . . . ಬೆಳಗ್ಗೆ ತಮ್ಮ ಭೇಟಿ ತೆಗೆದುಕೊಳ್ಳುತ್ತೇನೆ. . . ನಮಸ್ಕಾರ . . . ಇವರ ಹತ್ತಿರ ನೀವಿದ್ದರೆ ನನ್ನ ಹತ್ತಿರ ಇರುವುದಕ್ಕಿಂತ ಮೇಲು . . . ನಮಸ್ಕಾರ [ಹೊರಡುವನು].

ಗಗ್ಗಯ್ಯ [ಕಿಟ್ಟು ಹೋದ ಕಡೆ ಕೈತೋರಿಸುತ್ತಾ]—ತುಂಬಾ ಯೋಗ್ಯರು. . . . ಈಗಿನ ಕಾಲದಲ್ಲಿ ಇಂಥಾ . . . ಇಷ್ಟು. . . .

ಡಾಕ್ಟರ್—ಹೌದು! ನಿಜ! ಇಲ್ಲಿ ಬನ್ನಿ. . . . ನನ್ನ ಗುರುಗಳನ್ನು ಕರೆಸಿ ನಾವಿಬ್ಬರೂ ಯೋಚಿಸಿ ಆ ಮೇಲೆ ನಿಮಗೆ ಯಾವ ಶುಶ್ರೂಷೆ ಮಾಡಬೇಕು ಅಂತ ತೀರ್ಮಾನ ಮಾಡೋಣವೋ, ಅಥವಾ ನಾನೇ ಮಾಡಿದರೆ ಸಾಕೋ?

ಗಗ್ಗಯ್ಯ—ಬೇಡಿ . . . ಬೇಡಿ . . . ಅಷ್ಟೆಲ್ಲಾ ಶ್ರಮವೇಕೆ? ನನಗೆ ಕೊಂಚದ ರಲ್ಲೇ ತೃಪ್ತಿ. . . . ಅದು ಬೇಕು, ಇದು ಬೇಕು, ಎಂಬ ಹಠವಿಲ್ಲ. . . .

ಡಾಕ್ಟರ್—ನಿಮ್ಮ ಮಾತು ಕೇಳಿಕೊಂಡು ಸುಮ್ಮನಿರುವುದಕಾಗುತ್ತದೆಯೇ? ನಿಮಗೆ ಆಹಾರ ಸರಿಯಾಗಿ ಸೇರುತ್ತದೋ ?

ಗಗ್ಗಯ್ಯ—ಸೇರದೇ ಏನು? ಈಗ ಹೊಟ್ಟೆತುಂಬ ಹಸಿವಿದೆ. ಯಾಕೆಂದರೆ ಬೆಳಗ್ಗೆ ತಿಂಗಳೂರಿಗೆ ರೆಯಿಲು ಬಂದಾಗ. . . .

ಡಾಕ್ಟರ್—ಸುಮ್ಮನೆ ಹರಟಬೇಡಿ . . . ಕೇಳಿದ್ದಕ್ಕೆ ಉತ್ತರ ಹೇಳಿ, ಸಾಕು.

ಗಗ್ಗಯ್ಯ [ಚಕಿತನಾಗಿ]—ಏನ್ರಿ ಇದು ?

ಡಾಕ್ಟರ್ [ಕೈಹಿಡಿದು]—ನಿದ್ದೆ ಬರುತ್ತದೋ ಚೆನ್ನಾಗಿ ?

ಗಗ್ಗಯ್ಯ—ಊಟವಾದ ಕೂಡಲೇ ನಿದ್ದೆ ಸಿದ್ಧ.

ಡಾಕ್ಟರ್—ಕನಸು ಬೀಳುತ್ತದೋ. . . .

ಗಗ್ಗಯ್ಯ—ಬಿದ್ದರೂ ಬೀಳಬಹುದು [ಕೈ ಕೊಡವುತ್ತಾ] ನಿಮ್ಮ ಪ್ರಶ್ನೆಗಳ ಅರ್ಥವೇನ್ರಿ? ಗೊತ್ತಾಗಲಿಲ್ಲ. . . .

ಡಾಕ್ಟರ್—ಓಹೋ ! ಮುಂಗೋಪ ! ಇದು ಒಳ್ಳೆಯ ಚಿಹ್ನೆ ಅಲ್ಲ. . . .

ಗಗ್ಗಯ್ಯ—ಯಾವುದ್ರೀ ಒಳ್ಳೆಯದಲ್ಲಾ? ಯಾರ್ರೀ ನೀವು. . . .

ಡಾಕ್ಟರ್—ಬೇಗ ಭಯೋದ್ರೇಕವಾಗುತ್ತದೆ . . . ತ್ಸು . . . ತ್ಸು . . . ತ್ಸು. . . .

ಗಗ್ಗಯ್ಯ [ರೇಗಿ]—ಅನ್ನ ಮಾರುವವನಿಗೆ ಎಷ್ಟ್ರೀ ದುರಹಂಕಾರ! ಹೋಗ್ರಿ! ನಿಮ್ಮ ಹೋಟಲಿಗೆ ನಾನು ಬರುವುದೇ ಇಲ್ಲ. [ಎದ್ದು ಹಾಸಿಗೆಯನ್ನು ಹಿಡಿದೆತ್ತುವನು.]

ಡಾಕ್ಟರ್—ಏ ! ಇಡಯ್ಯ ಕೆಳಗೆ [ಬಲವಂತದಿಂದ ಹಾಸಿಗೆಯನ್ನು ಕೆಳಕ್ಕಿಳಿಸಿ] ಹೋಟಲ್ ಮಾಲೀಕನೇನಯ್ಯಾ ನಾನು ?

ಗಗ್ಗಯ್ಯ—ಮತ್ತೆ ಯಾರ್ರೀ ನೀವು ?

ಡಾಕ್ಟರ್ [ಠೀವಿಯಿಂದ]—ನಾನೇ ? ಡಾಕ್ಟರ್ ! ಡಾಕ್ಟರ್ ದಂಡಯ್ಯ! [ಗಗ್ಗಯ್ಯನ ಕೈ ಹಿಡಿದೆಳೆಯುತ್ತಾ] ನೀನು ನನ್ನ ಪೇಷೆಂಟು.

ಗಗ್ಗಯ್ಯ [ಕೊಡವುತ್ತಾ]—ಊಹುಂ. ನನ್ನ ತಾತ ಮುತ್ತಾತನ ಕಾಲದಿಂದಲೂ ನಾವು ಔಷಧಿ ಗಿವುಷಧಿ ಕುಡಿದವರೇ ಅಲ್ಲ. . . . .

ಡಾಕ್ಟರ್—ಹಾಗಾದರೆ ನಿನ್ನ ಹುಚ್ಚು ಪರಂಪರೆಯಾಗಿ ಬಂದದ್ದೋ ?

ಗಗ್ಗಯ್ಯ [ಕನಲಿ]—ಹುಚ್ಚು ! ಯಾರಿಗ್ರೀ ಹುಚ್ಚು ? ನಾನು ಯಾರು ಗೊತ್ತೆ? ಕುದುರೆಗೊಂದಿ ಲಾಯರು, ಬಿ.ಎ., ಎಲ್‌ಎಲ್.ಬಿ. . . .

ಡಾಕ್ಟರ್—ಗೊತ್ತು! ಗೊತ್ತು! ಅದೇ ನಿನ್ನ ಹುಚ್ಚು! ಸಾಹುಕಾರ್ ಮೂಗಯ್ಯನ ಮಗಳನ್ನ ಮದುವೆಯಾಗಲು ಬಂದಿದ್ದೀಯಾ, ಅಲ್ಲವೆ?

ಗಗ್ಗಯ್ಯ—ಹೌದು, ಹೌದು! [ಹತ್ತಿರ ಸರಿದು ದೈನ್ಯದಿಂದ] ನಿಮಗೆ ಹೇಗೆ ತಿಳಿಯಿತು, ಸ್ವಾಮಿ? ಮೂಗಯ್ಯನವರೇ ಹೇಳಿದರೋ? . . . ಹೇಳಿರಿ . . . ಹೇಳಿರಿ. . . .

ಡಾಕ್ಟರ್ [ಒಂದು ಕೈಯಲ್ಲಿ ಹಾಸಿಗೆ; ಮತ್ತೊಂದು ಕೈಯಿಂದ ಗಗ್ಗಯ್ಯನನ್ನು ಎಳೆಯುತ್ತಾ] ಬಾರಯ್ಯ ಮನೆಗೆ . . . ಈ ಭ್ರಾಂತನ್ನೆಲ್ಲಾ ನಿನ್ನ ಬುರುಡೆಯೊಳಗಿಂದ ಹೊಡೆದೋಡಿಸಿ ಬಿಡುತ್ತೇನೆ . . . [ಗಗ್ಗಯ್ಯನನ್ನೂ ಎಳೆದುಕೊಂಡು ಹೊರಡುವನು. . .]

[ತೆರೆ]

ದೃಶ್ಯ ೩

ಈಚೆ ಬೀದಿ . . . . ಅದೇ ರಾತ್ರಿ ೯ ಗಂಟೆ

[ಡಾಕ್ಟರೂ ಪುಟ್ಟುವೂ ಮಾತನಾಡುತ್ತಿರುವರು]

ಡಾಕ್ಟರ್—ಹಗ್ಗ ಕಿತ್ತು ಬಾಗಿಲು ಒಡೆದು ಕೊಠಡಿಯಿಂದ ಓಡಿಹೋದ . . . ಮಂಕ! ಇನ್ನೂ ಚಿಕಿತ್ಸೆ ಪ್ರಾರಂಭಮಾಡುವುದರೊಳಗೆ!

ಪುಟ್ಟು—ಅಯ್ಯೋ, ಮುಟ್ಠಾಳ! ತನ್ನ ಹುಚ್ಚನ್ನು ವಾಸಿಮಾಡಿಕೊಳ್ಳಬೇಕು ಎಂಬ ಜ್ಞಾನ ಕೂಡ ಇಲ್ಲವಲ್ಲಾ ಅವನಿಗೆ!

ಡಾಕ್ಟರ್ [ಕೆರಳಿ]—ಇದರಿಂದಲೇ ಗೊತ್ತಾಗುವುದಿಲ್ಲವೇ ಅವನು ಹದಿನಾರಾಣೆ ಹುಚ್ಚ ಅಂತ? ಆದರೂ ನಾನವನನ್ನ ಸುಮ್ಮನೆ ಬಿಡುತ್ತೇನೇನು? ಪೋಲೀಸಿಗೆ ಹೇಳುತ್ತೇನೆ. ಬೀದಿಯಲ್ಲಿ ಹೋಗುವವರನ್ನ ಕಚ್ಚಿಬಿಟ್ಟಾನು . . . ಅಪಾಯ . . . ಅಂತ ತಿಳಿಸುತ್ತೇನೆ. ಮತ್ತೆ ಅವನನ್ನ ಕೊಠಡಿಯಲ್ಲಿ ಕೂಡಿಸದೆ ಹೋದರೆ . . . ನಾನು ದಂಡಯ್ಯನೇ ಅಲ್ಲ!

ಪುಟ್ಟು—ಅಲ್ಲ, ಡಾಕ್ಟರೇ! ಸೊಗಸಾದ ಕೇಸೊಂದನ್ನ ನಿಮ್ಮ ಕೈಗೆ ಕೊಟ್ಟರೆ ರೊಟ್ಟಿ ಜಾರಿ ಕೊಚ್ಚೆಯಲ್ಲಿ ಬಿತ್ತು ಎಂಬುವ ಹಾಗೆ ಕಳೆದುಕೊಂಡು ಬಿಟ್ಟು ಈಗ ಕೈ ಕೈ ಹಿಸುಕಿಕೊಳ್ಳುತ್ತೀರಲ್ಲಾ . . . ನಿಮಗಿನ್ನ ಫೀಜು ಯಾರು ಕೊಡುವವರು? ಪಂಡಿತರೇ! ಅಲ್ಲ . . . ಡಾಕ್ಟರೇ!

ಡಾಕ್ಟರ್—ಈಗ ಅವನು ಎಲ್ಲಿಗೆ ಓಡಿರುತ್ತಾನೆ?

ಪುಟ್ಟು—ತಿಳಿದೂ ತಿಳಿದೂ ನನ್ನನ್ನ ಕೇಳುತ್ತೀರಲ್ಲಾ, ಡಾಕ್ಟರೇ! ಮೂಗಯ್ಯನ ಮಗಳನ್ನ ಮದುವೆಯಾಗುವುದಕ್ಕಲ್ಲವೆ ಅವನಿಲ್ಲಿಗೆ ಬಂದಿರುವುದು? ಇನ್ನೆಲ್ಲಿ ಹೋಗುತ್ತಾನೆ? ನೆಟ್ಟಗೆ ಅಲ್ಲಿಗೇ ನಡೆದಿರುತ್ತಾನೆ, ಹುಚ್ಚ. [ಪಕ್ಕಕ್ಕೆ ತಿರುಗಿ] ಅಗೋ, ಮೂಗಯ್ಯನವರೇ ಬಿರುಬಿರನೆ ಎಲ್ಲಿಗೋ ಹೋಗುತ್ತಿದಾರೆ. ಅವರನ್ನ ನಿಮ್ಮ ಹತ್ತಿರಕ್ಕೆ ಕಳುಹಿಸುತ್ತೇನೆ [ಚಪ್ಪಾಳೆ ತಟ್ಟುತ್ತಾ ಓಡುವನು].

[ಮೂಗಯ್ಯನವರ ಪ್ರವೇಶ]

ಮೂಗಯ್ಯ—ನಮಸ್ಕಾರ, ಪಂಡಿತರೇ! ಓ! ಡಾಕ್ಟರೇ ಅಂತ ಹೇಳದೆ ಹೋದರೆ ನಿಮಗೆ ಕೋಪ ಬರುವುದೋ ಏನೋ? ಏನು ಸಮಾಚಾರ?

ಡಾಕ್ಟರ್—ತಾವು ಹೇಗೆ ಬೇಕಾದರೂ ಹೇಳಬಹುದು! ತಮ್ಮನ್ನ ಒಂದು ಪ್ರಶ್ನೆ ಕೇಳುತ್ತೇನೆ. ರೇಗಬೇಡಿ . . . ಗಗ್ಗಯ್ಯ ಅಂತ ಹೇಳಿಕೊಳ್ಳುತ್ತಾನೆ. ಅವನು ತಮ್ಮ ಮನೆಗೆ ಬಂದನೇ, ಇಲ್ಲವೇ?

ಮೂಗಯ್ಯ—ಬರಬೇಕಾಗಿತ್ತು . . . ಬಂದಿಲ್ಲ! ನಾನೂ ೭-೩೦ ರ ಗಾಡಿಗೆ ಸ್ಟೇಷನಿಗೆ ಆಳನ್ನ ಕಳುಹಿಸಿದ್ದೆ . . . ಅವನಿಗೆ ಸಿಗಲಿಲ್ಲವಂತೆ ಅವರು . . . ನನ್ನ ಮನೆ ಎಲ್ಲಿದೆ ಅಂತ ಅವರಿಗೆ ಗೊತ್ತಿದೆಯೋ ಇಲ್ಲವೋ . . . ತಡಕಾಡುತ್ತಿದಾರೋ ಏನೋ, ಕಾಣೆ!

ಡಾಕ್ಟರ್—ಆತನ ಸ್ಥಿತಿ ಏನು ಅಂತ ನಿಮಗೆ ಚೆನ್ನಾಗಿ ಗೊತ್ತೇನು?

ಮೂಗಯ್ಯ—ಗೊತ್ತಿಲ್ಲದೆ ಏನು? ನನಗೆ ಆತ ದೂರದ ಸಂಬಂಧ . . . ಹತ್ತಿರದ ಸಂಬಂಧವೂ ಇಷ್ಟರಲ್ಲೇ ಬೆಳೆಯುತ್ತದೆ. . .

ಡಾಕ್ಟರ್—ಹಾಗಾದರೆ ಆ ಮದುವೆ ಸುದ್ದಿ ನಿಜವೋ? ಆದರೂ, ಅವನು ಹುಚ್ಚ! ಸಾಹುಕಾರರೇ! ಬೇಡಿ, ಬೇಡಿ, ಆ ಹೊಸ ಸಂಬಂಧವಾಗಲೇಕೂಡದು ಅಂತ ನಾನು ಹುಕುಂ ಮಾಡುತ್ತೇನೆ. . . .

ಮೂಗಯ್ಯ—ಏಕೆ? ಏಕೆ?

ಡಾಕ್ಟರ್—ಕೂಡದು! ಆತನಿಗೆ ಹುಚ್ಚು. ಏನೇನೋ ಒದರುತ್ತಾನೆ. ಆತ ನನ್ನ ಚಿಕಿತ್ಸೆಯಲ್ಲಿದಾನೆ. . . ಅವನ ಖಾಯಿಲೆ ನನಗೆ ಸೇರಿದ್ದು; ನನ್ನ ಚಿಕಿತ್ಸೆ ಮುಗಿಯುವವರೆಗೆ ಅವನು ನನ್ನ ಅಧೀನ. ನಾನು ಗುದ್ದು, ಅಲ್ಲಾ ಮದ್ದು ತಿನ್ನಿಸುವುದರೊಳಗೆ ಅವನೆಲ್ಲಿಗೋ ತಪ್ಪಿಸಿಕೊಂಡು ಹೋಗಿದಾನೆ . . . ನಾನು ಪೋಲೀಸರಿಗೆ ತಿಳಿಸಿ ಪತ್ತೆ ಹಚ್ಚುತ್ತೇನೆ . . . ನೀವು ಮಾತ್ರ ಅಡ್ಡಿ ಬಂದರೆ. . . . .

ಮೂಗಯ್ಯ—ಅಡ್ಡಿ ! ನನಗೂ ಅವನಿಗೂ ಇನ್ನು ಮೇಲೆ ಯಾವ ಸಂಬಂಧವೂ ಇಲ್ಲ ಅಂತಲೇ ಕಾಣುತ್ತದೆ. . . .

ಡಾಕ್ಟರ್—ನೀವು ಅಡ್ಡಿ ಬಂದರೆ ಅವನಿಗೆ ಬದಲಾಗಿ ನಿಮ್ಮನ್ನೇ ಹಿಡಿದು ನಿಮ್ಮ ಹುಚ್ಚು ಬಿಡಿಸಿಬಿಡುತ್ತೇನೆ . . . ಎತ್ತಿಗೆ ಜ್ವರ ಬಂದರೆ ಕೋಣನಿಗೆ ಬರೆಹಾಕು ಅಂತಾರಲ್ಲಾ, ಹಾಗೆ . . . ಜ್ಞಾಪಕವಿರಲಿ. . . . [ಹೊರಡುವನು].

ಮೂಗಯ್ಯ—ಎಲ್ಲೋ ಹೋಗುತ್ತಿದ್ದ ಮಾರಿಯನ್ನ ಮನೆಗೆ ಹೊಕ್ಕು ಹೋಗು ಅಂದ ಹಾಗೆ, ಗಗ್ಗಯ್ಯನ ಗಾಣಕ್ಕೆ ನಾನು ಯಾಕಪ್ಪ ತಲೆಕೊಟ್ಟೆ ? ಪರಮಾತ್ಮಾ. . .

[ಪುಟ್ಟು . . . ಮಾರ್ವಾಡಿಯವರ ಉಡುಪನ್ನು ತೊಟ್ಟು ಪ್ರವೇಶ. ಅವರ ಕನ್ನಡ ನುಡಿಗೆಯನ್ನನುಕರಿಸಿ]

ಪುಟ್ಟು—ರಾಂ . . . ರಾಂ . . . ಬುಡ್ಡಾ ಸೋಮಿ ! ನಾವು ಬಡಾ ಮಾರ್ವಾಡಿ ಇದೇವೆ . . . ನಮ್ಮದು ಒಬ್ಬ ಲೇವಾದೇವಿ ಆಸೋಮಿ ಇಲ್ಲಿಗೆ ಒಂದಿದೆ. . . ಈ ಊರು ಮೂಗಯ್ಯ ಸಾಉಕಾರ್ ಯಾರಿದಾರೆ. ಸೋಮಿ. . . ಅವರಿಗೆ ನೋಡಬೇಕು ನಾವು. . .

ಮೂಗಯ್ಯ—ಮೂಗಯ್ಯ ಸಾಹುಕಾರರೇ ? ಅವರಿಂದ ಏನಾಗಬೇಕಾಗಿತ್ತು ?

ಪುಟ್ಟು—ಅವರು ಭಾರಿ ಲಕ್ಷಾಧಿಕಾರಿ ಇದ್ದಾರೆ. ಭಾರಿ ಧಾನಧರ್ಮ ಇದ್ದಾರೆ ಅಂತ ನಮ್ಮ ಊರು ಜನ, ಭಡಾಜನ ಛೋಟಾಜನ, ಬಾಯಿ ಬಾಯಿ ಬಿಡುತ್ತಾರೆ . . .

ಮೂಗಯ್ಯಾ [ಹಿಗ್ಗುತ್ತಾ]—ಹಾಗೋ ? . . . ಹ . . . ಹ್ಹ . . . ನಾನೇ ಕಣಯ್ಯ ಆ ಮೂಗಯ್ಯ ಸಾಹುಕಾರ್ . . .

ಪುಟ್ಟು [ಕೈ ಮುಗಿದು]—ನಮಸ್ಕಾರ ! ಮೂಗಸೋಮಿ ! ತಮ್ಮ ಪಾದ ಕಂಡು ಎರಡೂ ಕಣ್ಣಲ್ಲಿ ನೀರು ಬರುತ್ತದೆ. ನಮ್ಮದು ಹಳೇ ಲೆಖ್ಖ ಫೈಸಲ್ ಆಗುತ್ತದೆ ಅಂತ ನಂಬ್ಕೆ . . . ನಮಗೆ . . .

ಮೂಗಯ್ಯ [ಆಶ್ಚರ್ಯಭರಿತರಾಗಿ]—ಯಾವುದಯ್ಯಾ ಹಳೇ ಲೆಖ್ಖ ?

ಪುಟ್ಟು—ನಿಮ್ಮ ಅಳಿಯ . . . ಗಗ್ಗಯ್ಯನದು ಲೆಖ್ಖ. . . ನಮ್ಮದು ಅಂಗಡಿ ಎಂಟು ಸಾವಿರ ಚಿಲ್ಲರೆ ಅದೆ ; ನಮ್ಮ ದೊಡಪ್ಪನ ಮಗ ಚಮನ್‌ಲಾಲ್‌ಗೆ ಲೆಕ್ಕ ಮೂರೂ ಚಿಲ್ಲರೆ ; ಚಮನ್‌ಲಾಲ್‌ಗೆ ಷಡ್ಡ ನಾಥೂಲಾಲ್ ಗೋಂದಾಜಿ ಲೆಕ್ಕ ದೊಳಗೆ ಆರುಸಾಪಿರ ಚಿಲ್ಲರೆ. . . ಗಗ್ಗಯ್ಯ . . . ಬಾಕಿ ಇದೆ . . . ನಿಮ್ಮದು ಅಳಿಯ. . .

ಮೂಗಯ್ಯ—[ರೇಗಿ] ಯಾರಯ್ಯ ಹೇಳಿದ್ದು ಆತ ನನ್ನ ಅಳಿಯ ಅಂತ. . .

ಪುಟ್ಟು—ಗಗ್ಗಯ್ಯ ಹೇಳ್ತದೆ . . . ತಾಳೋ ಜರ್ಮನ್‌ಲಾಲ್, ವಾರಂಟಿಗೆ ಹಿಡೀಬೇಡ ಗೋಂದಾಜಿ . . . ಮೂಗಯ್ಯ ಸಾಹುಕಾರ್ ನನಗೆ ಹೆಣ್ಣು ಕೊಡುತ್ತಾರೆ, ಹಣ ಕೊಡುತ್ತಾರೆ . . . ಲಗ್ನದ್ದಿನ ಲೆಕ್ಕ ಫೈಸಲ್ ಅಂತದೆ. ಗಗ್ಗಯ್ಯ ಲಾಯರಿ. . .

ಮೂಗಯ್ಯ—ಈಗ ಆ ಮದುವೆ ನಡೆಯುವ ಹಾಗಿಲ್ಲಪ್ಪ, ಹೋಗು ನೀನು. . . [ಹೊರಡುವರು.]

ಪುಟ್ಟು—[ಹಿಂದೆಯೇ ಹೋಗುತ್ತಾ] ಮಾಡಿ ಸೋಮಿ . . . ನಮಗೆ ಒಳ್ಳೆಯದು, ಪಾಪ . . . ಗಗ್ಗಯ್ಯ ಜೆಯಿಲುಖಾನೆ ಹೋಗಿ ರಾಗಿ ಬೀಸುಬೇಡ . . . ಮಾಡಿ ಸೋಮಿ . . . ಹೆಣ್ಣು ಹಣ ಕೊಡಿಸೋಮಿ. . .

[ಮತ್ತೆ ರಂಗದ ಮಧ್ಯಕ್ಕೆ ಬಂದು, ಮಾರ್ವಾಡಿ ರುಮಾಲನ್ನೂ ಇತರ ಕೆಲವು ಉಡಿಗೆಗಳನ್ನು ಬಿಚ್ಚಿ ಕೈಯಲ್ಲಿ ಹಿಡಿದು] ಅಂತು, ಗಗ್ಗಯ್ಯನಿಗೆ ತಕ್ಕ ಮೂಗಯ್ಯ! ಅಳಿಯನಿಗೆ ತಕ್ಕ ಗೆಳೆಯ ಯಾರಪ್ಪಾ ಅಂದರೆ ಮಾವನೇ! . , . ಇನ್ನೇನು? ಗೌರಿ ಗಂಡ ಯಾರು ಅಂತ ಕೇಳಬೇಕಾಗಿಯೇ ಇಲ್ಲ. . .

[ಗಾಬರಿಗೊಂಡು ಓಡೋಡಿ ಬರುವ ಗಗ್ಗಯ್ಯನ ಪ್ರವೇಶ.]

ಯಾರಿದು? ಏನು? ಏನಾಯಿತು? ತಾವು ಕುದುರೆಗೊಂದಿ ಲಾಯರಲ್ಲವೆ? . . . [ತಡೆದು] ನಿಂತುಕೊಳ್ಳಿ, ಸ್ವಾಮಿ!

ಗಗ್ಗಯ್ಯ—[ಏದುತ್ತಾ] ರೀ! ಈ ಊರಲ್ಲಿ ಎಲ್ಲರಿಗೂ ಹುಚ್ಚೇನ್ರಿ?

ಪುಟ್ಟು—[ನಿಧಾನವಾಗಿ] ಸ್ವಾಮಿ! ಯಾರಾದರೂ ಕೇಳಿದರೆ ನಕ್ಕಾರು ತಮ್ಮ ಪ್ರಶ್ನೆಯನ್ನ? . . . ತಮ್ಮ ಕೋಪ ಕೊಂಚ ಕೆಳಕ್ಕಿಳಿಯಲಿ . . . ನಡೆದದ್ದನ್ನ ನಿಧಾನವಾಗಿ ಹೇಳಿ . . . ಹತ್ತುಜನರೆದುರು ಅತ್ತರೆ ನುಸ್ತೆಲ್ಲ ಪರಿಹಾರ ಅಂತ ನಮ್ಮಕಡೆ ಗಾದೆ ಉಂಟು . . . ನಿಮ್ಮ ಕಡೆ ಇಲ್ಲವೇನು?

ಗಗ್ಗಯ್ಯ—ನಿಮ್ಮ ಸ್ನೇಹಿತರೊಬ್ಬರು ನನಗೆ ಸಿಕ್ಕಲಿಲ್ಲವೆ . . . ಆಗ . . .

ಪುಟ್ಟು—ಹುಂ . . . ನಿಮ್ಮ ತಂಗಿ ಮದುವೆ ನೋಡಿಕೊಂಡು ಬಂದು ಈ ಊರಿನವರನ್ನೆಲ್ಲಾ ಹಂಗಿಸುತ್ತಾನಲ್ಲಾ . . . ಅವನು ತಾನೆ?

ಗಗ್ಗಯ್ಯ—ಹುಂ. ಹುಂ. ಅವರು ನನ್ನನ್ನ ಒಬ್ಬರ ಮನೆಯಲ್ಲಿ ಬಿಡಾರ ಮಾಡಿಸಿ ಬೆಳಗಾಗುತ್ತಲೇ ಕಾಣುತ್ತೇನೆ ಅಂತ ಹೇಳಿ ಹೋಗಲಿಲ್ಲವೇ? ಆ ಮನೆ ಮಾಲೀಕನಿಗೆ ಭಯಂಕರವಾದ ಹುಚ್ಚು!

ಪುಟ್ಟು—[ನಗುತ್ತಾ] ಏನು, ಗಗ್ಗಯ್ಯನವರೇ! ತಾವೇನು ಕನಸುಕಾಣುತ್ತಿದೀರಾ? ಕಥೆ ಕಟ್ಟುತ್ತಿದೀರಾ? ಕಾದಂಬರಿ ಬರೆಯುತ್ತಿದೀರಾ? ಅಥವಾ ನಡು ಬೀದಿಯಲ್ಲೇ ನಾಟಕವಾಡುತ್ತಿದೀರಾ? ನನಗೇನೂ ಅರ್ಥವಾಗಿಲ್ಲ.

ಗಗ್ಗಯ್ಯ—ಅಯ್ಯೋ! ಅಯ್ಯೋ! ನಿಜ ರೀ ನಾನು ಹೇಳುವುದು . . . ಆತ ಏನುಮಾಡಿದ, ಗೊತ್ತೆ? ನನ್ನನ್ನ ದರದರನೆ ಎಳೆದುಕೊಂಡು ಹೋಗಿ ಒಂದು ಕುರ್ಚಿಗೆ ಕಟ್ಟಿಹಾಕಿದ. . . . ಹೇಗೋ, ನಮ್ಮಪ್ಪ . . . ಆ ಕುದುರೆಗೊಂದಿ ಕುರಂಗೇಶ್ವರನ ಕೃಪೆಯಿಂದ ಆ ಹಗ್ಗ ಕಿತ್ತು ಕಿಟಕಿ ಕಂಬಿ ಮುರಿದು ಕೆಳಕ್ಕೆ ಧುಮುಕಿ ತಪ್ಪಿಸಿಕೊಂಡೆ . . .

ಪುಟ್ಟು—ಚೆನ್ನಾಗಿದೆ ಸ್ವಾಮಿ ತಮ್ಮ ಕಥೆ! . . .

ಗಗ್ಗಯ್ಯ—ಕಥೆಯಲ್ರೀ ಇದು . . . ನಡೆದದ್ರೀ . . . ನನ್ನ ಕೈಕಾಲು ತರಿದುಹೋಗಿವೆ, ನೋಡಿ . . . ಕೈಕಾಲು ನಡುಗುತ್ತಾ ಇದೆ ನೋಡಿ ಇನ್ನೂ . . .

ಪುಟ್ಟು [ನಂಬಿದಂತೆ ನಟಿಸಿ]—ತ್ಸು . . . ತ್ಸು . . . ತ್ಸು! ಇಂತಹ ಅಪಮಾನ ವಾಯಿತೆ . . . ತಮಗೆ . . . ನಮ್ಮೂರಲ್ಲಿ . . . ತಮ್ಮಂತಹ ಅಜಾತಶತ್ರುವಿಗೆ . . . . ಅಯ್ಯೋ, ಪಾಪ . . .

ಗಗ್ಗಯ್ಯ—ನಾನು ಆ ಹುಚ್ಚನನ್ನ ಸುಮ್ಮನೆ ಬಿಡುತ್ತೇನೇನು? ಈಗಲೇ ಸಾಹುಕಾರ್ ಮೂಗಯ್ಯನವರ ಮನೆಗೆ ಹೋಗಿ ಅಲ್ಲಿಗೇ ಪೊಲೀಸ್ ಇನ್ಸ್‌ಪೆಕ್ಟರನ್ನು ಕರೆಸಿ ಅವನನ್ನು ಹಿಡಿಸಿ ಅದೇ ಕುರ್ಚಿಗೆ ಅವನನ್ನ ಕಟ್ಟಿಸುತ್ತೇನೆ. . . . [ಹೊರಡುವನು].

ಪುಟ್ಟು [ಗಗ್ಗಯ್ಯನನ್ನು ಹಿಡಿದು ಹಿಂದಕ್ಕೆಳೆದು]—ಯಾರ ಮನೆಗೆ ಹೋಗುತ್ತೀರಿ? ಗಗ್ಗಯ್ಯನವರೇ, ಬನ್ನಿ . . . ಇಲ್ಲಿ . . . ಮೂಗಯ್ಯನವರ ಮನೆಗೇನು? ಅವರ ಪರಿಚಯವಿದೆಯೋ ತಮಗೆ?

ಗಗ್ಗಯ್ಯ—ಓಹೋ! ಪರಿಚಯವುಂಟು. [ಹಲ್ಲು ಕಿರಿಯುತ್ತಾ] ಅಲ್ಲದೆ ನಿಮ್ಮಲ್ಲಿ ಮುಚ್ಚುಮರೆ ಏಕೆ? ಹೇಳಿಬಿಡುತ್ತೇನೆ. ಗುಟ್ಟಾಗಿರಲಿ ಅಷ್ಟೆ. . . . ಗುಟ್ಟೇನು? ಅನೇಕರಿಗೆ ಆಗಲೇ ತಿಳಿದಿದೆ. ನಾನು (ಒಯ್ಯಾರದಿಂದ) ನಾನು ಅವರ ಮಗಳನ್ನು ಮದುವೆಯಾಗಲು ಒಪ್ಪಿದ್ದೇನೆ. . . . ಅದಕ್ಕಾಗಿಯೇ. . . .

ಪುಟ್ಟು [ಥಟಕ್ಕನೆ]—ಅವರ ಮಗಳನ್ನೇ?

ಗಗ್ಗಯ್ಯ—ಹೌದು, ಗೌರಿ ಅಂತ ಅವಳ ಹೆಸರು. ಒಬ್ಬಳೇ ಮಗಳು. ವರದಕ್ಷಿಣೆ . . . ವರೋಪಚಾರ . . . ಕೈತುಂಬ.

ಪುಟ್ಟು [ಗಾಬರಿಗೊಂಡು]—ಆಕೆಯನ್ನು ನೋಡಿದ್ದುಂಟೋ ನೀವು?

ಗಗ್ಗಯ್ಯ [ಹೆದರಿ]—ಇಲ್ಲ . . . ಏಕೆ?

ಪುಟ್ಟು—ಆಕೆ ವಿಷಯ ಯಾವುದೂ ನಿಮ್ಮ ಕಿವಿಯಲ್ಲಿ ಬಿದ್ದಿಲ್ಲವೋ?

ಗಗ್ಗಯ್ಯ—ಇಲ್ಲ . . . ಏಕೆ? ಹೇಳಿ, ಸ್ವಾಮಿ! ಹೇಳಿ . . . ಹೇಳಬೇಕು ನೀವು.

ಪುಟ್ಟು—ಏನೂ ಇಲ್ಲ. ನನಗೆ ಯಾಕೆ? ಮದುವೆಮಾಡಿಕೊಳ್ಳಿ, ಗಗ್ಗಯ್ಯನವರೇ, ನನ್ನ ಅಭ್ಯಂತರವೇನೂ ಇಲ್ಲ. ವರದಕ್ಷಿಣೆ ಬೇರೆ ಬರುತ್ತೆ ಅಂತೀರಲ್ಲಾ . . . ಅದಕ್ಕೋಸ್ಕರವಾದರೂ ಕೈಹಿಡಿಯಿರಿ. ಆಗಬಹುದು, ಸ್ವಾಮಿ! ಶುಭಸ್ಯ ಶೀಘ್ರಂ!

ಗಗ್ಗಯ್ಯ—ಏನೋ ಒಡಕು ನುಡಿ ನುಡಿಯುತ್ತೀರಲ್ಲಾ, ಏನು ಸ್ವಾಮಿ ಅದು? ಏನದು? ಹೇಳಿ ಸ್ವಾಮಿ, ಹೇಳಲೇ ಬೇಕು. . . .

ಪುಟ್ಟು—ಒಡಕು! ಒಡಕೂ ಇಲ್ಲ, ಕೆಡಕೂ ಇಲ್ಲ. ಮಾಡಿಕೊಳ್ಳಿ ಅಂದೆ ಅಷ್ಟೆ. [ಹೊರಡುವನು].

ಗಗ್ಗಯ್ಯ [ಅನುಸರಿಸಿ ಹಿಡಿದೆಳೆಯುತ್ತಾ]—ನೋಡಿ, ಸ್ವಾಮಿ! ಈ ಊರಲ್ಲಿ ನೀವೊಬ್ಬರೇ ನನಗೆ ಸ್ನೇಹಿತರು, ಉಳಿದವರೆಲ್ಲರೂ ಹುಚ್ಚರು! ಹೇಳಿ, ಅಪ್ಪಾ . . . ಹೇಳಿ . . . ಹೇಳಿ ಸ್ವಾಮಿ! ನನ್ನ ಮಾನ ಉಳಿಸಿ [ಕೈಹಿಡಿದು] ನೀವು ಹೇಳದೇ ಇದ್ದರೆ ನಾನು ಬಿಡುವುದಿಲ್ಲ.

ಪುಟ್ಟು [ಕೈಯನ್ನು ಕೊಡವುತ್ತಾ]—ಒಳ್ಳೇ ಧರ್ಮಸಂಕಟಕ್ಕಿಟ್ಟುಕೊಂಡಿತಲ್ಲಾ; ಇತ್ತ ಹುಲಿ, ಅತ್ತ ಗೌರಿ! ಥೂ! ನಾನು ಈ ಮಾತನ್ನೆತ್ತಲೇ ಬಾರದಾಗಿತ್ತು . . . ತಾಳಿ, ಸ್ವಾಮಿ, ನನ್ನ ಅಂತರಾತ್ಮನೊಂದಿಗೆ ಚರ್ಚೆಮಾಡಿ ಒಂದು ಇತ್ಯರ್ಥಕ್ಕೆ ಬರುತ್ತೇನೆ. [ಗಗ್ಗಯ್ಯನಿಗೆ ಕೇಳಿಸುವಂತೆ ಆತ್ಮಗತಂ] ಈಗ ಯಾವುದು ಧರ್ಮ? ಯಾವುದು ಸಂಕಟ? . . . ಮೂಗಯ್ಯನವರು ನಮ್ಮೂರಿನವರು, ಮುದುಕರು, ನಿಷ್ಠುರು, ಪಾಪ! ಸಂದುಗೊಂದಲ್ಲೆಲ್ಲಾ ಗಂಡು ಹುಡುಕಿ ಹುಡುಕಿ, ಕೈಗೆ ಬಂದದ್ದು ಬಾಯಿಗಿಲ್ಲಾ ಅಂತ ಸಿಕ್ಕಿದವರೆಲ್ಲರೂ ತಪ್ಪಿಸಿಕೊಂಡು ಹೋದರು. ಕಡೆಗೆ ಈಗ ಇವರು ಬೋನೊಳಗೆ ಬಿದ್ದಿದ್ದಾರೆ. ಇವರಿಗೂ ನಿಜಾಂಶ ಗೊತ್ತಾಗಿ ಹೋದರೆ, ಮೂಗಯ್ಯನ ಮಗಳ ಮದುವೆ ಮುಂದಿನ ಜನ್ಮದಲ್ಲೇ! ಸಾವಿರ ಸುಳ್ಳು ಹೇಳಿ ಒಂದು ಸಂಸಾರ ಸ್ಥಾಪಿಸು ಅಂತ ಶಾಸ್ತ್ರ . . . ಮಾಡಿದವರ ಪಾಪ ಆಡಿದವರ ಪುಣ್ಯ ಅಂತ ಗಾದೆ. ಚಾಡಿ ಎಂಬುದು ಪಂಚಮಹಾಪಾತಕದಲ್ಲೊಂದು. [ಧೈರ್ಯ ತಾಳುತ್ತಾ] ಆದರೆ ಇದರಲ್ಲಿ ಚಾಡಿ ಏನಿದೆ ಮಹಾ? ಎಲ್ಲರ ಬಾಯಲ್ಲೂ ಇದೆ, ಗೌರೀಪುರಾಣ. [ಎದೆಗುಂದಿ] ಆದರೂ ನನ್ನಿಂದೇಕೆ

ಈ ಹಾಳು ಸುದ್ದಿ ಹರಡಬೇಕು, ನಾನೇನು ಬಾತ್ಮೀದಾರನೇ? [ಮತ್ತೆ ಧೈರ್ಯತಾಳಿ] ಛೆ, ಪಾಪ ಎಂತಹ ದಡ್ಡಮನುಷ್ಯರಿವರು! . . . ಕುದುರೆಗೊಂದಿ ಲಾಯರು, ಬಿ.ಎ., ಎಲ್‌ಎಲ್.ಬಿ., . . . ವಿದ್ಯಾವಿಹೀನ ಸಂಪನ್ನರು! ನನ್ನನ್ನ ಸ್ನೇಹಿತ ಅಂದಿದಾರೆ. ಇತರರೆಲ್ಲರನ್ನೂ ಹುಚ್ಚರು ಅಂದಿದಾರೆ. ಇಂತಹ ಮೇಧಾವಿಯ ಮಾನ ಹೋಗುವುದನ್ನು ತಿಳಿದೂ ತಿಳಿದೂ ನಾನು ಸುಮ್ಮನಿರುವುದು ಸರಿಯೇ? . . . ಅಂತರಾತ್ಮಾ, ಏನು ಹೇಳುವೆ? [ಕೊಂಚ ಹೊತ್ತು ಕಾದು, ಥಟಕ್ಕನೆ ಗಗ್ಗಯ್ಯನ ಹತ್ತಿರ ಬಂದು] ಸ್ವಾಮಿ, ನನ್ನನ್ನ ಕುಂಭೀಪಾಕಕ್ಕೆ ಕೆಡವಿದರೂ ಕೆಡವಲಿ, ನಾನಂತೂ ನುಡಿದೇ ಬಿಡುತ್ತೇನೆ. ಮೂಗಯ್ಯನವರ ಮಗಳಿಗೆ . . . ಹತ್ತಿರ ಬನ್ನಿ . . . ಅವಳಿಗೆ . . . [ತಲೆ ಬುರುಡೆಯನ್ನು ಮುಟ್ಟಿ, ಮೆದುಳಿಲ್ಲ, ಹುಚ್ಚು ಎಂದು ಸೂಚಿಸುತ್ತಾನೆ.]

ಗಗ್ಗಯ್ಯ—ಹಾ . . . ಏನು? . . . ಅವಳಿಗೆ [ತನ್ನ ಬುರುಡೆಯನ್ನು ಮುಟ್ಟಿ ಕೊಂಡು, ಮೆದುಳಿಲ್ಲವೇ? ಹುಚ್ಚೇ? ಎಂಬ ಪ್ರಶ್ನೆಯನ್ನು ಸೂಚಿಸುತ್ತಾನೆ.]

ಪುಟ್ಟು—ಹುಂ . . . (ಹಿಂದಿನ ಸನ್ನೆಯನ್ನು ಮಾಡುತ್ತಾ) ಅನುಮಾನವೇ ಇಲ್ಲ. ಊರಿನವರೆಲ್ಲರಿಗೂ ಗೊತ್ತು. ಒಬ್ಬರೂ ಹೇಳುವುದಿಲ್ಲ, ಅಷ್ಟೆ.

ಗಗ್ಗಯ್ಯ [ನಿರಾಶಾಪೀಡಿತನಾಗಿ]—ಹಾಳಾಗಿ ಹೋಯಿತು. [ದೂರ ಸರಿದು ಕೊಂಚ ಯೋಚಿಸಿ] ಆದರೆ . . . ವರದಕ್ಷಿಣೆ ಜಾಸ್ತಿ ಸಿಗುತ್ತದೆ. [ಹತ್ತಿರ ಬಂದು] ರೀ . . . [ಹಿಂದಿನ ಸನ್ನೆಯನ್ನು ಮಾಡುತ್ತಾ] ಎಷ್ಟು? ಎಷ್ಟರಮಟ್ಟಿಗೆ?

ಪುಟ್ಟು—ಸಂಪೂರ್ಣ, ಸ್ವಾಮಿ! ಆಪಾದಚೂಡಂ. ಎಲ್ಲರೂ ಕೈಬಿಟ್ಟುಬಿಟ್ಟಿ ದಾರೆ. ಒಂದು ಲಕ್ಷ ರೂಪಾಯಿ ವರದಕ್ಷಿಣೆ ಅಂದರೂ ಒಂದು ಗಂಡನು ಹಿಳ್ಳೆ ಕೂಡ ಕೈನೀಡುವುದಿಲ್ಲ. . . . ಅಲ್ಲ, ಗಗ್ಗಯ್ಯನವರೇ! ಈ ಊರಲ್ಲಿ ನನ್ನಂತಹ ಧಾಂಡಿಗರಿಗೆ ಏನು ಕಡಿಮೆ? ಧಂಡಿಯಾಗಿದೇವೆ. ಆದರೂ ನೋಡಿ, ಎಲ್ಲೋ ಕುದುರೆಗೊಂದಿಯಿಂದ ತಮ್ಮನ್ನ ಕರೆಸಿದಾರಲ್ಲಾ ಈ ಮೂಗಯ್ಯನವರು. . . .

ಗಗ್ಗಯ್ಯ [ಬೆಳಕು ಕಂಡು]—ಹೌದಪ್ಪಾ, ಹೌದು; ಅಯ್ಯೋ, ನನ್ನ ಹಾಳು ಬುದ್ಧಿಗೆ ಇದು ತೋಚಲೇ ಇಲ್ಲವಲ್ಲಾ . . . ಹಾ! ನನಗೆ ಮೋಸಮಾಡಿ . . . ಹೀಗೆ. . . .

ಪುಟ್ಟು—ಅದನ್ನೆಲ್ಲಾ ನನ್ನೆದುರು ಹೇಳಬೇಡಿ. ಗಂಟೆ ಆಗಲೇ ಒಂಭತ್ತೂ ಕಾಲು, ನಾನು ಮನೆಗೆ ಹೊರಡುತ್ತೇನೆ. [ಹೊರಡುವನು.]

ಗಗ್ಗಯ್ಯ—ಅಯ್ಯೋ, ಇನ್ನೂ ಸ್ವಲ್ಪ ಇರಿ ಅಂದರೆ, ನಿಮ್ಮನ್ನ ಕೇಳ ಬೇಕಾಗಿತ್ತು. ಅಯ್ಯೋ, ಹೊರಟೇ ಹೋದರಲ್ಲಾ! ಮಹೀಪುರವೆಂದರೆ ಏನೋ

ಅಂತಿದ್ದೆ. ಸಾಕಪ್ಪಾ, ಸಾಕು, ಈ ಜನರ ಸಹವಾಸ. ಈ ಹಾಳೂರಿನಲ್ಲಿ ಎಲ್ಲರಿಗೂ ಹುಚ್ಚು . . . ಕುದುರೆಗೊಂದಿಗೆ ಮುಂದಿನ ರೆಯಿಲು ಯಾವಾಗಲೋ ಕಾಣೆ ನಲ್ಲಾ. [ಹೊರಡುವನು.]

[ಮೂಗಯ್ಯನವರು ಬರುವರು]

ಮೂಗಯ್ಯ—ಯಾರದು? ಗಗ್ಗಯ್ಯನವರೋ? [ಗಗ್ಗಯ್ಯ ಹಿಂತಿರುಗಿ ಬರುವನು]. ನಿಮ್ಮೊಡನೆ ಎರಡು ಮಾತಾಡಬೇಕಾಗಿತ್ತು. . . .

ಗಗ್ಗಯ್ಯ [ರೇಗಿ]—ನಿಮ್ಮ ಹತ್ತಿರ ಒಂದೇ ಒಂದು ಮಾತು ನನ್ನದೂ ಇದೆ. . . . ಅಲ್ಲ, ಮೂಗಯ್ಯನವರೇ, ಕುದುರೆಗೊಂದಿಯವರೆಲ್ಲರೂ ಕತ್ತೆಗಳು ಅಂತ ತಿಳಿದಿದ್ದ ರೇನು? ನಮಗೂ ಕೊಂಚ ಬುದ್ಧಿಯಿದೆ.

ಮೂಗಯ್ಯ [ರೇಗಿ]—ಓಹೋ . . . ಮಹೀಪುರದವರೆಲ್ಲರೂ ಮಂಕರು ಅಂತ ತಿಳಿದಿದ್ದರೋ ಏನೋ, ನಮಗೂ ಕೊಂಚ ಮೆದುಳಿದೆ.

ಗಗ್ಗಯ್ಯ—ನಿಮ್ಮ ಮಗಳ ಕೊರಳಿಗೆ ಎಂದೆಂದಿಗೂ ನಾನು ಮಾಂಗಲ್ಯ ಕಟ್ಟುವುದಿಲ್ಲ. ಜ್ಞಾಪಕವಿರಲಿ.

ಮೂಗಯ್ಯ—ರಾಗಿ ಬೀಸಿಕೊಂಡು ಬಿದ್ದಿರಬೇಕಾದ ಪಾಪರಿಗೆ ನನ್ನ ಮಗ ಳನ್ನು ನಾನು ಎಂದೆಂದಿಗೂ ಕೊಡುವುದಿಲ್ಲ, ತಿಳಿದಿರಲಿ.

ಗಗ್ಗಯ್ಯ—ಅರವತ್ತಕ್ಕೆ ಅರುಳು ಮರುಳು ಅಂತಾರೆ, ಈ ಪಿತೂರಿ ಮಾಡೋ ದಕ್ಕೆ ನಿಮಗೆಲ್ಲಿಂದ ಬಂತು ಬುದ್ಧಿ ?

ಮೂಗಯ್ಯ [ಕೋಪಾವೇಶದಿಂದ]—ಏನಂದೆ? [ದೊಣ್ಣೆ ಬೀಸಿಕೊಂಡು ಗಗ್ಗಯ್ಯನ ಕಡೆಗೆ ನುಗ್ಗುವನು].

[ಪ್ರವೇಶ: ಗೌರಿ]

ಗೌರಿ—ಅಪ್ಪಾ! ಅವರು ಊರಿಗೆ ಬಂದಿದಾರಂತೆ . . . ರೆಯಿಲಿನಲ್ಲಿ ಬಂದಿಳಿದರಂತೆ. [ಗಗ್ಗಯ್ಯನನ್ನು ಗುರುತಿಸಿ ನಾಚಿಕೆಯಿಂದ ತಲೆತಗ್ಗಿಸಿ ನಡುರಸ್ತೆಯಲ್ಲೇ ನಮಸ್ಕಾರ ಮಾಡುವಳು].

ಮೂಗಯ್ಯ [ಚೀರಗಾಗಿ]—ತೊಲಗೇ, ಹುಚ್ಚೀ! ಯಾಕೆ ಬಂದೆ ಇಲ್ಲಿಗೆ? ಈ ನೀಚನನ್ನ ನೀನು ಕಣ್ಣೆತ್ತಿ ಕೂಡ ನೋಡಬಾರದು. . . [ತಳ್ಳುತ್ತಾ] ಹೋಗು, ಹೋಗು.

ಗಗ್ಗಯ್ಯ [ಕನಲಿ]—ಯಾರ್ರೀ, ನೀಚ? ನಾನೋ ನೀವೋ? ಸಾಧು ಸಜ್ಜ ರನ್ನು ಕರೆಸಿ, ಹಣದಾಸೆ ತೋರಿಸಿ, ಹುಚ್ಚಿಮಗಳನ್ನು ಕೊರಳಿಗೆ ಕಟ್ಟಬೇಕು ಅಂತಿರುವ ನೀವೇ ನೀಚ.

ಮೂಗಯ್ಯ [ಕೆಂಡವಾಗಿ]—ಮುಚ್ಚೋ ಬಾಯಿ, ನಿನಗಲ್ಲವೇನೋ ಹುಚ್ಚು ?

ಗಗ್ಗಯ್ಯ—ನನಗೆ ಹುಚ್ಚು ಅಂತ ಯಾರು ಹೇಳಿದ್ದು ?

ಮೂಗಯ್ಯ—ನಿನ್ನ ಡಾಕ್ಟರೇ ಹೇಳಿದ . . . ನಮ್ಮೂರು ದಂಡಯ್ಯನವರೇ ಹೇಳಿದರು.

ಗಗ್ಗಯ್ಯ—ನಿಮ್ಮ ಮಗಳಿಗೆ ಹುಚ್ಚು ಅಂತ ಊರಿಗೆಲ್ಲಾ ಗೊತ್ತು . . . ನೀವೇ ಹೇಳಿದಿರಿ ಈಗ. . . .

[ಹೊಡೆದಾಟ ; ಅದರ ನಡುವೆ ಹೆಂಗಸಿನ ವೇಷ ಧರಿಸಿರುವ ಪುಟ್ಟು ಪ್ರವೇಶ]

ಪುಟ್ಟು [ಗಗ್ಗಯ್ಯನ ಕೈ ಹಿಡಿದೆಳೆಯುತ್ತಾ]—ಬನ್ನಿ ಅಂದರೆ, ಓಹೋ ! ನನ್ನನ್ನು ಬಿಟ್ಟು ಎಲ್ಲಿಗೆ ಓಡಿಹೋದಿರಿ ? [ಅಳುತ್ತಾ] ಪ್ರಾಣಕಾಂತಾ !

ಗಗ್ಗಯ್ಯ [ದಿಗ್ಭ್ರಾಂತನಾಗಿ]—ಇದೇನು ಬಂತಪ್ಪಾ ಗ್ರಹಚಾರ ! [ಕೊಡವುತ್ತಾ, ತಳ್ಳುತ್ತಾ] ಯಾರಮ್ಮಾ, ನೀನು ? ತೊಲಗಿಲ್ಲಿಂದ. . . .

ಪುಟ್ಟು [ರಂಗದ ಪಕ್ಕದಲ್ಲಿ ಬೆರಗಾಗಿ ನಿಂತಿದ್ದ ಮೂಗಯ್ಯನವರ ಹತ್ತಿರಕ್ಕೆ ಅಳುತ್ತಾ ಬಂದು]—ಅಯ್ಯೋ ! ಇಷ್ಟುದ್ದ ಹಗ್ಗವನ್ನಾದರೂ ಕೊಡಿ ನನಗೆ, ಈ ಮೋಸ ವನ್ನು ಸಹಿಸಲಾರೆ. [ಗಗ್ಗಯ್ಯನ ಹತ್ತಿರ ಓಡಿಹೋಗಿ] ನಿಮ್ಮ ಕತ್ತಿಗೇ ನೇಣು ಹಾಕಿಕೊಳ್ಳುತ್ತೇನೆ. ಅಯ್ಯೋ, ಹೀಗೆ ಮಾಡಬಹುದೇ? ಹೆಂಗಸನ್ನು ಸಾಕಲಾರದ ಗಂಡನು ಅಂತ ಅನ್ನಿಸಿಕೊಳ್ಳಬೇಕೇ? ನಾಚಿಕೆಯಾಗುವುದಿಲ್ಲವೇ? ನಾಥಾ? . . .

ಮೂಗಯ್ಯ [ಅವಳ ಪಕ್ಷ ವಹಿಸಿ]—ಏ . . . ಗಗ್ಗಯ್ಯ, ಈಕೆ ಹೇಳುವುದು ನಿಜವೇ ?

ಗಗ್ಗಯ್ಯ [ಹೆದರಿ ನಡುಗುತ್ತಾ]—ಶುದ್ಧ ಸುಳ್ಳು. ಈಕೆಯನ್ನು ನಾನು ಇದು ವರೆಗೂ ಕಂಡಿಲ್ಲ, ಕೇಳಿಲ್ಲ.

ಪುಟ್ಟು [ಎದೆ ಕರಗಿಹೋಗುವಂತೆ]—ಹಾ, ಪ್ರಿಯಾ, ಪ್ರಶಾಂತ ಹೃದಯಾ, ಆ ಇಬ್ಬರು ಮಕ್ಕಳನ್ನು ನೆನೆದಾದರೂ ನೀವು ಮತ್ತೆ ಮನೆಗೆ ಬರಬಾರದೇ ?

ಮೂಗಯ್ಯ [ಪುಟ್ಟು ಕಡೆ ತಿರುಗಿ]—ತಾಯಿ, ನೀನು ಯಾವ ಊರಿಂದ ಇಲ್ಲಿಗೆ ಬಂದೆ ಈಗ ?

ಪುಟ್ಟು [ಅಳುತ್ತಾ]—ಸ್ವಾಮಿ, ನಮಗೆ ಮದುವೆಯಾಗಿ ಮೂರು ವರ್ಷ ವಾಯಿತು. ಹುಬ್ಬಳ್ಳಿಯಲ್ಲಿ ಒಂದು ಮನೆ ಮಾಡಿ ನನ್ನನ್ನು ಅಲ್ಲಿ ಇರಿಸಿ, ಕೆಲಸದ ಮೇಲೆ ಊರೂರು ತಿರುಗಬೇಕೆಂದು ನನಗೆ ಸುಳ್ಳು ಹೇಳಿ ಮೋಸಮಾಡಿ . . . ಹಾ ! ಆರ್ಯಪುತ್ರಾ . . . [ಕೈ ಹಿಡಿಯುವನು].

ಗಗ್ಗಯ್ಯ—ಅಯ್ಯೋ! ನಾನು ಈ ಊರಿಗೆ ಬರಲೇಬಾರದಾಗಿತ್ತು! ಕುದುರೆ ಗೊಂದಿಗೆ ಮುಂದಿನ ರೈಲು ಯಾವಾಗ? [ಹೊರಡುವನು].

[ಪುಟ್ಟು ಹಾಗೆಯೇ ಕಿಟ್ಟುವೂ ಹೆಂಗಸಿನ ವೇಷ ಧರಿಸಿ ಪ್ರವೇಶಿಸುವನು]

ಕಿಟ್ಟು—ಹಾ! ಮನೋವಲ್ಲಭಾ! ಕಡೆಗೂ ಸಿಕ್ಕಿದೆಯಾ! [ಕೈ ಹಿಡಿದೆಳೆಯು ವನು. ಪುಟ್ಟು ಮತ್ತೊಂದು ಕೈಯನ್ನು ಹಿಡಿದೆಳೆಯುವನು]. ನನ್ನನ್ನು ಬಿಟ್ಟು ಹೀಗೆ ದೇಶಾಂತರ ಹೊರಡಬಹುದೇ?

ಗಗ್ಗಯ್ಯ [ಗಾಬರಿಗೊಂಡು]—ಇದು ಯಾವುದಪ್ಪಾ ಇನ್ನೊಂದು ಭೂತ! ಏ . . . ಏ! ಕೈ ಬಿಡು. . . . [ಕೊಡವುತ್ತಾ]

ಪುಟ್ಟು [ಕಿಟ್ಟುವನ್ನು ನೂಕುತ್ತಾ]—ಹೋಗೆ! ನನ್ನ ಯಜಮಾನರ ಕೈ ಹಿಡಿಯುವುದಕ್ಕೆ ನಿನಗೆಲ್ಲಿಂದ ಬಂತೆ ಸೊಕ್ಕು?

ಕಿಟ್ಟು [ಪುಟ್ಟುವನ್ನು ನೂಕುತ್ತಾ] ಮೊದಲು ನೀನು ಬಿಡು ನನ್ನ ಗಂಡನ ಕೈಯನ್ನ . . . ಬಿಡದೆಹೋದರೆ ನಿನ್ನ ಕಣ್ಣು ಕಿತ್ತುಬಿಡುತ್ತೇನೆ, ನಿನ್ನ ಕೈ ಕಡಿದುಹಾಕುತ್ತೇನೆ. . . . ಕೀಚಕೀ. . . .

ಮೂಗಯ್ಯ [ಕಿಟ್ಟುವನ್ನು ಸಂಬೋಧಿಸಿ]—ತಾಯಿ! ಈ ತಾಟಕಾಸುರ ನಿನಗೂ ಮೋಸ ಮಾಡಿದನೇ. . ...

ಪುಟ್ಟು [ರೇಗಿ]—ನೀನು ಯಾರಯ್ಯಾ, ಮುದುಕಯ್ಯ? ನನ್ನ ಗಂಡನನ್ನ ಅಸುರಗಿಸುರ ಅಂತ ಅನ್ನುವುದಕ್ಕೆ? ಅಸುರರೆಲ್ಲ ಗೊತ್ತೋ ನಿನಗೆ? ಪಾತಾಳದ ಪಾಳಯಗಾರನೋ ನೀನು?

ಮೂಗಯ್ಯ—ಎಗರಾಡಬೇಡಮ್ಮ . . . . [ಕಿಟ್ಟು ಕಡೆ ತಿರುಗಿ] ನೀವೆಲ್ಲಿಂದ ಬಂದಿರಿ, ತಾಯಿ, ಈತನನ್ನ ಹುಡುಕಿಕೊಂಡು? . . .

ಕಿಟ್ಟು—ನಾನೂ ನಮ್ಮ ಮಕ್ಕಳಿಬ್ಬರೂ ಗುಂತಕಲ್ಲಿನಲ್ಲಿದ್ದೇವೆ.

ಮೂಗಯ್ಯ—ಅಯ್ಯೋ! ಧೂರ್ತಾ! ಒಂದೊಂದು ಜಂಕ್ಷನ್‌ನಲ್ಲೂ ಒಂದೊಂದು ಸಂಸಾರ! ಈಗ ನನ್ನನ್ನ ಮೋಸಮಾಡುವುದಕ್ಕೆ ಇಲ್ಲಿಗೆ ಬಂದಿದೀಯಾ, ಹುಚ್ಚಾ!

ಕಿಟ್ಟು—ಯಾರ್ರೀ ಅದು ನಮ್ಮ ಯಜಮಾನರನ್ನು ಹುಚ್ಚ ಅನ್ನುವುದು?

ಪುಟ್ಟು [ಕಿಟ್ಟುವನ್ನು ಹೊಡೆಯುವನು]—ಹೋಗೆ! ನನ್ನ ಯಜಮಾನರನ್ನು ಹುಚ್ಚ ಅಂತ ಬೈದರೆ ನಿನಗೇಕೆ ಕೋಪ? ನೀನು ಯಾವಳು?

ಗಗ್ಗಯ್ಯ—ಕುದುರೆಗೊಂದಿಗೆ ಮುಂದಿನ ರೈಲು ಯಾವಾಗ? ಗೊತ್ತಾಗ ಲಿಲ್ಲವಲ್ಲ, ದೇವರೇ! ಈ ಹಾಳೂರಲ್ಲಿ ಎಲ್ಲರಿಗೂ ಹುಚ್ಚು, ಅಯ್ಯೋ!



ಮೂಗಯ್ಯ—ಅಯ್ಯೋ ! ಧೂರ್ತಾ ! ಒಂದೊಂದು ಜಂಕ್ಷನ್‌ನಲ್ಲೂ ಒಂದೊಂದು ಸಂಸಾರ !

(ಪುಟ ೫೮)

[ಓಡುವನು. ಬಲಗೈಯನ್ನು ಕಿಟ್ಟು ಎಳೆಯುವನು. ಎಡಗೈಯನ್ನು ಪುಟ್ಟು ಎಳೆಯುವನು. ಮೂಗಯ್ಯ ಹಿಂದೆ ಶಪಿಸುತ್ತಾ ಬೆದರಿಸುವನು. ಅಂತು ಹೇಗೋ ರಂಗಸ್ಥಳದಿಂದ ಎಲ್ಲರೂ ಹೊರಡುವರು.]

[ತೆರೆ]

ದೃಶ್ಯ ೪

ಅಜೆ ಬೀದಿ; ಅದೇ ರಾತ್ರಿ ೯-೩೦ ಗಂಟೆ

[ಗಗ್ಗಯ್ಯ ಪ್ರಲಾಪಿಸುತ್ತಿರುವನು]

ಗಗ್ಗಯ್ಯ—ಅಯ್ಯೋ! ಈ ಅಪಶಕುನದ ಊರಿಗೆ ಎಂತಹ ವಿಷಗಳಿಗೆಯಲ್ಲಿ ಹೊರಟೆನೋ ಗೊತ್ತಾಗಲಿಲ್ಲವಲ್ಲಾ. ಈ ಊರಲ್ಲಿ ಒಬ್ಬರಿಗೂ ಬುದ್ಧಿ ಸೆಟ್ಟಗಿಲ್ಲ. ಒಬ್ಬರ ಬುದ್ಧಿಯೂ ಸ್ತಿಮಿತವಿಲ್ಲ. . . . ಆ! ಬನ್ನಿ . . . [ಪುಟ್ಟು ಪ್ರವೇಶ . . . ಅವನು ಉಟ್ಟಿದ್ದ ಸೀರೆ ಈಗ ಅವನ ಕೈಯಲ್ಲೇ ಇದೆ. . . .] ಬನ್ನಿ . . . ಸ್ವಾಮಿ! ನೀವು ಸಿಕ್ಕಿದ್ದು ಮುಳುಗಿಹೋಗುತ್ತಿದ್ದವನಿಗೆ ಮುರುಕಲು ದೋಣಿಯಾದರೂ ಸಿಕ್ಕಿದಂತೆ . . . ನೋಡಿ! ನೀವೊಬ್ಬರು ಈ ಊರಲ್ಲಿ ಹುಷಾರಾಗಿದೀರಿ. . . . ಆದ್ದರಿಂದ ನಿಮಗೆ ಹೇಳುತ್ತೇನೆ ಕೇಳಿ . . . ಆ ದೊಡ್ಡ ಹುಚ್ಚ . . . ನನ್ನನ್ನ ಕಟ್ಟಿ ಹಾಕಿದ್ದನಲ್ಲಾ. ಅವನ ಕೊಠಡಿಯಲ್ಲೇ ನಾನು . . . ಸುಖವಾಗಿ ತೆಪ್ಪಗೆ ಕುಳಿತಿರಬೇಕಾಗಿತ್ತು. ಹೊರಗೆ ಬಂದದ್ದೇ ಬೆಪ್ಪಾಯಿತು!

ಪುಟ್ಟು—ಒಪ್ಪಿದೆ, ನಿಮ್ಮ ಮಾತು . . . . ನೀವೇನೂ ಹೇಳಬೇಕಾಗಿಲ್ಲ! ಊರಿಗೆಲ್ಲ ಗೊತ್ತಾಗಿದೆ . . . ಅಲ್ರಿ! ಆಗಲೇ ಇಬ್ಬರು, ಈಗ ಮೂರನೆಯವರಿಗಾಗಿ ಹೊಂಚುಹಾಕುತ್ತಾ ಈ ಊರಿಗೆ ಬಂದಿದೀರಲ್ಲಾ, ನಾಚಿಕೆಯಾಗುವುದಿಲ್ಲವೇನ್ರಿ? . . . ಹೋಗ್ರಿ, ಹೋಗ್ರಿ! ದೊಡ್ಡ ಮನುಷ್ಯರಂತೆ, ದೊಡ್ಡ ಮನುಷ್ಯರು! . . . ಶುದ್ಧ ಜಗಭಂಡ!

ಗಗ್ಗಯ್ಯ—ಅಯ್ಯೋ! ದೇವರೇ! [ಅಂಗಲಾಚಿ] ನೀವೂ ಇದನ್ನೆಲ್ಲಾ ನಂಬುತ್ತೀರಾ? ಸುಳ್ಳು ಕಾಣ್ರಿ ಅದು . . . ಮಹಾಸುಳ್ಳು! ಆ ಇಬ್ಬರು ಹೆಂಗಸರೂ ನನ್ನನ್ನ ಇನ್ನು ಯಾರೋ ಅಂತ ಮೋಸಹೋಗಿರಬೇಕು . . . ನನಗಿನ್ನೂ ಮದುವೆಯಾಗಿಲ್ಲ ಕಾಣ್ರಿ . . . ಇನ್ನು ಮುಂದೆ ನನಗೆ ಮದುವೆ ಬೇಡಲೇ ಬೇಡ . . . ಏಕೆಂದರೆ. . . .

ಪುಟ್ಟು [ನಸುನಗುತ್ತಾ]—ಆ ಮಾತೇನೋ ನಿಜ! ಹೇಗೆ ಅಂತೀರೋ? ಇಬ್ಬರು ಹೆಂಡಿರನ್ನು ಮದುವೆ ಮಾಡಿಕೊಂಡವರಿಗೆ ಮಹೀಪುರದಲ್ಲಿ ಯಾವ ಶಿಕ್ಷೆ ವಿಧಿಸುತ್ತಾರೆ ಅಂತ ನಿಮಗೆ ವೇದ್ಯವಾಗಿಲ್ಲವೋ ಏನೋ? . . . ಗಲ್ಲು!

ಗಗ್ಗಯ್ಯ [ಸಿಡಿಲು ಬಡಿದವನಂತೆ]—ಹಾ! ಶುದ್ಧ ಅನ್ಯಾಯ. . . .

ಪುಟ್ಟು—ಅನ್ಯಾಯಗಿನ್ಯಾಯ ನಾವು ನೋಡುವುದಿಲ್ಲ.

ಗಗ್ಗಯ್ಯ—ನನ್ನ ಎಲ್‌ಎಲ್.ಬಿ. ಯಲ್ಲಿ ಎಲ್ಲೂ ಅಂತಹ ಕಾನೂನಿಲ್ಲ. . . .

ಪುಟ್ಟು—ಇದು ಮಹೀಪುರ . . . ಇಬ್ಬರ ಹೆಂಡತಿ ಗಂಡ ಅಂದರೆ ತೀರಿತು ಈ ಊರಲ್ಲಿ ಬೇರೆ ಮಾತೇ ಇಲ್ಲ . . . ಗಲ್ಲು . . . ಗಲ್ಲು . . . ಗಲ್ಲು . . . ಹೋದ ವಾರ ಹೀಗೆ ಏರಿಸೇಬಿಟ್ಟರು ಜನ ಒಬ್ಬನನ್ನ . . . ಓಹೋ! ಆತನದೂ ಕುದುರೆ, ಗಿದಿರೆ, ಅಂತ ಯಾವುದೋ ಊರು. ನಿಮ್ಮ ನಂಟನೋ. . . .

ಗಗ್ಗಯ್ಯ—ಸ್ವಾಮಿ! ಕುದುರೆಗೊಂದಿಗೆ ಮುಂದಿನ ರೈಲು ಯಾವಾಗ?

ಪುಟ್ಟು—ಹತ್ತು ಗಂಟೆಗೆ ಒಂದು ರೈಲು ಹೊರಡುತ್ತದೆ. . . . ಆದರೆ ನೀವು ಜೀವಸಹಿತ ರೈಲು ಸ್ಟೇಷನ್ ತಲಪುವುದು ಹೇಗೆ ಅಂತ. . . . ಅಯ್ಯೋ! ಅಯ್ಯೋ! ದಾರಿಯುದ್ದಕ್ಕೂ ದೊಂಬಿ ಸೇರಿದೆ. . . . ಆ ಇಬ್ಬರು ಹೆಂಗಸರೂ ರಸ್ತೆ ಪಕ್ಕದಲ್ಲೇ ಮಕ್ಕಳನ್ನೂ ಕೂರಿಸಿಕೊಂಡು ಗೋಳಾಡು ತ್ತಿದಾರೆ. . . .

ಗಗ್ಗಯ್ಯ—ಅವರಿಬ್ಬರನ್ನೂ ನಾನಿಂದಿನವರೆಗೂ ಕಂಡಿದ್ದೇ ಇಲ್ಲ. . . .

ಪುಟ್ಟು—ಹ . . . ಹ್ಹ . . . ಹ್ಹ! ಗಗ್ಗಯ್ಯನವರೇ! ನನ್ನ ಹತ್ತಿರ ತೆಗೆಯು ತ್ತೀರಾ ನಿಮ್ಮ ವರಸೇನ . . . ನಿಮ್ಮ ಮಾತನ್ನ ಈ ಊರಲ್ಲಿ ಒಬ್ಬರೂ ನಂಬು ವುದಿಲ್ಲ. . . .

ಗಗ್ಗಯ್ಯ—ರೈಲು ಸ್ಟೇಷನಿಗೆ ನಾನು ಹೇಗೆ ಹೋಗುವುದು . . . ಹೇಗಾ ದರೂ ಮಾಡಿ. . . .

ಪುಟ್ಟು—ಓ! ಇದೀಗ ಸೋಜಿಗ! ನನ್ನ ಕೈಯಲ್ಲಿ . . . ಹೇಗೋ . . . ಒಂದು ಸೀರೆ ಇದೆ . . . ಈಗ. ಇದನ್ನು ಉಟ್ಟು ತಲೆಯ ಮೇಲೆ ಸೇರಗನ್ನೆಳೆದು ಮುಖ ಮುಚ್ಚಿಕೊಂಡು ಬೇಗಬೇಗ ನಡೆದರೆ ನಿಮ್ಮ ಪ್ರಾಣ ಉಳಿದರೂ ಉಳಿಯ ಬಹುದು . . . ಇನ್ನೇನು ರೈಲು ಹತ್ತು ಗಂಟೆಗೆ ಹೊರಟೇ ಬಿಡುತ್ತದೆ . . . ಇಪ್ಪತ್ತು ನಿಮಿಷಕೂಡ ಇಲ್ಲ. . . .

ಗಗ್ಗಯ್ಯ—ಕೊಡ್ರಿ . . . ಬೇಗ ಕೊಡ್ರಿ. (ತೆಗೆದುಕೊಂಡು) ಸ್ವಾಮಿ! ಇದನ್ನ ಹೇಗ್ರಿ ಮೈಗೆ ಸುತ್ತಿಕೊಳ್ಳುವುದು? . . . . ಅಸಹ್ಯ!

ಪುಟ್ಟು—ಏನು! ಗಗ್ಗಯ್ಯನವರೇ! ಅಸಹ್ಯಮನುಭೋಕ್ತವ್ಯಂ! ನೀವು ಯಾವಾಗಲೂ ನಾಟಕದಲ್ಲಿ ಹೆಣ್ಣುಪಾರ್ಟು ಮಾಡಿಲ್ಲವೋ? . . . [ಉಡಿಸುತ್ತಾ]

ಗಗ್ಗಯ್ಯ—ಇಲ್ರಿ! ಹಾಸ್ಯಮಾಡಬೇಡ್ರಪ್ಪ!

ಪುಟ್ಟು—[ಉಡಿಸುತ್ತಾ] ಆಯಿತು! ಈಗ ನಿಮ್ಮ ಹುಬ್ಬಳ್ಳಿ ಹೆಂಡತಿಗೂ ಗೊತ್ತಾಗುವುದಿಲ್ಲ; ಆ ಗುಂತಕಲ್ಲು ಹೆಂಡತಿಗೂ ಗೊತ್ತಾಗುವುದಿಲ್ಲ . . . ಪಾಪ . . . ಜನ ಪೂರ ಕಿಡಿಕಿಡಿಯಾಗಿದಾರೆ . . . ಜೀವಸಹಿತ ಊರು ಸೇರಿ . . . ರೆಯಿಲಿಗೆ ಇನ್ನೂ ಕೊಂಚ ಸಾವಕಾಶವಿದೆ. . .

ಗಗ್ಗಯ್ಯ—ಸ್ವಾಮಿ! ಒಪ್ಪುತ್ತೋ ನನ್ನ ವೇಷ?

ಪುಟ್ಟು—ಲಕ್ಷಣವಾಗಿದೆ! . . . ಆದರೆ, ಹೆಣ್ಣು ಮಕ್ಕಳ ಹಾಗೆ ನಡೆಯ ಬೇಕಲ್ಲ ನೀವು? ಅವರ ಹಾಗೆ ಮಾತನಾಡಬೇಕು . . . ಅದನ್ನೂ ಕೊಂಚ ಅಭ್ಯಾಸಮಾಡಿಕೊಳ್ಳಿ . . . ಸದ್ಯ ಈ ಬೀದಿಯಲ್ಲಿ ಒಂದು ಪಿಳ್ಳೆ ಕೂಡ ಇಲ್ಲ . . . ಎಲ್ಲಿ? [ಗಗ್ಗಯ್ಯ ಹೆಣ್ಣುಮಕ್ಕಳ ಹಾಗೆ ನಡೆಯುವನು] ಹಾಗೆ . . . ಹಾಗೆ . . . ಭಲೆ . . . ಭೇಷ್ . . . [ಪ್ರೋತ್ಸಾಹಿಸುತ್ತಾ] ಈಗ ಕೊಂಚ ಮಾತ ನಾಡಿ ಕೇಳೋಣ. . .

ಗಗ್ಗಯ್ಯ—[ನುಡಿಯನ್ನನುಕರಿಸಲು ಯತ್ನಿಸಿ] ಅಷ್ಟು ಬೆಲೆ ಕೊಡುವುದಿಲ್ಲ ನಾನು, ಒಂದು ಗಜ ವಯೊಲಾಗೆ ಮೂರು ರೂಪಾಯಿ! ಚೆನ್ನಾಯಿತು! . . . ಡ್ರೈವರ್! ಇದನ್ನು ತೆಗೆದು ಕಾರಲ್ಲಿಡು! . . . ನಮ್ಮ ಸಮಾಜಕ್ಕೆ ನೀವೂ ಮೆಂಬರಾಗಬೇಕು ಲಕ್ಷ್ಮಿ ದೇವಮ್ಮ . . . [ಸ್ವಂತದನಿ] ಸರಿಯೋ?

ಪುಟ್ಟು—ಇನ್ನೂ ಅಭ್ಯಾಸ ಸಾಲದು. ನೀವು ಕೊಂಚ ಇಲ್ಲೇ ಸಾಧನೆ ಮಾಡುತ್ತಾ ಇರಿ . . . ಯಾವ ರಸ್ತೆಯಲ್ಲಿ ದೊಂಬಿ ಕಡಮೆ ಅಂತ ನೋಡಿ ಕೊಂಡು ನಾನು ಬೇಗ ಬರುತ್ತೇನೆ . . . [ಹೊರಡುವನು]

ಗಗ್ಗಯ್ಯ—[ನಡೆನುಡಿಗಳನ್ನನುಕರಿಸಿ] ಈ ಬಳೆ ಬೇಡ . . . ಮೊನ್ನೆ ಬಂದ ಹೊಸ ನಮೂನೆ ತೆಗೆಯಿರಿ . . . ಇದಲ್ಲ . . . ಹುಂ . . . ಅದು . . . ನಮ್ಮ ಮನೆಯಕಡೆ ಒಂದು ದಿನವಾದರೂ ಬರಬಾರದೇ . . . ಶಾಂತಾಬಾಯಿ . . . ಮಗು ಸ್ವಸ್ಥವಾಗಿದೆಯೇ . . . ಕುಂಕುಮ ಇಟ್ಟುಕೊಂಡು ಹೋಗಿ. . . .

[ಪುಟ್ಟು ವೇಷ ಬದಲಾಯಿಸಿ ಬದ್ಮಾಷನ ಹಾಗೆ ಬಂದು]

ಪುಟ್ಟು—[ಬೇರೆ ದನಿಯಲ್ಲಿ] ನಟನಟ ನಡುರಾತ್ರೀಲಿ ಬಳ್ಳೇ ಕೊಳ್ಳಿದೆವ್ವದಂತೆ ಇದು ಯಾವುದಪ್ಪಾ ಇಲ್ಲಿ! [ಕೂಗುವನು] ಹೋ! ರಸ್ತೆ ಬಿಡಮ್ಮೋ!

ಗಗ್ಗಯ್ಯ—[ಹೆದರಿ ನಡುಗುತ್ತಾ ಹೆಣ್ಣು ದನಿಯಲ್ಲೇ] ಪೋಲೀಸ್! ಪೋಲೀಸ್! . . . [ಪುಟ್ಟು ದಡದಡನೆ ಓಡಿ ತಪ್ಪಿಸಿಕೊಳ್ಳುವನು.]

[ಪೋಲೀಸ್ ವೇಷ ಧರಿಸಿ ಕಿಟ್ಟು ಪ್ರವೇಶ. . . .]

ಕಿಟ್ಟು—ಯಾರುತಾಯಿ? ಏಕೆ? ಇಲ್ಲಿ ಏಕೆ ನಿಂತಿದೀರಿ? ಏನು ಸಮಾಚಾರ?

ಗಗ್ಗಯ್ಯ [ಹೆಣ್ಣು ದನಿಯಲ್ಲೇ]—ಯಾವನೋ ಕಳ್ಳ? ನನ್ನನ್ನ ಹೆದರಿಸಿದ . . . ನೀವು ಬರುತ್ತಲೂ ಓಡಿದ . . .

ಕಿಟ್ಟು [ಆಶ್ಚರ್ಯದಿಂದ]—ಆ? ಹೆಣ್ಣುಮಕ್ಕಳ ಕೊರಳಲ್ಲ ಇದು! . . . ಯಾರು ನೀನು? . . . ಓಹೋ! [ಮುಸುಕು ತೆಗೆಯುತ್ತಾ] ಡಬ್ಬಲ್ ಗಂಡ ಗಗ್ಗಯ್ಯನ ಮುಖ ಇದ್ದ ಹಾಗಿದೆಯಲ್ಲಾ . . .

ಗಗ್ಗಯ್ಯ [ತನ್ನ ದನಿಯಲ್ಲೇ]—ಸುಳ್ಳು ಸ್ವಾಮಿ ಅದು! ನಾನಲ್ಲ ಸ್ವಾಮಿ ನಾನು . . .

ಕಿಟ್ಟು [ಕೈ ಹಿಡಿದೆಳೆದಾಡುತ್ತಾ]—ಬಾರಯ್ಯ! ಮಾಡುತ್ತೇನೆ ನಿನಗೆ ಷೋಡ ಶೋಪಚಾರ!

ಗಗ್ಗಯ್ಯ [ಗೋಳಿಡುತ್ತಾ]—ನನ್ನನ್ನ ಬಿಟ್ಟುಬಿಡಿ ಸ್ವಾಮಿ ದಮ್ಮಯ್ಯ . . . ನನ್ನನ್ನ ಹತ್ತುಗಂಟೆ ರೈಯಿಲಲ್ಲಿ ಕೂರಿಸಿಬಿಡಿ . . . ನಾನು ಕುದುರೆಗೊಂದಿಗೆ ಹೊರಟುಬಿಡುತ್ತೇನೆ. . . .

[ಪ್ರವೇಶ: ಪುಟ್ಟು]

ಪುಟ್ಟು [ನಿರಾಶೆಯನ್ನು ಸೂಚಿಸುತ್ತಾ]—ಏನಿದು? ಏನಿದು? ನಾನು ಮಾಡಿದ ಪ್ರಯತ್ನವೆಲ್ಲವೂ ಹಾಳಾಯಿತೆ? ಕಡೆಗೂ ಸಿಕ್ಕಿಬಿದ್ದೆಯಾ ಪೂಣ್ಯಾತ್ಮಾ . . . [ನಿಟ್ಟುಸಿರು] ಹುಂ . . . ನಿನಗೆ ಆಯಸ್ಸು ಕಡಮೆ ಆದರೆ ನಾನೇನು ಮಾಡ ಬಲ್ಲೆ . . . ಕರ್ಮಶೇಷ . . .

ಗಗ್ಗಯ್ಯ [ಕಿಟ್ಟುವಿಗೆ]—ನಿಮಗೆ ಸಾವಿರ ನಮಸ್ಕಾರ ಮಾಡುತ್ತೇನೆ . . . ನನಗೆ ಮೂಗಯ್ಯನ ಮಗಳೂ ಬೇಡ . . . ಮದುವೆಯೂ ಬೇಡ . . . ನೀವೇ ಮಾಡಿಕೊಳ್ಳಿ . . . ನೀವೇ ಈ ಊರಲ್ಲಿ ಸುಖವಾಗಿರಿ . . . ನನ್ನ ಪ್ರಾಣ ಉಳಿಸಿ ಸಾಕು . . . ಗಲ್ಲಿಗೇರಿಸಬೇಡಿ . . .

ಪುಟ್ಟು [ಕಿಟ್ಟು ಹತ್ತಿರ ಬಂದು]—ಪೋಲೀಸಪ್ಪನವರೇ! ಬಿಟ್ಟುಬಿಡಿ ಪಾಪ ಪರಸ್ಥಳದವನು . . . ತಿಳಿಯದು . . . ಹೆಂಗಸಿನ ಹಾಗೆ ಅಳುತ್ತಾನೆ . . . ಮುಂದಿನ ರೈಯಿಲಿಗೆ ಊರುಬಿಟ್ಟು ಆಚೆ ಹೊರಟುಬಿಡುತ್ತಾನೆ . . .

[ಕಿಟ್ಟು ಕನಿಕರ ಅಸಹ್ಯ ಎರಡನ್ನೂ ತೋರಿಸುತ್ತಾ]—ತೊಲಗು! ಶನಿ! ರೈಯಿಲಿಗಿನ್ನು ಹತ್ತೇ ನಿಮಿಷ . . . ಈ ರಸ್ತೆಯಲ್ಲೇ ನೆಟ್ಟಗೆ ಹೋಗು . . . ಸೀರೆ ಉಟ್ಟುಕೊಂಡು ಓಡುವುದಕ್ಕಾಗುತ್ತದೆಯೇ . . .

ಗಗ್ಗಯ್ಯ [ಹಲ್ಲುಕಿರಿಯುತ್ತಾ]—ಓಹೋ! . . . [ಓಟ]

[ಪುಟ್ಟು ಕಿಟ್ಟು ಇಬ್ಬರೂ ಕೊಂಚಹೊತ್ತು ರಂಗಸ್ಥಳದ ಮಧ್ಯೆ ನಿಂತು ಗಗ್ಗಯ್ಯನ ಅವಸ್ಥೆಯನ್ನು ನೆನೆದು ನಗುವರು . . . ಕಡೆಗೆ]

ಪುಟ್ಟು—ಲೋ! ಗಾರ್ದಭಾ! ನಿಲ್ಲಿಸೋ . . . ನಿನ್ನ ಮಾವನವರು ಇತ್ತ ಕಡೆ ಚಿತ್ತೈಸುತ್ತಿದಾರೆ . . . ನೀನು ಇದೇ ವೇಷದಲ್ಲೇ ಹೋಗಿ ಗೌರಿಯನ್ನ ಇಲ್ಲಿಗೆ ಕರೆದುಕೊಂಡು ಬಾ . . . ಅಂದರೆ ಸರಸರಸರಾ ಅಂತ ಎಳೆದುಕೊಂಡು ಬಾ . . . ಅವಳು ಅಳುತ್ತಾ ಬರಬೇಕು.

ಕಿಟ್ಟು—ಏನಯ್ಯ ನೀನು ಹೇಳುವುದು? ಅವಳನ್ನ ಅಳಿಸುವುದು ಮಾತ್ರ ನನ್ನಿಂದ ಸಾಧ್ಯವಿಲ್ಲ . . . ಅವಳ ಕಣ್ಣಲ್ಲಿ ಒಂದು ತೊಟ್ಟು ನೀರು ಬಂದರೆ ನಾನು ಅಲ್ಲೇ ಆಗಲೇ ತಣ್ಣಗಾದೆ ಅಂತ ತಿಳಿದುಕೊ . . .

ಪುಟ್ಟು—ಓಹೋ ಹೋ . . . ಕಂಡಿದೇನೆ ಕಣೋ ನಿನ್ನ ಪ್ರೇಮ. . . ನಿನ್ನ ಲವ್ವು, ಗಿವ್ವು . . . ಹೇಳಿದ ಹಾಗೆ ಕೇಳಿದರೆ, ನಿನಗೆ ಕ್ಷೇಮ . . . ಈಗ ಚರ್ಚೆಗಿರ್ಚೆಗೆ ಸಮಯವಿಲ್ಲ . . . [ಕಿಟ್ಟುವನ್ನು ಹಿಡಿದು ನೂಕುವನು].

[ಮೂಗಯ್ಯನವರ ಪ್ರವೇಶ]

ಪುಟ್ಟು [ಗಟ್ಟಿಯಾಗಿ ಆತ್ಮಗತಂ]—ಪಾಪ! ಅಂತಹ ಮರ್ಯಾದಸ್ಥರಿಗೆ ಇಷ್ಟು ಅವಮಾನವಾಗಬಾರದಾಗಿತ್ತು. . . ತ್ಸು . . . ತ್ಸು . . . ತ್ಸು . . . ಬೆಳಗಾದರೆ ಮೂಗಯ್ಯನವರ ಮನೆ ಮುಂದೆ ನಿಂತು ಜನಗಳು ಏನು ಆಡಿಕೊಳ್ಳುತ್ತಾರೆ, ಎಷ್ಟು ಹಾಸ್ಯ ಮಾಡುತ್ತಾರೆ?

ಮೂಗಯ್ಯ—ಏಕೆ, ಪುಟ್ಟು? ಏನದು? ಏನಾಯಿತು?

ಪುಟ್ಟು—ಅಯ್ಯೋ! ತಾವಿಲ್ಲೇ ಇದೀರಾ? ನನಗೆ ಗೊತ್ತಾಗಲಿಲ್ಲ . . . ಅಂತೂ ಒಳ್ಳೆಯದೇ ಆಯಿತು ತಾವಿಲ್ಲಿ ಇದ್ದದ್ದು . . . ಅಯ್ಯೋ! ಮೂಗಯ್ಯನವರೇ! ಪ್ರಮಾದವಾಗಿ ಹೋಯಿತಲ್ಲಾ . . . ಅನಾಹುತವಾಯಿತಲ್ಲಾ . . . ಆ ದುರಾತ್ಮ . . . ಆ ಗಗ್ಗಯ್ಯ! ಅವನ ಸಂಗಡಲೇ ನಿಮ್ಮ ಮಗಳೂ ಹೊರಟು ಹೋದಳಂತೆ . . . ಹತ್ತು ಗಂಟೆ ರೈಯಿಲಿನಲ್ಲಿ. . . .

ಮೂಗಯ್ಯ—ಹಾ! ನನ್ನ ಗೌರಿಯನ್ನ ಆ ರಾವಣ ಅಪಹರಿಸಿದನೇ. . . .

ಪುಟ್ಟು—ನೀವು ಮೊದಲಿಂದಲೂ ಕುದುರೆಗೊಂದಿ ಲಾಯರಿಗೆ ಕೊಡುತ್ತೇನೆ, ಬಿ.ಎ., ಎಲ್‌ಎಲ್.ಬಿ. ಗೆ ಕೊಡುತ್ತೇನೆ, ಅವನನ್ನೇ ಪತಿಕರಿಸಬೇಕು ಅಂತ ಅವಳಿಗೆ ಹೇಳಿ ಹೆದರಿಸುತ್ತಿದ್ದಿರಿ. . . . ನಿಮ್ಮ ವಾಕ್ಯವೇ ವೇದವಾಕ್ಯ ಅಂತ ತಿಳಿದು ಅವಳು ಆ ಗಗ್ಗಯ್ಯನನ್ನ ಕಾಣುತ್ತಲೂ ಸೀತೆ ರಾಮನ ಹಿಂದೆ ಅರಣ್ಯಕ್ಕೆ ಹೋದ ಹಾಗೆ ಹೊರಟೇಬಿಟ್ಟಳು. . . .

ಮೂಗಯ್ಯ—ಅಯ್ಯೋ! ಆ ಹಾಳಾದವನಿಗೆ ಹೊಟ್ಟೆಗಿಲ್ಲ, ಸಾಲದ್ದಕ್ಕೆ ಸಾಲವಂತ, ಹುಚ್ಚ ಬೇರೆ . . . ಹಾ! . . . ಇನ್ನೇನುಗತಿ! . . .

ಪುಟ್ಟು—ಹಾ! ಇದೇನಿದು? ಯಾರಿದು? [ಚಕಿತನಾಗಿ] ಇದೇನು ಕನಸೋ ನನಸೋ?

ಮೂಗಯ್ಯ—ಯಾವುದು?

ಪುಟ್ಟು—ಅಲ್ಲಿ ನೋಡಿ ಮೂಗಯ್ಯನವರೇ! ಆ ಲಾಂದ್ರದ ಕಂಬದ ಹತ್ತಿರ . . . ನಿಮ್ಮ ಮಗಳನ್ನ ಯಾರೋ ಒಬ್ಬ ಪೊಲೀಸಿನವನು ಎಳೆದು ತರುವಂತಿದೆ. . . . ವಂತಿದೆ ಏನು? . . . ಅಳುತ್ತಾ ಬರುತ್ತಾ ಇದಾಳೆ . . . ಆ? . . . ಕಿಟ್ಟುವೋ ಅದು? ಹೌದು . . . ಹೌದು, ಮೂಗಯ್ಯನವರೇ . . .

ಮೂಗಯ್ಯ—ಏನು? ಏನು? ಕಿಟ್ಟು ಪೋಲೀಸ್ ವೇಷ ಹಾಕಿಕೊಂಡು ಹೋಗಿ ಗಗ್ಗಯ್ಯನನ್ನ ಹೆದರಿಸಿ ಓಡಿಸಿ ಗೌರಿಯನ್ನ ರಕ್ಷಿಸಿದನೇ? . . .

ಪುಟ್ಟು—ಹಾಗೆಯೇ ಕಾಣುತ್ತೆ. . . . ಇಕೋ . . . ಬಂದರು. . . . [ಗೌರಿ ಅಳುತ್ತಾ ಬರುವಳು. ಅವಳು ತಪ್ಪಿಸಿಕೊಂಡು ಹೋಗದಂತೆ ಕಿಟ್ಟು ಜಾಗರೂಕನಾಗಿರುವನು].


ಮೂಗಯ್ಯ—ಕಿಟ್ಟು! ನೀನು ನಿಜವಾಗಿಯೂ ಶೂರ. . . . ಗೌರಿಯ ಮಾನ, ನನ್ನ ಮಾನ, ಉಳಿಸಿದೆ. . . . ಆ ಹುಚ್ಚನನ್ನ ಓಡಿಸಿದೆ. . . . ಆ ದುರಾಚಾರನಿಗೆ ತಕ್ಕ ಶಾಸ್ತಿ ಮಾಡಿದೆ. . . . ನಿನ್ನನ್ನ ಎಷ್ಟು ಹೊಗಳಿದರೂ ಕೊಂಚವೇ. ನಿನಗೆ ಏನು ಕೊಟ್ಟರೂ ಸಾಲದು. . . . ನೋಡು . . . ಈ ಹುಡುಗಿಯನ್ನ ನೀನೇ ಮದುವೆಯಾಗಬೇಕು. . . .

ಪುಟ್ಟು [ಹಿಂದೆ ಬಂದು ಕಿಟ್ಟು ಕಿವಿಯಲ್ಲಿ]—ಒಲ್ಲೆ . . . ಅನ್ನು. . . .

ಕಿಟ್ಟು [ಪುಟ್ಟು ಕಿವಿಯಲ್ಲಿ]—ಯಾಕೋ? ಇಷ್ಟೆಲ್ಲಾ ಕಷ್ಟಪಟ್ಟು . . .

ಪುಟ್ಟು [ಕಿಟ್ಟು ಕಿವಿಯಲ್ಲಿ]—ಭಯಪಡಬೇಡ. . . . ನಿನ್ನ ಕ್ಷೇಮಕ್ಕಾಗಿಯೇ . . . ಎಲ್ಲ ಸರಿಹೋಗುತ್ತದೆ. . . .

ಕಿಟ್ಟು—ಸ್ವಾಮಿ! ಸಾಹುಕಾರರೇ! ತಾವು ದೊಡ್ಡ ಮನಸ್ಸುಮಾಡಿ ನನ್ನನ್ನ



ಮೂಗಯ್ಯ—ಒಪ್ಪಿಕೊಳ್ಳಿ! ನನ್ನ ಹಿಂದಿನ ಮಾತನ್ನೇ ಹಿಡಿದು ಹಾಳಾಗಬೇಡ . . ಕಣೆ!

(ಪುಟ ೬೫)

ತಮ್ಮ ಅಳಿಯ ಅಂತ ಒಪ್ಪಿದಿರಿ. . . . ಆದರೂ ಕೂಡ . . . ಈಗ ಇಲ್ಲಿ ನಡೆದ ದ್ದನ್ನೆಲ್ಲಾ ಯೋಚನೆಮಾಡಿದರೆ, ಹೇಗೆ ಸ್ವಾಮಿ ಗೌರವಸ್ಥನಾದ ನಾನು . . .

ಪುಟ್ಟು [ನಡುವೆ ಬಾಯಿ ಹಾಕಿ]—ಮೂಗಯ್ಯನವರೇ! ಕಿಟ್ಟು ಮೇಲೆ ರೇಗಬೇಡಿ ನೀವು. ಈಗತಾನೆ ನಿಮ್ಮ ಮಗಳು ಆ ಪುರುಷಾಮೃಗದ ಹಿಂದೆ ನಿಗಿನಿಗಿ ಅಂತ ನಲಿಯುತ್ತಾ ಓಡಿಹೋಗಿದ್ದಳು. . . . ಇನ್ನೂ ಅವನನ್ನೇ ನೆನೆದುಕೊಂಡು ಕಣ್ಣೀರು ಬಿಡುತ್ತಿದಾಳೆ. . . . ಏನೋ ನಮ್ಮೂರಿನ ಮಾನ ಹೋಗುತ್ತದಲ್ಲಾ ಅಂತ ಹಿಡಿದು ತಂದಿದಾನೆ. . . . [ಗೌರಿ ಕಿವಿಯಲ್ಲಿ ಏನನ್ನೋ ಹೇಳುವನು.]

ಗೌರಿ—ಅಪ್ಪಾ! ತಂದೆ ಕೊಟ್ಟ ತವುಡೇ ಪಥ್ಯ ಅಂತ ನಾನು ಆತನನ್ನೇ ನನ್ನ . . .

ಮೂಗಯ್ಯ—ಥೂ! ಆ ಮಾರೀಚನ ಮಾತೆತ್ತಬೇಡ ನನ್ನ ಮುಂದೆ . . . .

ಪುಟ್ಟು—ನಾನು ಮಾತ್ರ ಕಿಟ್ಟುವಾಗಿದ್ದರೆ ಸುಮ್ಮಸುಮ್ಮನೆ ಈ ಮದುವೆಗೆ ಒಪ್ಪುತ್ತಿರಲಿಲ್ಲ. . . .

ಮೂಗಯ್ಯ—ಪುಟ್ಟು . . . ದಮ್ಮಯ್ಯ . . . ನೀನು ಮಾತನಾಡಬೇಡ . . . ಕಿಟ್ಟು! ನೀನು ನಿನ್ನ ಸ್ನೇಹಿತನ ಮಾತನ್ನೂ ಕೇಳಬಾರದು; ಈ ಹುಡುಗಿ ಮಾತನ್ನೂ ಕೇಳಬಾರದು . . . ನನ್ನ ಮಾತು ಕೇಳು . . . ಆ ಅಷ್ಟಾವಕ್ರನಿಗೆ ವರದಕ್ಷಿಣೆ ಹತ್ತುಸಾವಿರ ರೂಪಾಯಿ ಅಂತ ಹೇಳಿದ್ದೆ. . . . ನೋಡು, ಕಿಟ್ಟು, ನಿನಗೆ ಹದಿನೈದು ಕೊಡುತ್ತೇನೆ. . . .

ಗೌರಿ—ನಾನು ಕುದುರೆಗೊಂದಿಗೇ ಹೋಗುತ್ತೇನೆ. . . .

ಮೂಗಯ್ಯ—ಅಡ್ಡಮಾತಾಡಬೇಡ . . . ಹುಚ್ಚಿ . . . ಮುಚ್ಚುಬಾಯಿ . . . ಕಿಟ್ಟು! ಇಪ್ಪತ್ತುಸಾವಿರ ಕೊಡುತ್ತೇನೆ . . . . ನಿನಗೆ . . . . ದಯವಿಟ್ಟು ಒಪ್ಪಿಕೊ. . . .

ಗೌರಿ—ಅವರೊಪ್ಪಿದರೂ ನಾನೊಪ್ಪುವುದಿಲ್ಲ.

ಮೂಗಯ್ಯ [ರೇಗಿ]—ಒಪ್ಪಿಕೊಳ್ಳೆ! ನನ್ನ ಹಿಂದಿನ ಮಾತನ್ನೇ ಹಿಡಿದು ಹಾಳಾಗಬೇಡ, ಕಣೆ.

ಪುಟ್ಟು [ಕಿಟ್ಟು ಕಿವಿಯಲ್ಲಿ]—ಸಾಕುಮಾಡೋಣ ನಮ್ಮ ಆಟವನ್ನ . . .

ಕಿಟ್ಟು—ಸ್ವಾಮಿ! ತಾವೇ ಕಂಡ ಹಾಗೆ ಈ ಮದುವೆ ಇವಳಿಗೂ ಇಷ್ಟವಿಲ್ಲ; ನನಗೂ ಇಷ್ಟವಿಲ್ಲ. . . .

ಮೂಗಯ್ಯ—ಹುಂ.

ಕಿಟ್ಟು—ಆದರೂ ತಮ್ಮ ಮಾತನ್ನ ಮೀರಲಾರದೆ ತಮ್ಮ ಮನಸ್ಸಂತೋಷಕ್ಕಾಗಿ ಮಾತ್ರ ನಾನು ಒಪ್ಪಿದೇನೆ. . . .

ಮೂಗಯ್ಯ [ಆನಂದದಿಂದ]—ನೀನು ಹೇಗೆ ಬೇಕಾದರೂ ಹೇಳು! ಕಿಟ್ಟು! ಅಂತು ಒಪ್ಪಿದೆಯಲ್ಲಾ . . . ನನ್ನ ಚಿನ್ನ . . . ಅಷ್ಟೇ ಸಾಕು. . . .

ಪುಟ್ಟು—ನನಗೂ ಅಷ್ಟೇ ಬೇಕಾಗಿದ್ದದ್ದು . . .

ಮೂಗಯ್ಯ—ಅಳು ನಿಲ್ಲಿಸೆ . . . ಗೌರಿ! ಸಾಕು . . .

[ತೆರೆ]

ಮಾವನ ಮಗಳು

೧

ನಾಗಣ್ಣನ ನಿಷೇಕ ಪ್ರಸ್ತಕ್ಕೆ ಒಂದು ದಿನ ಮುಂದಾಗಿ ಹೊಳಲಿಗೆ ಬರಬೇಕೆಂದು ನನ್ನ ಸೋದರ ಮಾವನವರು ನನಗೆ ಕಾಗದ ಬರೆದಿದ್ದರು. ನಾನು ಹೊಳಲನ್ನು ನೋಡಿರಲಿಲ್ಲ. ಬಸ್ ದಾರಿಗೂ ಊರಿಗೂ ಒಂದೂವರೆ ಮೈಲಿ ಎಂದೂ, ಬಸ್ ಇಳಿದ ಮೇಲೆ ಅರ್ಧ ಗಂಟೆಯಲ್ಲಿ ಊರನ್ನು ಸೇರಬಹುದೆಂದೂ ನನ್ನ ಸ್ನೇಹಿತರು ಹೇಳಿದರು. ಹೊಳಲನ್ನು ನೋಡುವ ಆಸೆ, ನಾಗಣ್ಣನ ತಂಗಿ ಬಲು ಜಾಣೆ ಎಂಬ ಹೇಳಿಕೆಯ ಮಾತನ್ನು ಪರೀಕ್ಷಿಸುವ ಕುತೂಹಲ—ಇವೆರಡರಿಂದ ನನ್ನೆದೆ ತುಂಬಿ ತುಳುಕಿತ್ತು. ಅಮ್ಮನ ಅಪ್ಪಣೆ ಪಡೆದು, ತದಿಗೆಯ ದಿನ ಮಧ್ಯಾಹ್ನ ಬಸ್ಸಿನಲ್ಲಿ ಹೊಳಲಿಗೆ ತೆರಳಿ, ಕೈಮರದ ಬಳಿ ಇಳಿದೆ. ಅಲ್ಲಿ ನಾಗಣ್ಣ ನನಗಾಗಿ ಕಾದಿದ್ದ; ಅವನೊಡನೆ ಮಾತನಾಡುತ್ತಾ ಊರಕಡೆ ಹೊರಟೆ.

ಊರು ದೂರದಲ್ಲಿ ಎತ್ತರವಾದ ಕೋಟೆಯ ಮೇಲೆ ಸಂಜೆಬಿಸಿಲಲ್ಲಿ ರಂಜಿಸುತ್ತಿತ್ತು. ಬಳಬಳಸಿ ಸಾಗುವ ದಾರಿ, ಇಕ್ಕೆಲದಲ್ಲೂ ತೋಟಗಳು, ತೆಂಗು ಬಾಳೆಗಳ ಮೇಲೆ ಬೀಸಿ ಬರುವ ಮಂದಮಾರುತ, ಬಗೆಬಗೆಯ ಹೂಗಳ ಹಿತಮಿತ ಪರಿಮಳ—ನಾನು ಹೊಳಲ ಭಾಗ್ಯಕ್ಕೆ ಬೆರಗಾದೆ! ಇದ್ದಕ್ಕಿದ್ದಂತೆಯೇ ದಾರಿಯ ಹಾವು ಕೆರೆಯ ಏರಿಯಮೇಲೆ ನಮ್ಮನ್ನು ಕರೆದೊಯ್ದು ಸ್ವಲ್ಪ ಮುಂದೆ ಕೋಡಿಯ ಬಳಿ ತನ್ನ ಹೆಡೆಯನ್ನು ಬಿಚ್ಚಿ ಮಾಯವಾಯಿತು. ಪಕ್ಕದ ದೇವಾಲಯವನ್ನು ಬಳಸಿ ಊರನ್ನು ಸೇರಿದೆವು.

ಆಗ ಮುತ್ತು ಸಂಜೆ. ನಮ್ಮ ಮಾವನವರು ಜಗುಲಿಯ ಮೇಲೆ ಸಂಧ್ಯಾವಂದನೆ ಮಾಡುತ್ತ ಕುಳಿತಿದ್ದರು. ಅವರ ಪ್ರೀತಿಯ ಕಂದುಬಣ್ಣದ ಹಸು ಹತ್ತಿರದಲ್ಲಿ ಅವರನ್ನೇ ನೋಡುತ್ತ ಮಲಗಿತ್ತು. ನಾವಿಬ್ಬರೂ ಬಳಿಗೆ ಬರುತ್ತಲೇ ಅವರು ಮಗಳನ್ನು ಕೂಗಿ "ನೀಲ, ತಂಬಿಗೆಯಲ್ಲಿ ಬಿಸಿನೀರನ್ನು ತಾರಮ್ಮ ತಾಯಿ" ಎಂದರು. ಶಾನುಭೋಗರ ಮಗಳು, ಒಳಗೆ ಲಾಂದ್ರದ ಬೆಳಕಿನಲ್ಲಿ ಮಲ್ಲಿಗೆ ದಂಡೆಯನ್ನು ಕಟ್ಟುತ್ತಿದ್ದ ಹೊಸ ಹುಡುಗಿ, ಥಟ್ಟನೆದ್ದು ಸಮಗೆ ನೀರನ್ನು ತಂದುಕೊಟ್ಟಳು. ಅವಳನ್ನು ನೋಡಿದ ಕೂಡಲೆ ನನಗೆ ಅವರ ತಾಯಿಯ ನೆನಪು ಬಂದಿತು. "ತಾಯಿಯಿಲ್ಲದವಳು ಅವಳು" ಎಂಬುದೂ ನನಗೆ ಗೊತ್ತುಂಟು.

೨

ಮರುದಿವಸ ಪ್ರಾತಃಕಾಲ ಮನೆಯಲ್ಲಿ ಪ್ರಸ್ತದ ಸಂಭ್ರಮ. ಸವಿಲೂರಿಂದ ನಾಗಣ್ಣನ ಮಾವ ಅತ್ತೆ ಎಲ್ಲ ಬಂದಿದ್ದರು. ಪಟೇಲ ದಾಸಪ್ಪನವರು—ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರು—ತಲೆಗೆ ಹದಿನಾರು ಮೊಳದ ಮೊಳಕಾಲ್ಮುರು ರೇಷ್ಮೆಯ ಪೇಟವನ್ನು ಸುತ್ತಿ, ಹಣೆಯಲ್ಲಿ ಮೂರುಕಾಸಿನಗಲದ ಶ್ರೀಗಂಧದ ಬೊಟ್ಟನ್ನಿಟ್ಟು, ಶಾನುಭೋಗರ ತಮ್ಮನಂತೆ ಮನೆಯಲ್ಲಿ ಓಡಾಡುತ್ತಿದ್ದರು. ಎಂಟು ಕಂಬದ ತೊಟ್ಟಿಯ ಮನೆಯಲ್ಲಿ ಎಂಬತ್ತರವರೆಗೂ ಜನ ಸೇರಿದ್ದರು. ಏಳು ಬಾಗಿನದ ಓಲಗದವರು ಸಾಕು ಎಂದರೂ ನಿಲ್ಲಿಸದೆ, ಮಧ್ಯಾಹ್ನದ ವರೆಗೆ ಯಕ್ಷಗಾನದ ಮಟ್ಟುಗಳನ್ನೆಲ್ಲ ಬಾರಿಸಿಬಿಟ್ಟರು. ಗಂಡು ಹೆಣ್ಣು ಹಸೆಗೆ ಬಂದು ಕುಳಿತಮೇಲೆ ನೀಲಮ್ಮ ಸುರಟಿಯ ರಾಗದಲ್ಲಿ ಒಂದು ಹಾಡನ್ನು ಸುಟಿಯಾಗಿ ಹೇಳಿದಳು. ಹವನ, ಹೋಮ, ಫಲಪೂಜೆ, ಎಲ್ಲ ಸಾಂಗವಾಗಿ ನೆರವೇರಿದುವು.

ಮಧ್ಯಾಹ್ನ ಕೆರೆಯ ಹಟ್ಟಿಯಿಂದ ಗುಡಿಯ ಬೀದಿಯ ವರೆಗಿನ ನೂರು ಮಂದಿ ಬ್ರಾಹ್ಮಣ ಸುವಾಸಿನಿಯರಿಗೆ ರಸಕವಳವಾಯಿತು. ಮೊಸರನ್ನ ಊಟಮಾಡುತ್ತಿರುವಾಗ ಮಾತ್ರ ನನ್ನಂಥ ಒಬ್ಬ ಬೆಪ್ಪ ಶ್ಲೋಕ ಹೇಳುವ ಪ್ರಯತ್ನದಲ್ಲಿ "ಮದನೋ ಮನ್ಮಥೋಮಾರಃ ಶಿವಶ್ಶೂಲೀ ಮಹೇಶ್ವರಃ" ಎಂದು ಕೂಗಿ ರಸಾಭಾಸ ಮಾಡಿಬಿಟ್ಟ. ಭೋಜನವಾದ ಮೇಲೆ ಎಲ್ಲರಿಗೂ ತಾಂಬೂಲ ಏನಿಯೋಗವಾಯಿತು. ನೀಲಮ್ಮ ಅಡಕೆಗೆ ಬಲು ಸೊಗಸಾಗಿ ಬಣ್ಣ ಕಟ್ಟಿದ್ದಳು. ವೀಳೆಯದೆಲೆಯೋ ಚಿನ್ನದ ರೇಕಿನಂತಿತ್ತು. ಎಲ್ಲರೂ ಎಲೆ ಅಡಕೆಯನ್ನು ಮೇದು ತೇಗುತ್ತಾ ಅವರವರ ಮನೆಗಳಿಗೆ ತೆರಳಿದರು. ಒಸಗೆಯ ದಂಪತಿಗಳಿಗೆ ನಮ್ಮ ಪುರೋಹಿತರು ಆಶೀರ್ವಾದ ಮಾಡಿದರು. ಆಗ ನಾನೂ ಪುರೋಹಿತರಿಗೆ ನಮಸ್ಕಾರಮಾಡಿದೆ. (ಆ ಸಮಯದಲ್ಲಿ ನನ್ನ ಜನಿವಾರವೇ ನನ್ನ ಕತ್ತಿನ ಮೇಲೆ ಇರಲಿಲ್ಲ. ಬಹುಶಃ ಷರಟಿನೊಳಗೆ ಸೇರಿ ಹೋಗಿತ್ತೇನೊ!) ಅವರು ನಗುತ್ತಾ "ಪರೀಕ್ಷೆಯಲ್ಲಿ ಪ್ಯಾಸಾಗಲಿ, ಶೀಘ್ರದಲ್ಲೇ ಮದುವೆಯಾಗಲಿ, ಒಡನೆಯೇ ಅಮಲ್ದಾರಿಯಾಗಲಿ" ಎಂದು ಆಶೀರ್ವದಿಸಿದರು. ಚಿರೋಟಿಯ ಊಟವಾದ ಮೇಲೆ ಸುಬ್ಬಾಭಟ್ಟರು ಇಷ್ಟು ಔದಾರ್ಯದಿಂದ ಹರಸಿದ್ದು ನನಗೆ ಆಶ್ಚರ್ಯವನ್ನುಂಟುಮಾಡಲಿಲ್ಲ. ಅಲ್ಲದೆ, ಎಲ್ಲರಿಗೂ ಹೀಗೆಯೇ ಹೇಳುವುದು ಅವರ ಸ್ವಭಾವ.

ಸಂಜೆ ಆರು ಗಂಟೆಯ ಸಮಯ. ನಾಗಣ್ಣನ ಮನಸ್ಸು ಒಸಗೆಯ ಹೆಣ್ಣಿನ ಮೇಲಿತ್ತು. ಅಡಿಗೆಯ ಮನೆಯಲ್ಲಿ ಬಾಗಿನಗಳು ತಯಾರಾಗುತ್ತಿದ್ದವು. ಪ್ರಸ್ತದ ಕೋಣೆಯು ಸುಖದ ಮಂದಿರವಾಗುತ್ತಿತ್ತು. ನಮ್ಮ ಮಾವನವರು ಬತ್ತದ ಪೆಟ್ಟಿಯ

ಸ್ನೊರಗಿ ಕುಳಿತು ಏನನ್ನೋ (ಪ್ರಸ್ತದ ವೆಚ್ಚವನ್ನೇ ಇರಬೇಕು) ಗುಣಿಸುತ್ತಿದ್ದರು. ಆಗ ಆ ಪ್ರಶಾಂತವಾದ ಆವರಣವನ್ನು ನೀಲಮ್ಮನ ಇನಿದನಿಯು ಬಂದು ಕಲಕಿತು. ಕೋಣೆಯೊಳಗೆ ಬಂದವಳು "ಅಣ್ಣಾ, ಚಕ್ಕುಲಿ ಇಟ್ಟಿದ್ದೇನೆ, ತೆಗೆದುಕೊಳ್ಳಿ" ಎಂದು ಹೇಳಿ ಹೊರಟುಹೋದಳು. ಚಕ್ಕುಲಿಯೂ ಕೆಂಪಗೆ ಚೆನ್ನಾಗಿತ್ತು; ತಂದವಳೂ ಸುಂದರಿಯೇ. 'ಒಲ್ಲೆ' ಎನ್ನುವ ಕಠಿನ ಹೃದಯ ನನಗಿಲ್ಲ. ನಾನು ಇವತ್ತಿಗೂ ಹಾಗೆಯೇ ಇದ್ದೇನೆ. ನಾನು ನಾಗಣ್ಣನಿಗೆ ಚಕ್ಕುಲಿಯನ್ನು ತೋರಿಸಿದರೂ, ತಿನ್ನಲು ಅವನಿಗೆ ಕೋಣೆಯನ್ನಲಂಕರಿಸುವ ಸಂಭ್ರಮದಲ್ಲಿ ಅವಕಾಶವಾಗಲಿಲ್ಲ. ಐದನ್ನು ತಿಂದು ಒಂದನ್ನು ಮಾತ್ರ ಗೌರವಕ್ಕಾಗಿ ತಟ್ಟೆಯಲ್ಲೇ ಉಳಿಸಿದೆ. ಇದಕ್ಕೆ ಮಹತ್ತರ ವಾದ ಕಾರಣವಿದೆ. ಮೊನ್ನೆ ನಮ್ಮ ಕೃಷ್ಣಭಟ್ಟರ ಮಗ ತನ್ನ ಮದುವೆಯಲ್ಲಿ ಭೂಮದೂಟವಾಗುತ್ತಿದ್ದಾಗ ಬಡಿಸಿದ ಅಂದೋಚಿಯನ್ನೆಲ್ಲಾ ತಿಂದು ಎಲೆ ಯನ್ನು ನೆಕ್ಕಿದಂತೆ ಮಾಡಿ, ಹೆಂಗಸರ ಹಾಸ್ಯಕ್ಕೆ ಅವಕಾಶ ಮಾಡಿಬಿಟ್ಟ. ಆ ಹೊಟ್ಟೆಯ ಶೂರನಿಗೆ ಬುದ್ಧಿಯಿಲ್ಲ; ನಾನಾದರೋ ಈ ಪ್ರಸಂಗವನ್ನು ಕೇಳಿ ಬುದ್ಧಿ ಕಲಿತಿದ್ದೆ.

ಅಷ್ಟುಹೊತ್ತಿಗೆ ಬೆಳ್ಳಿಯ ಲೋಟದಲ್ಲಿ ನೀರು ಬಂದಿತು. ರಾಮದೇವರ ಪಠಕ್ಕೆ ಹೂವಿನ ಮಾಲೆಯನ್ನು ಹಾಕುತ್ತಿದ್ದ ನಾಗಣ್ಣ ನಗುತ್ತ "ತಟ್ಟೆಯಲ್ಲಿ ಒಂದು ಚಕ್ಕುಲಿ ಇದೆ, ನೀಲ; ಅದು ನಿನಗಾಗಿ ಅವರು ಬಿಟ್ಟಿರುವ ಪತ್ನೀಭಾಗ" ಎಂದನು. ನನಗೆ ಈ ಮಾತು ಹೆಚ್ಚು ಎನ್ನಿಸಿತು; ಅವಳಿಗೂ ನಾಚಿಕೆಯಾಯಿತು. "ಮೊಗ್ಗಿನ ಜಡೆ ಹಾಕಿಸಿಕೊಂಡು ಮತ್ತೆ ಬರುತ್ತೇನೆ." ಎಂದು ಹೇಳಿ ಹುಡುಗಿ ಹೊರಟು ಹೋದಳು.

ಮಾತಿಗೆ ತಪ್ಪದಂತೆ ನೀಲ ಬಂದೇ ಬಂದಳು. ನೀಳವಾದ ಚಾಟಿಯಂತಿರುವ ನಿಡುಗಪ್ಪಾದ ಜಡೆ, ಅದರ ಮೇಲೆ ಹಬ್ಬಿರುವ ಮಲ್ಲಿಗೆಯ ಬಳ್ಳಿ, ಒಪ್ಪುವ ಹಸುರುಸೀರೆ, ನೀಲಿಯ ಕುಪ್ಪಸ, ಸೀರೆಯನ್ನು ಹಿಡಿತದಲ್ಲಿಟ್ಟಿರುವ ಬೆಳ್ಳಿಯ ಡಾಬು, ಕಾಲಿನ ಚೈನುಗಳು, ಕಾಲುಂಗುರ, ಕೈಗಳ ಕೆಂಪು ಬಳೆಗಳು—ಇಷ್ಟೇ ಅಲಂಕಾರ ಆ ಹಳ್ಳಿಯ ಹೆಣ್ಣಿಗೆ. ಹುಡುಗಿ ಬೆಳ್ಳಿಯಷ್ಟು ಬೆಳ್ಳಗಿರಲಿಲ್ಲ; ಇದ್ದಲಿನಷ್ಟು ಕಪ್ಪೂ ಅಲ್ಲ; ಸಾಮವರ್ಣ ಎನ್ನಬಹುದು. ತುಟಿಯ ಒಂದಂಚಿನಲ್ಲಿದ್ದ ಪುಟ್ಟ ಸಿಡುಬಿನ ಕಲೆ ಸಹಜವಾದ ಆಭರಣದಂತಿತ್ತು. ಮುಖದಲ್ಲಿ ಜಾಣ್ಮೆಯ ನಗುವಿತ್ತು. ಮುಂಗುರುಳು ಕಮಾನು ಕಮಾನಾಗಿ ಹಣೆಯ ಮೇಲೆ ಇಳಿದಿದ್ದರೂ ಹಣೆಯ ವೈಶಾಲ್ಯಕ್ಕೆ ಭಂಗ ಬರುವಂತಿರಲಿಲ್ಲ. ಕಣ್ಣಿನ ಬೆಳಕು ಮುಂಗಾರಿನ ಮಿಂಚಿನಂತಿತ್ತು. ಕೆನ್ನೆಯ ಮೇಲೆ ಸಂಜೆಗೆಂಪು ಹಾದುಹೋಗಿತ್ತು. ಹುಡುಗಿ ಹತ್ತಿರ ಹತ್ತಿರ ನನ್ನ ಭುಜಕ್ಕೆ ಬರು

ತ್ತಿದ್ದಳು. ಅವಳ ತಾಯಿಯನ್ನು ನೋಡಿದ್ದವರಿಗೆ ಆಕೆಯ ಮಗಳೇ ಇವಳು ಎನ್ನಲು ಕಷ್ಟವಿರಲಿಲ್ಲ. ಮಾತೃವಿಯೋಗದ ದುಃಖವೊಂದು ಬಂದು ಅವಳ ಹೃದಯದಲ್ಲಿ ಸೇರಿ ಅವಳ ಬದುಕನ್ನು ಮಂಕುಹಿಡಿದ ದೀಪದಂತೆ ಮಾಡಿ ಮೂಲೆಗೆ ಕೂರಿಸಿತ್ತು.

ಅವಳು ನೆಲದ ಮೇಲೆ ಕುಳಿತುಕೊಳ್ಳಲು ಪ್ರಯತ್ನಪಟ್ಟಳು. "ಮಂಚದ ಮೇಲೆ ಕುಳಿತುಕೋ, ಬಾಮ್ಮ" ಎಂದು ನಾಗಣ್ಣ ಶಿಫಾರಸು ಮಾಡಿದ. ಹುಡುಗಿ ಅಂಜಿಕೆಯಿಂದಲೇ ಬಂದು ಕುಳಿತಳು. ನಾನು ಸರ್ರನೆ ಮೇಲೆದ್ದೆ. "ಏನು, ಭಾವ, ನಿಮಗೆ ಹೆಂಗಸರೆಂದರೆ ಹೆದರಿಕೆಯೆ?" ಎಂದ ನಾಗಣ್ಣ. ಗಂಡಸಿಗೆ ಇವನು ಇಂಥ ಪ್ರಶ್ನೆ ಹಾಕಬಹುದೆ? ಇದನ್ನೆಲ್ಲ ಸಹಿಸಿಕೊಂಡು, ನೊಂದ ನಾಗರಹಾವಿನಂತೆ, ನಾನಲ್ಲಿಯೇ ಕುಳಿತೆ. ನೀಲಮ್ಮ ಚಕ್ಕುಲಿಯನ್ನು ಮುರಿದು, ಅರ್ಧವನ್ನು ನನ್ನ ಕಡೆಗೆ ಮೆಲ್ಲನಿಟ್ಟು, ಮಿಕ್ಕರ್ಧವನ್ನು ತಿಂದಳು. ಅವಳ ತುಂಟಕಣ್ಣಿನಲ್ಲಿ ಹರ್ಷ ತುಂಬಿತ್ತು. ನಾನು ಆ ಅರ್ಧ ಚಕ್ಕುಲಿಯನ್ನು ಕಣ್ಣೆತ್ತಿ ನೋಡದಿದ್ದರೂ, ಅದುವರೆಗೂ ಈ ನಾಟಕದ ಪ್ರೇಕ್ಷಕರೇ ಆಗಿದ್ದ ನನ್ನ ಮಾವನವರು ಪಾತ್ರವನ್ನು ಧರಿಸಿ, "ಅದು ನಿನಗೆ ಮಗು" ಎಂದು ಚಕ್ಕುಲಿಯ ಮುರುಕನ್ನು ಕಣ್ಣಿಗೆ ಹಿಡಿದರು. ನಾನದನ್ನು ಏನು ಮಾಡುವುದಕ್ಕೂ ತೋಚದೆ ಬಾಯಲ್ಲಿ ಹಾಕಿಕೊಂಡೆ. ಇಂಥ ವಿಷಯದಲ್ಲಿ ನಾನು ಯಾರಿಗೂ ನಿರುತ್ಸಾಹ ಮಾಡುವವನಲ್ಲ. ನಾನು ಕಣ್ಣುಮುಚ್ಚಿಬಿಡುವಷ್ಟರಲ್ಲಿ ಹುಡುಗಿ ಅದಾವ ಮಾಯದಲ್ಲೋ ಜಣಜಣನೆ ಹಾರಿಹೋಗಿ, ದಾಳಿಂಬೆಯ ಗಿಡವನ್ನು ಹತ್ತಿ, ಮುಳ್ಳು ಕಾಲಿಗೆ ತಾಕಿದರೂ ವ್ಯಥೆಪಡದೆ, ಚೆನ್ನಾಗಿ ಬಿರಿದ ಹಣ್ಣನ್ನು ಕಿತ್ತು ತಂದಳು. ಹಣ್ಣು ಹಿಂದಿನ ಜನ್ಮವನ್ನು ನೆನಪಿಗೆ ತರುವಷ್ಟು ಹುಳಿಯಾಗಿದ್ದರೂ ಹುಡುಗಿಗೆ ಎಲ್ಲಿ ಮನಸ್ಸು ನೋಯುವುದೋ ಎಂದು ಎಲ್ಲರೂ "ಬಲು ಚೆನ್ನಾಗಿದೆ" ಎಂದು ಬಾಯಿಮುಚ್ಚಿಕೊಂಡು ತಿಂದರು. ಹೆಣ್ಣು ಮಕ್ಕಳ ಸಹವಾಸವೇ ಕಷ್ಟ. ಅವರ ಮೂಗಿನ ತುದಿಯಲ್ಲಿ ಮಸಿ ಇದ್ದರೂ ನಾವದನ್ನು ಅವರಿಗೆ ತಿಳಿಸಬಾರದು. ತಿಳಿಸಿದರೆ, ಅವರಿಗೆ ಗಂಡಸರ ಕುಲವನ್ನೇ ಭೂಮಿಯಿಂದ ಗುಡಿಸಿ ಸಮುದ್ರಕ್ಕೆ ತಳ್ಳುವಷ್ಟು ಆಗ್ರಹ ಬಂದುಬಿಡುತ್ತದೆ.

೩

ಪಂಚಮಿಯ ದಿನ, ಅಂದರೆ ಪ್ರಸ್ತದ ಮರುದಿನ, ನಾನು ಮೈಸೂರಿಗೆ ಪ್ರಯಾಣಮಾಡಲು ಮಾವನವರ ಅನುಮತಿಯನ್ನು ಕೇಳಿದೆ. ಆಗ ನಾನು ಬಿ.ಎ. ಕ್ಲಾಸಿನಲ್ಲಿ ಓದುತ್ತಿದ್ದೆ. ಓದುವ ಹುಡುಗನಿಗೆ ಪಾಠಕ್ಕೆ ಅನುಕೂಲವಾಗಬಹುದು ಎಂದು ಭಾವಿಸಿ, ಅವರು "ಆಗಬಹುದಣ್ಣ" ಎಂದೊಪ್ಪಿದ್ದರು.

ಬೇಗ ಅಡುಗೆಯಾಯಿತು; ಒಡನೆಯೇ ಊಟವಾಯಿತು. ಉಡುಗೊರೆಯೂ ಸಂದಿತು. ಊರನ್ನು ತಲಪಿದಮೇಲೆ ಎಲ್ಲರಿಗೂ ದಿನದಿನವೂ ಒಂದೊಂದು ಕಾಗದ ವನ್ನು ಬರೆಯಬೇಕೆಂಬ ವಾಗ್ದಾನವೂ ಆಯಿತು. ಇನ್ನೇನು ಹೊರಡುವ ಸಮಯ, ನೀಲಮ್ಮ ಬಂದು ನನಗೆ ನಮಸ್ಕಾರ ಮಾಡಿದಳು—ಗಾಳಿ ಬೀಸಿದಾಗ ಮಲ್ಲಿಗೆಯ ಬಳ್ಳಿ ಜಂಬದ ಬಾಳೆಗೆ ವಿನಯದಿಂದ ಬಾಗಿ ಎದ್ದಂತೆ.

ಆಗ "ಅಣ್ಣಾ—" ಎನ್ನುವ ದನಿ ನನ್ನನ್ನು ನಡುಗಿಸಿತು. ನನ್ನ ಮಾವನವರ ಕಣ್ಣಿನಲ್ಲಿ ಕಂಬನಿ ಮಣಿಮಣಿಯಾಗಿ ಮೂಡುತ್ತಿತ್ತು; "ಹನ್ನೆರಡು ವರ್ಷ ತಾಯಿ ಯಿಲ್ಲದ ಮನೆಯಲ್ಲಿ ದೇವರು ಬೆಳಸಿದ ಮಗಳು ಇವಳು. ಈ ಒಡವೆ ನಿನಗೆ ಸೇರಿ ದರೆ ನಾನು ಕೃತ ಕೃತ್ಯ" ಎಂದರು. ಚೆಲುವನ್ನು ಚಿಮ್ಮುವ ಒಲವಿನ ಜಾಣ್ಮೆ ಯೊಂದು ಕಡೆ; ಒಲವನ್ನು ಮಿಡಿಯುವ ತಾಯಿಯಿಲ್ಲದವಳೆನ್ನುವ ಕರುಣೆಯ ಕೂಗಿನ್ನೊಂದು ಕಡೆ! ನಡುವೆ ನಾನು, ಬಲೆಯಲ್ಲಿ ಬಿದ್ದ ಮೀನು. ನನ್ನ ಧೈರ್ಯ ನನಗಿಲ್ಲವಾಯಿತು; "ನೀಲ!—ಇಲ್ಲ, ಮಾವ, ದೇವರಿದ್ದಾನೆ" ಎಂದು ಹೇಳಿ ಹೊಸಿಲನ್ನು ದಾಟಿದೆ. ನನಗೆ ತಂದೆಯಿಲ್ಲ; ಅವಳಿಗೆ ತಾಯಿಯಿಲ್ಲ. ನನ್ನ ಪುಣ್ಯ ವೇನು; ಅವಳ ಪಾಪವೇನು? ಮದುವೆಗೊಪ್ಪಿದರೆ ತೊಂದರೆ ಏನು? ಈ ಆಲೋಚನೆ ಯಲ್ಲೇ ಮೈಸೂರಿಗೆ ಹಿಂದಿರುಗಿದೆ.

೪

ನೀಲ ನನ್ನ ಸೋದರಮಾವನ ಮಗಳು; ನಾನು ಒಪ್ಪಿದರೆ ಮದುವೆಯಾಗು ವುದು ಹೂವನ್ನು ಎತ್ತಿಟ್ಟ ಹಾಗೆ; ನೀಲ ಚೆಲುವೆ, ಜಾಣೆ; ತಾಯಿಯಿಲ್ಲದವಳಾದ್ದ ರಿಂದ ಗಂಡನ ಮನೆಯಲ್ಲಾದರೂ ಪ್ರೇಮದ ಸುಖವನ್ನು ಕಾಣುವ ಆಸೆ ಅವಳಿಗೆ ಒಲಿಯಬಾರದೆ? ತನ್ನ ಅಣ್ಣನ ಮಗಳನ್ನು ತಂದುಕೊಳ್ಳುವೆನೆಂದರೆ ನಮ್ಮ ತಾಯಿಗೆ ಹರ್ಷವಲ್ಲವೆ? ಪಟ್ಟಣದ ಹೆಣ್ಣುಗಳಲ್ಲಿ ಬಿನ್ನಾಣ ಜೇಕಾದಷ್ಟಿರಬಹುದು; ಹಳ್ಳಿಯ ಹೆಣ್ಣಿಗೆ ಕಷ್ಟಪಟ್ಟು ಸಂಸಾರವನ್ನು ನಡಸುವ ಶಕ್ತಿಯಿದೆ. ಹಳ್ಳಿಯ ಹೆಣ್ಣನ್ನು ಮದುವೆಯಾದರೆ, ಹೇರ್‌ಪಿನ್, ಹ್ಯಾಸಲೀನ್ ಸ್ನೋ, ಹೇರ್‌ಆಯಿಲ್, ಹ್ಯಾಲಿಬಟ್ ಆಯಿಲ್, ಒಂದೂ ಬೇಕಾಗುವುದಿಲ್ಲ. ಹೀಗೆಲ್ಲ ತರ್ಕಮಾಡಿಕೊಂಡು ಮದುವೆಯ ಕಡೆಗೆ ಮನಸ್ಸು ಒಲಿದಿತ್ತು.

ಸ್ವಲ್ಪದಿನ ನಾನು ನಮ್ಮ ಮಾವನವರಿಗೆ ಕಾಗದ ಬರೆಯದೇ ಕಾಲಹಾಕಿದೆ. "ಪರೀಕ್ಷೆಯ ಕಾಲ; ಬರೆಯಲು ಅವಕಾಶವಾಗಲಿಲ್ಲ" ಎನ್ನುವ ಉತ್ತರವು ನನ್ನ ಲೇಖನಿಯ ತುದಿಯಲ್ಲಿ ಸಿದ್ಧವಾಗಿತ್ತು. ಆದರೆ ನಾನು ಈ ಬ್ರಹ್ಮಾಸ್ತ್ರವನ್ನು ಉಪ

ಯೋಗಿಸಲು ವೇಳೆ ಒದಗಿಸಲಿಲ್ಲ. ಪರೀಕ್ಷೆಯೂ ಆಯಿತು. ಆ ಮೇಲೆ ನನ್ನ ಅಖಂಡ ಬ್ರಹ್ಮಚರ್ಯಾಶ್ರಮದ ಶ್ರಮದಿಂದಲೋ, ಅಥವಾ ಉಪಾಧ್ಯಾಯರುಗಳ ಔದಾರ್ಯದಿಂದಲೋ ಅಥವಾ ಈಶ್ವರಾನುಗ್ರಹದಿಂದಲೋ ಹೇಗೋ ನನಗೆ ಎರಡನೆಯ ತರಗತಿಯಲ್ಲಿ ಜಯವಾಯಿತು.

ನನ್ನ ಸ್ನೇಹಿತರಲ್ಲಿ ಪರಮನೀಚರೂ ಇದ್ದಾರೆ. ಅವರಲ್ಲೂ ಆ ಹತ್ತುಕಡುಕಿ ನವನು ಮಹಾ ಪಟಿಂಗ. ಅವನಿಗೆ ನನ್ನ ಮೇಲೆ ಯಾವಾಗಲೂ ಕಣ್ಣು. ನನ್ನ ಮೇಲೆ ಚಾಡಿಹೇಳುವುದೇ ಅವನ ಪ್ರಥಮ ಕರ್ತವ್ಯ. ಆ ಪಾಪಿ ತನಗೆ ಫೇಲಾಯಿತಲ್ಲ ಎಂಬ ಸಂಕಟದಲ್ಲಿ ನನಗೂ ಈ ಸಲ "ಹೋಯಿತು" ಎಂದು ನಮ್ಮ ಮಾವನವರಿಗೆ ಕಾಗದ ಬರೆಯಬಹುದೆ? ನಾನು ಈ ಪುಂಡಾಟಕ್ಕೆ ಜಗ್ಗಲಿಲ್ಲ. ನನಗೆ ನ್ಯಾಯವಾಗಿ ಪ್ಯಾಸಾಗಿರುವ ಅಂಶವನ್ನು ನಮ್ಮ ಮಾವನವರಿಗೆ ಸ್ವತಃ ತಿಳಿಸಿಬಿಡಬೇಕೆಂದು ನಿರ್ಧರಿಸಿದೆ. ಇಲ್ಲದಿದ್ದರೆ, ನೀಲ ತಾನೇ ಏನೆಂದುಕೊಂಡಾಳು? ಆದರೂ ಕರೆಯಿಸಿ ಕೊಳ್ಳದೆ ಒಬ್ಬರ ಮನೆಗೆ ಹೋಗುವುದು ತಾನೆ ಹೇಗೆ? ಹೀಗೆಲ್ಲ ಆಲೋಚಿಸುತ್ತಿದ್ದೆ.

ಈ ಸಮಯಕ್ಕೆ ಸರಿಹೊಂದುವಂತೆ "ನಾಗರಪಂಚಮಿಗೆ ಖಂಡಿತ ಊರಿಗೆ ಬಾ, ಮಗು" ಎಂಬ ಆಹ್ವಾನ ನಮ್ಮ ಮಾವನವರಿಂದ, ಬಯಸಿದಂತೆ ಬಂದಿತು. ಹಬ್ಬದ ದಿನ ಊಟದ ಹೊತ್ತಿಗೆ ಸರಿಯಾಗಿ ಊರಿಗೆ ಹೋಗಿ ಇಳಿದೆ.

೫

ಆಗ ಅಲ್ಲಿನ ಸ್ಥಿತಿ ಸ್ವಲ್ಪಮಟ್ಟಿಗೆ ವ್ಯತ್ಯಸ್ತವಾಗಿತ್ತು. ನನ್ನ ಮೈದುಂದಿರೆಲ್ಲ ಬೇರೆ ಬೇರೆ ಊರುಗಳಿಗೆ ಜೀವನೋಪಾಯಗಳನ್ನು ದೊರಕಿಸಿಕೊಳ್ಳಲು ಹೊರಟು ಹೋಗಿದ್ದರು. ಮನೆಯಲ್ಲಿ ಹರಟುವ ಹುಡುಗರಿಲ್ಲ; ಆಡುವ ಮಕ್ಕಳಿಲ್ಲ; ನಾಗಣ್ಣನ ಹೆಂಡತಿಯೂ ಮೊದಲಸಲ ತೌರುಮನೆಗೆ ಹೋಗಿದ್ದಳು. ಅಂದು ಹಬ್ಬವಾದರೂ ಗದ್ದಲವಿಲ್ಲ. ಶಾಂತಿ ಹೊಸಿಲಿನಿಂದ ಹಿಡಿದು ದೇವರ ಕೋಣೆಯ ತನಕ ನೆಲಸಿತ್ತು. ಆದರೂ ನನ್ನ ಟೋಪಿ ತೋರಣವನ್ನು ತಾಕಿದೊಡನೆಯೇ ಮನೆಯಲ್ಲಿದ್ದ ಮೂರು ಜನ ಮೂವತ್ತು ಜನರ ಸಂಭ್ರಮದಿಂದ ನನ್ನನ್ನು ಇದಿರ್ಗೊಂಡರು. ನನ್ನ ಮಾವನವರು, ಅವರ ಅತ್ತೆ, ಅವರಿಬ್ಬರ ಪ್ರೇಮತೊಟ್ಟಿಲಾದ ನೀಲ.

ಹುಡುಗಿ ಅಷ್ಟುಹೊತ್ತಿಗೆ ಬಹಳ ಕೆಲಸಗಳನ್ನು ಮಾಡಿದ್ದಳು—ಮನೆಯ ಬಾಗಿಲುಗಳಿಗೆಲ್ಲ ಮಣಿಯ ತೋರಣಗಳು; ಏಕಾಂತರಾಮನ ಪಠಕ್ಕೆ ಬೊಂಬಾಯಿ ಮುತ್ತಿನಹಾರ; ಸೋಫದ ಮೇಲೆ ಡಿ.ಎಂ.ಸಿ. ದಾರದ ಉಂಡೆಗಳು, ಟೇಬಲ್ ಕ್ಲಾತುಗಳು, ಕರವಸ್ತ್ರಗಳು; ಟೇಬಲ್ಲಿನ ಮೇಲೆ ಗಾಜಿನ ಲೋಟದಲ್ಲಿ ಕಾಗದದ

ಹೂ ಗಿಡಗಳು. ಹುಡುಗಿಯ ಕೈವಾಡ ಮನೆಯಲ್ಲೆಲ್ಲ ಕಾಣುತ್ತಿತ್ತು. ಅಂದಿಗೆ ಇಂದಿಗೆ ಹುಡುಗಿ ಬೆಳೆದಿದ್ದಳು. ಧ್ವನಿ ಕೊಂಚ ಬದಲಾಯಿಸಿತ್ತು; ಮಾತು ಹಸನಾಗಿತ್ತು; ನಡತೆಯಲ್ಲಿ ಗಾಂಭೀರ್ಯ, ಮುಖದಲ್ಲಿ ಮುಗುಳ್ನಗೆ; ಸಂಬಂಧಪಡದ ವಿಚಾರಗಳಲ್ಲಿ ತಾಟಸ್ಥ್ಯ; ನೋಟದಲ್ಲಿ ನಾಚಿಗೆ; ಇವೆಲ್ಲ ಅವಳ ಚೆಲುವಿಗೆ ಪರಿಮಳವನ್ನು ತಂದಿದ್ದವು.

ನನಗೆ ಪರೀಕ್ಷೆಯಲ್ಲಿ ಪ್ಯಾಸಾದ ವಿಚಾರವನ್ನು ನನ್ನ ಬಾಯಿಂದಲೇ ಕೇಳಿದ ಮೇಲೆ ಅವರ ಮನಸ್ಸು ಹಗುರವಾಯಿತು; ನೀಲಳಿಗಂತೂ ತುಂಬಾ ಸಂತೋಷ ವಾಗಿರಬೇಕು. ಅವಳ ಮನಸ್ಸಿನಲ್ಲಿ ನನ್ನ ಬೆಲೆ ಬಹಳ ಹೆಚ್ಚಿರಬೇಕು. "ಅಜ್ಜಿ, ಅವರಿಗೆ ಪ್ಯಾಸಾಯಿತಂತೆ!'' ಎಂದು ಅವಳು ಕೇಕೆ ಹಾಕಿಕೊಂಡು ಜಂಬದಿಂದ ಹೇಳಿದಾಗ, ಬಹುಶಃ ನನ್ನನ್ನು ಗಂಡನೆಂದೇ ಭಾವಿಸಿಕೊಂಡಿದ್ದಳೇನೋ. "ಅವರು ಅಂದರೆ ಯಾರೆ?'' ಎಂದು ಅವರಜ್ಜಿ ಕೇಳಿದಾಗ ನನ್ನ ಹೆಸರು ಅವಳ ತುಟಿಗೆ ಬಂದಿರಬೇಕು. ಈಚೆಗೆ ಮಾತ್ರ ಬರಲಿಲ್ಲ.

ಅಂದಿನ ನಾಗರ ಪಂಚಮಿಯ ವೈಭವ ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಎಲ್ಲರೂ ರಂಗೋಲಿಯಲ್ಲಿ ನಾಗಪ್ಪನನ್ನು ಬರೆದು ಅದಕ್ಕೆ ಪೂಜೆ ಪುರಸ್ಕಾರ ಮಾಡು ತ್ತಾರೆ. ನೀಲಳಿಗೆ ಈ ಕಂದಾಚಾರ ರುಚಿಸಲಿಲ್ಲ. ಹಿತ್ತಲ ಮಲ್ಲಿಗೆ ಬಳ್ಳಿಯಲ್ಲಿ ತೂಗುತ್ತಿದ್ದ ದೊಡ್ಡ ದಾಸರ ಹಾವಿನ ಪೊರೆಯನ್ನು ತಂದು ಅದರೊಳಗೆ ಬತ್ತದ ಹೊಟ್ಟನ್ನು ತುಂಬಿ ಭರ್ಜರಿ ನಾಗಪ್ಪನನ್ನು ಮಾಡಿಬಿಟ್ಟಿದ್ದಳು. ಅದು ಮಣೆಯ ಮೇಲೆ ಮಾತಾಡದೆ ಮಲಗಿತ್ತು. ಅದಕ್ಕೆ ಮನೆಯವರೆಲ್ಲ ಪೂಜೆ ಸಲ್ಲಿಸಿದ್ದರು. ಹೀಗೆ ಎಲ್ಲರೂ ಏಕೆ ಮಾಡಬಾರದು ?

ಹುಡುಗಿ ನಗುನಗುತ್ತ ಊಟಕ್ಕೆ ಬಡಿಸಿದಳು. ನಾನೂ ಅವಳನ್ನು ನೋಡು ತ್ತಲೇ ಊಟಮಾಡಿದೆ. ತಂದು ಬಡಿಸಿದ್ದನ್ನು ಬೇಡ ಎನ್ನಲಿಲ್ಲ; ಅವಳೂ ನನಗೆ ಬೇಕಾದ್ದನ್ನೇ ತರುತ್ತಿದ್ದಳು. ಊಟವಾದ ಮೇಲೆ "ನಿನಗೆ ಪ್ರಯಾಣದ ಆಯಾಸ ವಿರಬಹುದು; ಆ ರೂಮಿನಲ್ಲಿ ವಿಶ್ರಮಿಸಿಕೋ, ಮಗು; ನಾನು ಸುಬೇದಾರರನ್ನು ನೋಡಿಕೊಂಡು ರಾತ್ರಿಗೆ ಬರುತ್ತೇನೆ'' ಎಂದು ಹೇಳಿ ನಮ್ಮ ಮಾವನವರು ದಫ್ತರವನ್ನು ಬಗಲಿಗೇರಿಸಿ ಹೊರಟರು.

ಅದು ನಾಗಣ್ಣನ ಪ್ರಸ್ತದ ಕೋಣೆ; ಆ ಮಂಚದ ಮೇಲೆ ನಾನು ಮಲಗಿ ನಿದ್ರಿಸುವುದು ಸಾಧ್ಯವಾಗಲಿಲ್ಲ. ಕಣ್ಣು ಮುಚ್ಚಿದರೆ ಒಲುಮೆಯ ಕನಸು ತೆರೆ ತೆರೆಯಾಗಿ ಬರುತ್ತಿತ್ತು. ಅದನ್ನು ಬಿಟ್ಟರೆ ಆ ದೊಡ್ಡ ಮನೆಯಲ್ಲಿ ಮಲಗಲು ಅನುಕೂಲ ವಾದ ಸ್ಥಳವಿಲ್ಲ. ನಾನು ಹೇಗೋ ಆ ಸನ್ನಿವೇಶಕ್ಕೆ ಹೊಂದಿಕೊಳ್ಳುವುದರಲ್ಲಿದ್ದೆ.

ಆಗ ಆ ಹುಡುಗಿ ಏನನ್ನೋ ಹುಡುಕುವುದಕ್ಕೆಂದು ಒಳಗೆ ಬಂದು, ಏನನ್ನೂ ಅರಿಯದವಳಂತೆ ಎಲೆ-ಅಡಕೆ ತಟ್ಟೆಯನ್ನು ಮಂಚದ ಮೇಲಿಟ್ಟು ಹೊರಟುಹೋದಳು. ನಿಜ; ಅವಳಲ್ಲದೆ ಆ ಮನೆಯಲ್ಲಿ ಆಗ ನನ್ನನ್ನಿನ್ನಾರು ನೋಡಿಕೊಳ್ಳಬೇಕು? ಶ್ಯಾನುಭೋಗರಿಗೆ ಅಮಲ್ದಾರರು ಅಳಿಯನಿಗಿಂತಲೂ ಹತ್ತಿರದವರು. ಅಜ್ಜಿಯವರು ಅಡುಗೆಯ ಮನೆಯಲ್ಲಿ ಕೆಲಸಮಾಡುತ್ತಿದ್ದರು. ಇಂಥ ಸಮಯದಲ್ಲಿ ಆ ಹುಡುಗಿ ಹೀಗೆ ಮಾಡಿದ್ದು ತಪ್ಪು ಎನ್ನಲು ಯಾರಿಗೆ ತಾನೆ ಬಾಯಿ ಬರುತ್ತದೆ? ಆದರೂ ಪ್ರೇಮದ ಉತ್ಸಾಹದಲ್ಲಿ ಹುಡುಗಿ ಸುಣ್ಣವನ್ನು ತಟ್ಟೆಯಲ್ಲಿ ಇಟ್ಟಿರಲಿಲ್ಲ. ನಾನು ಹೇಗೆ ತಾಂಬೂಲ ವನ್ನು ಹಾಕಿಕೊಳ್ಳಲಿ? ಅಥವಾ ತಾಂಬೂಲವನ್ನು ತಿರಸ್ಕರಿಸಿದರೆ ನನ್ನ ತುಟಿಕೆಂಪಾಗ ದಿದ್ದರೂ, ತಂದವರ ಮುಖ ಕೆಂಪಾಗುತ್ತಿತ್ತು. ಬಹಳ ಧೈರ್ಯದಿಂದಲೇ "ನೀಲ" ಎಂದೆ. ಅಜ್ಜಿಯವರು "ಅವರು ಕೂಗಿದರು, ಹೋಗಿ ನೋಡಮ್ಮ" ಎಂದರು.

ಹುಡುಗಿ ನನ್ನ ಕೋಣೆಯೊಳಗೆ ಬಂದು "ಕೂಗಿದಿರಾ" ಎಂದಳು. "ಹೌದು, ಎಲೆ-ಅಡಿಕೆ ತಟ್ಟೆಯಲ್ಲಿದೆ. ಸುಣ್ಣ ಗೋಡೆಯಲ್ಲಿದೆಯೆ"? ಎಂದೆ. "ಎಲೆಯನ್ನು ಮಗುಚಿ ನೋಡಿದಿರಾ" ಎಂದು ಹುಡುಗಿ ನಗುನಗುತ ಕೇಳಿದಳು. ಎಲ್ಲ ಸಿದ್ಧ ವಾಗಿತ್ತು, ನನಗೆ ಬಹಳ ನಾಚಿಕೆಯಾಯಿತು. ಮುಂದೆ ಹೀಗೆ ಮಾತು ಬೆಳೆಯಿತು:

"ನೀಲ, ಮಾವ ಬರುವುದು ಹೊತ್ತಾಗಬಹುದು. ಹಳ್ಳಿಯಲ್ಲಿ ನಾನು ಕಾಲ ಕಳೆಯುವುದೇ ಕಷ್ಟವಾಗಿದೆ. ನಿನಗೂ ಒಳಗೆ ಬೇಕಾದಷ್ಟು ಕೆಲಸವಿರಬಹುದು. ನಾನು ನಾಳೆ ಹೊರಡಬೇಕೆಂದಿರುತ್ತೇನೆ. ಈಗ ಏನು ಮಾಡಲಿ?"

"ನನಗೆ ಬಿಡುವಾಗಿದೆ. ನೀವು ಇಷ್ಟು ಬೇಸರಪಡುವುದೇಕೆ? ಬೇಕಾದರೆ ಒಂದುಗಳಿಗೆ ಪಗಡೆಯಾಡೋಣ."

"ಆಗಲಿ."

ದಾಳ ಅಲ್ಲಿಂದ ಇಲ್ಲಿಗೆ ಉರುಳುತ್ತಿತ್ತು; ಒಂಬತ್ತು ಬಿದ್ದರೆ, ನನ್ನ ಕಾಯಿ ಹತ್ತು ಮನೆಗಳನ್ನು ದಾಟುತ್ತಿತ್ತು; ನನ್ನ ದೃಷ್ಟಿ ಅವಳ ಮೇಲಿತ್ತು. ಅವಳ ಕಣ್ಣು ನಾನವಳನ್ನು ನೋಡದಿದ್ದಾಗ ಮಾತ್ರ ನನ್ನ ಮೇಲಿತ್ತು. ನೀಲ ಮಾಯಗಾತಿಯಂತೆ ತೋರುತ್ತಿದ್ದಳು. ಅವಳಿಗೆ ಆಟದ ಮೇಲೂ ಗಮನವಿತ್ತು.

"ಎಷ್ಟು ಬಿತ್ತು?"

"ಹತ್ತು."

ನೀವು ನಡಿಸಿದುದೆಷ್ಟು?"

"ಹನ್ನೊಂದು."

"ಇದು ಸರಿಯೆ?"

"ತಪ್ಪಾದರೆ ದಾಕ್ಷಿಣ್ಯವೇಕೆ, ಹಿಂದಕ್ಕಿರಿಸು."

"ನಿಮ್ಮ ಕಾಯನ್ನು ನಾನು ನಡೆಸಲೆ?"

"ಏಕೆ ಕೂಡದು?"

"ಹಾಗಾದರೆ ಆಟದ ಬಿಗಿ ಏನಾಗುವುದು?"

ಹೆರಳ ಹೂವಿನ ಕಂಪು, ಮುಖದ ಕಾಂತಿ, ಕಣ್ಣಿನ ಸೊಬಗು ಇವು ನನ್ನ ನ್ನೆಲ್ಲಿಗೋ ಕರೆಯುತ್ತಿದ್ದವು. ನೋಟದಲ್ಲಿ ಆಟ ನನಗೆ ಅಪ್ರಿಯವಾಯಿತು.

"ಬಿಡು, ಗೆದ್ದವಳು ನೀನೇ ಎಂದು ಒಪ್ಪಿರುತ್ತೇನೆ. ಮಾವನವರು ಬರುವ ಹೊತ್ತಾಯಿತು; ಆಟ ಇಲ್ಲಿಗೇ ಸಾಕು."

ಅಷ್ಟು ಹೊತ್ತಿಗೆ ಹತ್ತಿರದ ಲಕ್ಷ್ಮೀನೃಸಿಂಹ ದೇವಾಲಯದಲ್ಲಿ ವೇದಘೋಷ ವಾಗುತ್ತಿತ್ತು; ಗಂಭೀರವಾದ ಘಂಟಾನಾದ ಕಿವಿಗೆ ಪಾವನವಾಗಿತ್ತು. ನೀಲ ಗುಡಿಗೆ ಹೊರಡುವುದಕ್ಕೆ ಸಿದ್ಧವಾಗುತ್ತಿದ್ದಳು. ಗುಡಿಗೆ ನನ್ನನ್ನೂ ಕರೆದುಕೊಂಡು ಹೋಗಲು ಸಂತೋಷದಿಂದ ಒಪ್ಪಿದಳು.

ಊರಿಗೆ ಊರೇ ಬೆಳ್ದಿಂಗಳಲ್ಲಿ ಮಿಂದಿತ್ತು; ಇಬ್ಬರೂ ಗುಡಿಗೆ ಹೊರಟೆವು. ದಾರಿಯ ಪಕ್ಕದ ಮನೆಗಳ ಹೆಣ್ಣುಗಂಡೆಲ್ಲ ಮೂಗಿನ ಮೇಲೆ ಬೆರಳಿಟ್ಟುಕೊಂಡು ನಮ್ಮನ್ನೇ ನೋಡುತ್ತಿದ್ದರು. ನಾನೂ ಹುಡುಗಿಯನ್ನು ಒಂದು ಸಲ ನೋಡಿದೆ. ಹೂವು ಹಣ್ಣು ತುಂಬಿದ ತಟ್ಟೆಯನ್ನು ಕಯ್ಯಲ್ಲಿ ಹಿಡಿದುಕೊಂಡು ನೀಲ ಸರಸರನೆ ಪುಟ್ಟ ಹಡಗಿನಂತೆ ಬರುತ್ತಿದ್ದಳು.

ದಾರಿಯಲ್ಲಿ—

"ಬೇಗ ಬರಬಾರದೆ?"

"ಅವಸರದಲ್ಲಿ ತಟ್ಟೆ ಕಯ್ಯಿಂದ ಜಾರಿದರೆ?"

"ನಿನ್ನ ಸ್ನೇಹಿತೆಯರೆಲ್ಲ ನಗುತ್ತಾರೆ!"

"ಅವರು ಈಗಲೂ ನಗುತ್ತಿಲ್ಲವೆ?"

"ಹಾಗಾದರೆ ನಾವು ಮನೆಗೆ ಹಿಂದಿರುಗೋಣ."

"ಹೋಗುತ್ತಿರುವುದು ಗುಡಿಗೆ; ಮನೆಗಲ್ಲ."

ಅವಳ ನಿರ್ಧಾರಕ್ಕೆ ನಾನು ಬೆರಗಾದೆ. ಗುಡಿಯಲ್ಲಿ ನೀಲಳನ್ನು ಎಲ್ಲರೂ ಬಲ್ಲವರೇ. ಅರ್ಚಕರು, "ಬಾಮ್ಮ, ಇಲ್ಲಿಗೆ ಒಬ್ಬಳೇ ಬಂದೆಯಾ?" ಎಂದರು. ಅವಳು ನಗುತ್ತ ನನ್ನ ಕಡೆ ನೋಡಿದಳು. ಅವರು, "ಇವರು ಯಾರು?" ಎಂದರು. ಅವಳು ನಕ್ಕು ಬಿಟ್ಟಳು. ನನ್ನ ಪ್ರವರವನ್ನು ನಾನೇ ಅವರಿಗೆ ಹೇಳಿದೆ. ಆ ಮೇಲೆ ಅವರು, "ಓಹೋ! ರಾಯರ ತಂಗಿಯ ಮಗನೆ! ನಿಮ್ಮ ತಾಯನ್ನು ಸಣ್ಣ ಹುಡುಗಿಯಿಂದ

ನಾನು ಬಲ್ಲೆ. . . . ನೀಲ, ಇನ್ನು ನೀನು ಗೆದ್ದೆ. ನಿನ್ನ ಭಾಗದ ದೇವರು ನಿನ್ನನ್ನು ಸಂರಕ್ಷಿಸುತ್ತಾನಮ್ಮ" ಎಂದು ಆಶೀರ್ವದಿಸಿದರು. ದೇವರಿಗೆ ಸೇವೆ ಸಲ್ಲಿಸಿದೆವು. ಕೃತಕೃತ್ಯರಾಗಿ ಮನೆಗೆ ಬಂದೆವು.

ಅಷ್ಟುಹೊತ್ತಿಗೆ ಮಾವನವರು ಮನೆಗೆ ಬಂದಿದ್ದರು. ನಮ್ಮಿಬ್ಬರನ್ನೂ ಕಂಡು ಅವರಿಗೆ ಬಹಳ ಸಂತೋಷವಾಗಿರಬೇಕು; ಆದರೆ ಮಾತನಾಡಲಿಲ್ಲ ಪ್ರಾಣಿ! ಅಜ್ಜಿಯವರಿಗೂ ಕಣ್ಣಲ್ಲಿ ನೀರು ಬಂದಿತು. "ಮದುವೆಯಾದ ಮೇಲೂ ಎಷ್ಟೋ ಜನ ಹೀಗಿರುವುದಿಲ್ಲ. ಈಗಲೇ ಈ ಮಕ್ಕಳಿಗೆ ಇಂಥ ಅಂತಃಕರಣ ಬೆಳೆದುಬಂದಿದೆ. ದೇವರು ಈ ಕೆಲಸವನ್ನು ಆಗಮಾಡಿಸಬೇಕು; ನನ್ನ ಸರ್ವಸ್ವವನ್ನೂ ಈ ಮದುವೆಗೆ ಧಾರೆಯೆರೆಯುತ್ತೇನೆ" ಎಂದರು. ಹಾಗೆ ಮಾಡುವಂಥವರೇ ಅವರು. ಮಗಳನ್ನು ಯಮನಿಗೆ ಕಾಣಿಕೆಯಾಗಿ ಸಲ್ಲಿಸಿದ ಮೇಲೂ ಅಳಿಯನ ಮನೆಯಲ್ಲಿ ನೆಲಸಿ ಆತನಿಗೆ ಬೆಂಬಲವಾಗಿ ನಿಂತು, ಮೊಮ್ಮಗಳನ್ನು ಹಾಲು ಮಗುವಿನಿಂದ ಹನ್ನೆರಡು ವರುಷದ ವರೆಗೂ ಕಾಪಾಡುತ್ತ ಬಂದಿರುವ ಆ ಮಹಾತಾಯಿಗೆ ನೀಲಳ ಮದುವೆಯ ವಿಚಾರದಲ್ಲಿ ಅಧಿಕಾರವಾಣಿ ಇಲ್ಲವೆ? ನನ್ನ ಮಾವನವರೂ ಬಲುಗೆಲುವಿನಿಂದ "ನಾಳೆಯಿಂದಲೇ ಮದುವೆಗೆ ಬೇಕಾದ ಸಾಮಾನು ಸಿದ್ಧವಾಗಲಿ" ಎಂದರು. ಮಗಳಿಗೆ ಸರಿಯಾದ ಗಂಡು ಸಿಕ್ಕಿಬಿಟ್ಟರೆ ತಾಯಿತಂದೆಗಳ ಆನಂದಕ್ಕೆ ಪಾರವೇ ಇಲ್ಲ. ನಮ್ಮ ಜನದಲ್ಲಿ ರತಿಯಂಥ ಹೆಣ್ಣುಗಳಿವೆ. ಆದರೂ ಮದುವೆ ಭಗೀರಥ ಪ್ರಯತ್ನವಾಗಿದೆ. ಗಂಡಿನ ಮಾರಾಟ ಬಹಳ ಚೆನ್ನಾಗಿ ನಡೆಯುತ್ತಿದೆ. ಬಡವರ ಕಣ್ಣಿಗಂತೂ ಗಂಡು ಕಾಣಿಸುವುದೇ ಇಲ್ಲ; ಒಂದೊಂದು ಸಲ "ನಮ್ಮ ಜನದಲ್ಲಿ ಎಲ್ಲಾ ಹೆಣ್ಣೇ; ಗಂಡಿನ ಹೆಸರೇ ಇಲ್ಲ" ಎಂದು ನೊಂದ ಕನ್ಯಾಪಿತೃಗಳು ಹೇಳಿರುವುದನ್ನು ಅನೇಕರು ಕೇಳಿದ್ದಾರೆ. ಏನೇ ಆಗಲಿ, ಈ ಪರಿಸ್ಥಿತಿ ಸಮಾಜಕ್ಕೆ ಕೀರ್ತಿತರುವುದಿಲ್ಲ. ದೇವರು ಈ ಕಡೆ ಕಣ್ಣು ತೆರೆದು ಹೆಣ್ಣನ್ನೂ ಗಂಡನ್ನೂ ಕಾಪಾಡಬೇಕು.

ಮಾರನೆಯ ದಿನ ನಾನು ಮೈಸೂರಿಗೆ ಹೊರಡಬೇಕಾಯಿತು. ನನ್ನನ್ನು ಏನಾದರೂ ಮಾಡಿ ಆ ದಿನ ಊರಿನಲ್ಲಿ ನಿಲ್ಲಿಸಿಬಿಡಬೇಕೆಂದು ನೀಲ ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ಮನೆಯ ಗಡಿಯಾರದಲ್ಲಿ ಗಂಟೆಯ ಮುಳ್ಳನ್ನು ಸ್ವಲ್ಪ ಹಿಂದಕ್ಕೆ ಎಳೆದಿದ್ದಳು; ಆದರೆ ನನ್ನ ಕೈಗಡಿಯಾರ ತಾನೇ ನನಗೆ ಮುಖ್ಯ ಆದ್ದರಿಂದ ನನಗೆ ಬಸ್ ಸಿಕ್ಕಿತು. ಊರಿಗೆ ಬಂದೇ ಬಿಟ್ಟೆ.

೬

ಮೈಸೂರಿಗೆ ಬಂದ ಮೇಲೆ ನನಗೆ ಯಾವಾಗಲೂ ನೀಲಳ ಕನಸೇ. ನನ್ನ ಮನಸ್ಸಿಗೆ ಒಂದು ದಿನ ಒಂದು ಯುಗದಂತಿತ್ತು. ಹುಡುಗಿಯನ್ನು ನೋಡುವ

ಬಯಕೆಯಿಂದ, "ನೀಲಳನ್ನು ಕರೆದುಕೊಂಡು ನೀವು ನವರಾತ್ರಿಯಲ್ಲಿ ಮೈಸೂರಿಗೆ ಬನ್ನಿ, ಮಾವ" ಎಂದು ಮಾವನವರಿಗೆ ನಾನು ಕಾಗದ ಬರೆದೆ. ಅವರೂ "ಅಸ್ತು" ಎಂದು ಕಾಗದ ಬರೆದರು. ನವರಾತ್ರಿ ಬಂದೇ ಬಂದಿತು. ನನಗೆ ಅಷ್ಟುಹೊತ್ತಿಗೆ ಬ್ಯಾಂಕಿನಲ್ಲಿ ಅರವತ್ತು ರೂಪಾಯಿನ ನೌಕರಿಯಾಗಿತ್ತು. ಮನೆಯಲ್ಲಿ ಅಷ್ಟು ಮುಜಿಗರವೇನೂ ಇರಲಿಲ್ಲ. ಮನೆಯಲ್ಲಿ, ತಾಯಿ ಮಗ ಇಬ್ಬರೇ ಇದ್ದವರು. ಆದರೆ ನಮ್ಮ ಸಂಸಾರದಲ್ಲಿ ಪೂರ್ಣತೆ ಇರಲಿಲ್ಲ. ಮನೆಗೆ ಯಾರಾದರೂ ಹೆಣ್ಣುಮಕ್ಕಳು ಬಂದರೆ "ಬನ್ನಿ ಅಮ್ಮ, ಕೂತುಕೊಳ್ಳಿ" ಎಂದು ನಗುತ್ತ ಮಾತನಾಡಿಸಿ, "ಕುಂಕುಮ ಇಟ್ಟುಕೊಳ್ಳಿ" ಎಂದು ಅಕ್ಕರೆಯಿಂದ ನುಡಿಯುವ ಅರ್ಧಾಂಗಿಯಿರಲಿಲ್ಲ. "ನನ್ನ ಸೊಸೆ ಬಂದರೆ ನನಗೆ ಶ್ರಮ ಕಡಿಮೆಯಾಗುತ್ತದೆ" ಎಂದು ನನ್ನ ತಾಯಿಯವರೂ ಅವರಿವರ ಹತ್ತಿರ ಹೇಳುತ್ತಿದ್ದರು.

ಕೊನೆಗೆ ಒಬ್ಬರ ಮನಸ್ಸು ಇನ್ನೊಬ್ಬರಿಗೆ ತಿಳಿಯಿತು. ಅಣ್ಣನ ಮಗಳನ್ನು ಸೊಸೆ ಎನ್ನಲು ಅವರು ಒಪ್ಪಿದರು. ಸೋದರಮಾವನ ಮಗಳನ್ನು ಹೆಂಡತಿ ಎನ್ನಲು ನಾನು ಒಪ್ಪಿದೆ. ಮದುವೆಯ ಮಾತು ಬಹಳ ಮಧುರವಾಗಿತ್ತು.

ಮಾತಿಗೆ ತಪ್ಪದಂತೆ ನಮ್ಮ ಮಾವನವರೂ ನೀಲಳನ್ನು ಕರೆದುಕೊಂಡು ನವರಾತ್ರಿಗೆ ಬಂದೇ ಬಂದರು. ಅಂದು ನಮ್ಮ ಮನೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕಾರಣಕ್ಕಾಗಿ ಆನಂದ; ಮಾತಿನಮಳೆ, ಹರ್ಷದಹೊಳೆ. ಮದುವೆಯ ಮಾತು ಗಟ್ಟಿಯಾಯಿತು. ಅಣ್ಣತಂಗಿಯರು ಇಬ್ಬರೂ ಗೆದ್ದೆವು ಅಂದುಕೊಂಡರು. ನೀಲ ನಮ್ಮ ಮನೆಯಲ್ಲಿ ಸೆರೆ ಬಿಟ್ಟ ಹಕ್ಕಿಯಂತೆ ಓಡಾಡುತ್ತಿದ್ದಳು. ಅಂದು ಹಬ್ಬದ ಅಡುಗೆಯನ್ನು ಮಾಡಿದ್ದರು. ಮಧ್ಯಾಹ್ನವೇ ಅಣ್ಣ ತಂಗಿ ಏತಕ್ಕೊ ಪೇಟೆಗೆ ಹೊರಟರು. ನಾನು ಬ್ಯಾಂಕಿನಿಂದ ಬರುವ ಹೊತ್ತಿಗೆ ಸಂಜೆ ನಾಲ್ಕುವರೆ ಗಂಟೆಯಾಗಿತ್ತು. ಆಗಲೂ ಅವರು ಮನೆಗೆ ಬಂದಿರಲಿಲ್ಲ. ಮನೆಯಲ್ಲಿ ಹುಡುಗಿಯೊಬ್ಬಳನ್ನೇ ಬಿಟ್ಟು ಹೋಗಿದ್ದರು.

ನನ್ನ ಧ್ವನಿಯನ್ನು ಕೇಳಿದ ಕೂಡಲೆ ಹುಡುಗಿ ಥಟ್ಟನೆದ್ದು ಬಂದು ಬಾಗಿಲನ್ನು ತೆರೆದಳು.

"ಒಬ್ಬಳೇ ಮನೆಯಲ್ಲಿ ಹೇಗೆ ಇದ್ದೆ, ನೀಲ?"

"ಬೇಗ ಬರುತ್ತೇವೆಂದು ಹೇಳಿ ಹೋದವರು ಇನ್ನೂ ಬಂದಿಲ್ಲ; ಪಕ್ಕದ ಮನೆಯವರಿಗೆ ನನ್ನ ಗುರುತಿಲ್ಲ. ಹೇಗೋ ಇಲ್ಲೇ ಇದ್ದೆ. ಈಗ ನೀವು ಬಂದು ಬಿಟ್ಟಿರಿ. ತುಂಬಿದ ಬೀದಿಯಲ್ಲಿ ಭಯವೆಂದರೇನು?"

"ಅದಿರಲಿ, ನೀಲ, ನಾವೂ ಪೇಟೆಗೆ ಹೋಗಿ ಬರೋಣವೆ?"

" ಯಾರಾದರೂ ಕಂಡರೆ ಏನೆಂದಾರು ? "

" ಇಲ್ಲ, ನೀನು ಸುಮ್ಮನಿರು. ನಾನು ಕೇಳಿದರೆ ಹೇಳುತ್ತೇನೆ. ಇವಳು ನನ್ನ ಸೋದರಮಾವನ ಮಗಳು, ಹೆಂಡತಿಯಲ್ಲ, ಎಂದು."

" ಹೇಗೆಂದರೂ ಒಂದೇ ಅಲ್ಲವೇ ? "

" ಏನೋ, ಯಾರು ಬಲ್ಲರು ? "

ಪೇಟೆಯಲ್ಲೆಲ್ಲ ಹುಡುಕಿ ಎತ್ತರವಾದ ಕರ್ಪೂರದ ಬೊಂಬೆಯೊಂದನ್ನು ತಂದೆವು. ಅದಕ್ಕೆ ಹಸುರುಂಗಿ, ಗಿಲ್ಟ್ ಬಳೆಗಳು, ಲೋಲಕ್ ಎಲ್ಲ ಇಟ್ಟು ನೋಡಿದೆವು. ಅದರ ನೋಟ ಬಹಳ ಮುದ್ದಾಗಿತ್ತು. ದಾರಿಯುದ್ದಕ್ಕೂ ಎಲ್ಲರೂ " ಈ ಬೊಂಬೆಗೆ ಎಷ್ಟು ಕೊಟ್ಟಿರಿ ? " ಎಂದು ಕೇಳುತ್ತಿದ್ದರು. ಮನೆಗೆ ಬಂದಮೇಲೆ ನೀಲ ಅದಕ್ಕೆ ಭೀತಿ ಬಿಡಿಸಿದಳು. ಕರ್ಪೂರದ ಗೊಂಬೆಗೂ ಕಣ್ಣೆಸರಾಗುತ್ತದೆ. ಅದು ನನ್ನ ಟೇಬಲ್ ಮೇಲೆ ಕುಳಿತು ನಮ್ಮಿಬ್ಬರನ್ನೇ ಎವೆಯಿಕ್ಕದೆ ನೋಡುತ್ತಿತ್ತು. ರಸಿಕರು ಕ್ಷಮಿಸುವುದಾದರೆ ಉಳಿದಿರುವ ಇನ್ನೊಂದು ಗುಟ್ಟನ್ನೂ ರಟ್ಟುಮಾಡಿಬಿಡುತ್ತೇನೆ. ಬೊಂಬೆಗೆ ಇಬ್ಬರೂ ಏಕಕಾಲದಲ್ಲಿ ಮುತ್ತನಿಡುವ ಸಂಭ್ರಮದಲ್ಲಿ ಸ್ವಲ್ಪ ಅಚಾತುರ್ಯವಾಯಿತು. ಪ್ರೇಮನಗರಿಯಲ್ಲಿದ್ದಾಗ ಪಾಪದ ಭೀತಿ ನನಗಿರಲಿಲ್ಲ. ಪಾಪ! ಹುಡುಗಿ ಮಾತ್ರ ಏನೆಂದುಕೊಂಡಳೋ. ಆಗ ಅಲ್ಲಿದ್ದವರು ನಾವಿಬ್ಬರೇ. ನಾನು ಮಾತ್ರ ಮಾತನ್ನು ತಿರುಗಿಸಿ, " ಕರ್ಪೂರ ಬೊಂಬೆಗೆ ಕಸ್ತೂರಿಯ ತಿಲಕವನ್ನಿಟ್ಟು, ತೊಳಸಿಯ ಹಾರವನ್ನು ಹಾಕಿದರೆ, ಕೃಷ್ಣಮೂರ್ತಿಯಂತೆ ಕಾಣುತ್ತದೆ" ಎಂದು ನಕ್ಕುಬಿಟ್ಟೆ.

ಮುಂದೆ ಹೀಗೆ ಮಾತು ನಡೆಯಿತು :—

" ಕೋಪವೇಕೆ, ನೀಲ ? ನಾನು ನಿನ್ನನ್ನೇ ಮದುವೆಯಾಗುತ್ತೇನೆ. ಸುಲಭವಾಗಿ ಸಿಕ್ಕಿದ್ದೇನೆ. ವರದಕ್ಷಿಣೆ ನನಗೆ ಬೇಡ. ನಾನೂ ನಿನಗೆ ಯಾವ ಬಹುಮಾನವನ್ನೂ—ಪ್ರೀತಿಯೊಂದನ್ನುಳಿದು—ಇಡುವುದಿಲ್ಲ. ಇನ್ನು ಮುಂದಾದರೂ ನೀನು ಧೈರ್ಯವಾಗಿರಬಾರದೆ ? "

" ನನ್ನನ್ನು ತಬ್ಬಲಿ ಎಂದು ತೊರೆದು ಐಶ್ವರ್ಯವಂತರ ಮಗಳನ್ನು ಅಪೇಕ್ಷಿಸಿದರೆ ನನ್ನ ಗತಿಯೇನು ? ಏನೋ ದೇವರು ಹೇಗೆ ಮಾಡುತ್ತಾನೋ ! ನೀವು ಮಾತ್ರ ಮನಸ್ಸನ್ನು ಹೊರಳಿಸಬೇಡಿ. ನೀವು ಕೊಟ್ಟಿರುವ ಧೈರ್ಯದ ಬಲದಿಂದ ನಾನು ಇನ್ನೂ ಆಸೆಯಿಂದಿರುತ್ತೇನೆ."

" ನೀಲ, ನೀನು ಧೈರ್ಯಗೆಡಬೇಡ. ಮದುವೆಯ ಮೊಗ್ಗು ನಾಳೆ ಮಲ್ಲಿಗೆಯಂತೆ ಅರಳುತ್ತದೆ; ಮುಡಿದುಕೊಳ್ಳುವೆಯಂತೆ. ಊರಿಗೆ ಬಂದವಳು ನೀರಿಗೆ ಬರ

ಲಾರಳೆ? ಆದರೆ ಇಂಥ ಕಾಲದಲ್ಲಿ ಅತ್ತೆಯವರೂ ಇದ್ದಿದ್ದರೆ ಚೆನ್ನಾಗಿತ್ತು. ಆದರೆ ಆ ಭಾಗ್ಯ ನಮಗಿಲ್ಲ.''

ನೀಲಳ ಕಣ್ಣಿನಲ್ಲಿ ನೀರು ಪಳಪಳನೆ ಬಂದಿತು. ನನಗೂ ಮನಸ್ಸು ಇಳಿದು ಹೋಯಿತು. ತಾಯಿ ದೇವರ ಪ್ರತಿನಿಧಿ.—ಇದು ಸಾವಿರ ಕಾಲ ನಿಲ್ಲುವ ಮಾತು. ಹುಡುಗಿ ಅಂಜಿದ ಜಿಂಕೆಯಂತೆ ಒಳಗೆ ಬಂದು ನನ್ನನ್ನೊರಗಿ ಕುಳಿತಳು. ಮೌನವು ಕತ್ತಲೆಯಂತೆ ಸುತ್ತಲೂ ಆವರಿಸುತ್ತಿತ್ತು. ನಡುವೆ ಅವಳು ನೀರು ತುಂಬಿದ ಕಣ್ಣನ್ನು ಹೊರಳಿಸುತ್ತಾ, ''ನೀವು ನನ್ನನ್ನು ಪ್ರೀತಿಸದಿದ್ದರೆ ನಾನು ಉಳಿಯು ತ್ತಿರಲಿಲ್ಲ'' ಎಂದಳು. ಈ ಚಿತ್ರ ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ನೆಲಸಿ ಗೀತಗಳನ್ನು ಇನ್ನೂ ಬರೆಯಿಸುತ್ತಿದೆ. " ಪ್ರೀತಿಯ, ಲೋಕದಲ್ಲಿ ನಮ್ಮಿಬ್ಬರಿಗೂ ಮದುವೆಯಾಗಿ ಆರುತಿಂಗಳಾಗಿದೆ, ನೀಲ ; ಇನ್ನುಳಿದಿರುವುದು ಸಾಂಪ್ರದಾಯಕವಾದ ಸಮಾಜದ ಒಪ್ಪಿಗೆ; ಅದಕ್ಕೂ ಪ್ರಯತ್ನ ನಡೆಯುತ್ತಿದೆ'' ಎಂದು ನಾನವಳಿಗೆ ಭರವಸೆಯನ್ನಿತ್ತೆ.

ಅಷ್ಟು ಹೊತ್ತಿಗೆ, ಅಣ್ಣ ತಂಗಿ ಇಬ್ಬರೂ ಸೀರೆ ಹಣ್ಣು ಹೂವು ಎಲ್ಲವನ್ನೂ ಒಂದು ಬುಟ್ಟಿಯಲ್ಲಿ ತುಂಬಿಕೊಂಡು ನಗುತ್ತ ಮನೆಗೆ ಬಂದರು. ಆಗ ನಾನು-ನೀಲ ಪಗಡೆಯಾಡುತ್ತಿದ್ದೆವು. ಬೊಂಬೆಯ ಕೆನ್ನೆಯ ತುಂಟನಗುವನ್ನು ಕಂಡು ಇಬ್ಬರೂ ಆಶ್ಚರ್ಯಪಟ್ಟರು.

೭

ಬಂದವರು ಎಷ್ಟುದಿನ ನಿಲ್ಲುತ್ತಾರೆ? ಊರಿಗೆ ಹೊರಡುವ ಸಮಯದಲ್ಲಿ ನೀಲ ಹೊಸಸೀರೆಯುಟ್ಟು, ಹೆರಳ ತುಂಬ ಹೂ ಮುಡಿದು ಅತ್ತೆಗೆ ನಮಸ್ಕರಿಸಿದಾಗ, ಅವರು "ಹೋಗಿಬಾಮ್ಮ, ಕತ್ತಿನ ಅಡ್ಡಿಗೆ ಜೋಪಾನ, ಬಸ್ಸಿನ ಪ್ರಯಾಣ, ಜೋಕೆಯಿಂದಿರು, ತಾಯಿ'' ಎಂದು ಆಶೀರ್ವದಿಸಿದಾಗ, ಹುಡುಗಿ ನನ್ನನ್ನು ನೋಡಿದಂತೆ ಮಾಡಿ ನೆನೆದ ಕಣ್ಣನ್ನೊರಸಿಕೊಂಡಾಗ, ನನ್ನ ಮನಸ್ಸಿನಲ್ಲಿ ಇಂಥ ಚೆಲುವೆಯನ್ನು ಊರಿಗೆ ಹೇಗೆ ಕಳುಹಿಸಲಿ ಎನ್ನಿಸಿತು. "ಹೋಗಬೇಡ, ನಿಲ್ಲು'' ಎಂದು ಅಧಿಕಾರವಾಣಿಯಿಂದ ಹೇಳಿದರೆ ಬಸ್ಸಿನಲ್ಲಿ ಕುಳಿತಿದ್ದ ಇಪ್ಪತ್ತೆರಡು ಜನ ಏನಂದಾರು ಎಂಬ ಭಯದಿಂದ ಸುಮ್ಮನೆ ಮನೆಗೆ ಬಂದುಬಿಟ್ಟೆ. ಕರ್ಪೂರದ ಬೊಂಬೆಗೆ ಬಸ್ಸಿನವನು ಟಿಕೆಟ್ಟನ್ನು ಕೊಡಲಿಲ್ಲ; ಅದೂ ಅವಳೊಡನೆ ಸುಖವಾಗಿ ಊರಿಗೆ ಹೋಯಿತು. ಅವಳನ್ನು ಊರಿಗೆ ಕಳುಹಿಸಿದ ಮೇಲೆ ಬಂದೆರಡು ದಿನ ನಾನು ಮಾಡಿದ ಬ್ಯಾಂಕಿನ ಲೆಕ್ಕ ಸರಿಹೋಗಲಿಲ್ಲ; ಕೂಡುವುದರಲ್ಲಿ, ಕಳೆಯುವುದ ರಲ್ಲಿ ತಪ್ಪುಮಾಡಿ ನಮ್ಮ ಏಜಂಟರ ಮನಸ್ಸಿಗೆ ನನ್ನ ವಿಷಯದಲ್ಲಿ ಗೌರವ ಹೋಗುವ ಸಂಭವ ಬಂದಿತ್ತು. ಕಡೆಗೆ, ಏಜೆಂಟರ "ಅಮ್ಮಾವರ'' ಶಿಫಾರಸಿನಿಂದ

ನನ್ನ ನೌಕರಿ ಉಳಿಯಿತು. ದೊಡ್ಡ ಮನುಷ್ಯರ ಹಣೆಯ ಬರಹವೇ ಹೀಗೆ. "ಸಾವಿರ ಕುದುರೆ ಸರದಾರನಾದರೂ ಮನೆಯ ಹೆಂಡತಿಯ ಕಾಸದಾರ" ಎನ್ನುವ ಮಾತಿನಲ್ಲಿ ಕಠಿಣವಾದ ಸತ್ಯವಿದೆ.

೮

ಊರಿಗೆ ಹೋದವರಿಂದ ಏಕೋ ಕಾಗದವೇ ಬರಲಿಲ್ಲ. ನಮ್ಮ ಮಾವನವರಿಗೆ ಜಮಾಬಂದಿಯ ಗಲಾಟೆಯಿದ್ದರೂ, ನೀಲ ಬರೆಯಬಹುದಾಗಿತ್ತು. ಅವಳೂ ಬರೆಯಲೇ ಇಲ್ಲ. ನನ್ನ ಮನಸ್ಸಿಗೆ ಬಹಳ ಕಳವಳವಾಯಿತು.

ಕೊನೆಗೊಂದುದಿನ ಇದ್ದಕ್ಕಿದ್ದಂತೆಯೇ ಮಾವನವರು ನಮ್ಮ ಮನೆಗೆ ಬಂದರು. ಅವರು ಹರ್ಷಚಿತ್ತರಾಗಿರಲಿಲ್ಲ; ನನ್ನೊಡನೆ ಮಾತನಾಡಲಿಲ್ಲ. "ತಂಗೀ, ಏಳು" ಎಂದು ಅವಸರಪಡಿಸಿ ನಮ್ಮ ತಾಯನ್ನೂ ಕರೆದುಕೊಂಡು ಎಲ್ಲಿಗೋ ಹೊರಟು ಹೋದರು. ಇಬ್ಬರೂ ಮನೆಗೆ ಬಂದಾಗ ರಾತ್ರಿ ಒಂಬತ್ತು ಗಂಟೆಯ ಮೇಲಾಗಿತ್ತು. ಇಬ್ಬರೂ ಏನೋ ಪೇಚಾಟದಲ್ಲಿ ಸಿಕ್ಕಿದಂತೆ ಕಾಣುತ್ತಿದ್ದರು. ನನಗೆ ಅವರ ರೀತಿಯೇ ಅರ್ಥವಾಗಲಿಲ್ಲ. ಮಾವನವರು ನಿಟ್ಟುಸಿರುಬಿಡುತ್ತಿದ್ದರು. ಅಮ್ಮ ಸುಮ್ಮನೆ ಸೆರಗಿನಿಂದ ಕಣ್ಣನ್ನೊರಸಿಕೊಳ್ಳುತ್ತಿದ್ದಳು. "ಇದೆಲ್ಲಾ ಏಕೆ" ಎಂದು ಕೇಳುವಷ್ಟು ಧೈರ್ಯ ನನಗೆ ಬೇಗ ಬರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ನಮ್ಮ ಮಾವನವರು ಮೇಲೆದ್ದು ಸಂಧ್ಯಾವಂದನೆ ಮಾಡಿ, "ಈ ದಿನ ಭಾನುವಾರ; ನನಗೆ ಉಪವಾಸ" ಎಂದು ಊಟವನ್ನೂ ಮಾಡದೆ ಮಲಗಿದರು.

ಮಾರನೆಯ ದಿನ ಬೆಳಗಾಗ ಅವರು, "ಅಣ್ಣ, ನಾನು ಹೋಗಿ ಬರುತ್ತೇನೆ. ಇಲ್ಲಿ ನಿಲ್ಲಲು ಮನಸ್ಸಿಲ್ಲ. ನಾಳೆ ಊರಿನಲ್ಲಿ ಹುಜೂರು ಜಮಾಬಂದಿ. . . ನಡೆದ ಸಂಗತಿಯನ್ನು ತಂಗಿ ನನ್ನ ಪರವಾಗಿ ನಿನಗೆ ಹೇಳುತ್ತಾಳೆ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ" ಎಂದು ಹೇಳಿ ಹಳ್ಳಿಗೆ ಹೊರಟುಹೋದರು. ಸೋಮವಾರ ಸಂಜೆ ನಾನು ಬ್ಯಾಂಕಿನಿಂದ ಮನೆಗೆ ಬಂದ ಮೇಲೆ ನಮ್ಮ ತಾಯಿ ನನಗೆ ಹೀಗೆ ಹೇಳಿದರು:

"ಮಗು, ಈ ದುಃಖವನ್ನು ತಡೆಯಲು ನಿನಗೆ ಕಷ್ಟವಾಗಬಹುದು. ಆದರೂ ಹೇಳುತ್ತೇನೆ, ಕೇಳು. ನೀಲಳನ್ನು ನೀನು ಮರೆಯಲೇ ಬೇಕು. ನೀನು ಅವಳನ್ನು ಮದುವೆಯಾಗುವಂತಿಲ್ಲ. ದೈವೇಚ್ಛೆಯಲ್ಲಿ ಅದಿಲ್ಲ. ಅಣ್ಣಯ್ಯ ಈ ಮದುವೆಗೆ ಲಗ್ನ ಕಟ್ಟಿಸಲು ಜೋಯಿಸರ ಮನೆಗೆ ಹೋಗಿ ಅವರಿಗೆ ನಿಮ್ಮಿಬ್ಬರ ಜಾತಕಗಳನ್ನು ತೋರಿಸಿದನಂತೆ. ಅವರು ಬಹಳ ಆಲೋಚನೆಮಾಡಿ, "ರಾಯರೇ, ದಯವಿಟ್ಟು ಈ ಮದುವೆಗೆ ಕೈಹಾಕಬೇಡಿ. ಈ ಜಾತಕಗಳಲ್ಲಿ ಶತ್ರುಭಾವ ಅಸಾಧ್ಯವಾಗಿದೆ. ಮದುವೆಮಾಡಿದ್ದೇ ಆದರೆ ಅನರ್ಥವಾಗಬಹುದು" ಎಂದರಂತೆ.

ಅಣ್ಣಯ್ಯ "ನನ್ನ ಅವಸ್ಥೆ ಇಂದಿಗೆ ತೀರಿತು" ಎಂದುಕೊಂಡು ಇಲ್ಲಿಗೆ ಬಂದು ಬಿಟ್ಟ. ಇಲ್ಲಿ ಇನ್ನೂ ಕೆಲವು ಜೋಯಿಸರಲ್ಲಿ ನಾವು ವಿಚಾರಮಾಡಿದೆವು. ಅವರೂ ಹಾಗೆಯೇ ಹೇಳುತ್ತಾರೆ. ಆದ್ದರಿಂದ ಬಹಳ ದೂರಾಲೋಚನೆಯಿಂದ ಈ ಮದುವೆಯ ಪ್ರಯತ್ನವನ್ನು ಇಲ್ಲಿಗೇ ನಿಲ್ಲಿಸಿರುತ್ತೇನೆ. ಇನ್ನು ಅಣ್ಣಯ್ಯನ ಗತಿ ದೇವರಿಗೇ ಪ್ರೀತಿಯಾಗಲಿ. "ಹೆಣ್ಣುಗಂಡು ಎರಡೂ ನನ್ನವೇ; ಮದುವೆಮಾಡಿ ಉದ್ಧಾರ ವಾಗುತ್ತೇನೆ" ಎಂದು ಅವಸು ಮಾಡಿದ ಕೆಲಸ ಹೀಗೆ ಮುರಿದುಹೋಯಿತು. ನೀನೂ ಮನಸ್ಸಿನಲ್ಲಿ ಕೊರಗಿ ನನ್ನನ್ನು ಕಾಲುಗೆಡಿಸಬೇಡ. ವಿವೇಕದಿಂದ ಧೈರ್ಯ ತಂದುಕೋ. ಇನ್ನು ಕೆಲವು ದಿನ ನಾನು ಮದುವೆ ಎನ್ನುವ ಮಾತನ್ನು ಆಡುವುದಿಲ್ಲ. ಆ ಮೇಲೆ ದೇವರಿದ್ದಾನೆ, ನೋಡೋಣ. ಮೊದಲು ನೀಲಳ ಮದುವೆ ನಡೆಯಲಿ, ಆ ಮೇಲೆ ನಿನ್ನ ಮದುವೆ ಎಂದು ಬಹಳ ದುಃಖದಿಂದ ಹೇಳಿದರು.

ಇದನ್ನೆಲ್ಲ ಕೇಳುವ ಭಾಗ್ಯ ನನ್ನ ಕಿವಿಗಿತ್ತು. ಎದೆಯಲ್ಲಿ ಹರಿತವಾದ ಚೂರಿಯನ್ನು ಚುಚ್ಚಿದಂತಾಯಿತು; ಪ್ರಾಣಪಕ್ಷಿ ಮಾತ್ರ ಹಾರಿಹೋಗಲಿಲ್ಲ. ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಆಸೆ ಒಂದುಹಿಡಿ ಬೂದಿಯಾಯಿತು. ಒಲುಮೆ ಎಂದೋ ಕಂಡ ದುಸ್ವಪ್ನವಾಯಿತು. ಅಂದು ಗಂಟಲಿನಲ್ಲಿ ಅನ್ನ ಇಳಿಯಲಿಲ್ಲ; ಕಣ್ಣಿಗೆ ನಿದ್ದೆ ಬಾರದು. ಅಂದಿನ ದುಃಖ ಈಶ್ವರನಿಗೆ ಮೀಸಲು. ಮನಸ್ಸಿನಲ್ಲಿ ತರಂಗತರಂಗವಾಗಿ ದುಃಖ ಕುದಿದು ಬರುತ್ತಿತ್ತು.

ಎಲ್ಲರೂ ಒಪ್ಪಿದ ಮದುವೆಗೆ ಜಾತಕಾನುಕೂಲವಿಲ್ಲವೆ? ಜಾತಕಾನುಕೂಲವಿಲ್ಲ ಎಂಬೊಂದು ಕಾರಣಕ್ಕಾಗಿ ಇಂಥ ಮದುವೆ ನಿಂತುಹೋಗಬೇಕೆ? ಈ ತೀರ್ಮಾನ ವನ್ನು ಸರಿ ಎನ್ನುವುದು ಹೇಗೆ? ತಾಯಿಯಿಲ್ಲದ ಹುಡುಗಿ ಎಂಬ ಕನಿಕರದ ಕೂಗಿಗೆ ಕಿವಿಗೊಟ್ಟು ನನ್ನ ಕಷ್ಟಸುಖಗಳಲ್ಲಿ ತನ್ನ ಮಹಿಮೆಯನ್ನು ಬೀರುವಳೆಂಬ ನಂಬಿಕೆಯ ಮೇಲೆ, ನೀಲಳ ಪ್ರೀತಿಯಲ್ಲಿ ಬಿದ್ದ ನನ್ನ ಗತಿಯೇನು? ಕಾಡಿನಲ್ಲಿ ಬೆಳೆದ ತುಳಸಿಯನ್ನು ತಂದು, ನಕ್ಕರೆಯ ಬೃಂದಾವನದಲ್ಲಿ ನೆಟ್ಟು ಹಾಲನ್ನೆರೆಯುವೆನೆಂದರೆ ಅದೂ ವಿಧಿಗೆ ಅಪ್ರಿಯವೆ? ಅಥವಾ ನನ್ನ ಪ್ರೀತಿಯ ಶಕ್ತಿಯ ಮುಂದೆ ಇಂಥ ತಡೆ ಹೇಗೆ ನಿಲ್ಲಬಲ್ಲುದು? ಆದರೆ, ಈ ಮದುವೆಯ ವಿಚಾರದಲ್ಲಿ ಬಾಯುಳ್ಳ ಎಲ್ಲರಿಗೂ ಈ ಕಂಟಕವನ್ನು ಕಿತ್ತೊಗೆಯುವ ಧೈರ್ಯ ಹೇಗೆ ಬಂದೀತು? ಒಂದುವೇಳೆ ಅವರಿಗೂ ನನ್ನ ಧೈರ್ಯ ಬಂದರೂ, ಅವರು ಶಂಕಿಸುತ್ತಿರುವ ಪ್ರಸಂಗ ನಡೆದು ಅನರ್ಥವಾದರೆ ಆ ಅಪರಾಧವನ್ನು ಹೊರುವ ಶಕ್ತಿ ಯಾರಿಗುಂಟು? ನೀಲ ರತ್ನದಂಥ ಹುಡುಗಿ ಪಾಪ! ಅವಳ ಗತಿಯೇನು? ನನ್ನನ್ನು ಅವಳು ಮರೆಯುವುದು ತಾನೆ ಸುಲಭವೆ?

ನನ್ನ ಕರ್ತವ್ಯವೇನು? ನೀಲಳಿಗೆ ನನ್ನ ಹೃದಯವನ್ನು ಧಾರೆಯೆರೆದ ಮೇಲೂ ನಾನು ಇನ್ನೊಬ್ಬಳನ್ನು ಹೇಗೆ ಕಟ್ಟಿಕೊಳ್ಳಲಿ? ಯಾರಿಗಾದರೂ ಅದರಿಂದ ಸೌಖ್ಯವುಂಟೆ? ಇಲ್ಲ; ಆ ಮದುವೆ ಆಗಕೂಡದು, ಅದಕ್ಕೆ ನಾನು ಎಡೆಗೊಡುವುದಿಲ್ಲ. ಪ್ರೇಮಕ್ಕಾಗಿ ನಾನು ಸರ್ವಸ್ವವನ್ನೂ ಆಹುತಿಕೊಡುತ್ತೇನೆ.—ಹೀಗೆಲ್ಲ ಆಲೋಚನೆ ಮಾಡಿ ಕೊನೆಗೆ, ಮದುವೆಯ ಸವಿಯನ್ನು ತೋರಿಸಿ, ನೀಲಳನ್ನು ನಿರಂತರ ಪತಿವಿಯೋಗದುಃಖದಲ್ಲಿ ತಳ್ಳುವುದಕ್ಕಿಂತ, ಅವಳಿಗೆ ಸಹಸ್ರಯೋಜನದೂರವಾಗುವುದೇ ನ್ಯಾಯವಾದುದೆಂಬ ನಿರ್ಧಾರಕ್ಕೆ ಬಂದು ನಿಂತೆ. ನೀಲಳನ್ನು ವರಿಸುವ ಪ್ರಯತ್ನವನ್ನು ನಡುನೀರಿನಲ್ಲಿ ಬಿಟ್ಟು, ನಾನೂ ತೇಲದೆ, ಮುಳುಗದೆ, ನೀರಸಜೀವನದಲ್ಲಿ ನಿಸ್ಸಹಾಯನಾದೆ. ಈ ಮದುವೆಯನ್ನು ನಿಲ್ಲಿಸಿ, ನನ್ನನ್ನು ಕೊಂದು ಕೂಗಿದ ಸರ್ವಯಶಸ್ಸೂ ಸಂಪೂರ್ಣವಾಗಿ ಆ ಪ್ರಚಂಡ ರುದ್ರವಿಧಿಯದು; ಮನುಷ್ಯ ಪ್ರಯತ್ನಕ್ಕೆ ಸಾಧಾರಣವಾಗಿ ವಿಧಿ ಶತ್ರು ಮನೋಧರ್ಮವನ್ನು ತಾಳುತ್ತದೆ; ವಿಧಿಗೆ ಯಾವಾಗಲೂ ವಿಜಯವೇ.

ನನ್ನ-ಅವಳ ಮದುವೆ ಹೀಗೆ ನಿಂತುಹೋದರೂ ನಾನು ನೀಲಳನ್ನು ಮರೆಯುವಂತಿಲ್ಲ. ಆ ಹಳ್ಳಿ, ಆ ಹುಡುಗಿ, ಮೊದಲ ಪ್ರೀತಿಯ ನೂರಾರು ಚಿತ್ರಗಳು, ಅವಳಿಗಾಗಿ ನಾನು ಕೊಂಡುಕೊಟ್ಟ ಬೊಂಬೆ, ಎಲ್ಲ ನನ್ನ ಬಾಳಿನಲ್ಲಿ ಬರೆದು ನಿಂತಿವೆ. ನೀಲಳಿಗೆ ನನ್ನ ಕನಸು ಸಹಿತ ಬೀಳಬೇಡ. ಅವಳು ಈ ದುಃಖವನ್ನು ತಡೆಯಲಿ. ಅವಳು ಹಾಲುಂಡು, ಹೂ ಮುಡಿದು, ಚೆನ್ನಾಗಿ ಬಾಳಲಿ.

ಪ್ರೇಮ ಹೇಗಿದ್ದರೂ ಪ್ರಿಯವಾದುದೇ; ಅದು ಹಾಲಿನಂತಿದ್ದರೂ ಚೆನ್ನ; ಹೆತ್ತು ಮೊಸರಾದರೂ ಚೆನ್ನ; ಅದರಲ್ಲಿ ಕೂಡುವುದೂ ಉಂಟು; ಅಗಲುವುದೂ ಉಂಟು. ಆದರೂ ಅದರ ವೈಭವವನ್ನು ಕಾಣದ ಕಣ್ಣು ದಬ್ಬಳದ ಕಣ್ಣಿನಂತೆ.

"ಅಚ್ಚಣ್ಣ"

ಪ್ಟೋಲೆಮಿಯ 'ಹಿಪ್ಪೊಕೂರ' (Hippokoura)

ಈ ಲೇಖವು ಅನ್ಯತ್ರ[1] ನಾನು ಬರೆದಿರುವ 'ಉತ್ತರಕಾಲೀನ ಸಾತವಾಹನರು' ಎಂಬ ಲೇಖದ ಉತ್ತರಭಾಗವಾಗಿರುವುದರಿಂದ ಅದನ್ನು ಆದ್ಯಂತವಾಗಿ ಓದಿದಲ್ಲದೆ ಇದು ನೇರಾಗಿ ಮನವರಿಕೆಯಾಗದು. ಆದರೂ ಅದನ್ನಿಲ್ಲಿ ಸಂಕ್ಷೇಪವಾಗಿ ಹೇಳುವುದಾದರೆ, ನಾನು ಅಲ್ಲಿ ಮಾಡಿರುವ ನಿರ್ಣಯಿಕೆಗಳ ಮೇರೆಗೆ—

(೧) ಕರ್ಣಾಟ ವಿಷಯದ ಪ್ರಧಾನಭಾಗವಾದ ಕುಂತಳ ದೇಶದಲ್ಲಿ ಸಮ್ರಾಜರಾಗಿ ಆಳಿದ ಸಾತವಾಹನ ವಂಶದ ಸುಮಾರು ೩೦ ಅರಸರಲ್ಲಿ ಕಟ್ಟಕಡೆಯ ೮ ಅರಸರ ಪೀಳಿಗೆಯೂ ಆಳೊತ್ತುಗಳೂ ಹೀಗಿವೆ—

೧. ಗೌತಮೀಪುತ್ರ ಶಾತಕರ್ಣಿ
ಕ್ರಿ.ಶ. 60—91

೨. ವಾಸಿಷ್ಠೀಪುತ್ರ
ಶ್ರೀ ಪುಳುಮಾಯಿ (ವಿ)
ಕ್ರಿ.ಶ. 91—119

೪. ವಾಸಿಷ್ಠೀಪುತ್ರ
ಶ್ರೀ ಶಿವ ಶಾತಕರ್ಣಿ
ಕ್ರಿ.ಶ. 148—152

೩. ವಾಸಿಷ್ಠೀಪುತ್ರ
ಶಿವಸ್ಕಂಧ ಶಾತಕರ್ಣಿ
ಕ್ರಿ.ಶ. 119—148

೫. ಗೌತಮೀಪುತ್ರ
ಶ್ರೀ ಯಜ್ಞ ಶಾತಕರ್ಣಿ
ಕ್ರಿ.ಶ. 152—181

೬. ವಿಜಯ
ಕ್ರಿ.ಶ. 181—187

೭. ವಾಸಿಷ್ಠೀಪುತ್ರ
ಶ್ರೀ ಚಂಡ (ಚಂದ್ರ) ಶಾತಕರ್ಣಿ
ಕ್ರಿ.ಶ. 187—197

೮. ಪುಳುಮಾವಿ
ಕ್ರಿ.ಶ. 197—ಸು. 205

[1] "ಸಂಭಾವನೆ"—ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ ಅರ್ಪಿಸಿದ ಪ್ರಬಂಧಮಾಲೆ (ಪುಟಗಳು ೧೬೮—೧೮೨).

(೨) ಸುಮಾರು ೬೦ ವರ್ಷಗಳ ಹಿಂದೆ ಕೊಲ್ಹಾಪುರದ ಹತ್ತಿರದ ಬ್ರಹ್ಮಪುರಿಯ ಗುಡ್ಡದ ಬಳಿಯಲ್ಲಿ ದೊರೆತ ಹಲವು ಸೀಸದ ಹಾಗೂ ತಾಮ್ರದ ನಾಣ್ಯಗಳಲ್ಲಿ ಬ್ರಾಹ್ಮೀ ಬರೆಹದಲ್ಲಿ ಪ್ರಾಕೃತ ಭಾಷೆಯ ಈ ಮೂರು ಒಕ್ಕಣೆಗಳು ಇವೆಯಷ್ಟೆ[1]—

(೧) ರಞಃೊ ವಾಸಿಠೀಪುತಸ ವಿಳಿವಾಯಕುರಸ

(೨) ರಞಃೊ ಮಾಢರೀಪುತಸ ಸಿವಲಕುರಸ

(೩) ರಞಃೊ ಗೋತಮಿಪುತಸ ವಿಳಿವಾಯಕುರಸ

ಅಂದರೆ

(೧) ರಾಜ(ನಾದ) ವಾಸಿಷ್ಠೀಪುತ್ರ(ನಾದ) ವಿಳಿವಾಯಕುರನ

(೨) ರಾಜ(ನಾದ) ಮಾಢರೀಪುತ್ರ(ನಾದ) ಸಿವಲಕುರನ

(೩) ರಾಜ(ನಾದ) ಗೌತಮೀಪುತ್ರ(ನಾದ) ವಿಳಿವಾಯಕುರನ

ಈ ಒಕ್ಕಣೆಗಳ ಕೊನೆಯಲ್ಲಿ 'ನಾಣ್ಯ' ಎಂಬುದು ಅಧ್ಯಾಹಾರ್ಯ. ಈ ನಾಣ್ಯಗಳಲ್ಲಿ ವಾಸಿಷ್ಠೀಪುತ್ರ ವಿಳಿವಾಯಕುರನ ಕೆಲವು ನಾಣ್ಯಗಳನ್ನು ಮಾಢರೀಪುತ್ರ ಸಿವಲಕುರನೂ ಮಾಢರೀಪುತ್ರ ಸಿವಲಕುರನ ಕೆಲವು ನಾಣ್ಯಗಳನ್ನು ಗೌತಮೀಪುತ್ರ ವಿಳಿವಾಯಕುರನೂ ಪುನರ್ಮುದ್ರಿಸಿದರೆಂದು ಆಯಾ ಹಲವು ನಾಣ್ಯಗಳಿಂದ ತಿಳಿಯುವುದರಿಂದ,[2] ಈ ಮೂವರಲ್ಲಿ ಕಾಲಮಾನದಿಂದ ವಾಸಿಷ್ಠೀಪುತ್ರ ವಿಳಿವಾಯಕುರನು ಮೊತ್ತಮೊದಲನೆಯವನೆಂದೂ ಮಾಢರೀಪುತ್ರ ಸಿವಲಕುರನು ಆ ಮೇಲಣವನೆಂದೂ ಗೌತಮೀಪುತ್ರ ವಿಳಿವಾಯಕುರನು ಇನ್ನೂ ಬಳಿಕಣವನೆಂದೂ ಸಿದ್ಧವಾಗುತ್ತದೆ. ಈ ಒಕ್ಕಣೆಗಳಲ್ಲಿಯ ಕೊನೆಯ 'ಕುರಸ' ಎಂಬುದು 'ಕುರ' ಎಂಬ ಪ್ರಾಕೃತ ಶಬ್ದದ ಷಷ್ಠೀ ವಿಭಕ್ತಿಯ ಏಕವಚನ; ಕನ್ನಡದಲ್ಲಿ ಇದಕ್ಕೆ 'ಕುರನ' ಎಂದು ಅರ್ಥ. 'ಕುರ' ಎಂಬುದು 'ಕುಮಾರ' ಎಂಬ ಸಂಸ್ಕೃತ ಪದದ ಪ್ರಾಕೃತರೂಪ (ಕುಮಾರ—ಕುಮರ—ಕುಂವರ—ಕುಂಅರ—ಕುಂರ—ಕುರ). ಆದ ಕಾರಣ ಈ ಮೂವರೂ ಕುಮಾರರು, ಅಂದರೆ ರಾಜಕುಮಾರರು, ಯುವರಾಜರು. ಈ ಮೂರೂ ಅವರವರು ಯುವರಾಜರಾಗಿದ್ದಂದು ಬೆಟ್ಟಿಸಿದ ನಾಣ್ಯಗಳು. ಇವ

---

[1] R. G. Bhandarkar: *Early History of the Dekkan* (EHD), Calcutta (1928), ಪು. 34-35; *Indian Antiquary* (IA), ಸಂ. XLIX (1920), ಪು. 31; 'ಕರ್ಣಾಟಕ ಸಾಹಿತ್ಯ ಪತ್ರಿಕೆ', ಸಂ. XIV, ಪು. ೨೭೩—೨೭೪.

[2] *IA*, XLIX (1920), ಪು. 31; Jouveau-Dubreuil: *Ancient History of the Deccan*, ಪು. 45; Vincent Smith: *Early History of India*, ಪು. 231; *Journal of the Bihar and Orissa Research Society*, XVI (1930), ಪು. 280.

ರಲ್ಲಿ ೧ನೆಯ ನಾಣ್ಯದಾತನು, ಅಂದರೆ ವಾಸಿಷ್ಠೀಪುತ್ರ ವಿಳಿವಾಯಕುರನು, ವಿಳಿವಾಯ ಅಂದರೆ ಪುಳುಮಾಯಿಯ, ಕುಮಾರನಾದ ವಾಸಿಷ್ಠೀಪುತ್ರನು, ಅಂದರೆ ಆ ಪುಳುಮಾಯಿಯ ವಸಿಷ್ಠಗೋತ್ರದ ರಾಣಿಯ ಮಗನು; ಅತಏವ ಈತನು ಮೇಲಣ ಪೀಳಿಗೆಯಲ್ಲಿ ೨ನೆಯವನಾದ ವಾಸಿಷ್ಠೀಪುತ್ರ ಶ್ರೀ ಪುಳುಮಾಯಿಯ ಕುಮಾರನು, ಆತನ ಯುವರಾಜನು. ಈತನು ತನ್ನ ತಂದೆಯ ಕಾಲಾನಂತರ ತನ್ನ ಚಿಕ್ಕಪ್ಪನು ಆಳಿದ ಬಳಿಕ ವಾಸಿಷ್ಠೀಪುತ್ರ ಶ್ರೀ ಶಿವ ಶಾತಕರ್ಣಿ ಎಂದು ರಾಜ್ಯವಾಳಿದಾತನು, ಮೇಲಣ ಪೀಳಿಗೆಯಲ್ಲಿ ಈತನು ೪ನೆಯ ಅರಸನು. ೨ನೆಯ ನಾಣ್ಯದ ಮಾಢರೀಪುತ್ರ ಸಿವಲಕುರನು ಆ ವಾಸಿಷ್ಠೀಪುತ್ರ ಶಿವ ಶಾತಕರ್ಣಿಯ ಯುವರಾಜನಾದ ಮಾಢರೀಪುತ್ರನು, ಅಂದರೆ ಆತನ ಮಾಠರಗೋತ್ರದ ರಾಣಿಯ ಮಗನು. ಇವನು ಪಟ್ಟರಾಜನಾಗಿ ಆಳಲಿಲ್ಲ. ೩ನೆಯ ನಾಣ್ಯದ ಗೌತಮೀಪುತ್ರ ವಿಳಿವಾಯಕುರನು ಈ ಸಾತವಾಹನರಲ್ಲಿ ಕೊಟ್ಟಕೊನೆಯವನಾದ ಪುಳುಮಾವಿಯ ಯುವರಾಜನಾದ ಗೌತಮೀಪುತ್ರನು, ಅಂದರೆ ಆತನ ಗೌತಮಗೋತ್ರದ ರಾಣಿಯ ಮಗನು. ಈತನ ತಂದೆಯೊಂದಿಗೆ ಸಾತವಾಹನರ ವಂಶವೇ ಕೊನೆಗಂಡುದರಿಂದ ಈತನೂ ಆಳರಸನಾಗಲಿಲ್ಲ.

(೩) ಕುಂತಳದೇಶದ ರಾಜಧಾನಿಯಾದ Baithana = (ಈಗಣ ನಿಜಾಮ ಸರಕಾರದಲ್ಲಿರುವ) ಪೈಠಣ ಎಂಬ ಪ್ರತಿಷ್ಠಾನಪುರದಲ್ಲಿ Siro Polemaios, ಅಂದರೆ ಮೇಲಣ ಪೀಳಿಗೆಯಲ್ಲಿ ೨ನೆಯವನಾದ ವಾಸಿಷ್ಠೀಪುತ್ರ ಶ್ರೀ ಪುಳುಮಾಯಿ (ಕ್ರಿ.ಶ. 91–119), ಆಳುತ್ತಿದ್ದಂದು ಆ ಬಳದೇಶದ ದಕ್ಷಿಣಭಾಗದಲ್ಲಿ Benda (ಅಥವಾ Binda) = ಭೀಮಾನದಿಯ ಪಶ್ಚಿಮಕ್ಕಿರುವ Hippokoura = ಹಿಪ್ಪೊಕೂರ ಎಂಬ ಊರಲ್ಲಿ Baleokouros = ಬಲೆಒಕುರ ಎಂಬ ಅರಸನು ಆಳುತ್ತಿದ್ದನೆಂದು ಅವರಿಬ್ಬರೂ ಅರಸರ ಸಮಕಾಲೀನನಾಗಿದ್ದ ಗ್ರೀಕ್ (Greek) ಭೌಗೋಲಿಕನಾದ ಪ್ತೊಲೆಮಿಯ (Ptolemy) ಗ್ರಂಥದಲ್ಲಿ[1] ಹೇಳಿದೆ. ವ-ಕಾರಕ್ಕೆ ಸ್ವತಂತ್ರವಾದ ವರ್ಣವಿಲ್ಲದ ಗ್ರೀಕ್ ಭಾಷೆಯಲ್ಲಿ ವ-ಕಾರವನ್ನು ಬ (b) ಹಾಗೂ ಒ (o) ಎಂಬ ವರ್ಣಗಳಿಂದ ಸೂಚಿಸುತ್ತಿದ್ದ ಕಾರಣ, ಮೇಲಣ ಕೊಲ್ಹಾಪುರದ ನಾಣ್ಯಗಳ ವಿಳಿವಾಯಕುರವೇ ಪ್ತೊಲೆಮಿಯಲ್ಲಿ ಬಲೆಒಕುರ ಎಂದಾಗಿದೆ ಎಂದು ವಿದ್ವಾಂಸರೆಲ್ಲರೂ ಏಕಕಂಠವಾಗಿ ಒಪ್ಪಿರುತ್ತಾರೆ. ಅತಏವ ಕ್ರಿ.ಶ. 2ನೆಯ ಶತಮಾನದ ಆರಂಭದಲ್ಲಿದ್ದ ಪ್ತೊಲೆಮಿಯ ಸಮಸಾಮಯಿಕನಾದ Baleokouros = ವಿಳಿವಾಯಕುರನು ಮೇಲಣ

---

[1] McCrindle: *Ancient India as described by Ptolemy*, Calcutta, 1927 (Ptolemy), ಪು. 41; 103; 175–76; 178–79; 358.

ನಾಣ್ಯಗಳಲ್ಲಿ ೧ನೆಯ ನಾಣ್ಯದ ವಾಸಿಷ್ಠೀಪುತ್ರ ವಿಳಿವಾಯಕುರನೆಂಬಲ್ಲಿ ಸಂಶಯವಿಲ್ಲ, ಅಂದರೆ ಆತನು ಸಾತವಾಹನ ಸಮ್ರಾಜನಾದ ವಾಸಿಷ್ಠೀಪುತ್ರ ಶ್ರೀ ಪುಳುಮಾಯಿಯ ಯುವರಾಜನೇ ಸರಿ.

ಇನ್ನುಳಿಯಿತೆಂದರೆ ವಾಸಿಷ್ಠೀಪುತ್ರ ಪುಳುಮಾಯಿಯ ಯುವರಾಜನಾದ ಶಿವ ಶಾತಕರ್ಣಿ ಎಂದು ನಾನು ಗೊತ್ತುಹಚ್ಚಿರುವ ಪ್ಟೊಲೆಮಿಯ ಬಲೆಒಕುರ (Baleokouros)ನೆಂಬ ಕೊಲ್ಹಾಪುರದ ನಂ. ೧ನೆಯ ನಾಣ್ಯಗಳ ವಾಸಿಷ್ಠೀಪುತ್ರ ವಿಳಿವಾಯಕುರನ ನೆಲೆವೀಡೆಂದು ಪ್ಟೊಲೆಮಿಯಲ್ಲಿ ಹೇಳಿರುವ ಆ ಹಿಪ್ಪೊಕೂರ (Hippokoura) ಎಂಬುದು ಈಗಣ ಯಾವ ಊರು ಎಂಬ ಪ್ರಶ್ನೆ. ಈ ವಿಚಾರಕ್ಕೆ ಕೈಹಚ್ಚುವಲ್ಲಿ ಸಾಕೂತವೂ ಸ್ವಯಂವ್ಯಕ್ತವೂ ಆದ ಈ ಕೆಲವು ಮಾತುಗಳನ್ನು ಮಾತ್ರ ಚನ್ನಾಗಿ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು—

(೧) ವಾಸಿಷ್ಠೀಪುತ್ರ ವಿಳಿವಾಯಕುರನವೂ ಮಾಢರೀಪುತ್ರ ಸಿವಲಕುರನವೂ ಗೌತಮೀಪುತ್ರ ವಿಳಿವಾಯಕುರನವೂ ಕೂಡ ಸುಮಾರು ೨೦೦೦ ನಾಣ್ಯಗಳು ಕೊಲ್ಹಾಪುರದಲ್ಲಿ ದೊರೆತಿರುವ ಮಾತ್ರಕ್ಕೆ ವಾಸಿಷ್ಠೀಪುತ್ರ ವಿಳಿವಾಯಕುರನ ನೆಲೆವೀಡೆಂದು ಕಂಡಿತವಿರುವ ಹಿಪ್ಪೊಕೂರವು ಆ ಮುಂದೆ ಮಾಢರೀಪುತ್ರ ಸಿವಲ ಕುರನ ನೆಲೆವೀಡೂ ಇನ್ನೂ ಮುಂದೆ ಗೌತಮೀಪುತ್ರ ವಿಳಿವಾಯಕುರನ ನೆಲೆವೀಡೂ ಆಗಿರಲೇ ಬೇಕೆಂದಿಲ್ಲ, ಆಗಿರಲೂ ಬಹುದು, ಇಲ್ಲದಿರಲೂ ಬಹುದು.

(೨) ಹಾಗೆಯೇ ಆ ಮೂವರೂ ರಾಜಕುಮಾರರ, ಮುಖ್ಯತಃ ಹಿಪ್ಪೊ ಕೂರವು ಯುವರಾಜಧಾನಿಯಾಗಿತ್ತೆಂದು ಕಂಡಿತವಿರುವ ವಾಸಿಷ್ಠೀಪುತ್ರ ವಿಳಿವಾ ಯಕುರನ, ನಾಣ್ಯಗಳು ಕೊಲ್ಹಾಪುರದಲ್ಲಿ ದೊರೆತ ಮಾತ್ರದಿಂದಲೇ ಕೊಲ್ಹಾ ಪುರವೇ ಹಿಪ್ಪೊಕೂರ ಆಗಿರಬೇಕೆಂದಿಲ್ಲ, ಆಗಿರಲೂ ಬಹುದು, ಇಲ್ಲದಿರಲೂ ಬಹುದು. ಏಕೆಂದರೆ ಈ ಮೂವರಲ್ಲಿ ಇಬ್ಬರವಾದರೂ ನಾಣ್ಯಗಳು ಮದ್ರಾಸು ಆಧಿಪತ್ಯದ ಗುಂಟೂರು ಜಿಲ್ಲೆಯ ಧರಣಿಕೋಟ ಎಂಬಲ್ಲಿಯೂ ದೊರೆತಿರುವುದರಿಂದ,[1] ಈ ಮೂರೂ ರಾಜಕುಮಾರರ ಯುವರಾಜಧಾನಿ ಹಿಪ್ಪೊಕೂರವೇ ಎಂದೂ ಅವರ ನಾಣ್ಯಗಳು ಅಗೆಯಲ್ಪಟ್ಟ ಊರೇ ಆ ಹಿಪ್ಪೊಕೂರವೆಂದೂ ಪ್ರತಿಪಾದಿಸಿದರೆ, ಅದು ಕೊಲ್ಹಾಪುರವಾಗಬೇಕೋ? ಧರಣಿಕೋಟವೋ? ಅದಲ್ಲದೆ ಸಾತವಾಹನ ಸಮ್ರಾಜನಾದ ಗೌತಮೀಪುತ್ರ ಶಾತಕರ್ಣಿಯಿಂದ (ಕ್ರಿ. ಶ. 60-91) ವಿಧ್ವಸ್ತನಾದ

---

[1] *EHD*, ಪು. 35.

ಶಕ ಮಹಾಕ್ಷತ್ರಪ ನಹಪಾನನ (Nahapana) ಸುಮಾರು ೧೪೦೦೦ ನಾಣ್ಯಗಳು ಮುಂಬಯಿ ಆಧಿಪತ್ಯದ ನಾಸಿಕ ಜಿಲ್ಲೆಯ ಜೋಗಲಟೆಂಭಿ ಎಂಬಲ್ಲಿ ದೊರಕಿವೆಯಾದರೂ[1] ಆ ಊರು ಸರ್ವಥಾ ನಹಪಾನನ ರಾಜಧಾನಿಯಲ್ಲ, ಆತನ ರಾಜಧಾನಿ ಅನ್ಯತ್ರ ಇದ್ದಿತೆಂದು ನಿಶ್ಚಿತವಿದೆ. ಅತಏವ ಈ ಮೂವರೂ ರಾಜಕುಮಾರರ ಯುವರಾಜಧಾನಿ ಹಿಪ್ಪೊಕೂರವೇ ಎಂದಾಗಲಿ, ಹಿಪ್ಪೊಕೂರವು ಕೊಲ್ಹಾಪುರವೇ ಅಥವಾ ಧರಣಿ ಕೋಟವೇ ಎಂದಾಗಲಿ ಯಾವ ಭ್ರಮೆಗೂ ಈಡಾಗದೆ, ಈ ಮೂವರಲ್ಲಿ ವಾಸಿಷ್ಠೀ ಪುತ್ರ ವಿಳಿವಾಯಕುರನ ನೆಲೆವೀಡೆಂದು ಬಲ್ಲ ಹಿಪ್ಪೊಕೂರವು ಪ್ಟೊಲೆಮಿಯ ಗ್ರಂಥ ದಲ್ಲಿ ಮಿಕ್ಕ ಯಾವಾವ ಊರುಗಳೊಂದಿಗೆ ಹೇಳಲ್ಪಟ್ಟದೆ? ಅವಲ್ಲಿ ಯಾವವಾದರೂ ಈಗಣ ಇಂಥಿಂಥವೇ ಊರುಗಳೆಂದು ಸುನಿಶ್ಚಿತವಾಗಿ ಗೊತ್ತು ಹಚ್ಚಲ್ಪಟ್ಟಿವೆಯೇ ? ಅಥವಾ ಪಡಲಾಪವೇ ? ಎಂದು ಸಮೀಕ್ಷಿಸಿ, ಅಲ್ಲಿಂದ ತಾನೆ ಅಂಥವುಗಳ ನಡುವೆ ಇಲ್ಲವೆ ಅತ್ತಿತ್ತ ಹುಡುಕಾಡಿ ಅವನ ಹಿಪ್ಪೊಕೂರವನ್ನು ತುಬ್ಬುಮಾಡಬೇಕು.

(೩) ಪ್ಟೊಲೆಮಿ ಎಂದಿಗೂ ಭಾರತವರ್ಷಕ್ಕೆ ಬಂದವನಲ್ಲ.[2] ಆತನಿದ್ದ ಐಗುಪ್ತ (Egypt) ದೇಶಕ್ಕೂ ನಮ್ಮ ಭಾರತಕ್ಕೂ ಬಹಳ ಪೂರ್ವಕಾಲದಿಂದಲೇ ವ್ಯಾಪಾರ ಸಂಬಂಧವಿತ್ತು. ಐಗುಪ್ತದ ಆಗಣ ಮುಖ್ಯವಾದ ರೇವು ಅಂದರೆ ಆತನಿದ್ದ ಅಲೆಕ್ಸಾಂದ್ರಿಯ (Alexandria) ಎಂಬ ಊರು.[3] ಅಲ್ಲಿ ತಾನು ಕಂಡ ಪ್ರವಾಸಿ ಗಳನ್ನೂ ನಾವಿಕರನ್ನೂ ವಿಚಾರಿಸಿ ತಾನೆ ರಚಿಸಿದ ಆತನ ಗ್ರಂಥವು ಪ್ರತ್ಯಕ್ಷತಃ ತೀರ ನಿರ್ದುಷ್ಟವೂ ಅಲ್ಲ, ಅದರಲ್ಲಿಯ ಹೇಳಿಕೆಗಳು ತೀರ ನಿಷ್ಕೃಷ್ಟವೂ ಅಲ್ಲ. ನಮ್ಮ ವಿಚಾರಕ್ಕೆ ಪ್ರಸ್ತುತವಾದ ಭಾರತೀಯ ಸ್ಥಳನಾಮಗಳ ಮಟ್ಟಿಗೆ ಹೇಳುವುದಾದರೆ, ಆತನು ವಿಚಾರಿಸಿದ ನಾವಿಕರೂ ಪ್ರವಾಸಿಗಳೂ ಆತನಂತೆಯೇ ಸುಶಿಕ್ಷಿತರಾಗಿದ್ದಿರ ಲಾರದ ಕಾರಣವೂ ಈ ಮುಂದೆಯೇ ತಿಳಿವಂತೆ ಭಾರತೀಯ ವರ್ಣಮಾಲೆಗಳಲ್ಲಿರುವ ಕೆಲವಾದರೂ ಸ್ವರಗಳಿಗೆ (Sounds) ತಕ್ಕವು ಗ್ರೀಕ್ ವರ್ಣಮಾಲೆಯಲ್ಲಿ ಇಲ್ಲದ ಕಾರಣವೂ ಆತನ ಗ್ರಂಥದಲ್ಲಿ ಹೇಳಿರುವ ಅನೇಕ ಊರುಗಳು ಯಥಾಸ್ಥಾನದಲ್ಲಿಯೂ ಇಲ್ಲ, ಯಥಾಕ್ರಮವಾಗಿಯೂ ಇಲ್ಲ, ಎಲ್ಲವೆಂಬಂತೆ ಭಾರತೀಯ ಸ್ಥಳನಾಮಗಳು ವಿಕೃತವಾಗಿವೆ, ಕೆಲವು ತೀರ ಅಡ್ಡಾದಿಡ್ಡಿಯಾಗಿವೆ; ಉದಾ—

ಗ್ರೀಕ್ ಭಾಷೆಯಲ್ಲಿ ಪ-ಕಾರವಿದ್ದರೂ ಪ್ರತಿಷ್ಠಾನಪುರ ಎಂಬ (ಪ್ರಾಕೃತದಲ್ಲಿ ಪಇಟ್ಠಣ =) ಪೈಠಣವು ಪ್ಟೊಲೆಮಿಯಲ್ಲಿ (ಪು. 176) Baithana ಎಂದಾಗಿದೆ. ಗ್ರೀಕಿನಲ್ಲಿ ಆ-ಕಾರವೂ ಏ-ಕಾರವೂ ಇದ್ದರೂ ತುಳುನಾಡಿನ ಆಲುವಖೇಟ ಎಂಬ ಹಳೆಯ ಹೆಸರು ಪ್ಟೊಲೆಮಿಯಲ್ಲಿ (ಪು. 180) Olokhoira ಎಂದಿದೆ. ಪಾಟಲೀ

[1] *IA*, XLVII (1918), ಪು. 74. [2] *Ptolemy*, ಪು. xxi. [3] ಅದೇ, ಪು. xiii.

ಪುತ್ರ = Palimbothra (ಪು. 167, 169) ಎಂಬಲ್ಲಿ ಮೂಲನಾಮದಲ್ಲಿ ಇಲ್ಲದ ಅನುನಾಸಿಕವಿದೆ. ಗ್ರೀಕ್ ಭಾಷೆಯಲ್ಲಿ ತ-ಕಾರವಿದ್ದರೂ ಪಂಜಾಬಿನ ಶತದ್ರು (Sutlej) ನದಿ = Zarados (ಪು. 91) ಎಂಬಲ್ಲಿ ತ-ಕಾರವೂ ಇಲ್ಲ, ಮೂಲನಾಮದ ದ-ರ-ಕಾರಗಳೂ ಹಿಂದುಮುಂದಾಗಿವೆ. ಹಾಗೆಯೇ ಇರಾವತೀ (Ravi) ನದಿ = Adris ಅಥವಾ Rhouadis (ಪು. 90); ವಿತಸ್ತಾ (Jhelum) ನದಿ = Bidaspes (ಪು. 89); ಅಹಿಚ್ಛತ್ರ = Adisdara (ಪು. 133) ಹಾಗೂ Adeisathra (ಪು. 161); ಯಮುನಾನದಿ = Diamouna (ಪು. 98); ಪುಷ್ಕಲಾವತಿ = Proklais (ಪು. 116–17); ಮಾಹೀನದಿ = Mophis (ಪು. 38, 343), ಇತ್ಯಾದಿ.

(೪) ಭಾರತೀಯ ಭಾಷೆಗಳಲ್ಲಿಯ ಹಲವು ಸ್ವರಗಳಿಗೆ ಒಪ್ಪುವ ಸ್ವರಗಳು ಗ್ರೀಕ್ ಭಾಷೆಯಲ್ಲಿಲ್ಲ; ಉದಾ—

ಚ-ಕಾರವಿಲ್ಲ—ಚಷ್ಟನ = ಪ್ತೊಲೆಮಿಯಲ್ಲಿ (ಪು. 155) Tiastanes; ಜ-ಕಾರವಿಲ್ಲ—ಉಜ್ಜಯಿನಿ = Ozene (ಪು. 154); ಯ-ಕಾರವಿಲ್ಲ—ಯಮುನಾನದಿ (ಉತ್ತರ ಭಾರತದಲ್ಲಿ ಯ-ಕಾರವು ಜ-ಕಾರವಾಗುವುದರಿಂದ, ಜಮುನಾ = Jumna) = Diamouna (ಪು. 98); ವ-ಕಾರವಿಲ್ಲ—ವಿತಸ್ತಾನದಿ = Bidaspes (ಪು. 89), ವಿಂಧ್ಯಗಿರಿ = Ouindion (ಪು. 77); ಶ-ಷ-ಕಾರಗಳೂ ಇಲ್ಲ, ಇ-ಮಿಶ್ರವಾದ ಉ-ಕಾರವಲ್ಲದೆ ಶುದ್ಧ ಉ-ಕಾರವೂ ಇಲ್ಲ[1]—ಶತದ್ರು ನದಿ = Zarados (ಪು. 91), ಸುರಾಷ್ಟ್ರ = Syrastra (ಪು. 37); ಗ್ರೀಕ್ ou ಎಂಬ ದ್ವಿಸ್ವರವು ಕೆಲವೊಮ್ಮೆ ನಮ್ಮ ಹ್ರಸ್ವ ಉ-ಕಾರಕ್ಕೂ ಕೆಲವೊಮ್ಮೆ ದೀರ್ಘ ಊ-ಕಾರಕ್ಕೂ ಸರಿಗೂಡುತ್ತದೆ—ಯಮುನಾ = Diamouna (ಪು. 98), ಪುನ್ನಾಟ = Pounnata (ಪು. 181), ಕರೂರು = Karoura (ಪು. 182), ವಿಳಿವಾಯಕುರ = Baleokouros (ಪು. 176, 179), ಇತ್ಯಾದಿ. ಅತಏವ ಪ್ತೊಲೆಮಿಯ Hippokoura (ಪು. 176, 179) = ಹಿಪ್ಪೊಕುರ ಅಥವಾ ಹಿಪ್ಪೊಕೂರ.

(೫) ಇವೆಲ್ಲಕ್ಕೂ ಮೇಲಾಗಿ ಪ್ರಸ್ತುತ ವಿಚಾರಕ್ಕೆ ಬೇಕಾದ ಹ-ಕಾರದ ಮಹಾಪ್ರಾಣವು ಗ್ರೀಕ್ ಭಾಷೆಯಲ್ಲಿ ಉಚ್ಚಾರದಲ್ಲಿ ಮಾತ್ರ ಇತ್ತಲ್ಲದೆ, ಹ-ಕಾರಕ್ಕೆ ನಿಯತವಾದ ಪ್ರತ್ಯೇಕ ವರ್ಣವಿರಲಿಲ್ಲ. ಆ ಮಹಾಪ್ರಾಣವನ್ನು (spiritus asper) ಬಲಮುರಿಯಾಗಿ (') ಬರೆದ ಇಂಗ್ಲೀಷು ಅಲ್ಪವಿರಾಮದ (comma) ಚಿಹ್ನೆಯಿಂದ

---

[1] ಗ್ರೀಕ್ u ಎಂಬ ವರ್ಣದಿಂದ ಸೂಚಿತವಾದ ಸ್ವರವು ಇ-ಮಿಶ್ರವಾದ ಉ-ಕಾರವಲ್ಲದೆ ಶುದ್ಧ ಉ-ಕಾರವಲ್ಲ; ಆದಕಾರಣ ಅದನ್ನು ಇಂಗ್ಲೀಷಿನಲ್ಲಿ y ಎಂಬ ವರ್ಣದಿಂದ ಸೂಚಿಸುತ್ತಾರೆ, ಉದಾ—Symbol, Syllable, Syntax, ಇತ್ಯಾದಿ.

ಸೂಚಿಸುತ್ತಿದ್ದರು. ಗ್ರೀಕ್ ಶಬ್ದಗಳ ಆದ್ಯಕ್ಷರಗಳಾದ ಸ್ವರಗಳಿಗೂ (vowels) ಆ ಶಬ್ದಗಳ ಯಾವ ಭಾಗದಲ್ಲಿಯೂ ಇರುವ ರ-ಕಾರಕ್ಕೂ ಮಾತ್ರ ಹಚ್ಚಲ್ಪಡುವ ಆ ಚಿಹ್ನೆಯನ್ನು ಸ್ವರಾದಿಯಾದ ಶಬ್ದಗಳಲ್ಲಿ ಆದ್ಯಕ್ಷರಗಳ ತಲೆಗಡೆಯಲ್ಲಿ ಎಡಕ್ಕೆ ಬರೆಯುತ್ತಿದ್ದರು. ಆದ್ಯಕ್ಷರವಾದ ಸ್ವರವು ಮಹಾಪ್ರಾಣವಲ್ಲದಿದ್ದರೆ, ಅಂದರೆ ಅದು ಹ-ಕಾರಯುಕ್ತವಾದ ವ್ಯಂಜನವಾಗಿರದೆ ಕೇವಲ ಸ್ವರವೇ ಆಗಿದ್ದರೆ, ಅದರ ತಲೆಗಡೆಯಲ್ಲಿ ಇಂಗ್ಲೀಷು ಅಲ್ಪವಿರಾಮದ ಚಿಹ್ನೆಯನ್ನು (’) ಬರೆದು ಅದು ಅಲ್ಪಪ್ರಾಣವೆಂದು (spiritus lenis) ಸೂಚಿಸುತ್ತಿದ್ದರು. ಏಸಂಚ ಆದ್ಯಕ್ಷರವಾದ ಸ್ವರವು (vowel) ಅಲ್ಪಪ್ರಾಣವೊ ಮಹಾಪ್ರಾಣವೊ ಎಂದು ಸೂಚಿಸಲೇ ಬೇಕಾದ ಕಾರಣ ಅದಕ್ಕೆ ಆಯಾ ತಕ್ಕ ಚಿಹ್ನೆಯನ್ನು ಹಚ್ಚಲೇಬೇಕು; ಉದಾ—’ornis (ಉಚ್ಚಾರ ornis) = ಪಕ್ಷಿ (ಇಲ್ಲಿ ಆದ್ಯ o-ಕಾರವು ಅಲ್ಪಪ್ರಾಣ), ‘ippos (ಉಚ್ಚಾರ hippos) = ಕುದುರೆ (ಇಲ್ಲಿ ಆದ್ಯ i-ಕಾರವು ಮಹಾಪ್ರಾಣ). ಇಂಗ್ಲೀಷಿನಲ್ಲಿರುವಂತೆ ಗ್ರೀಕ್ ವರ್ಣಮಾಲೆಯಲ್ಲಿಯೂ ದೊಡ್ಡಕ್ಕರಗಳೂ (capital letters) ಸಣ್ಣಕ್ಕರಗಳೂ (small letters) ಎಂದು ೨ ಭೇದಗಳಿವೆ. ಇಂಗ್ಲೀಷಿನಂತೆಯೇ ಗ್ರೀಕಿನಲ್ಲಿಯೂ ಅಂಕಿತನಾಮಗಳು (ಅವು ವ್ಯಕ್ತಿನಾಮಗಳಾಗಲಿ, ಸ್ಥಳನಾಮಗಳಾಗಲಿ, ಬೇರೆ ಯಾವವೇ ಆಗಲಿ) ದೊಡ್ಡಕ್ಕರಗಳಿಂದಲೇ ಆರಂಭಿಸಬೇಕು. ಆದರೆ ಅವಲ್ಲಿ ಸ್ವರಾದಿಯಾದ ಅಂಕಿತನಾಮಗಳ ಆದ್ಯಸ್ವರಾಕ್ಷರಗಳು ಅಲ್ಪಪ್ರಾಣವಾಗಿರಲಿ ಅಥವಾ ಮಹಾಪ್ರಾಣವಾಗಿರಲಿ (ಅಂದರೆ ಅವು ಕೇವಲ ಸ್ವರಗಳೇ ಆಗಿರಲಿ ಇಲ್ಲವೆ ಹ-ಕಾರಯುಕ್ತವಾದ ವ್ಯಂಜನಗಳಾಗಿರಲಿ), ಅವಕ್ಕೆ ಮಾತ್ರ ಮೇಲಣ ಆಯಾ ಪ್ರಾಣಚಿಹ್ನೆಗಳು ಸರ್ವಥಾ ಹಚ್ಚಲ್ಪಡವು, ಅರ್ಥಾತ್ ದೊಡ್ಡಕ್ಕರಗಳಿಂದಲೇ ಬರೆಯಲ್ಪಡಬೇಕಾದ ಆದ್ಯ ಸ್ವರಾಕ್ಷರಗಳಿಗೆ ಯಾವ ಪ್ರಾಣಚಿಹ್ನೆಯೂ ಸಲ್ಲದು; ಉದಾ—Ilias (ಉಚ್ಚಾರ Ilias) = ಗ್ರೀಕರ ಪ್ರಾಚೀನ ಮಹಾಕಾವ್ಯವಾದ Iliad; Omeros (ಉಚ್ಚಾರ Homeros) = ಆ ಕಾವ್ಯವನ್ನು ರಚಿಸಿದ ಮಹಾಕವಿ Homer; Alexandros (ಉಚ್ಚಾರ Alexandros) = ಮಕೆದೋನ್ಯದ (Macedonia) ಅರಸನಾದ Alexander; Ippokrene (ಉಚ್ಚಾರ Hippokrene) = ಗ್ರೀಕ್ ದೇಶದಲ್ಲಿಯ ಒಂದು ಬುಗ್ಗೆ Hippocrene; ಹಾಗೆಯೇ ಪ್ತೊಲೆಮಿಯಲ್ಲಿ Indabara (ಉಚ್ಚಾರ Indabara) = ಇಂದ್ರಪ್ರಸ್ಥ (ಪು. 128); Imaos (ಉಚ್ಚಾರ Himaos) = ಹಿಮವತ್ ಪರ್ವತ (ಪು. 35; 342) ಇತ್ಯಾದಿ.

ಆದಕಾರಣ ಪ್ತೊಲೆಮಿಯ ಗ್ರೀಕ್ ಭಾಷೆಯ ಮೂಲಗ್ರಂಥದಲ್ಲಿ Baleokouros ಎಂಬ ವಾಸಿಷ್ಠೀಪುತ್ರ ವಿಳಿವಾಯಕುರನ ರಾಜಧಾನಿಯ ಹೆಸರು ಅಂಕಿತನಾಮ

ವಾದ ಕಾರಣ Ippokoura (ಇಪ್ಪೊಕೂರ ಅಥವಾ ಇಪ್ಪೊಕೂರ) ಎಂದೇ ಬರೆಯಲ್ಪಟ್ಟಿರಬೇಕಲ್ಲದೆ ಸರ್ವಥಾ Hippokoura (ಹಿಪ್ಪೊಕೂರ ಅಥವಾ ಹಿಪ್ಪೊಕುರ) ಎಂದಲ್ಲ. ಪ್ತೊಲೆಮಿಯಲ್ಲಿ ಆ ಹೆಸರನ್ನು ಹಿಪ್ಪೊಕೂರ ಎಂದು ಓದಿದ ವಿದ್ವಾಂಸರಾದರೂ ಆ ಊರು ಹಿಪ್ಪೊಕೂರ (Hippokoura) ಎಂದಿದ್ದರೆ ಮಾತ್ರ ಅದರ ಪೂರ್ವಪದವೆನಿಸುವ ಹಿಪ್ಪೊ = Hippo(s) ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ ಕುದುರೆ ಎಂದು ಅರ್ಥವಾಗುವುದರಿಂದ, ಕುದುರೆ ಎಂಬ ಅರ್ಥವುಳ್ಳ ಪೂರ್ವಪದವಿರುವ ಯಾವುದೊ ಒಂದು ಊರಿನ ಹೆಸರನ್ನು ಪ್ತೊಲೆಮಿ ಹಿಪ್ಪೊಕೂರ ಎಂದು ಗ್ರೀಕಿನಲ್ಲಿ ಭಾಷಾಂತರಿಸಿರಬೇಕೆಂದು ಬಗೆದೇನೊ ಅದನ್ನು ಹಿಪ್ಪೊಕೂರ ಎಂದು ಓದಿರಬೇಕು; ಮತ್ತಿನವರು ಆ ವಿಷಯವನ್ನು ಪ್ರಾಯಶಃ ಪುನರಾಲೋಚಿಸದೆ, ಮರಳಿ ಅದರ ತಳ್ಳಿಗೆ ಹೋಗದೆ, ಹಿಪ್ಪೊಕೂರ ಎಂಬ ಪಾಠವೇ ಸರಿಯಾಗಿರಬೇಕೆಂದೊ ಬಹುದೆಂದೊ ಅದಕ್ಕೆ ಹೂಗುಟ್ಟಿರಬೇಕು. ಅತಏವ ಪ್ತೊಲೆಮಿಯ ಗ್ರಂಥದಲ್ಲಿ ಸರ್ವಥಾ ಸಲ್ಲದ ಹಿಪ್ಪೊಕೂರ ಎಂಬ ಪಾಠವನ್ನು ಒತ್ತಟ್ಟಿಗಿಟ್ಟು, ಅಲ್ಲಿ ಪ್ರತ್ಯಕ್ಷವಿರುವ ಇಪ್ಪೊಕೂರ ಎಂಬುದನ್ನೇ ಕೈಕೊಂಡು, ಪ್ತೊಲೆಮಿಯಲ್ಲಿ ಆ ಊರಿನೊಂದಿಗೆ ಹೇಳಿರುವ ಮಿಕ್ಕ ಊರುಗಳನ್ನು ಗುರುತಿಸಲಾಗುತ್ತದೊ ಎಂದು ಶೋಧಿಸಿ ಅವುಗಳ ಬಳಿಯಲ್ಲಿ ಅಥವಾ ಸಾಕಷ್ಟು ದೂರವಾದರೂ ಇಪ್ಪೊಕೂರ ಎಂಬ ಹೆಸರಿಗೆ ಸರಿಹೋಗತಕ್ಕ ಊರು ಇದೆಯೊ ಎಂದು ಗೊತ್ತು ಹಿಡಿಯಲಿಕ್ಕೆ ಪ್ರಯತ್ನಿಸಬೇಕು. ಅಂಥಾ ಪ್ರಯತ್ನವು ನೆರವೇರದಿದ್ದರೆ ಮಾತ್ರ, ಆ ಮಿಕ್ಕ ಊರುಗಳ ಜತೆಯಲ್ಲಿ ಕುದುರೆ ಎಂಬ ಅರ್ಥವುಳ್ಳ ಪೂರ್ವಪದವಿದ್ದು ಹಿಪ್ಪೊಕೂರಕ್ಕೆ ಸಮನ್ವಯಿಸಬಹುದಾದ ಹೆಸರಿನ ಊರಿದೆಯೊ ಎಂದು ಆ ಮೇಲೆ ತಾನೆ ನೋಡಬೇಕಲ್ಲದೆ ಅಷ್ಟರ ವರೆಗಲ್ಲ.

ಪ್ತೊಲೆಮಿಯ ಗ್ರಂಥದಲ್ಲಿ ದಕ್ಷಿಣಾಪಥದ ಪಡುಗಡೆಯ ಒಳದೇಶದಲ್ಲಿ ಆತನು Benda (ಅಥವಾ Binda) ಎಂದಿರುವ ಭೀಮಾನದಿಗೂ[1] Banaouasei ಎಂದಿರುವ (ಈಗಣ ಉತ್ತರ ಕನ್ನಡ ಜಿಲ್ಲೆಯಲ್ಲಿರುವ) ಬನವಾಸಿಗೂ ನಡುವೆ ಈ ೧೦ ಊರುಗಳನ್ನು ಹೇಳಿದೆ[2]—

(೧) Nagarouris
(೨) Tabaso
(೩) Inde
(೪) Tiripangalida
(೫) Hippokoura
(೬) Soubouttou ಅಥವಾ Sabatha[3]

[1] *Ptolemy*, ಪು. 41 : 103 ; 175 ; 358. [2] ಅದೇ, ಪು. 175–179.

[3] ಈ ಊರಿನ ಹೆಸರು Ptolemy (Calcutta, 1927) ಯಲ್ಲಿ (ಪು. 176) Soubouttou ಎಂದೂ Lassen ಎಂಬ ಜರ್ಮನ್ ವಿದ್ವಾಂಸರ *Indische Altertumskunde* (vol. III) ಎಂಬ ಗ್ರಂಥದಲ್ಲಿ ಕೊಟ್ಟಿರುವ ಪ್ತೊಲೆಮಿಯ ಭಾರತದ ಭೂಪಟದಲ್ಲಿ Sabatha ಎಂದೂ ಇದೆ.

(೭) Sirimalaga (೯) Modogoulla
(೮) Kalligeris (೧೦) Petirgala.

ಐಶಾನ (ಈಶಾನ್ಯ)ದಲ್ಲಿ ಭೀಮಾನದಿಯೂ ಆಗ್ನೇಯದಲ್ಲಿ ಬನವಾಸಿಯೂ ಎಂಬ ಈ ಮೇರೆಗಳಿಂದಲೇ ಆ ನಿರ್ದಿಷ್ಟವಾದ ನಾಡು ಉತ್ತರ ಕರ್ಣಾಟಕವೆಂದೂ, ಆತಏವ ಈ ಹತ್ತೂ ಊರುಗಳು ಉತ್ತರ ಕರ್ಣಾಟಕದಲ್ಲಿ ಇರಬೇಕೆಂದೂ ತನ್ನ ಷ್ಟಕ್ಕೆ ಸಿದ್ಧವಾಗುವುದರಿಂದ, ಈ ಹೆಸರುಗಳು ಅಚ್ಚಗನ್ನಡವೇ ಅಲ್ಲವಾದರೆ ಸಂಸ್ಕೃತ ಹೆಸರುಗಳ ಅಪಭ್ರಂಶ ರೂಪಗಳಾಗಿರಬೇಕು; ಉದಾ—ಪ್ರತಿಷ್ಠಾನ(ಪುರ) = (ಅಪಭ್ರಂಶ) ಪಇಟ್ಠಣ = ಪ್ತೊಲೆಮಿಯಲ್ಲಿ Baithana (ಬಇತನ ಅಥವಾ ಬೈಥನ). ಪ್ತೊಲೆಮಿಯ ಗ್ರಂಥವು ರಚಿತವಾದ ಕ್ರಿ. ಶ. 2 ನೆಯ ಶತಕದ ಕನ್ನಡದಲ್ಲಿ ಹ-ಕಾರವಾಗಲಿ ಆ ಮಹಾಪ್ರಾಣದ ಉಚ್ಚಾರವಾಗಲಿ ಇದ್ದಿರಲಾರದೆಂದು ಸಾಕಷ್ಟು ನಿಶ್ಚಿತವಿದೆ. ಆದಕಾರಣ ವಾಸಿಷ್ಠೀಪುತ್ರ ವಿಳಿವಾಯಕುರನ ರಾಜಧಾನಿಯ ಹೆಸರು ಅಚ್ಚಗನ್ನಡವಾಗಿರುವ ಪಕ್ಷದಲ್ಲಿ ಅದು ಹಿಪ್ಪೊಕೂರ ಎಂದು ಹೇಗೂ ಆಗಲಾರ ದಷ್ಟೇ, ಅನ್ಯತ್ರ ಅದು ಮೂಲತಃ ಹ-ಕಾರಾದಿಯೊ ಪ-ಕಾರಾದಿಯೊ ಆದ ಸಂಸ್ಕೃತ ಹೆಸರಿನ ಅಪಭ್ರಂಶವಾಗಿದ್ದರೂ ಹತ್ವವೇ ಇಲ್ಲದ ಆಗಣ ಕನ್ನಡದಲ್ಲಿ ಪ-ಕಾರಕ್ಕೆ ಹ-ಕಾರವು ಸನನಿಸದ ಕಾರಣವೂ ಆ ಆದ್ಯ ಪ-ಕಾರವೊ ಹ-ಕಾರವೊ ಉಚ್ಚಾರದಲ್ಲಿ ಲೋಪವಾಗಿಯೊ ಮೆತ್ತನಾಗಿಯೊ ಆ ಹೆಸರು ಇಪ್ಪೊಕೂರ ಎಂದಾಗಬಹುದಲ್ಲದೆ ಸರ್ವಥಾ ಹಿಪ್ಪೊಕೂರ ಎಂದಿರಲಾರದು. ಈ ಕಾರಣದಿಂದಲೂ ಹಿಪ್ಪೊಕೂರ ಎಂಬ ಹ-ಕಾರಾದಿಯಾದ ಪಾಠವನ್ನು ತೀರ ತೊರೆದೇ ಬಿಟ್ಟು ಇಪ್ಪೊಕೂರ ಎಂಬುದನ್ನೇ ಆಧರಿಸಬೇಕೆಂದು ಮತ್ತಷ್ಟೂ ನಿಷ್ಕೃಷ್ಟವಾಗುವುದರಿಂದ, ಪ್ತೊಲೆಮಿಯಲ್ಲಿ ಹೇಳಿ ರುವ ಊರುಗಳು ಯಥಾಸ್ಥಾನದಲ್ಲಿಯೂ ಇಲ್ಲ, ಯಥಾಕ್ರಮವಾಗಿಯೂ ಇಲ್ಲ ಎಂಬುದನ್ನು ಚನ್ನಾಗಿ ಮನವರಿಸಿ, ಅತಏವ ಈ ೧೦ ಊರುಗಳು ಭೀಮಾ ನದಿ ಯಿಂದ ಬನವಾಸಿಯ ವರೆಗೆ ಪೂರ್ವಾಪರವಾಗಿ ಚಾಚಿರುವ ಉತ್ತರ ಕರ್ಣಾಟಕದ ಪ್ರದೇಶದಲ್ಲಿ ಇರಬೇಕೇ ಹೊರತು ಪ್ತೊಲೆಮಿಯಲ್ಲಿ ಹೇಳಿರುವ ವರಿಸೆಯಲ್ಲಿಯೂ ಇರಬೇಕೆಂದಿಲ್ಲ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಂಡು, ಉತ್ತರ ಕರ್ಣಾಟಕ ದಲ್ಲಿರುವ ಈ ೧೦ ಊರುಗಳನ್ನೂ ಅವಲ್ಲಿ ಇಪ್ಪೊಕೂರ ಎಂಬ ಹೆಸರಿಗೆ ಸಮನ್ವಯಿಸ ತಕ್ಕ ಈಗಣ ಊರನ್ನೂ ಕಂಡುಹಿಡಿಯಬೇಕು.

ಈ ೧೦ ಊರುಗಳಲ್ಲಿ (೩) Inde (ಇಂದೆ) ಎಂಬುದು ಈಗಣ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿರುವ ಇಂಡಿ (Indi) ಎಂಬ ಊರೆಂದೂ, (೧) Modogoulla (ಮೊದೊಗುಲ್ಲ ಅಥವಾ ಮೊದೊಗೂಲ್ಲ) ಎಂಬುದು ಬಿಜಾಪುರ

ಜಿಲ್ಲೆಯ ಮುಗ್ಗುಲಲ್ಲಿರುವ ಹೈದರಾಬಾದ ಸಂಸ್ಥಾನದ ರಾಯಚೂರ ಜಿಲ್ಲೆಯಲ್ಲಿರುವ ಮುದ್ಗಲ (Mudgal) ಎಂಬ ಊರೆಂದೂ, (೨) Tabaso (ತಾಬಸೊ) ಎಂಬುದು ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನಲ್ಲಿರುವ ತಾವಸಿ ಎಂಬ ಊರೆಂದೂ ಪ್ರತ್ಯಕ್ಷವಿದೆ. ಗ್ರೀಕ್ ಭಾಷೆಯಲ್ಲಿ ಮೂರ್ಧನ್ಯಗಳಿಲ್ಲ, ಅ-ಕಾರಕ್ಕೂ ಆ-ಕಾರಕ್ಕೂ ಒಂದೇ ವರ್ಣ (a) ಇದೆ.

(೪) Tiripangalida (ತಿರಿಪಂಗಲಿದ) ಎಂಬ ಹೆಸರಿನ ಆದ್ಯ Tiri=ತಿರಿಯಲ್ಲಿ ಪ್ರಾಯಶಃ ಸಂಸ್ಕೃತ ತ್ರಿ ಅಥವಾ ಶ್ರೀ (=ಕನ್ನಡ ತಿರಿ)ಯನ್ನು ಕಾಣಬಹುದು. ಹೇಗೂ ಅದು ಆ ಹೆಸರಿನ ಪೂರ್ವಪದವೆಂದು ಸಾಕಷ್ಟು ವ್ಯಕ್ತವಿರುವುದರಿಂದ, ಅದನ್ನು ಕಳಚುತ್ತಲೇ ಪಂಗಲಿದ ಎಂದು ಉಳಿಯುತ್ತದೆ. ಕೊಲ್ಹಾಪುರ ಸಂಸ್ಥಾನದಲ್ಲಿ ಹಿರಣ್ಯಕೇಶಿ ನದಿಯ ದಂಡೆಯಲ್ಲಿ ಗಡ ಹಿಂಗ್ಲಜ (Gad Hinglaj) ಎಂಬ ಊರಿದೆ. ಈ ಹೆಸರಿನಲ್ಲಿಯ ಗಡ ಎಂಬ ಪೂರ್ವಪದವು ಕೋಟೆ ಎಂಬ ಅರ್ಥದ ಹಿಂದೀ ಶಬ್ದ (ಗಢ) ಎಂದೂ[1] ಸ್ಪಷ್ಟವಿದೆ, ಆ ಊರಿನಲ್ಲಿ ಈಗ ಹಾಳುಬಿದ್ದಿರುವ ಆ ಕೋಟೆಯನ್ನು ಕ್ರಿ.ಶ. ಸು. 1700ರಲ್ಲಿ ಕಟ್ಟಿಸಿದಂದಿನಿಂದ[2] ತಾನೆ ಆ ಅನ್ಯದೇಶೀಯ ಪೂರ್ವಪದವನ್ನು ಆ ಊರಿನ ಹೆಸರಿಗೆ ಹಚ್ಚಿರಬೇಕೆಂದೂ ವ್ಯಕ್ತವಿದೆ. ಆ ಪೂರ್ವಪದವನ್ನು ಕಳಚುತ್ತಲೆ ಆ ಊರಿನ ನೇರಾದ ಹೆಸರು ಹಿಂಗ್ಲಜ—ಹಿಂಗಲಜ ಎಂದು ತಿಳಿಯುತ್ತದೆ. ಗದೆ=ಗಜೆ, ದಂತ=ಜಂತ ಎಂಬಲ್ಲಿಯೂ ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲೂಕಿನ ಜೆತ್ತಗಿ (ಜೆತ್ತಿಗಿ) ಎಂಬಲ್ಲಿಯ ಶಾ.ಶ. ೧೧೭೭ಲ ನಳ ಸಂ। ಪುಷ್ಯ ಬ। ಅಮಾವಾಸ್ಯೆ ಸೋಮವಾರ ಸೂರ್ಯಗ್ರಹಣ=(ಸಂವತ್ಸರವೂ ನಳವಲ್ಲ, ವಾರವೂ ಸೋಮವಾರ ವಲ್ಲ) ಕ್ರಿ.ಶ. 1255 ಜನವರಿ 9ನೆಯ ತಾರೀಕು ಶನಿವಾರದ ಸೂರ್ಯಗ್ರಹಣದಂದಿನ ಶಾಸನದಲ್ಲಿ[3] ಈಗಣ ಜೆತ್ತಗಿ ಅಥವಾ ಜೆತ್ತಿಗಿ ಎಂಬ ಆ ಊರನ್ನು ಆಗ್ಗೆ ದಟ್ಟುಗಿ ಎಂದಿರುವಲ್ಲಿಯೂ ದ-ಕಾರವು ಜ-ಕಾರವಾದ ಉದಾಹರಣೆಗಳು ಇರುವುದರಿಂದ ಪ್ತೋಲೆಮಿಯ (Tiri-) Pangalida ಎಂಬ ಊರನ್ನು ಈಗಣ (ಗಡ) ಹಿಂಗಲಜ ದೊಂದಿಗೆ ಸಮೀಕರಿಸಲಾಗುತ್ತದೆ.

(೧೦) Petirgala (ಪೆತಿರ್ಗಾಲ) ಎಂಬ ಊರನ್ನು ಸಾಮಾನ್ಯವಾಗಿ ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿರುವ ಪಟ್ಟದಕಲ್ಲ (ಪಟದಕಲ್ಲ) ಎಂಬ

---

[1] ಗಡ ಎಂಬ ಪರಪದವೂ ಉಳ್ಳ ಊರುಗಳು ಉತ್ತರ ಕರ್ಣಾಟಕದಲ್ಲಿವೆ: ಉದಾ—ಬೆಳಗಾಂವ ಜಿಲ್ಲೆಯಲ್ಲಿ ಚಂದಗಡ, ನಂದಗಡ, ಪಾರಗಡ, ಪರಸಗಡ ಇತ್ಯಾದಿ.

[2] *Kolhapur Gazetteer* (1886), ಪು. 296.

[3] *Annual Report on South Indian Epigraphy* (SIE), 1930, Appendix (App.) E, ಪು. 67, ನಂ. 32.

ಊರೆಂದು ಭಾವಿಸುತ್ತಾರೆ. ಇದು ಸರಿಯಲ್ಲ; ಏಕೆಂದರೆ ಬಾದಾಮಿಯ ಚಳುಕ್ಯ ಅರಸನಾದ ಮಂಗಲೇಶನ ಕ್ರಿ. ಶ. 602 ನೆಯ ಮಹಾಕೂಟದ ಸ್ತಂಭಲೇಖದಲ್ಲಿಯೂ[1] ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ (ಕ್ರಿ. ಶ. 814–877) ಕವಿರಾಜ ಮಾರ್ಗದಲ್ಲಿಯೂ (I. ೩೭) ಪಟ್ಟದಕಲ್ಲದಲ್ಲಿಯೇ ಇರುವ ಶಾ. ಶ. ೯೯೨ ಸಾಧಾರಣ ಸಂ| = ಕ್ರಿ. ಶ. 1070-71 ನೆಯ ಒಂದು ಶಿಲಾಲೇಖದಲ್ಲಿಯೂ[2] ಆ ಊರನ್ನು ಪಟ್ಟದಕಲ್ಲ ಎನ್ನದೆ ಕಿಸುವೊಳಲು ಎಂದಿರುವುದರಿಂದ, ಈ ತೇದಿ ಗಳಿಗಿಂತ ಎಷ್ಟೋ ಹಿಂದಣ ಪ್ತೊಲೆಮಿಯ ಕ್ರಿ. ಶ. 2 ನೆಯ ಶತಕದಲ್ಲಿ ಅದರ ಹೆಸರು ಸರ್ವಥಾ ಪಟ್ಟದಕಲ್ಲ ಎಂದು ಇರದು ಮಾತ್ರವಲ್ಲ, ಪ್ತೊಲೆಮಿಯ Petirgala ಎಂಬ ಹೆಸರಿನಲ್ಲಿ ಇರುವ ರ-ಕಾರವೂ ಪಟ್ಟದಕಲ್ಲದಲ್ಲಿ ಇಲ್ಲ. ಅತಏವ Petirgala ಎಂಬ ಊರು ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿರುವ ಈಗಣ ಹತ್ತಿರ್ಕಿಹಾಳ ಎಂದು ನಿಶ್ಚಯಿಸಬಹುದು. ಗ್ರೀಕಿನಲ್ಲಿ ಲ-ಕಾರವಿದೆ ಯಲ್ಲದೆ ಳ-ಕಾರವಿಲ್ಲ.

ಉತ್ತರ ಕರ್ಣಾಟಕದಲ್ಲಿ ಒಂದೇ ಹೆಸರಿನ ಬೇರೆಬೇರೆ ಊರುಗಳು ಬೇರೆಬೇರೆ ಜಿಲ್ಲೆಗಳಲ್ಲಿಯೂ ಇವೆ, ಒಂದೇ ಜಿಲ್ಲೆಯ ಬೇರೆಬೇರೆ ತಾಲೂಕುಗಳಲ್ಲಿಯೂ ಇವೆ; ಉದಾ—(೧) ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿಯೂ ಕಲಕೇರಿ (Kalkeri) ಇದೆ, ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿಯೂ ಕಲಕೇರಿ (Kalkeri) ಇದೆ; (೨) ಬಿಜಾಪುರ ಜಿಲ್ಲೆಯಲ್ಲಿಯೂ ಬಾಗೇವಾಡಿ ಇದೆ, ಬೆಳಗಾಂವ ಜಿಲ್ಲೆಯ ಬೆಳಗಾಂವ ತಾಲೂಕಿನಲ್ಲಿಯೂ ಹುಕ್ಕೇರಿ ತಾಲೂಕಿನಲ್ಲಿಯೂ ಬಾಗೇ ವಾಡಿಗಳು ಇವೆ; (೩) ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿಯೂ ಮುತ್ತಿಗಿ ಇದೆ, ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನಲ್ಲಿಯೂ ಮುತ್ತಿಗಿ ಇದೆ; (೪) ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನಲ್ಲಿಯೂ ಅರಟಾಳ ಇದೆ, ಧಾರವಾಡ ಜಿಲ್ಲೆಯ ಬಂಕಾಪುರ ತಾಲೂಕಿನಲ್ಲಿಯೂ ಅರಟಾಳ ಇದೆ; (೫) ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿಯೂ ಅಸುಂಡಿ ಇದೆ, ಬೆಳಗಾಂವ ಜಿಲ್ಲೆಯ ಪರಸಗಡ ತಾಲೂಕಿನಲ್ಲಿಯೂ ಅಸುಂಡಿ ಇದೆ; (೬) ಧಾರವಾಡ ಜಿಲ್ಲೆಯ ರೋಣ ತಾಲೂಕಿನಲ್ಲಿ ಸವದಿ (Savadi) ಇದೆ, ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಸವದಿ (Savadi) ಇದೆ; (೭) ಬೆಳಗಾಂವ ಜಿಲ್ಲೆಯ ಸಂಪಗಾಂವ ತಾಲೂಕಿನಲ್ಲಿಯೂ ಪರಸಗಡ ತಾಲೂಕಿನಲ್ಲಿಯೂ ಹೊಸೂರ ಇವೆ, ಧಾರವಾಡ

[1] Fleet: *Kanarese Dynasties* (FKD), ಪು. 348–9.
[2] *SIE*, 1929, App. E. ಪು. 51, ನಂ. 173.

ಜಿಲ್ಲೆಯ ಬಂಕಾಪುರ ತಾಲೂಕಿನಲ್ಲಿಯೂ ಹೊಸೂರ ಇದೆ, ಹಾವೇರಿ ತಾಲೂಕಿನಲ್ಲಿ ದೇವಿ ಹೊಸೂರ ಇದೆ; (೮) ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲೂಕಿನಲ್ಲಿಯೂ ನಾಗೂರ ಇದೆ, ಹುನಗುಂದ ತಾಲೂಕಿನಲ್ಲಿಯೂ ನಾಗೂರ ಇದೆ, (೯) ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನಲ್ಲಿಯೂ ನಿಪ್ಪಾಣಿ ತಾಲೂಕಿನಲ್ಲಿಯೂ ಗೋಕಾಕ ತಾಲೂಕಿನಲ್ಲಿಯೂ ನಾಗನೂರು ಇವೆ, ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನಲ್ಲಿಯೂ ಕಲಘಟಗಿ ತಾಲೂಕಿನಲ್ಲಿಯೂ ನಾಗನೂರು ಇವೆ; (೧೦) ಬೆಳಗಾಂವ ಜಿಲ್ಲೆಯ ಚಿಕ್ಕೋಡಿ ತಾಲೂಕಿನಲ್ಲಿಯೂ ನಾಗರಾಳ ಇದೆ, ಆ ಜಿಲ್ಲೆಯ ಒತ್ತಿನಲ್ಲಿರುವ ಮುಧೋಳ ಸಂಸ್ಥಾನದಲ್ಲಿಯೂ ನಾಗರಾಳ ಇದೆ, ಬಿಜಾಪುರ ಜಿಲ್ಲೆಯ ಬಿಜಾಪುರ ತಾಲೂಕಿನಲ್ಲಿಯೂ ಸಿಂದಗಿ ತಾಲೂಕಿನಲ್ಲಿಯೂ ನಾಗರಾಳ ಇವೆ, ಅದೇ ಜಿಲ್ಲೆಯ ಬಾಗಲಕೋಟೆ ತಾಲೂಕಿನಲ್ಲಿ ನಾಗರಾಳವೂ ಇದೆ, ನಗರಾಳವೂ ಇದೆ; (೧೧) ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿಯೂ ಚಿಮ್ಮಲಗಿ ಇದೆ, ಬಾದಾಮಿ ತಾಲೂಕಿನಲ್ಲಿಯೂ ಚಿಮ್ಮಲಗಿ ಇದೆ; (೧೨) ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿ ಹಿರೇಹಿಪ್ಪರಗಿ ಎಂದೂ ಕರೆಯಲ್ಪಡುವ ಹೂವಿನಹಿಪ್ಪರಗಿ ಇದೆ, ಸಿಂದಗಿ ತಾಲೂಕಿನಲ್ಲಿ ದೇವರ ಹಿಪ್ಪರಗಿ ಎಂದೂ ಕರೆಯಲ್ಪಡುವ ಹಿಪ್ಪರಗಿ ಇದೆ, ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನಲ್ಲಿಯೂ ಹಿಪ್ಪರಗಿ ಇದೆ, ಇತ್ಯಾದಿ. ಹೀಗೆ ಪ್ಟೋಲೆಮಿಯ ಮೇಲಣ ೧೦ ಊರುಗಳಲ್ಲಿ ಮುಂದೆ ತಿಳಿವಂತೆ ಕೆಲವಾದರೂ ಊರುಗಳ ಹೆಸರಿನ ಒಂದಕ್ಕಿಂತ ಹೆಚ್ಚಿಗೆ ಊರುಗಳು ಉತ್ತರ ಕರ್ಣಾಟಕದಲ್ಲಿ ಇರುವುದರಿಂದಲೂ, ಅವಲ್ಲಿ ಕಾಲಮಾನದಿಂದ ಯಾವುದು ಮಿಕ್ಕವಕ್ಕಿಂತ ಹಳೆಯದೆಂದು ಗೊತ್ತುಹಚ್ಚುವುದು ಸುಲಭವಲ್ಲದುದರಿಂದಲೂ ಅಂಥವಲ್ಲಿ ಆತನೆಂದಿರುವ ಊರು ಅದೊ? ಇದೊ? ಎಂದು ಸಹಜವಾಗಿ ಇಮ್ಮನವಾಗುವುದರಿಂದ ಕಂಡಿತವಾದ ಸಮೀಕರಣಕ್ಕೆ ತೊಡಕಾಗುತ್ತದೆ.

ಪ್ಟೋಲೆಮಿಯಲ್ಲಿಯ (೮) Kalligeris (ಕಲ್ಲಿಗೇರಿಸ್) ಎಂಬ ಊರು ಈಗಣ ಕಲಕೇರಿ (Kalkeri) ಎಂದು ಸಾಕಷ್ಟು ಪ್ರತ್ಯಕ್ಷವಿದೆ. ಇದರ ಕೊನೆಯ ಸ-ಕಾರವು (s) ಗ್ರೀಕ್ ಭಾಷೆಯಲ್ಲಿ ಪ್ರಥಮಾವಿಭಕ್ತಿಯ ಏಕವಚನದ ಪ್ರತ್ಯಯವಷ್ಟೇ; ಉದಾ—ಪ್ಟೋಲೆಮಿಯಲ್ಲಿ Adris ಅಥವಾ Rhouadis (ಪು. 90) = ಇರಾವತೀ (ರಾವೀ) ನದಿ; Mophis (ಪು. 38; 343) = ಮಾಹೀನದಿ; Mouziris (ಪು. 51) = ಕೇರಳದೇಶದ ಮುಂಚಿರಿ ಎಂಬ ಊರು, ಇತ್ಯಾದಿ. ಈ Kalligeris ಎಂಬ ಹೆಸರಿನ ಪರಪದವಾದ ಕೇರಿ ಎಂದರೆ ಕೆರೆ (ತಟಾಕ) ಎಂದು ಶಾ.ಶ. ೮೫೫ ವಿಜಯ ಸಂ। = ಕ್ರಿ.ಶ. 933–34ನೆಯ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಕೌಜಗೇರಿ ಎಂಬಲ್ಲಿಯ

ಶಾಸನದಲ್ಲಿ[1] ಆ ಊರನ್ನು ಕೊವುಜಗೆಱೆ ಎಂದೂ, ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಕಟಗೇರಿ ಎಂಬಲ್ಲಿಯ[2] ಕಳಚುರ್ಯ ಸಂಕಮದೇವನ ಆಳಿಕೆಯ (ಕ್ರಿ.ಶ. 1178–1181) ಶಾಸನದಲ್ಲಿಯೂ, ಚಾಳುಕ್ಯ ವಿಕ್ರಮ ವರ್ಷ ೨೧ನೆಯ ಈಶ್ವರ ಸಂವತ್ಸರದ, ಅಂದರೆ ಕ್ರಿ.ಶ. 1096–97ನೆಯ ಶಾಸನದಲ್ಲಿಯೂ ಶಾ.ಶ. ೧೧೦೧ ವಿಳಂಬಿ ಸಂ॥ ಶ್ರಾವಣ ಶುಕ್ಲ ಹುಣ್ಣಿಮೆ ಸೋಮವಾರ = ಕ್ರಿ.ಶ. 1178 ಜುಲಾಯಿ 31ನೆಯ ತಾರೀಕಿನ ಶಾಸನದಲ್ಲಿಯೂ ಆ ಕಟಗೇರಿಯನ್ನು ಕಡಕೆಱೆ ಎಂದೂ ಹೆಸರಿಸಿರುವಲ್ಲಿಂದ ತಿಳಿಯುತ್ತದೆ. ಮೇಲೆ ಕಂಡಿರುವಂತೆ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿಯೂ ಕಲಕೇರಿ ಎಂಬ ಊರಿದೆ, ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿಯೂ ಕಲಕೇರಿ ಎಂಬ ಊರಿದೆ; ಹೀಗೆ ನಾಸು ಬಲ್ಲಷ್ಟರ ಮಟ್ಟಿಗೆ ಉತ್ತರ ಕರ್ನಾಟಕದಲ್ಲಿ ಎರಡಾದರೂ ಕಲಕೇರಿಗಳಿವೆ. ಶಾ.ಶ. ೯೨೬ ಕ್ರೋಧಿ ಸಂ॥ ಆಷಾಢ ಬ॥ ಅಮಾವಾಸ್ಯೆ ಸೂರ್ಯಗ್ರಹಣ = ಕ್ರಿ.ಶ. 1004 ಜುಲಾಯಿ 19ನೆಯ ತಾರೀಕು ಬುಧವಾರ ಸೂರ್ಯಗ್ರಹಣದಂದಿನ ತುಂಬಿಗಿಯ ಶಿಲಾಶಾಸನದಲ್ಲಿ[3] ಬಿಜಾಪುರ ಜಿಲ್ಲೆಯ ಕಲಕೇರಿಯನ್ನು ಕಲ್ಕೆಱೆ ಎಂದಿದೆ. ಧಾರವಾಡ ಜಿಲ್ಲೆಯ ಕಲಕೇರಿಯಲ್ಲಿರುವ ಶಾ. ಶ. ೧೫೭೩ ಖರ ಸಂ॥ = ಕ್ರಿ.ಶ. 1651ನೆಯ ಶಾಸನದಲ್ಲಿ[4] ಅದನ್ನು ಕಲ್ಕೆಱೆ ಎಂದಿದೆ; ಅಲ್ಲಿಯೇ ಇರುವ ತೇದಿಯೂ ಅರಸನ ಹೆಸರೂ ಸವೆದುಹೋದ ಮತ್ತೊಂದು ಶಾಸನದಲ್ಲಿ[5] ಅದನ್ನು ಕಲಿಕೆಱೆ ಎಂದಿದೆ. ಹೀಗೆ ಇವೆರಡೂ ಕಲಕೇರಿಗಳು ಹಳೆಯ ಊರುಗಳೆಂದು ಸಿದ್ಧವಾಗುವುದರಿಂದ, ಪ್ತೋಲೆಮಿಯ Kalligeris ಇವಲ್ಲಿ ಯಾವುದೊ ಒಂದಾಗಿರಬೇಕು.

ಈ Kalligeris ಎಂಬ ಸಮಸ್ತನಾಮದ ಪೂರ್ವಪದವು ಕಲ್ ಎಂದೊ ಕಲಿ ಎಂದೊ ನಿಷ್ಕೃಷ್ಟಪಡಿಸಲಾಗದಾದರೂ, ಅದರ ಪರಪದವು ತಟಾಕ ಎಂಬ ಅರ್ಥದ ಕೆಱೆ ಎಂಬ ಅಚ್ಚಗನ್ನಡ ಶಬ್ದವೆಂದು ಕಂಡಿತವಿರುವುದರಿಂದ, ಪ್ರಾಯಶಃ ಅರಿಸಮಾಸಗಳು ಇದ್ದಿರಲಾರದ (ಪ್ತೋಲೆಮಿ ಇದ್ದಂದಿನ) ಕ್ರಿ. ಶ. 2 ನೆಯ ಶತಕದಲ್ಲಿ ಬಳಕೆಯಲ್ಲಿದ್ದ ಈ ಹೆಸರಿನ ಪೂರ್ವಪದವೂ ಬಹುಶಃ ಕನ್ನಡಶಬ್ದವೇ ಎಂದು

---

1 *SIE*, 1928, App. E, ಪು. 21, ನಂ. 13,

2 *SIE*, 1929, App. E, ಪು. 50, ನಂ. 149, 150 ಮತ್ತು 151.

3 *Epigraphia Indica*, XVII, ಪು. 8.

4 *SIE*, 1928, App. E, ಪು. 24, ನಂ. 50.

5 ಅದೇ, ಪು. 24, ನಂ. 51.

ನಿಶ್ಚಯಿಸಬಹುದು. ಹೇಗೂ ಈ ಹೆಸರಿನಲ್ಲಿ ಕೆಱೆ ಎಂಬ ಅಚ್ಚಗನ್ನಡ ಶಬ್ದವಿರುವುದರಿಂದ ಮಾತ್ರವಲ್ಲ, ಅದು ಊರಿನ ಹೆಸರಿನಲ್ಲಿ ನಿಂದಿರುವುದರಿಂದಲೂ, ಆ ಕ್ರಿ.ಶ. 2 ನೆಯ ಶತಮಾನದಲ್ಲಿ ಕನ್ನಡಭಾಷೆ ಆ ಮುಂಚಿನಿಂದಲೂ ಇದ್ದಿರಬೇಕೆಂದೂ ಅದೇ ಉತ್ತರ ಕರ್ಣಾಟಕದ ನಾಡನುಡಿಯಾಗಿತ್ತೆಂದೂ ನಿಸ್ಸಂದೇಹವಾಗಿ ನಿಷ್ಪನ್ನವಾಗುತ್ತದೆ.

(೧) Nagarouris (ನಾಗರೂರಿಸ್ ಅಥವಾ ನಾಗರುರಿಸ್) ಎಂಬುದರ ಕೊನೆಯಲ್ಲೂ ಇರುವ ಗ್ರೀಕ್ ಪ್ರಥಮೈಕವಚನದ ಸ-ಕಾರವನ್ನು (s) ಕಳಚುತ್ತಲೆ ಉಳಿವ Nagarouri ಎಂಬುದು (ಗ್ರೀಕಿನಲ್ಲಿ ಅ-ಕಾರಕ್ಕೂ ಆ-ಕಾರಕ್ಕೂ ಒಂದೇ ವರ್ಣವಿರುವುದರಿಂದ) ಬಹುಶಃ ನಾಗರಪುರಿ ಎಂಬ ಹೆಸರಿನ ಗ್ರೀಕ್ ಅಪಭ್ರಂಶವಾಗಿರಬೇಕೆಂದು ವ್ಯಕ್ತವಾಗುತ್ತದೆ. ಇದರ ಕೊನೆಯ ಉರಿ ಅಥವಾ ಊರಿ (—ouri) ಎಂಬಂತೆ ತೋರುವ ಪರಪದವು ಕನ್ನಡ ಊರು ಎಂದು ಭಾವಿಸಲಾಗದು. ಏಕೆಂದರೆ ಈ ಮುಂದೆ ಸೋದಾಹರಣವಾಗಿ ವಿಶದೀಕರಿಸಲ್ಪಡುವಂತೆ, ಉತ್ತರ ಕರ್ಣಾಟಕದ ಮಟ್ಟಿಗಾದರೂ ಹೇಳುವುದಾದರೆ, ಈಗ ಊರ (ಅಥವಾ ಊರು) ಎಂದಿರುವ ಸ್ಥಳನಾಮಗಳ ಕೊನೆಯಲ್ಲಿ ಪ್ರಾಚೀನ ಶಾಸನಗಳಲ್ಲಿ ಪುರ ಎಂದಿರುವುದರಿಂದ (ಉದಾ—ಮಲ್ಲಪುರ = ಮಲ್ಲವುರ = ಮಲ್ಲೂರ), ಆ ಪುರವೇ ಕ್ರಮೇಣ ವುರ (ಹುರ) = ವುರು (ಹುರು) = ಊರು (ಊರ) ಆಯಿತೆಂದು ತಿಳಿಯುತ್ತದೆ. ಪುರಕ್ಕೂ ಪುರಿಗೂ ಲಿಂಗಮಾತ್ರದ ಭೇದವಲ್ಲದೆ ಅರ್ಥ ಒಂದೇ ಆದರೂ, ನಮ್ಮ ದೇಶದ ಸ್ಥಳನಾಮಗಳ ಬಹುತರವಾದ ಪರಪದವಾದರೂ ಪುರವೇ ಹೊರತು ಪುರಿಯಲ್ಲ. ಆದರೆ ಗ್ರೀಕ್ ಭಾಷೆಯಲ್ಲಿ ಊರ ಹೆಸರುಗಳು ಸರ್ವಸಾಮಾನ್ಯವಾಗಿ ಸ್ತ್ರೀಲಿಂಗವಾಗಿರುವುದರಿಂದ, ಇಲ್ಲಿಯ ಕೆಲವಾದರೂ ಶಬ್ದಗಳನ್ನೂ ಅವುಗಳ ಅರ್ಥವನ್ನೂ ಬಲ್ಲ ಪ್ತೊಲೆಮಿಯಲ್ಲಿ ನಮ್ಮ ಪುರವು ಗ್ರೀಕರ ಬಳಕೆಗೆ ತಕ್ಕಂತೆ ಸ್ತ್ರೀಲಿಂಗವಾಗಿ ಪುರಿಯಾದರೆ ಸೋಜಿಗವಲ್ಲ. ಆದಕಾರಣ ಪ್ತೊಲೆಮಿಯಲ್ಲಿ ಇ-ಕಾರಾಂತವಾಗಿರುವ Nagarouri ಯ ಆಗಣ ಇಲ್ಲಿಯ ಹೆಸರು ಪ್ರಾಯಶಃ ನಾಗರಪುರ ಎಂದೇ ಇದ್ದು, ಅದು ಲೋಕೋಕ್ತಿಯಲ್ಲಿ ಕ್ರಮೇಣ ನಾಗರಪುರ = ನಾಗರ್ಪುರ = ನಾಗಹುರ, ನಾಗಹುರು = ನಾಗೂರ, ನಾಗೂರು ಎಂದಾಗಿರಬೇಕು. ಹಾಗಾದರೆ ಮೇಲೆ ಕಂಡಿರುವಂತೆ ಬೆಳಗಾಂವ ಜಿಲ್ಲೆಯ ಗೋಕಾಕ ತಾಲೂಕಿನಲ್ಲಿಯೂ ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನಲ್ಲಿಯೂ ಕಲಘಟಗಿ ತಾಲೂಕಿನಲ್ಲಿಯೂ ನಾಗನೂರ ಎಂಬ ಊರುಗಳು ಇವೆಯಾದರೂ ಅವುಗಳ ಪ್ರಾಚೀನತೆಯನ್ನು ಕುರಿತು ಏನೂ ತಿಳಿಯದ ಕಾರಣವೇ ಅಲ್ಲ, ಹಳೆಯ ಸ್ಥಳನಾಮಗಳು ಲೋಕೋಕ್ತಿಯಲ್ಲಿ ಕಾಲಕ್ರಮೇಣ ಸಹಜವಾಗಿ ಸಂಕೋಚಿಸಿ

ಬರಬೇಕಾದಲ್ಲಿ (ಉದಾ—ಧರ್ಮವೊಳಲ್[1] = ಧಾರವಾಡಜಿಲ್ಲೆಯ ಗದಗ ತಾಲೂಕಿನಲ್ಲಿಯ ಈಗಣ ಡಂಬಳ; ಲೊಕ್ಕಿಗುಂಡಿ[2] = ಅದೇ ಜಿಲ್ಲೆಯ ಅದೇ ತಾಲೂಕಿನಲ್ಲಿಯ ಈಗಣ ಲಕ್ಕುಂಡಿ; ಕಾರಿರ್ವಿಡಿ[3] = ಅದೇ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿರುವ ಈಗಣ ಕರಮಡಿ; ಕೊಣಿಗಸೂರು ಅಥವಾ ಕೊಣೆಗಸೂರು[4] = ಬಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿರುವ ಕೊಣ್ಣೂರ, ಇತ್ಯಾದಿ), ಪ್ತೊಲೆಮಿಯ Nagarouris ನಲ್ಲಿ ಇಲ್ಲದ ಈ ನಾಗಸೂರದ ನಡುವಣ ಸ-ಕಾರವು ಪ್ರತ್ಯಕ್ಷತಃ ಈಚೆಯ ಆಗಂತುಕವೇನೂ ಅಲ್ಲ, ಆ ಊರುಗಳ ಹೆಸರುಗಳಷ್ಟೇ ಹಳೆಯದಾಗಿರಬೇಕೆಂಬ ಕಾರಣವೂ ಆ ನಾಗಸೂರಗಳನ್ನು ವಿಸರ್ಜಿಸುತ್ತಲೆ, ಪ್ತೊಲೆಮಿಯ Nagarouris ಎಂಬ ಊರು ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲೂಕಿನಲ್ಲಿಯೂ ಹುನಗುಂದ ತಾಲೂಕಿನಲ್ಲಿಯೂ ಇರುವ ನಾಗೂರಗಳಲ್ಲಿ ಯಾವುದೊ ಒಂದೆಂದು ಸಿದ್ಧವಾಗುತ್ತದೆ. ಆದರೆ ಹುನಗುಂದ ತಾಲೂಕಿನ ನಾಗೂರದ ಹಳಮೆಯನ್ನು ಕುರಿತು ಏನೂ ತಿಳಿಯದು; ಮುದ್ದೆಬಿಹಾಳ ತಾಲೂಕಿನ ನಾಗೂರನ್ನಾದರೊ ಅಲ್ಲಿಯೇ ಇರುವ ದೇವಗಿರಿಯ ಯಾದವ ವಂಶದ ಸಿಂಘಣನ ಆಳಿಕೆಯ (ಕ್ರಿ.ಶ. 1210-1246) ಬಹುಧಾನ್ಯ ಸಂ। = ಕ್ರಿ.ಶ. 1218ನೆಯ ಶಿಲಾಲೇಖದಲ್ಲಿಯೂ[5] ಆ ತಾಲೂಕಿನ ನೆರೆಯ ಬಾಗೇವಾಡಿ ತಾಲೂಕಿನ ಮುತ್ತಿಗಿಯಲ್ಲಿಯ ಕಳಚುರ್ಯ ಬಿಜ್ಜಳನ ಆಳಿಕೆಯ ಶಾ. ಶ. ೧೦೮೦ ಬಹುಧಾನ್ಯ ಸಂ। ವೈಶಾಖ ಹುಣ್ಣಿಮೆ ಸೋಮವಾರ ಚಂದ್ರಗ್ರಹಣ = ಕ್ರಿ.ಶ. 1158 ಏಪ್ರಿಲ್ 14 ನೆಯ ತಾರೀಕು ಸೋಮವಾರ (ರಾತ್ರಿಯ) ಚಂದ್ರಗ್ರಹಣದಂದಿನ ಶಿಲಾಶಾಸನದಲ್ಲಿಯೂ[6] ನಾಗಹುರು ಎಂದು ಉಲ್ಲೇಖಿಸಿದೆ, ಅದೇ ಕ್ರಮೇಣ ಈಗಣ ನಾಗೂರ ಆಗಿದೆ. ಪ್ತೊಲೆಮಿಯ Nagarouris ಪ್ರಾಯಶಃ ಇದೇ ನಾಗೂರ ಆಗಿರಬೇಕು. ಹಾಗಾದರೆ ಅದೇ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿರುವ ಕಲಕೇರಿ ಕಾಗೆ ಹಾರುವಂತೆ ಈ ನಾಗೂರದಿಂದ ಸುಮಾರು ೧೬ ಮೈಲುಗಳಷ್ಟೇ ಉತ್ತರದಲ್ಲಿ ಇರುವುದರಿಂದ, ಅದೇ ಪ್ತೊಲೆಮಿಯ Kalligeris ಎಂದು ನಿಶ್ಚಯಿಸಬಹುದು.

---

1 *SIE*, 1928, App. E, ಪು. 25, ನಂ. 69 ಮತ್ತು 72.

2 *SIE*, 1927 Supplement (Sup.), ಪು. 3, ನಂ. 28.

3 *S.I.E.*, 1928, App. E., ಪು. 21, ನಂ. 19.

4 *S.I.E.*, 1929, App. E., ಪು. 47, ನಂ. 82, 87 ಮತ್ತು 89.

5 *S.I.E.*, 1930, App. E., ಪು. 68, ನಂ. 46.

6 ಅದೇ, ಪು. 72, ನಂ. 104.

(೬) Soubouttou ಅಥವಾ Sabatha. ಗ್ರೀಕ್ ಭಾಷೆಯಲ್ಲಿ ಅ-ಆ-ಕಾರಗಳಿಗೆ ಒಂದಾದರೂ ವರ್ಣವಿದ್ದರೂ ಏ-ಕಾರವೂ ಇದ್ದರೂ ಆಲುವಬೇಟವನ್ನು Olokhoira (ಒಲೊಖೊಇರ) ಎಂಬಲ್ಲಿ (ಪು. 180) ಆದ್ಯ ಆ-ಕಾರವನ್ನು ಒ ಹಾಗೂ ನಡುವಣ ಏ-ಕಾರವನ್ನು ಒಇ ಎಂದಿರುವ ಪ್ತೊಲೆಮಿಯಲ್ಲಿ ಹೇಳಿರುವ ಹೆಸರುಗಳಿಂದ ನಿರ್ದಿಷ್ಟವಾದ ಊರುಗಳನ್ನು ಕಂಡುಹಿಡಿವಲ್ಲಿ ಆತನ ಸ್ವರಗಳನ್ನು ಅಷ್ಟು ಗಮನಿಸದೆ ವ್ಯಂಜನಗಳನ್ನೇ ಆದಷ್ಟು ಮಟ್ಟಿಗಾದರೂ ಆಧರಿಸಬೇಕಾಗುತ್ತದೆ. ಗ್ರೀಕಿನಲ್ಲಿ ಇಲ್ಲದ ವ-ಕಾರದ ಬಗ್ಗೆ ಆತನಲ್ಲಿ ಬ-ಕಾರವಿದೆ, ಉದಾ—ವಿತಸ್ತಾ = Bidaspes, ವಿಳಿವಾಯಕುರ = Baleokouros. ಗ್ರೀಕಿನಲ್ಲಿ ದಂತ್ಯಗಳಿವೆ, ಮೂರ್ಧನ್ಯಗಳಿಲ್ಲ; ಠ-ಕಾರವು ಆತನಲ್ಲಿ ಥ-ಕಾರವಾಗಿದೆ, ಉದಾ.—(ಪ್ರತಿಷ್ಠಾನ =)ಪೈಠಣ = Baithana (ಬಇಥನ ಅಥವಾ ಬೈಥನ). ಆದಕಾರಣ Sabatha ಎಂಬ ಹೆಸರಿನಲ್ಲಿ ಸ-ಕಾರವೂ, ಬ-ಕಾರವೊ ವ-ಕಾರವೊ ಅದರಲ್ಲಿ ಒಂದೂ, ಟ-ಠ-ಕಾರಗಳೊ ಡ-ಢ-ಕಾರಗಳೊ ಅವಲ್ಲಿ ಒಂದೂ, ಹೀಗೆ ಮೂರಾದರೂ ವ್ಯಂಜನಗಳಿರಬೇಕು. ಹಾಗಾದರೆ ಧಾರವಾಡ ಜಿಲ್ಲೆಯ ರೋಣ ತಾಲೂಕಿನಲ್ಲಿಯ ಸವಡಿ ಎಂಬ ಊರಿನ ಹೆಸರು ಬಹುಶಃ ಇದಕ್ಕೆ ಸರಿಗೂಡಬಹುದು. ಸವಡಿಯಲ್ಲಿ ಶಾ. ಶ. ೮೯೧ ಪ್ರಮೋದ ಸಂ। = ಕ್ರಿ. ಶ. 969-70ರ ಶಾಸನವಿದೆ[1]. ಅಲ್ಲಿಯದೇ ಶಕಸಂಖ್ಯೆಯೂ ಅರಸನ ಹೆಸರೂ ಇಲ್ಲದ ಮತ್ತೊಂದು ಹಳೆಯ ಶಾಸನದಲ್ಲಿ[2] ಆ ಊರನ್ನು ಸೈವಿಡಿ ಎಂದದೆ.

(೭) Sirimalaga (ಸಿರಿಮಲಗ). ಇದು ಪಡುವಣ ಚಾಳುಕ್ಯ ತ್ರಿಭುವನ ಮಲ್ಲ ವಿಕ್ರಮಾದಿತ್ಯನ ಆಳಿಕೆಯ (ಕ್ರಿ. ಶ. 1076-1126) ೨೦ನೆಯ ವರ್ಷದ ಯುವ ಸಂ। ಪುಷ್ಯ ಬ। ೧೧ ಸೋಮವಾರ ಉತ್ತರಾಯಣ ಸಂಕ್ರಾಂತಿ = ಕ್ರಿ. ಶ. 1095 ದಶಂಬರ 24 ನೆಯ ತಾರೀಕಿನ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಹೆಬ್ಬಲದ ಶಾಸನದಲ್ಲಿ[3] ಸಿರಿಮಲಂಗೆ (Sirimalamge) ಎಂದೂ, ಆ ಜಿಲ್ಲೆಯ ಅದೇ ತಾಲೂಕಿನ ಹೂವಿನ ಹಿಪ್ಪರಗಿ ಎಂಬಲ್ಲಿರುವ ಶಾ. ಶ. ೭೮೪ ಚಿತ್ರಭಾನು ಸಂ। ಸೂರ್ಯಗ್ರಹಣದಂದಿನ, ಅಂದರೆ ಆ ಸಂವತ್ಸರದಲ್ಲಿ ಭಾದ್ರಪದ ಬಹುಳ ಅಮಾವಾಸ್ಯೆಯಂದು ಮಾತ್ರ ಇದ್ದ ಸೂರ್ಯಗ್ರಹಣದಂದಿನ, ಕ್ರಿ. ಶ. 862 ಆಗೋಸ್ತು 28ನೆಯ ತಾರೀಕಿನ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ 'ರಟ್ಟಮಾರ್ತ್ತಂಡನ ದತ್ತಿ' ಎಂಬ ಸ್ತಂಭಲೇಖಗಳಲ್ಲಿ[4] 'ಕೃಷ್ಣಬೆಣ್ಣೋರ್‌ತ್ತರಾಪಥ'ದ ಕನ್ನವುರಿ ವಿಷಯದಲ್ಲಿಯ ಪಿಪ್ಪರಗೆ ಎಂಬ ಆ ಹೂವಿನ ಹಿಪ್ಪರಗಿಯ ಜತೆ

[1] *SIE*, 1928, App. E, ಪು. 20, ನಂ. 1. [2] ಅದೇ, ಪು. 20, ನಂ. 3.

[3] SIE, 1930, App. E, ಪು. 71, ನಂ. 90. [4] ಅದೇ, ಪು. 71. ನಂ. 92 ಮತ್ತು 93

ಯಲ್ಲಿ ಸಿರ್ಮಲಗೆ (Sirmalage) ಎಂದೂ ಹೇಳಲ್ಪಟ್ಟಿರುವ ಆ ಜಿಲ್ಲೆಯ ಅದೇ ತಾಲೂಕಿನಲ್ಲಿರುವ ಈಗಣ ಚಿಮ್ಮಲಗಿ ಎಂಬಲ್ಲಿ ಏನೂ ಸಂಶಯವಿಲ್ಲ. ಅತಏವ ಪ್ಟೊಲೆಮಿಯ Sirimalaga ವನ್ನು ಈಗ ಮಾಲಖೇಡ ಎಂಬ ರಾಷ್ಟ್ರಕೂಟರ ಮಾನ್ಯಖೇಟದೊಂದಿಗೆ ಸಮೀಕರಿಸಿರುವುದು[1] ಸರ್ವಥಾ ಸರಿಯಲ್ಲ: ಏಕೆಂದರೆ ಆ ಹೆಸರು ಮೂಲತಃ ಮಾಲಖೇಡ ಎಂದಿಲ್ಲದೆ ಈಚೆಗೆ ತಾನೆ ಮಾಲಖೇಡ ಎಂದಾಗಿದೆ ಮಾತ್ರವಲ್ಲ, ಅದನ್ನು ರಾಷ್ಟ್ರಕೂಟ III ಗೋವಿಂದನು (ಕ್ರಿ. ಶ. 783-814) ಪ್ರಥಮತಃ ಕಟ್ಟಲಾರಂಭಿಸಿ ಅವನ ಮಗನಾದ ಅಮೋಘವರ್ಷ ನೃಪತುಂಗನು (ಕ್ರಿ. ಶ. 814-877) ಅದನ್ನು ತನ್ನ ರಾಜಧಾನಿ ಮಾಡಿಕೊಂಡನೆಂದು ತಿಳಿಯುವುದರಿಂದ[2], ಅವರ ಕಾಲಕ್ಕೆ ಹಿಂದೆ ಆ ಊರೇ ಇದ್ದಿರಲಾರದು. ಮೇಲೆ ಕಂಡಿರುವಂತೆ ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿ ಬೇರೊಂದು ಚಿಮ್ಮಲಗಿ ಇದೆಯಾದರೂ ಬಾಗೇವಾಡಿ ತಾಲೂಕಿನಲ್ಲಿಯ ಚಿಮ್ಮಲಗಿ ಪುಣ್ಯಕ್ಷೇತ್ರವೆಂದೂ[3] ಭಾವಿಸಲ್ಪಡುವುದರಿಂದ, ಇದೇ ಅದಕ್ಕಿಂತ ಬಹಳ ಹಳೆಯದಾಗಿರಬೇಕು.

(೫) Hippokoura (ಹಿಪ್ಪೊಕೂರ ಅಥವಾ ಹಿಪ್ಪೊಕುರ, ಅಂದರೆ ಮೇಲೆ ನಿರ್ಣಯಿಸಿರುವಂತೆ ಇಪ್ಪೊಕೂರ ಅಥವಾ ಇಪ್ಪೊಕುರ). ಹೂವಿನ ಹಿಪ್ಪರಗಿಯಲ್ಲಿರುವ ಮೇಲಣ ಕ್ರಿ. ಶ. 862ನೆಯ ಸ್ತಂಭಲೇಖಗಳಲ್ಲಿ ಚಿಮ್ಮಲಗಿಯ ಸಂಗಡವೂ ಅಲ್ಲಿಂದ ೨೦೦ ವರ್ಷಗಳ ಈಚೆಯ ಶಾ. ಶ. ೯೮೪ ಶುಭಕೃತ್ ಸಂ। = ಕ್ರಿ. ಶ. 1062-63ನೆಯ ಅದೇ ಬಾಗೇವಾಡಿ ತಾಲೂಕಿನ ಬ್ಯಾಕೋಡದ ಶಾಸನದಲ್ಲಿ[4] ಅದೇ ತಾಲೂಕಿನ ಸಾಲವಾಡಿಗೆ ಎಂಬ ಸಲ್ವಡಿಗಿಯ ಸಂಗಡವೂ ಪಿಪ್ಪರಗೆ ಎಂದು ಹೇಳಲ್ಪಟ್ಟಿರುವ ಹಾಗೂ ಹಿರೇ ಹಿಪ್ಪರಗಿ ಎಂದೂ ಕರೆಯಲ್ಪಡುವ ಈಗಣ ಆ ಹೂವಿನ ಹಿಪ್ಪರಗಿಯೇ ಪ್ಟೊಲೆಮಿಯ ಇಪ್ಪೊಕೂರ ಅಥವಾ ಇಪ್ಪೊಕುರ ಎಂದು ಧಾರಾಳವಾಗಿ ನಿಶ್ಚಯಿಸಬಹುದು. ಬಿಜಾಪುರ ಜಿಲ್ಲೆಯಲ್ಲಿಯೇ ಬಾಗೇವಾಡಿ ತಾಲೂಕಿನ ಈ ಹೂವಿನ ಹಿಪ್ಪರಗಿಯಲ್ಲದೆ ಅಲ್ಲಿಂದ ಸುಮಾರು ೧೭ ಮೈಲುಗಳೊಳಗೆ ಸಿಂದಗಿ ತಾಲೂಕಿನಲ್ಲಿ ದೇವರ ಹಿಪ್ಪರಗಿ ಎಂದೂ ಕರೆಯಲ್ಪಡುವ ಮತ್ತೊಂದು ಹಿಪ್ಪರಗಿಯೂ ಇದೆ, ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿ

---

[1] *Ptolemy*, ಪು. 179.

[2] *FKD*, ಪು. 402 ; 396.

[3] 'ಬಿಜಾಪುರಜಿಲ್ಲೆಯ ಭೂಗೋಳ' (Kanarese Mission Press and Book Depot, Mangalore, 1922), ಪು. ೬೬.

[4] *SIE*, 1930, App. E, ಪು. 70, ನಂ. ೮೫.

ಸಲ್ಲಿಯೂ ಇನ್ನೊಂದು ಹಿಪ್ಪರಗಿ ಇದೆ. ಹೀಗೆ ಮೂರಾದರೂ ಹಿಪ್ಪರಗಿಗಳು ಇವೆ ಎಂದು ಮೇಲೆ ಕಂಡಿರುವೆವಷ್ಟೇ. ಅಥಣಿ ತಾಲೂಕಿನ ಹಿಪ್ಪರಗಿಯ ಹಳಮೆಯನ್ನು ಕುರಿತು ನಾನು ಏನೂ ಅರಿಯೆ. ದೇವರ ಹಿಪ್ಪರಗಿಯಲ್ಲಿ ಯಾದವ ವಂಶದ ಭಿಲ್ಲಮನ ಕಾಲದೆಂಬ ಕ್ರಿ.ಶ. 1192 ನೆಯ ಶಿಲಾಲೇಖವಿದೆ[1] ಎಂದಷ್ಟೇ ಏನಾ (ಆ ಲೇಖವು ಪ್ರಾಯಶಃ ಈ ವರೆಗೆ ಪ್ರಕಟವಾಗಿಲ್ಲದ ಕಾರಣ) ಅದರಲ್ಲಿ ಆ ಊರಿನ ಅಂದಿನ ಹೆಸರೂ ಇದೆಯೊ, ಇದೆಯಾದರೆ ಹೇಗಿದೆ ಎಂದು ತಿಳಿಯದೆ, ಏವಂಚ ಆ ಊರಿನ ಹಳಮೆಯನ್ನು ಕುರಿತು ಏನೂ ತಿಳಿಯದೆ, ಆ ಕುರಿತು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಕಾರ್ಯಾಲಯದ ಶ್ರೀ ನಾರಾಯಣ ಕಲ್ಲೆಯವರನ್ನು ವಿಚಾರಿಸಿದಲ್ಲಿ ಅಲ್ಲಿ ಶಿಲಾಲೇಖಗಳೂ ಇವೆ, ಮಾರ್ತಂಡ ದೇವಾಲಯವೂ ಮಡಿವಾಳ ಮಾಚಯ್ಯನು ಪ್ರತಿಷ್ಠಿಸಿದ ಕಲ್ಲೇಶ್ವರ ದೇವರ ಗುಡಿಯೂ ಇವೆ ಎಂದೂ, ಹೂವಿನ ಹಿಪ್ಪರಗಿಗಿಂತ ದೇವರ ಹಿಪ್ಪರಗಿಯೇ ಪುರಾತನವಾದುದೆಂದು ಕೆಲವರ ಅಭಿಪ್ರಾಯವಿದೆ ಎಂದೂ, ಆದರೆ ರೂಢಿಯಲ್ಲಿ ಹೂವಿನ ಹಿಪ್ಪರಗಿಯನ್ನೇ ಹಿರೇ ಹಿಪ್ಪರಗಿ ಎಂದು ಕರೆಯುತ್ತಾರೆಂದೂ ಅವರು (೨೩ನೆಯ ನವಂಬರ ೧೯೪೦) ನನಗೆ ತಿಳಿಸಿರುತ್ತಾರೆ. ಆದರೆ ಹೂವಿನ ಹಿಪ್ಪರಗಿಯಲ್ಲಿ ಸಾವಿರ ವರ್ಷಗಳಿಗಿಂತಲೂ ಹಿಂದಣ, ದೇವರ ಹಿಪ್ಪರಗಿಯಲ್ಲಿಯ ಕ್ರಿ.ಶ. 1192 ನೆಯ ಲೇಖಕ್ಕಿಂತಲೂ ಬಹಳ ಹಿಂದಣ, ಕ್ರಿ.ಶ. 862ನೆಯ ಸ್ತಂಭಲೇಖಗಳು ಇರುವುದರಿಂದ, ಅದು ಆ ಲೇಖಗಳ ಕಾಲಕ್ಕಿಂತಲೂ ಶಾಸೆ ಹಳೆಯದಾಗಿರಬೇಕು, ಆ ಲೇಖಗಳಲ್ಲೂ ಅಲ್ಲಿಂದ ೨೦೦ ವರ್ಷಗಳ ಬಳಿಕಣ ಕ್ರಿ.ಶ. 1062-63 ನೆಯ ಬ್ಯಾಕೋಡದ ಶಿಲಾಲೇಖದಲ್ಲಿಯೂ ಅದನ್ನು ಹೂವಿನ ಹಿಪ್ಪರಗಿ[2] ಎನ್ನದೆ ಬರೇ ಪಿಪ್ಪರಗೆ (= ಹಿಪ್ಪರಗಿ) ಎಂದಿರುವುದರಿಂದ ಮಾತ್ರವಲ್ಲ, ಅದನ್ನು

---

[1] *FKD.*, ಪು. 518, foot-note 5.

[2] ಶಕಸಂಖ್ಯೆಯೂ ಅರಸನ ಹೆಸರೂ ಇಲ್ಲದೆ ಬರೇ ಶ್ರಾವಣ ಶುಕ್ಲ ೪ ಶುಕ್ರವಾರ ಎಂದಿರುವ (ಅತ ಏವ ಇಂತಹದೇ ವರ್ಷದ ಶಾಸನವೆಂದು ನಿರ್ಣಯಿಸಲಾಗದ) ಹೂವಿನ ಹಿಪ್ಪರಗಿಯಲ್ಲೇ ಇರುವ ಮತ್ತೊಂದು ಶಿಲಾಲೇಖದಲ್ಲಿ (*S.I.E.*, 1930, App. E., ಪು. 71, ನಂ. 91) ಆ ಊರನ್ನು ಪಿಪ್ಪರಗೆ ಎನ್ನದೆ ಹೂವಿನ ಹಿಪ್ಪರಗೆ ಎಂದು (ಅದಕ್ಕೆ ಈಗಲೂ ಇರುವ ಹೆಸರಿನಿಂದ) ಉಲ್ಲೇಖಿಸಿರುವಲ್ಲಿ ಆ ಹೆಸರಿನಲ್ಲಿಯ ಎರಡೂ ಶಬ್ದಗಳ ಆದ್ಯ ಪ-ಕಾರಗಳಿಗೆ (ಪೂವಿನ ಪಿಪ್ಪರಗೆ) ಹತ್ವವಿರುವುದರಿಂದ, ಈ ಶಾಸನವು ಆ ಊರನ್ನು ಬರೇ ಪಿಪ್ಪರಗೆ ಎಂದಿರುವ ಕ್ರಿ.ಶ. 1062-63 ನೆಯ ಬ್ಯಾಕೋಡದ ಶಾಸನಕ್ಕಿಂತ ಈಚೆಯದಾಗಿರಬೇಕು, ಹಾಗೂ ಬ್ಯಾಕೋಡದ ಮತ್ತು ಈ ಶಾಸನದ ಕಾಲಗಳ ನಡುವೆ ತಾನೆ ಆ ಊರಿಗೆ ಹೂವಿನ ಹಿಪ್ಪರಗೆ ಎಂದು ಹೆಸರಾಗಿರಬೇಕು ಎಂದು ಸ್ಪಷ್ಟವಿದೆ. ಬಸವಪುರಾಣದಲ್ಲಿ (ಕ್ರಿ. ಶ. 1369) ಹಿಪ್ಪರಿಗೆ (21.೪) ಎಂದೂ ಹಿಪ್ಪಿರಿಗೆ (58.೧೨) ಎಂದೂ ಇದೆ.

ಈಗಲೂ ಹಿರೇಹಿಪ್ಪರಗಿ ಎನ್ನುವುದರಿಂದಲೂ ಅದು ಮಿಕ್ಕ ಹಿಪ್ಪರಗಿಗಳಿಗಿಂತ ಬಹಳ ಹಳೆಯದಾಗಿರಬೇಕು ಎಂದು ಸಾಕಷ್ಟು ದೃಢವಾಗುವುದರಿಂದ, ಅದೇ ಬಾಗೇವಾಡಿ ತಾಲೂಕಿನೊಳಗೊಳ್ಳ ಪ್ತೊಲೆಮಿಯ Sirimalaga ಎಂಬ ಚಿಮ್ಮಲಗಿಯಿಂದ ಸುಮಾರು ೧೮ ಮೈಲುಗಳ ಒಳಗೂ, ಅವನ Petirgala ಎಂಬ ಹತ್ತಿರ್ಕಿ ಹಾಳದಿಂದ ಸುಮಾರು ೧೩ ಮೈಲುಗಳ ಒಳಗೂ ಇರುವ ಹೂವಿನ ಹಿಪ್ಪರಗಿಯೇ ಪ್ತೊಲೆಮಿಯ ಇಪ್ಪೊಕೂರ ಅಥವಾ ಇಪ್ಪೊಕುರ ಆಗಿರಬೇಕೆಂದು ನನಗೆ ತೋರುತ್ತದೆ.

ಪ್ತೊಲೆಮಿಯಲ್ಲಿಯ ಇಪ್ಪೊಕೂರ ಅಥವಾ ಇಪ್ಪೊಕುರ ಎಂಬ ರೂಪವು ಪಿಪ್ಪರಗೆ (= ಹಿಪ್ಪರಗಿ)ಯ ಪ್ರಾಯಶಃ ಪಿಪ್ಪರಕಾಪುರ ಎಂದಿದ್ದ ಮೂಲನಾಮದ ವಿಕೃತಿಯಾಗಿರಬೇಕಲ್ಲದೆ, ಇಪ್ಪೊಕೂರದ ಕೊನೆಯಲ್ಲಿ ಊರ ಎಂಬಂತೆ ತೋರುವ ಪರಪದವು ಕನ್ನಡ ಊರು ಎಂದು ಭಾವಿಸಲಾಗದು. ಏಕೆಂದರೆ ಶಾ.ಶ. ೯೮೧ ವಿಕಾರಿ ಸಂ| ಶ್ರಾವಣ ಶುದ್ಧ ೨ ಆದಿತ್ಯವಾರ, ಅಂದರೆ ಉತ್ತರ ಸಂಪ್ರದಾಯದ ವಿಕಾರಿ ಸಂ|ಕ್ಕೆ ಸರಿಹೋಗುವ ಕ್ರಿ.ಶ. 1057 ಜುಲಾಯಿ 6ನೆಯ ತಾರೀಕು ಆದಿತ್ಯವಾರದ ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನಲ್ಲಿಯ ಮಲ್ಲೂರಿನ ಶಾಸನದಲ್ಲಿ[1] ಆ ಮಲ್ಲೂರನ್ನು ಮಲ್ಲವುರ (= ಮಲ್ಲಪುರ) ಎಂದೂ, ಶಾ.ಶ. ೮೦೫ = ಕ್ರಿ.ಶ. 883–84ರ ಅದೇ ಜಿಲ್ಲೆಯ ಗದಗ ತಾಲೂಕಿನ ಸೊರಟೂರಿನ ಶಾಸನದಲ್ಲಿ[2] ಆ ಸೊರಟೂರನ್ನು ಸರಟವುರ (= ಸರಟಪುರ) ಎಂದೂ, ಶಾ.ಶ. ೯೭೦ ಸರ್ವಧಾರಿ ಸಂ| = ಕ್ರಿ.ಶ. 1048–49ರ ಅದೇ ತಾಲೂಕಿನ ಸಿರೂರಿನ ಶಾಸನದಲ್ಲಿ[3] ಆ ಸಿರೂರನ್ನು ಸಿರಿವುರ (= ಸಿರಿಪುರ) ಎಂದೂ, ಶಾ.ಶ. ೯೯೦ ಕೀಲಕ ಸಂ| = ಕ್ರಿ.ಶ. 1068–69ರ ಬಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಶಿರೂರಿನ ಶಾಸನದಲ್ಲಿ[4] ಆ ಶಿರೂರನ್ನು ಸಿರಿವುರ (= ಸಿರಿಪುರ) ಎಂದೂ, ಅಲ್ಲಿಯದೇ ಶಾ.ಶ. ೯೭೧ ವಿರೋಧಿ ಸಂ| = ಕ್ರಿ.ಶ. 1049–50ರ ಮತ್ತೊಂದು ಶಾಸನದಲ್ಲಿ[5] ಅದನ್ನೇ ಶ್ರೀಪುರ ಎಂದೂ, ಪಡುವಣ ಚಾಳುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯನ ಆಳಿಕೆಯ ೪೦ನೆಯ ವರ್ಷದ ಮನ್ಮಥ ಸಂ| ಉತ್ತರಾಯಣ ಸಂಕ್ರಾಂತಿ ಆದಿತ್ಯವಾರ = ಕ್ರಿ.ಶ. 1115 ದಶಂಬರ 26ನೆಯ ತಾರೀಕಿನ ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಹತ್ತಿಮತ್ತೂರಿನ

---

[1] *SIE*, 1933, App. D, ಪು. 106, ನಂ. 156.

[2] *SIE*, 1927 (Sup.), ಪು. 6, ನಂ. 73.

[3] *SIE*, 1928, App. E, ಪು. 27, ನಂ. 92.

[4] ಅದೇ, ಪು. 33, ನಂ. 242.

[5] ಅದೇ, ಪು. 33, ನಂ. 244.

ಶಾಸನದಲ್ಲಿ[1] ಆ ಹತ್ತಿಮತ್ತೂರನ್ನು ಪತ್ತಿರ್ಯ ಮತ್ತವುರ (= ಮತ್ತಪುರ) ಎಂದೂ, ಅಲ್ಲಿಯೇ ಇರುವ ಅದೇ ಅರಸನ ಆಳಿಕೆಯ ೧೨ನೆಯ ವರ್ಷದ ಪ್ರಭವ ಸಂ|= ಕ್ರಿ.ಶ. 1087–88ನೆಯ ಜೀರ್ಣೊಂದು ಶಾಸನದಲ್ಲಿಯೂ[2] ಅದೇ ಅರಸನ ತೇದಿ ಸವೆದು ಹೋದ ಇನ್ನೊಂದು ಶಾಸನದಲ್ಲಿಯೂ[3] ಆ ಹತ್ತಿಮತ್ತೂರನ್ನು ಮಾರ್ತ್ಯಾಪುರ ಎಂದೂ ಹೆಸರಿಸಿರುವಲ್ಲಿ ಈ ಆಯಾ ಹೆಸರುಗಳ ಮೂಲರೂಪದಲ್ಲಿ ಪರಪದವಾಗಿದ್ದ ಪುರವೇ ಕ್ರಮೇಣ ಊರ್ ಆಗಿದೆಯೇ ವಿನಾ ಅದು ಸರ್ವಥಾ ಕನ್ನಡ ಊರು ಅಲ್ಲ[4] ಎಂದೂ, ಹೀಗೆ ಮಾರ್ಪಡುವಲ್ಲಿ ಆ ಪುರವು ದೀರ್ಘ ಊ-ಕಾರಾದಿಯಾಗಿ ಊರ ಎಂದಾಗುತ್ತದೆ ಎಂದೂ ಪ್ರತ್ಯಕ್ಷವಿದೆ. ಅತಏವ ಮಾರ್ತ್ಯಾಪುರ = ಮತ್ತಪುರ = ಮತ್ತವುರ = ಮತ್ತೂರ ಎಂದಾದಂತೆ, ಪ್ರಾಯಶಃ ಪಿಪ್ಪರಕಾಪುರ ಎಂದಿದ್ದ ಮೂಲ ನಾಮವೇ ವಿಕರಿಸಿ ಪಿಪ್ಪರಕಾಪುರ = ಪಿಪ್ಪರಕಪುರ = ಪಿಪ್ಪರಕವುರ = ಪಿಪ್ಪರಕೂರ = ಪಿಪ್ಪರ್ಕೂರ = ಪಿಪ್ಪಕ್ಕೂರ = ಪಿಪ್ಪಕೂರ ಎಂದಾಗಿರಬೇಕು, ಪ್ತೊಲೆಮಿಯಲ್ಲಿಯ ಆ ಊರಿನ ಹೆಸರಿನ ಪರಪದವನ್ನು ದೀರ್ಘ ಊ-ಕಾರಯುಕ್ತವಾಗಿ ಊರ ಎಂದೂ ಆ ಸಮಸ್ತನಾಮವನ್ನು (ಇಪ್ಪೊಕುರ ಎಂದಲ್ಲ) ಇಪ್ಪೊಕೂರ ಎಂದೂ ಓದಬೇಕು.

ಹೀಗೆ ಪಿಪ್ಪಕೂರ ಎಂದಾಗತಕ್ಕ ಪಿಪ್ಪರಕಾಪುರದಲ್ಲಿಯ ರೇಫವೆರಡರಲ್ಲಿ ಮೂಲಪದದಲ್ಲಿಯ ರೇಫದ ಲೋಪಕ್ಕೆ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಕರಮುಡಿ ಎಂಬಲ್ಲಿಯ ಶಾ. ಶ. ೯೮೧ ವಿಕಾರಿ ಸಂ| ವೈಶಾಖ ಶುಕ್ಲ ೧ ಶುಕ್ರವಾರ = ಕ್ರಿ.ಶ. 1059 ಏಪ್ರಿಲ್ 16ನೆಯ ತಾರೀಕಿನ ಶಿಲಾಲೇಖನದಲ್ಲಿ[5] ಕಾರಿರ್ಮುಡಿ ಎಂದಿರುವ ಆ ಊರಿನ ಹೆಸರು ಕರಮಡಿ ಎಂದಾಗಿರುವ ಉದಾಹರಣೆಯೂ ಇದೆ, ಭಾರತೀಯ ಹಲವು ಸ್ಥಳನಾಮುಗಳಲ್ಲಿಯ ರೇಫಗಳು ಪ್ತೊಲೆಮಿಯಲ್ಲಿ ಲೋಪಿಸಿರುವ ಉದಾಹರಣೆಗಳೂ ಇವೆ—Panassa (ಪು. 166; 379) = ಪರ್ಣಾಶ, Tamalites (ಪು. 169-70) = ತಾಮ್ರಲಿಪ್ತಿ, Taprobane (ಪು. 253) = ತಾಮ್ರಪರ್ಣಿ, ಇತ್ಯಾದಿ.

---

[1] *SIE*, 1933, App. D, ಪು. 98, ನಂ. 60.

[2] ಅದೇ, ಪು. 98, ನಂ. 64.

[3] ಅದೇ, ಪು. 98, ನಂ. 65.

[4] ಪುರ ಎಂಬ ಸಂಸ್ಕೃತ ಪರಪದವೇ ವಿನಾ ಊರು ಎಂಬ ಕನ್ನಡ ಪರಪದವು ಸರ್ವಥಾ ಇದ್ದಿರಲಾರದ ಉತ್ತರಭಾರತದ ಸ್ಥಳನಾಮುಗಳಲ್ಲಿಯೂ ಆ ಪುರವು ಲೋಕೋಕ್ತಿಯಲ್ಲಿ ಕ್ರಮೇಣ ಊರ ಎಂದಾಗುತ್ತದೆ; ಉದಾ—ಮಾಲವದಲ್ಲಿಯ ಇಂದೂರ (Indore), ರಾಜಪುತಾನದಲ್ಲಿಯ ಚಿತ್ತೂರ (Chitore), ಬಂಗಾಳದಲ್ಲಿಯ ಜಸ್ಸೂರ (Jessore), ಸಂಯುಕ್ತಪ್ರಾಂತ್ಯಗಳಲ್ಲಿಯ ಬಿಜನೂರ (Bijnor), ಇತ್ಯಾದಿ.

[5] *SIE*, 1928, App. E, ಪು. 21, ನಂ. 19.

ಪಿಪ್ಪರಕಾಪುರದ ಪರಪದವಾದ ಪುರವು ಲೋಕೋಕ್ತಿಯಲ್ಲಿ ಸಹಜವಾಗಿ ಜಗುಳಿ ಹೋಗುತ್ತಲೆ, ಆ ಹೆಸರು ಪಿಪ್ಪರಕೆ = ಪಿಪ್ಪರಗೆ = ಪಿಪ್ಪರಗಿ (ಹಿಪ್ಪರಗಿ) ಎಂದಾಗುತ್ತದೆ. ಈ ಬಗ್ಗೆ ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲೂಕಿನ ಜೆತ್ತಿಗಿಯಲ್ಲಿಯ ಮೇಲೆ ಕಂಡಿರುವ[1] ಕ್ರಿ.ಶ. 1255 ಜನವರಿ 9ನೆಯ ತಾರೀಕಿನ ಸೂರ್ಯಗ್ರಹಣದಂದಿನ ಶಿಲಾಶಾಸನದಲ್ಲಿ ಸೌಸ್ನಲ್ಲಿಪುರ ಎಂದಿರುವ ಊರಿನ ಹೆಸರು ಅದೇ ತಾಲೂಕಿನ ಪಡೆಕನೂರದ[2] ಶಾ. ಶ. ೧೧೭೭ಲ ನಳ ಸಂ| ಫಾಲ್ಗುಣ ಬ| ೧೫ ಶನಿವಾರ = ಕ್ರಿ. ಶ. 1257 ಮಾರ್ಚಿ 17 ನೆಯ ತಾರೀಕಿನ ಶಾಸನದಲ್ಲಿ (ಸೌಸ್ನಲ್ಲಿಪುರ = ಸೌಸ್ನಲ್ಲಿಕಾಪುರ[3] =) ಸೊಸ್ನಲಗಿಪುರ ಎಂದೂ, ಅದರ ಪರಪದದ ಲೋಪದಿಂದ ಲೋಕೋಕ್ತಿಯಲ್ಲಿ ಸೊಸ್ನಲಿಗೆ[4] = ಸೊಸ್ನಲಗಿ ಎಂದೂ ಆದ ಉದಾಹರಣೆ ಇದೆ.

ಈ ಮೇಲಣ ಮಲ್ಲಪುರ = ಮಲ್ಲವುರ = ಮಲ್ಲೂರ, ಸರಟಪುರ = ಸರಟವುರ = ಸೊರಟೂರ, ಶ್ರೀಪುರ = ಸಿ (ಶಿ)ರಿಪುರ = ಸಿ (ಶಿ)ರಿವುರ = ಸಿ (ಶಿ)ರೂರ ಇತ್ಯಾದಿ ಸ್ಥಳನಾಮಗಳ ಉದಾಹರಣೆಗಳಲ್ಲಿ ಸಮಸ್ತನಾಮದ ಪರಪದದ ಆದ್ಯ ಪ-ಕಾರವು ವ-ಕಾರವಾಗಿಯೇ ಆದರೂ ಸ್ವರಾಕ್ಷರ (vowel) ವಾಗಿರುವಂತೆ ತಿಳಿಯುತ್ತದಷ್ಟೇ. ಸ್ಥಳನಾಮಗಳ ಪೂರ್ವಪದದ ಆದ್ಯಪ-ಕಾರವೂ ಸ್ವರಾಕ್ಷರವಾಗುವಂತೆ ಹಳೆಯ ಶಾಸನಗಳಿಂದ ತಿಳಿಯುತ್ತದೆ; ಉದಾ—ಶಾ. ಶ. ೯೭೫ ವಿಜಯ ಸಂ| . . . . ಅಮಾವಾಸ್ಯೆ ಆದಿತ್ಯವಾರ ಸೂರ್ಯಗ್ರಹಣ, ಅಂದರೆ ಆ ಸಂವತ್ಸರದ ಕಾರ್ತಿಕ ಬ| ಅಮಾವಾಸ್ಯೆ ಶನಿವಾರದಂದಿನ ಸೂರ್ಯಗ್ರಹಣದ ಮಾರನೆಯ = ಕ್ರಿ.ಶ. 1053 ನವಂಬರ 13 ನೆಯ ತಾರೀಕು ಆದಿತ್ಯವಾರದ ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಅಸುಂಡಿ ಎಂಬಲ್ಲಿಯ ಶಾಸನದಲ್ಲಿ[5] ಆ ಅಸುಂಡಿಯಸ್ನು ಪಸುಂಡಿ ಎಂದೂ, ಅದೇ ಊರಿನಲ್ಲಿಯ ಕ್ರಿ.ಶ. ೮೪೭ ಪಾರ್ಥಿವ ಸಂ| = ಕ್ರಿ.ಶ. 925-26 ನೆಯ ಮತ್ತೊಂದು ಶಾಸನದಲ್ಲಿ[6] ಅದನ್ನೇ ಪಸುವುಂಡಿ ಎಂದೂ ಹೇಳಿರುವಲ್ಲಿ ಆದ್ಯಪ-ಕಾರವು ಅ-ಕಾರವಾಗಿದೆ. ಹಾಗೆಯೇ ಮಂದಿಯ ಮಾತಿನಲ್ಲಿ ಪಿಪ್ಪಕೂರವು ಇಪ್ಪಕೂರ ಎಂದಾಗಿ,

---

[1] *SIE*, 1930, App. E, ಪು. 67, ನಂ. 32.

[2] ಅದೇ, ಪು. 68, ನಂ. 53.

[3] 'ಸ್ವಾರ್ಥೇ ಕನ್' ಎಂಬ ಸೂತ್ರದ ಮೇರೆಗೆ ಸೌಸ್ನಲ್ಲಿಪುರ ಎಂದರೂ ಸೌಸ್ನಲ್ಲಿಕಾಪುರ ಎಂದರೂ ಒಂದೇ.

[4] ರಾಘವಾಂಕನ 'ಸಿದ್ಧರಾಮಚಾರಿತ್ರ,' I. ೭, ೮. ಬಸವಪುರಾಣದಲ್ಲಿ (5.೪೨ : ೧೦) ಸೊಸ್ನಲಿಗೆಪುರ ಎಂದಿದೆ.

[5] SIE, 1927 (Sup.), ಪು. 13, ನಂ. 161.

[6] ಅದೇ, ಪು. 13, 162.

ಸ್ವರಗಳನ್ನು ಲಕ್ಷಿಸದೆ ಆಲುವಖೇಟವನ್ನು Olokhoira (ಒಲೊಖೊಇರ) ಎಂದಿರುವ ಪ್ತೊಲೆಮಿಯಲ್ಲಿ ಅದೇ ಇಪ್ಪೊಕೂರ ಎಂದಾಗಿರಬೇಕು. ಅತಏವ ಪಿಪ್ಪರಕಾಪುರ = ಪಿಪ್ಪರಕಪುರ = ಪಿಪ್ಪರಕವುರ = ಪಿಪ್ಪರಕೂರ = ಪಿಪ್ಪಕರ್ೂರ = ಪಿಪ್ಪಕ್ಕೂರ = ಪಿಪ್ಪಕೂರ = ಇಪ್ಪಕೂರ = ಪ್ತೊಲೆಮಿಯಲ್ಲಿ ಇಪ್ಪೊಕೂರ ಎಂಬುದರಿಂದ, ಆತನು Baleokouros (ಬಲೆಒಕುರ) ಎಂಬ ವಾಸಿಷ್ಠೀಪುತ್ರ ಏಳಿವಾಯಕುರನ ರಾಜಧಾನಿ ಎಂದಿರುವ ಆ ಊರು ಸರ್ವಥಾ ಹಿಪ್ಪೊಕೂರ (Hippokoura) ಅಲ್ಲ, ಇಪ್ಪೊಕೂರ ತಾನೆ ಎಂದೂ, ಅದು ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿಯ ಹಿರೇ ಹಿಪ್ಪರಗಿ ಎಂದೂ ಕರೆಯಲ್ಪಡುವ ಹೂವಿನ ಹಿಪ್ಪರಗಿ ಎಂಬ ಊರೆಂದೂ ಧಾರಾಳ ವಾಗಿ ನಿಶ್ಚಯಿಸಲಾಗುತ್ತದೆ.

ಗೋವಿಂದ ಪೈ.

ಆಚಾರ್ಯ ಜಿನಸೇನರು

ಆಚಾರ್ಯ ಜೀನಸೇಸರ ಗೃಹಸ್ಥಾವಸ್ಥೆಯ ಯಾವ ಪರಿಚಯವೂ ಇದುವರೆಗೆ ನಮಗೆ ದೊರೆತಿಲ್ಲ. ಇವರು ಯಾವ ಊರಲ್ಲಿ ಮತ್ತು ಯಾವ ವಂಶದಲ್ಲಿ ತಮ್ಮ ಪವಿತ್ರ ಜನ್ಮವನ್ನೆತ್ತಿದ್ದರೆಂಬುದಕ್ಕೆ ಯಾವ ಆಧಾರವೂ ಸಿಗದಿದ್ದರೂ ಆಚಾರ್ಯರು ದಕ್ಷಿಣ ದೇಶದಲ್ಲಿ ಹುಟ್ಟಿದರೆಂಬುದು ನಿರ್ವಿವಾದವಾದ ಮಾತು. ಇವರ ಪೂರ್ವಾವಸ್ಥೆಯಿಂದ ಉತ್ತರಾವಸ್ಥೆ—ಮುನಿಯವಸ್ಥೆ—ಯೇ ಶ್ರೇಷ್ಠವೂ ಪೂಜ್ಯವೂ ಆಗಿರುವುದರಿಂದ ಸರ್ವಸಂಗಪರಿತ್ಯಾಗಿಗಳಾದ ಇವರು ತಮ್ಮ ಪೂರ್ವಾವಸ್ಥೆಯನ್ನು ಬರೆದಿಡುವುದಕ್ಕೆ ಇಷ್ಟಪಡದಿದ್ದುದು ಸ್ವಾಭಾವಿಕವೇ ಆಗಿದೆ. ದಿಗಂಬರ ಸಂಪ್ರದಾಯದಲ್ಲಿ ಸಿಂಹಸಂಘ, ನಂದಿಸಂಘ, ಸೇನಸಂಘ, ದೇವಸಂಘಗಳೆಂದು ಈ ನಾಲ್ಕು ಮುನಿಸಂಘಗಳು ಪ್ರಸಿದ್ಧವಾಗಿವೆಯಷ್ಟೆ. ಅವುಗಳಲ್ಲಿ ಜಿನಸೇನರು ಸೇನಸಂಘಕ್ಕೆ ಸೇರಿದವರು. ಇವರ ವಿದ್ಯಾಗುರುಗಳು ಏಲಾಚಾರ್ಯರ ಶಿಷ್ಯರಾದ ಆಚಾರ್ಯ ವೀರಸೇನರು. ದೀಕ್ಷಾಗುರುಗಳು ಜಯಸೇನರು. ಈ ಮಾತುಗಳು ಇವರ ಆದಿಪುರಾಣದಲ್ಲಿಯೇ ಸ್ಪಷ್ಟವಾಗಿ ಬರೆಯಲ್ಪಟ್ಟಿವೆ. ಆದರೆ ಜಿನಸೇನರ ಗಣಗಚ್ಛಾದಿಗಳು ಮಾತ್ರ ಯಾವುವೆಂದು ತಿಳಿದುಬಂದಿಲ್ಲ.

ಕರ್ನಾಟಕ ಮತ್ತು ಮಹಾರಾಷ್ಟ್ರವೇ ಇವರ ಕಾರ್ಯಕ್ಷೇತ್ರವಾಗಿತ್ತು. ಜಿನಸೇನರು ರಾಷ್ಟ್ರಕೂಟ ದೊರೆಯಾದ ಅಮೋಘವರ್ಷನ ರಾಜಧಾನಿಯಾದ ಮಾನ್ಯಖೇಟಕ್ಕೆ ಆಗಾಗ್ಗೆ ಹೋಗಿಬರುತ್ತಿದ್ದರೆಂದೂ ಅಮೋಘವರ್ಷನು ಇವರನ್ನು ಬಹಳ ಭಕ್ತಿಯಿಂದ ನೋಡುತ್ತಿದ್ದನೆಂದೂ ಹೇಳುವುದಕ್ಕೆ ನಮಗೆ ಸಾಕಷ್ಟು ಆಧಾರಗಳು ಸಿಗುವುವು. ಇವರು ಪಾರ್ಶ್ವಾಭ್ಯುದಯ ಕಾವ್ಯವನ್ನು ಪ್ರಾಯಃ ಇಲ್ಲಿಯೇ ರಚಿಸಿರಬೇಕು. ಭಟ್ಟಾಕಲಂಕರೂ ಮಾನ್ಯಖೇಟದವರು. ಆಚಾರ್ಯ ವಿದ್ಯಾನಂದಿ ಮತ್ತು ಪ್ರಭಾಚಂದ್ರ ಇವರೂ ಪ್ರಾಯಃ ಇಲ್ಲಿಯವರೇ ಆಗಿದ್ದಿರ ಬಹುದು. ಹೈದರಾಬಾದ್ ಸಂಸ್ಥಾನದಲ್ಲಿರುವ ಈಗಿನ ಮಲಖೇಡವೇ ಪ್ರಾಚೀನ ಮಾನ್ಯಖೇಟವಾಗಿತ್ತು. ಒಂದು ಕಾಲದಲ್ಲಿ ಮಾನ್ಯಖೇಟ ರಾಜಧಾನಿಯು ವಿದ್ವಾಂಸರ ಬೀಡಾಗಿತ್ತೆಂದು ಹೇಳುವುದು ತಪ್ಪಾಗಲಾರದು.

ಭಗವಜ್ಜಿನಸೇನಾಚಾರ್ಯರ ಸರಿಯಾದ ಕಾಲನಿರ್ಣಯವನ್ನು ಸೂಚಿಸುವ ಆಧಾರಗಳಾವುವೂ ಇದುವರೆಗೆ ದೊರೆತಿಲ್ಲವಾದರೂ ರಾಷ್ಟ್ರಕೂಟ ವಂಶದ ದೊರೆಯಾದ ಅಮೋಘವರ್ಷನು ಇವರ ಪರಮ ಭಕ್ತನಾಗಿದ್ದುದರಿಂದಲೂ ಅಮೋಘ

ವರ್ಷಸ ರಾಜ್ಯಕಾಲವು ಶಕವರ್ಷ ೭೩೭-೭೯೯ (ಕ್ರಿ.ಶ. ೮೧೫ರಿಂದ ೮೭೭) ಎಂದು ನಿಶ್ಚಯಿಸಲ್ಪಟ್ಟಿರುವುದರಿಂದಲೂ ಹರಿವಂಶಪುರಾಣದ ಕರ್ತರಾದ ದ್ವಿತೀಯ ಜಿನಸೇನರು ಈ ಭಗವಜ್ಜಿನಸೇನರನ್ನೂ ಇವರ ಶ್ರದ್ಧೇಯ ಗುರುಗಳಾದ ವೀರಸೇನ ರನ್ನೂ ತಮ್ಮ ಹರಿವಂಶಪುರಾಣದ ಪ್ರಾರಂಭದಲ್ಲಿ ಭಕ್ತಿಯಿಂದ ಸ್ಮರಿಸಿರುವುದ ರಿಂದಲೂ ಹರಿವಂಶಪುರಾಣವು ಶಕ ವರ್ಷ ೭೦೫ (ಕ್ರಿ. ಶ. ೭೮೩) ರಲ್ಲಿ ಪೂರ್ತಿ ಯಾಗಿರುವುದರಿಂದಲೂ ಭಗವಜ್ಜಿನಸೇನಾಚಾರ್ಯರ ಕಾಲವನ್ನು ಸ್ವಲ್ಪ ಹೆಚ್ಚು ಕಡಮೆಯಾಗಿ ನಿರ್ಣಯಿಸುವುದಕ್ಕೆಡೆಯಿದೆ. ಭಗವಜ್ಜಿನಸೇನರು ಜಿನಗುಣಸ್ತೋತ್ರ ವೆಂಬ ಗ್ರಂಥವನ್ನೂ ವರ್ಧಮಾನ ಪುರಾಣವನ್ನೂ ಹರಿವಂಶಪುರಾಣಕ್ಕಿಂತ ಮೊದಲೇ ರಚಿಸಿದ್ದರೆಂಬುದು ಹರಿವಂಶಪುರಾಣದಿಂದ ಗೊತ್ತಾಗುವುದರಿಂದ ಹರಿವಂಶಪುರಾಣದ ಕಾಲಕ್ಕೆ ಮೊದಲು ಲೋಕಾದರಕ್ಕೆ ಪಾತ್ರವಾಗಿದ್ದ ಈ ಗ್ರಂಥಗಳೆರಡನ್ನು ರಚಿಸಿದ್ದ ಭಗವಜ್ಜಿನಸೇನರ ವಯಸ್ಸು ಹರಿವಂಶಪುರಾಣದ ಪ್ರಾರಂಭಕಾಲಕ್ಕೆ ೨೫, ಸಮಾಪ್ತಿ ಕಾಲಕ್ಕೆ ೩೦ ವರ್ಷಗಳಿಗಿಂತ ಕಡಮೆಯಾಗಿರಲಾರದು. ಏಕೆಂದರೆ ಇಷ್ಟು ದೊಡ್ಡ ಹರಿವಂಶ ಪುರಾಣವನ್ನು ಬರೆದು ಮುಗಿಸುವುದಕ್ಕೆ ಇವರಿಗೆ ಕಡಮೆಯಿಂದ ಕಡಮೆ ಐದು ವರ್ಷಗಳು ಅವಶ್ಯ ಹಿಡಿದಿರಬಹುದು. ಹೀಗಿರುತ್ತ ಇವರು ಶಕವರ್ಷ ಸುಮಾರು ೬೭೫ (ಕ್ರಿ. ಶ. ೭೫೩) ರಲ್ಲಿ ಹುಟ್ಟಿದರೆಂದು ಊಹಿಸುವುದು ತಪ್ಪಲ್ಲ.

ಇನ್ನು ವಿಚಾರಮಾಡಬೇಕಾದುದು ಸ್ವರ್ಗಾರೋಹಣದ ಕಾಲ. ಇವರು ತಮ್ಮ ಜಯಧವಲದ ಟೀಕೆಯನ್ನು ಶಕವರ್ಷ ೭೫೯ (ಕ್ರಿ. ಶ. ೮೩೭) ರಲ್ಲಿ ಪೂರ್ಣ ಮಾಡಿರುತ್ತಾರೆ. ಈ ಟೀಕೆಯನ್ನು ಮುಗಿಸಿಯೇ ಜಿನಸೇನರು ಪೂರ್ವಪುರಾಣ ವನ್ನು ಪ್ರಾರಂಭಿಸಿದ್ದಾರೆಂಬುದಕ್ಕೆ ಆಧಾರಗಳಿರುವುದರಿಂದ ಸುಮಾರು ತಮ್ಮ ೮೪ನೇ ವಯಸ್ಸಿನಲ್ಲಿ ಇವರು ಪೂರ್ವಪುರಾಣವನ್ನು ಪ್ರಾರಂಭ ಮಾಡಿದ್ದರೂ ಅದರ ಹತ್ತುಸಾವಿರ ಶ್ಲೋಕಗಳನ್ನು ಪೂರ್ತಿಮಾಡುವುದಕ್ಕೆ ಇವರಿಗೆ ತೀರ ಕಡಮೆ ಎಂದರೆ ಸುಮಾರು ಹತ್ತು ವರ್ಷಗಳ ಕಾಲ ಅವಶ್ಯ ಹಿಡಿದಿರಬೇಕು. ಈ ಲೆಕ್ಕದಲ್ಲಿ ಭಗವಜ್ಜಿನಸೇನಾಚಾರ್ಯರು ಸುಮಾರು ಶಕವರ್ಷ ೭೭೦ (ಕ್ರಿ. ಶ. ೮೪೮) ಅಥವಾ ಕಡಮೆಯಿಂದ ಕಡಮೆ ಶಕವರ್ಷ ೭೬೫ (ಕ್ರಿ. ಶ. ೮೪೩) ರ ವರೆಗೆ ಜೀವಿಸಿದ್ದಿರಬಹುದೆಂದು ದೃಢವಾಗಿ ಹೇಳಬಹುದು. ದೃಢ ಬ್ರಹ್ಮಚರ್ಯ, ಕಠಿಣ ಸಂಯಮ, ಶುಭವಿಚಾರ ಮೊದಲಾದುವುಗಳ ಸಾಮರ್ಥ್ಯದಿಂದ ಅದರಲ್ಲೂ ಆ ಕಾಲ ದಲ್ಲಿ, ೯೦-೯೫ ವರ್ಷಗಳ ಕಾಲ ಬದುಕುವುದು ಏನೂ ಆಶ್ಚರ್ಯವಲ್ಲವೆಂಬುದು ಪಂ. ನಾಥೂರಾಮ ಪ್ರೇಮಿಯವರ ಅಭಿಪ್ರಾಯವಾಗಿದೆ. ಜಿನಸೇನರು ಅಪರ ವಯಸ್ಸಿನಲ್ಲಿ ಪೂರ್ವಪುರಾಣದಂತಹ ಉದ್ಗ್ರಂಥವನ್ನು ರಚಿಸಿರುವುದರಿಂದ ವೃದ್ಧಾಪ್ಯ

ದಲ್ಲಿಯೂ ಇವರ ಶರೀರದಾರ್ಢ್ಯವೂ ಬುದ್ಧಿಪಾಟವವೂ ಚೆನ್ನಾಗಿದ್ದುವೆಂದು ತಿಳಿದು ಬರುವುದು. ಇವಕ್ಕೆ ಮೇಲೆ ಹೇಳಿದ ವಿಶಿಷ್ಟಗುಣಗಳೇ ಕಾರಣಗಳಾಗಿವೆ.

ಜಿನಸೇನಾಚಾರ್ಯರ ಗ್ರಂಥಗಳಲ್ಲಿ ಪೂರ್ವಪುರಾಣ ಮತ್ತು ಪಾರ್ಶ್ವಾಭ್ಯುದಯ ಕಾವ್ಯ ಇವೆರಡು ಬಹಳ ಪ್ರಸಿದ್ಧವಾಗಿವೆ. ಮೂರನೆಯ ಗ್ರಂಥವಾದ ಜಯಧವಲವೂ ಅಮರಾವತಿ (ಬೀರಾರ್) ಯಿಂದ ಶೀಘ್ರದಲ್ಲಿ ಪ್ರಕಟವಾಗಬಹುದು. ಧವಲದ ಮೂರು ಗ್ರಂಥಗಳು ಈಗಾಗಲೇ ಪಾಠಕರ ಕೈಸೇರಿವೆ. ಈ ಉದ್ಗ್ರಂಥಗಳು ಶ್ರೀ ಮಹಾವೀರ ಸ್ವಾಮಿಯ ದ್ವಾದಶಾಂಗವಾಣಿಯ ಅವಶಿಷ್ಟ ರೂಪವಾಗಿದ್ದು ಜೈನ ದಾರ್ಶನಿಕ ಗ್ರಂಥಗಳಲ್ಲಿ ಪ್ರಥಮಸ್ಥಾನವನ್ನು ಪಡೆದಿವೆ. ಈ ಮಹತ್ವಪೂರ್ವವಾದ ಟೀಕಾ ಗ್ರಂಥಗಳ ಮೂಲಸೂತ್ರಗಳ ಲಿಪಿಕಾಲದಿಂದಲೇ ಜೈನರಲ್ಲಿ ಇಂದೂ ಪ್ರಚಾರದಲ್ಲಿರುವ ಶ್ರುತಪಂಚಮಿಯೆಂಬ ಪವಿತ್ರ ಪರ್ವವು ಪ್ರಾರಂಭವಾಯಿತು.

ಜಿನಸೇನಾಚಾರ್ಯರ ಪಾರ್ಶ್ವಾಭ್ಯುದಯ ನಾಲ್ಕು ಸರ್ಗಗಳನ್ನೊಳಗೊಂಡ, ಮಂದಾಕ್ರಾಂತಾವೃತ್ತದಲ್ಲಿ ರಚಿಸಲ್ಪಟ್ಟ ಒಂದು ಖಂಡ ಕಾವ್ಯವಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಇದೊಂದು ಅದ್ವಿತೀಯ ಕಾವ್ಯ, ಇದು ಕಾಳಿದಾಸನ ಪ್ರಸಿದ್ಧ ಮೇಘದೂತ ಕಾವ್ಯದ ಮೇಲೆ ಸಮಸ್ಯಾಮೂರ್ತಿರೂಪವಾಗಿ ಹುಟ್ಟಿದ ಕೃತಿಯಾಗಿದೆ. ಭಗವಜ್ಜಿನಸೇನಾಚಾರ್ಯರು ತಮ್ಮ ಸಹಪಾಠಿಗಳಾದ ವಿನಯಸೇನ ಮುನಿಗಳ ಪ್ರೇರಣೆಯಿಂದ ಮೇಘದೂತ ಕಾವ್ಯದ ಒಂದೊಂದು ಅಥವಾ ಎರಡೆರಡು ಪಾದಗಳನ್ನು ತೆಗೆದುಕೊಂಡು ಅದಕ್ಕೆ ಮಿಕ್ಕ ಪಾದಗಳನ್ನು ತಾವು ಮಾಡಿ ಸೇರಿಸಿ ಮೂಲಗ್ರಂಥದ ಕಥೆಯನ್ನು ಸಂಪೂರ್ಣವಾಗಿ ಬದಲಾಯಿಸಿ, ಇದರಲ್ಲಿ ಶ್ರೀ ಪಾರ್ಶ್ವನಾಥಸ್ವಾಮಿಯ ಚರಿತ್ರೆಯನ್ನು ಸೊಗಸಾಗಿ ವರ್ಣಿಸಿರುವರು. ಸಂಸ್ಕೃತದಲ್ಲಿ ಮೇಘದೂತದ ಶ್ಲೋಕಗಳ ಅಂತಿಮ ಪಾದಗಳನ್ನು ತೆಗೆದುಕೊಂಡು ಜೈನ ಕವಿಗಳಿಂದ ನೇಮಿದೂತ, ಶೀಲದೂತ ಮೊದಲಾದ ಅನೇಕ ಗ್ರಂಥಗಳು ರಚಿಸಲ್ಪಟ್ಟಿವೆ. ಆದರೆ ಸಂಪೂರ್ಣ ಶ್ಲೋಕಗಳನ್ನು ತೆಗೆದುಕೊಂಡು ರಚಿಸಲ್ಪಟ್ಟ ಗ್ರಂಥ ಇದೊಂದೇ. ಮೇಘದೂತ ಮತ್ತು ಪಾರ್ಶ್ವನಾಥಚರಿತ್ರೆ ಇವುಗಳ ಕಥಾನಕದಲ್ಲಿ ಆಕಾಶ ಪಾತಾಳದಷ್ಟು ಅಂತರವಿರುವಾಗ ಮೇಘದೂತದ ಪಾದಗಳನ್ನು ತೆಗೆದುಕೊಂಡು ಪಾರ್ಶ್ವನಾಥ ಚರಿತ್ರೆಯನ್ನು ರಚಿಸುವುದು ಎಷ್ಟೊಂದು ಗುರುತರವಾದ ಕಾರ್ಯ! ಇಂತಹ ರಚನೆಗಳಲ್ಲಿ ಕ್ಲಿಷ್ಟತ್ವ ನೀರಸತ್ವವೇ ಮೊದಲಾದ ದೋಷಗಳು ಬರುವುದು ಸ್ವಾಭಾವಿಕ ವಾಗಿದ್ದರೂ ಪಾರ್ಶ್ವಾಭ್ಯುದಯವು ಈ ದೋಷಗಳಿಂದ ಸಂಪೂರ್ಣವಾಗಿ ಮುಕ್ತ ವಾಗಿದೆ. ಸಮಗ್ರ ಗ್ರಂಥವನ್ನು ಓದಿ ನೋಡಿದರೂ ನಮಗೆ ಇದೊಂದು ಸಮಸ್ಯಾ ಪೂರ್ತಿಸಂಬಂಧಿ ಕಾವ್ಯವೆಂದು ಗೊತ್ತಾಗದೆ ಒಂದು ಹೊಸ ಶೈಲಿಯ ಕಾವ್ಯದ

ಅನುಭವವಾಗುವುದು. ಪ್ರೊ. ಕೆ. ಬಿ. ಪಾಠಕರು, ಪ್ರಾಚ್ಯವಿದ್ಯಾಮಹಾರ್ಣವ ನಗೇಂದ್ರನಾಥವಸು ಮೊದಲಾದ ಜೈನೇತರ ವಿದ್ವಾಂಸರೂ ಈ ಕಾವ್ಯವನ್ನು ಮುಕ್ತಕಂಠದಿಂದ ಹೊಗಳಿ ಕಾಳಿದಾಸನಿಗಿಂತ ಭಗವಜ್ಜಿನಸೇನರು ಯೋಗ್ಯತೆಯಲ್ಲಿ ಕಡಮೆಯಾಗಿರಲಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಇನ್ನು ಭಗವಜ್ಜಿನಸೇನಾಚಾರ್ಯರ ಪೂರ್ವಪುರಾಣವನ್ನು ತೆಗೆದುಕೊಳ್ಳೋಣ. ಮಹಾಪುರಾಣದಲ್ಲಿ ಎರಡು ಭಾಗಗಳಿವೆ. ಪ್ರಥಮ ಭಾಗಕ್ಕೆ ಆದಿಪುರಾಣ ಅಥವಾ ಪೂರ್ವಪುರಾಣವೆಂದೂ ದ್ವಿತೀಯ ಭಾಗಕ್ಕೆ ಉತ್ತರಪುರಾಣವೆಂದೂ ಹೆಸರು. ಪೂರ್ವಪುರಾಣದಲ್ಲಿ ಮುಖ್ಯವಾಗಿ ಪ್ರಥಮ ತೀರ್ಥಂಕರರ ಹಾಗೂ ಪ್ರಥಮ ಚಕ್ರವರ್ತಿಯ ಚರಿತ್ರೆಯೂ ಉತ್ತರ ಪುರಾಣದಲ್ಲಿ ಮಿಕ್ಕ ೨೩ ತೀರ್ಥಂಕರರು, ಚಕ್ರವರ್ತಿಗಳು, ನಾರಾಯಣರು ಮೊದಲಾದ ಶಲಾಕಾಪುರುಷರ ಚರಿತ್ರೆಯೂ ವರ್ಣಿಸಲ್ಪಟ್ಟಿದೆ. ಇದು ದಿಗಂಬರ ಸಂಪ್ರದಾಯದಲ್ಲಿ ಪ್ರಥಮಾನುಯೋಗಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿ ಸರ್ವಪ್ರಧಾನವಾಗಿರುವುದು. ದಿಗಂಬರರಲ್ಲಿರುವ ಪುರಾಣ, ಕಾವ್ಯ, ನಾಟಕ ಮೊದಲಾದ ಗ್ರಂಥಗಳಲ್ಲಿ ಸಿಗುವ ಕಥೆಗಳು ಪ್ರಾಯಃ ಈ ಪುರಾಣದಿಂದಲೇ ತೆಗೆದುಕೊಳ್ಳಲ್ಪಟ್ಟಿವೆ. ಮಹಾಪುರಾಣದ ಒಟ್ಟು ಶ್ಲೋಕ ಸಂಖ್ಯೆ ಇಪ್ಪತ್ತುಸಾವಿರ. ಈ ಇಪ್ಪತ್ತರಲ್ಲಿ ಹನ್ನೆರಡು ಸಾವಿರ ಶ್ಲೋಕಗಳು ಪೂರ್ವಪುರಾಣದಲ್ಲಿಯೂ ಎಂಟುಸಾವಿರ ಶ್ಲೋಕಗಳು ಉತ್ತರಪುರಾಣದಲ್ಲಿಯೂ ಇವೆ. ಪೂರ್ವಪುರಾಣದಲ್ಲಿ ೪೭ ಪರ್ವ ಅಥವಾ ಅಧ್ಯಾಯಗಳಿರುವುವು. ಇವುಗಳಲ್ಲಿ ೪೨ ಪರ್ವಗಳನ್ನು ಮುಗಿಸಿ ೪೩ ನೆಯ ಪರ್ವದಲ್ಲಿ ಮೂರು ಶ್ಲೋಕಗಳನ್ನು ಮಾತ್ರ ರಚಿಸಿ ಜಿನಸೇನರು ಸ್ವರ್ಗಸ್ಥರಾದುದರಿಂದ ಉಳಿದ ಐದು ಪರ್ವ (೧೬೨೦ ಶ್ಲೋಕ) ಗಳನ್ನು ಇವರ ಶಿಷ್ಯರಾದ ಗುಣಭದ್ರಾಚಾರ್ಯರು ರಚಿಸಿದರು.

ಜಿನಸೇನಾಚಾರ್ಯರು ಪೂರ್ವಪುರಾಣವನ್ನು ಪ್ರಾರಂಭಿಸುವಾಗಲೇ ಈ ಗ್ರಂಥವು ತಮ್ಮಿಂದ ಪೂರ್ಣವಾಗಲಾರದೆಂದು ತಮ್ಮ ಶಿಷ್ಯರೊಡನೆ ಸ್ಪಷ್ಟವಾಗಿ ಹೇಳಿಬಿಟ್ಟಿದ್ದರಂತೆ. ಮಂಗಲಾಚರಣದಲ್ಲಿ ಪ್ರಯೋಗಿಸಲ್ಪಟ್ಟ ಅಕ್ಷರ ಮತ್ತು ಶಬ್ದ ಇವುಗಳ ನಿಮಿತ್ತದಿಂದಲೇ ಈ ಮಹಾತ್ಮರಿಗೆ ತಮ್ಮ ಭವಿಷ್ಯವು ಗೊತ್ತಾಗಿತ್ತಂತೆ. ಪೂರ್ವಪುರಾಣವು ಜೈನಸಾಹಿತ್ಯದಲ್ಲೊಂದು ಸರ್ವೋತ್ಕೃಷ್ಟ ಗ್ರಂಥವಾಗಿದೆ. ಇದು ಕೇವಲ ಪುರಾಣವಲ್ಲ. ಇದರಲ್ಲಿ ಆಚಾರ್ಯರು ನಾಲ್ಕು ಅನುಯೋಗಗಳ ವಿಷಯಗಳನ್ನೂ ಸಂಗ್ರಹಿಸಿರುತ್ತಾರೆ. ಜೈನಧರ್ಮದ ಪ್ರಾಯಃ ಎಲ್ಲಾ ಮಾಸ್ಯ ತತ್ವಗಳು ಯತ್ರ ತತ್ರ ಕಥೆಯ ಸಂಬಂಧವನ್ನು ಜೋಡಿಸಿ ಯಾವುದಾದರೊಂದು ರೂಪದಲ್ಲಿ ಹೇಳಲ್ಪಟ್ಟಿವೆ. ಅನಂತರದ ಗ್ರಂಥಕಾರರು ಈ ಗ್ರಂಥವನ್ನು ಆರ್ಷವೆಂದು

ಹೇಳಿ ಪ್ರಮಾಣರೂಪದಲ್ಲಿ ಸ್ವೀಕರಿಸಿರುವರು. ಕವಿಗಳೂ ಇದನ್ನೊಂದು ಮಹಾ ಕಾವ್ಯವನ್ನಾಗಿ ಹೇಳಿರುತ್ತಾರೆ. ಇದು ಶೃಂಗಾರಾದಿ ನವರಸಗಳಿಂದ ಪರಿಪೂರ್ಣ ವಾಗಿದ್ದು ಇದರ ಕವಿತೆಯು ಬಹಳ ಉಚ್ಚಶ್ರೇಣಿಗೆ ಸೇರಿದೆ. ಪದಲಾಲಿತ್ಯ, ಅರ್ಥಸೌಷ್ಠವ, ಸರಲತೆ, ಗಂಭೀರತೆ, ಕೋಮಲತೆಯೇ ಮೊದಲಾದ ಸಂಪೂರ್ಣ ಕಾವ್ಯ ಗುಣಗಳು ಇದರಲ್ಲಿ ಒಡೆದು ತೋರುವುವು. ಪ್ರಾಕೃತಿಕ ದೃಶ್ಯಗಳ ಹಾಗೂ ಮಾನಸಿಕ ವಿಚಾರಗಳ ಚಿತ್ರಗಳೂ ಗ್ರಂಥದಲ್ಲಿ ಮನೋಹರವಾಗಿ ಚಿತ್ರಿಸಲ್ಪಟ್ಟಿವೆ. ಅಂತು ಭಗವಜ್ಜಿನಸೇನಾಚಾರ್ಯರು ತಮ್ಮ ಇಡೀ ಜೀವನದಲ್ಲಿ ಮಾಡಿರುವ ಅಧ್ಯಯನದ ಸಾರವನ್ನು ಈ ಗ್ರಂಥದಲ್ಲಿ ಸುಂದರವಾಗಿ ಸಂಗ್ರಹಿಸಿರುವರು.

ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿರುವ ಶೃಂಗಾರರಸಗರ್ಭಿತವಾದ ವರ್ಣನೆಗಳನ್ನು ಓದಿ ಕೆಲವರು ಇಷ್ಟೊಂದು ವರ್ಣನೆ ಮಾಡಿರುವುದು ಹೆಚ್ಚೆಂದು ಇವರನ್ನು ಆಕ್ಷೇಪಿಸುವುದುಂಟು. ಲಕ್ಷಣ ಶಾಸ್ತ್ರಕಾರರು ಪುರಾಣದಲ್ಲಿ ಇಂತಿಂತಹ ವಿಷಯ ವರ್ಣನಗಳಿರಬೇಕೆಂದು ಹೇಳಿರುವುದರಿಂದ ಗ್ರಂಥಕರ್ತರು ಆ ವಿಷಯ ಗಳನ್ನು ಮನ್ನಿಸಬೇಕಾಗಿ ಬಂದಿತು. ಹಾಗೆ ಮನ್ನಿಸದಿದ್ದರೆ ಇವರ ಈ ಪುರಾಣವು ಲೋಕಮಾನ್ಯವಾಗುತ್ತಿರಲಿಲ್ಲ. ಪೂರ್ಣ ಬ್ರಹ್ಮಚಾರಿಗಳೂ ದೃಢಸಂಯಮಿಗಳೂ ಪ್ರಖರ ತಪಸ್ವಿಗಳೂ ಆದ ಪೂಜ್ಯ ಆಚಾರ್ಯರನ್ನು ಆ ಕಾಲದಲ್ಲಿಯೂ ಕೆಲವು ಅವಿಚಾರಪರರು ಆಕ್ಷೇಪಿಸಿದ್ದರೆಂದೂ ಈ ಮಾತು ಪುಂಖಾನುಪುಂಖದಿಂದ ಇವರ ಕಿವಿಗೂ ಬಿದ್ದು ಇವರೊಂದು ದೊಡ್ಡ ಸಭೆಯನ್ನು ಕರೆಯಿಸಿ ಆ ಸಭೆಯಲ್ಲಿ ಕಾಮ ಶಾಸ್ತ್ರದ ಸಂಬಂಧದಲ್ಲೊಂದು ಮಾರ್ಮಿಕ ಭಾಷಣವನ್ನು ಕೊಟ್ಟರೆಂದೂ ಆ ಭಾಷಣದಿಂದ ಸಭೆಯಲ್ಲಿದ್ದ ಸ್ತ್ರೀ-ಪುರುಷರ ಮನಸ್ಸಿನಲ್ಲಿ ತೀವ್ರ ವಿಕಾರವು ಉತ್ಪನ್ನ ವಾದರೂ ಈ ಮಹಾತ್ಮರಲ್ಲಿ ಯಾವಪ್ರಕಾರವಾದ ವಿಕಾರವನ್ನೂ ಕಾಣದೆ ಮೊದಲು ಆಕ್ಷೇಪಮಾಡಿದ್ದ ಆ ಕೆಲವು ಅದೂರದರ್ಶಿಗಳಿಗೂ ವಿಶೇಷ ಪಶ್ಚಾತ್ತಾಪ ಉಂಟಾಗಿ ಎಲ್ಲರೂ ಇವರ ದೃಢ ಬ್ರಹ್ಮಚರ್ಯವನ್ನು ಕೊಂಡಾಡುತ್ತ ಇವರನ್ನು ಅಂದಿನಿಂದ ಭಗವಜ್ಜಿನಸೇನರೆಂದು ಕರೆದರೆಂದೂ ಒಂದು ಕಿಂವದಂತಿಯು ಇದೆ. ಕೆಲವರು ಈ ಕಿಂವದಂತಿಯನ್ನು ನಂಬದಿದ್ದರೂ ಇವರ 'ಭಗವತ್' ವಿಶೇಷಣವು ನಿರರ್ಥಕ ವಲ್ಲವೆಂಬುದನ್ನು ಅವರೂ ಒಪ್ಪಲೇಬೇಕು. ಜಿನಸೇನರನ್ನು 'ಜಿನಸೇನಸ್ವಾಮಿ' ಯೆಂದೂ ಕರೆಯುತ್ತಿದ್ದುದುಂಟು. ಆಚಾರ್ಯ ಇಂದ್ರನಂದಿಗಳ ಕಥನಾನುಸಾರ ಆ ಕಾಲದಲ್ಲಿ ತತ್ವಾರ್ಥಸೂತ್ರ ವ್ಯಾಖ್ಯಾತೃಗಳೇ ಸ್ವಾಮಿಯೆಂಬ ಆದರಸೂಚಕ ಪದದಿಂದ ಸ್ಮರಿಸಲ್ಪಡುತ್ತಿದ್ದರು. ಇರಲಿ, ಇದಿಷ್ಟು ಪ್ರಾತಃಸ್ಮರಣೀಯ ಭಗವಜ್ಜಿನ ಸೇನಾಚಾರ್ಯರ ಸಂಕ್ಷಿಪ್ತ ಪರಿಚಯ.

ಆಚಾರ್ಯಜಿನಸೇನರ ಕಾವ್ಯಸರಣಿಯು ಪರಿಚಯವಾಗುವಂತೆ ಮುಂದೆ ಅವರ ಪೂರ್ವಪುರಾಣದ ಮೊದಲನೆಯ ಪರ್ವದಿಂದಲೂ ಪಾರ್ಶ್ವಾಭ್ಯುದಯ ಕಾವ್ಯದಿಂದಲೂ ಕೆಲವು ಶ್ಲೋಕಗಳನ್ನು ಎತ್ತಿ ಕೊಟ್ಟಿದೆ :—

ಪೂರ್ವಪುರಾಣ

ಶ್ರೀಮತೇ ಸಕಲ ಜ್ಞಾನ ಸಾಮ್ರಾಜ್ಯ ಪದಮೀಯುಷೇ |
ಧರ್ಮಚಕ್ರಭೃತೇ ಭರ್ತ್ರೇ ನಮಃ ಸಂಸಾರಭೀಮುಷೇ || ೧ ||

ಸಮಸ್ತಮಃಪಟಚ್ಛನ್ನಜಗದುದ್ಯೋತಹೇತವೇ |
ಜಿನೇಂದ್ರಾಂಶುಮತೇ ತಸ್ಮತ್ರಮಾಭಾಭಾರವಾಸಿನೇ || ೨ ||

ಕ್ವ ಗಂಭೀರಃ ಪುರಾಣಾಬ್ಧಿಃ ಕ್ವ ಮಾದೃಗ್ಬೋಧದುರ್ವಿಧಃ |
ಸೋಹಂ ಮಹೋದಧಿಂ ದೋರ್ಭ್ಯಾಂ ತಿತೀರ್ಷುರ್ಯಾಮಿ ಹಾಸ್ಯತಾಂ || ೨೮ ||

ಅಥವಾಸ್ತ್ಯೇತದಲ್ಪೋಪಿ ಯದ್ಘಟೇಹಂ ಸ್ವಶಕ್ತಿತಃ |
ಲೂನಪಾಲಧಿರಪ್ಯುಕ್ಷಾ ಕಿಂ ನೋತ್ಪುಚ್ಛಯತೇ ತರಾಂ || ೨೯ ||

ಗಣಾಧೀಶೈಃ ಪ್ರಣೀತೇಪಿ ಪುರಾಣೇಸ್ಮಿನ್ನಹಂ ಯತೇ |
ಸಿಂಹೈರಾಸೇವಿತೇ ಮಾರ್ಗೇ ಮೃಗೋನ್ಯಃ ಕೇನ ವಾರ್ಯತೇ || ೩೦ ||

ಕೇಚಿದನ್ಯವಚೋಲೇಶಾನಾದಾಯ ಕವಿಮಾನಿನಃ |
ಛಾಯಾಮಾರೋಪಯಂತ್ಯನ್ಯಾಂ ವಸ್ತ್ರೇಷ್ವಿವ ವಣಿಗ್ಬ್ರುವಾಃ || ೬೬ ||

ಕೇಚಿತ್ ಸೌಶಬ್ದ್ಯಮಿಚ್ಛಂತಿ ಕೇಚಿದರ್ಥಸ್ಯ ಸಂಪದಂ |
ಕೇಚಿತ್ ಸಮಾಸಭೂಯಸ್ತ್ವಂ ಪರೇ ವ್ಯಸ್ತಾಂ ಪದಾವಲೀಂ || ೭೮ ||

ಇತಿ ಭಿನ್ನಾಭಿಸಂಧಿತ್ವಾತ್ ದುರಾರಾಧ್ಯಾ ಮನೀಷಿಣಃ |
ಪೃಥಗ್ಜನೋಪಿ ಸೂಕ್ತಾನಾಮನಭಿಜ್ಞಃ ಸುದುರ್ಗ್ರಹಃ || ೮೦ ||

ಸಾಲಂಕಾರಮುಪಾರೂಢರಸಮುದ್ಭೂತಸೌಷ್ಠವಂ |
ಅನುಚ್ಛಿಷ್ಟಂ ಸತಾಂ ಕಾವ್ಯಂ ಸರಸ್ವತ್ಯಾ ಮುಖಾಯತೇ || ೯೬ ||

ಮಹಾಪುರಾಣಸಂಬಂಧಿ ಮಹಾನಾಯಕಗೋಚರಂ |
ತ್ರಿವರ್ಗಫಲಸಂದರ್ಭಂ ಮಹಾಕಾವ್ಯಂ ತದಿಷ್ಯತೇ || ೯೯ ||

ಶ್ರೀಮದ್ಭವ್ಯಾಬ್ಜಿನೀನಾಂ ಹೃದಯಮುಕುಲಿತಂ
ಘುಸ್ಪದಾಧಾಯ ಬೋಧಂ
ಮಿಥ್ಯಾವಾದಾಂಧಕಾರಸ್ಥಿತಿಮಪಘಟಯತ್-
ವಾಙ್ಮಯೂಖಪ್ರತಾನ್ಯೈಃ|
ಸದ್ವೃತ್ತಂ ಶುದ್ಧಮಾರ್ಗಪ್ರಕಟನಮಹಿಮಾ-
ಲಂಬಿ ಯದ್ಭ್ರಧ್ನಬಿಂಬ-
ಪ್ರಸ್ಪರ್ಧೀದ್ಧರ್ದ್ಧಿ ಜೈನಂ ಜಗತಿ ವಿಜಯತಾಂ
ಪುಣ್ಯಮೇತತ್ಪುರಾಣಂ || ೨೧೦ ||

ಪಾರ್ಶ್ವಾಭ್ಯುದಯ ಕಾವ್ಯ

ಶ್ರೀಮನ್ಮೂರ್ತ್ಯಾ ಮರಕತಮಯಸ್ತಂಭಲಕ್ಷ್ಮೀಂ ವಹಂತ್ಯಾ
ಯೋಗೈಕಾಗ್ರ್ಯಸ್ತಿಮಿತತರಯಾ ತಸ್ಥಿವಾಂಸಂ ನಿದಧ್ಯೌ|
ಪಾರ್ಶ್ವಂ ದೈತ್ಯೋ ನಭಸಿ ವಿಹರನ್ ಬದ್ಧವೈರೇಣ ದಗ್ಧಃ
ಕಶ್ಚಿತ್ಕಾಂತಾವಿರಹಗುರುಣಾ ಸ್ವಾಧಿಕಾರಾತ್ ಪ್ರಮತ್ತಃ || I-೧ ||

ಕ್ವಾಯಂ ದೇವೋ ವಿಲಸದಣಿಮಾದ್ಯಷ್ಟಭೇದಸ್ಥಿತರ್ದ್ಧಿಃ
ಕ್ವಾಲ್ಪರ್ಧಿತ್ವಾದ್ಗುರುಸುರಪಶುಃ ಕ್ವಾದ್ರಿರಾಟ್ ಕ್ವೋಪಲೌಘಃ|
ಕ್ವಾಸ್ಯೋದ್ಯೋಗಃ ಕ್ವ ನು ಮುನಿಗುಣಾ ದುರ್ವಿಭೇದಾಃ ಕ್ವ ಮೂಕಃ
ಸಂದೇಶಾರ್ಥಾಃ ಕ್ವ ಪಟುಕರಣೈಃ ಪ್ರಾಣಿಭಿಃ ಪ್ರಾಪಣೀಯಾಃ || I-೧೮ ||

ಸ್ವಃ ಸೌಧೇಷು ಪ್ರಣಯಮಚಿರಾತ್ಸಂಹರಿಷ್ಯಸ್ಯವಶ್ಯಂ
ಮಂದ್ರಾತೋದ್ಯಧ್ವನಿಷು ಸತತಾರಬ್ಧಸಂಗೀತಕೇಷು|
ಹರ್ಮ್ಯೇಷ್ವಸ್ಯಾಃ ಕುಸುಮಸುರಭಿಷ್ವಧ್ವಖಿನ್ನಾಂತರಾತ್ಮಾ
ನೀತ್ವಾ ಖೇದಂ ಲಲಿತವನಿತಾಪಾದರಾಗಾಂಕಿತೇಷು || ೧೧೮ ||

ವಿಶ್ರಮ್ಯಾಥ ಕ್ಷಣಮಿವ ಭವಾನ್ಪರ್ಯಟೇತ್ಸಂದಿದೃಕ್ಷುಃ
ಶೋಭಾಂ ತಸ್ಯಾಃ ಶತಮುಖಪುರೀಂ ಕ್ರೇಪಯಂತ್ಯಾಃ ಸ್ವಭೂತ್ಯಾ|
ಸ್ನಿಗ್ಧಶ್ಯಾಮಂ ವಪುರುಪವಹನ್ನಾಗರಾಣಾಂ ಫಣಾಭೃ
ದ್ಭರ್ತುಃ ಕಂಠಚ್ಛವಿರಿತಿ ಗಣೈಃ ಸಾದರಂ ವೀಕ್ಷ್ಯಮಾಣಃ || II-೧ ||

ಅಸ್ಯಾಶ್ಚಾಸ್ಮಿನ್ನುಪವನಘನೇ ಮದ್ಗೃಹೋಪಾಂತದೇಶೇ
ಸ್ಯಾದಾಖ್ಯೇಯಂ ಮಯಕಿ ಸುತರಾಂ ಪ್ರತ್ಯಯೋ ಯೇನ ತೇ ಸ್ಯಾತ್ ।
ತಸ್ಯಾಸ್ತೀರೇ ವಿಹಿತಶಿಖರಃ ಪೇಶಲೈರಿಂದ್ರನೀಲೈಃ
ಕ್ರೀಡಾಶೈಲಃ ಕನಕಕದಲೀವೇಷ್ಟನಪ್ರೇಕ್ಷಣೀಯಃ || III-೧೬ ||

ಬಂಧುಪ್ರೀತಿಂ ಗುರುಜನ ಇವಾದೃತ್ಯ ಕಾಂತಾದ್ವಿತೀಯೇ
ಜಾನೇ ಸಖ್ಯಾಸ್ತವ ಮಯಿ ಮನಃ ಸಂಭೃತಸ್ನೇಹಮಸ್ಮಾತ್ ।
ಸಂವಾಸಾಚ್ಚ ವ್ಯತಿಕರಮಿಮಂ ತತ್ವತೋ ವೇದ್ಮಿ ತಸ್ಮಾ
ದಿತ್ಥಂಭೂತಾಂ ಪ್ರಥಮವಿರಹೇ ತಾಮಹಂ ತರ್ಕಯಾಮಿ || III-೫೪ ||

ಭೂಯೋ ಯಾಚೇ ಸುರಸುತ ಮುನೇ ತ್ವಾಮುಪಾರೂಢಭಕ್ತ್ಯಾ
ದೈತ್ಯೇ ಚಾಸ್ಮಿನ್ಪ್ರಣಯಮಧುರಾಂ ದೇಹಿ ದೃಷ್ಟಿಂ ಪ್ರಸೀದ ।
ಚಿತ್ತೋದ್ಯೋಗೈರಸುಶಯಕೃತೈಶ್ಚಾಸ್ಯ ಗಾತ್ರಾತ್ಪ್ರಪಿತ್ಸು
ಪ್ರಾತಃ ಕುಂದಪ್ರಸವಶಿಥಿಲಂ ಜೀವಿತಂ ಧಾರಯೇದಂ || IV-೫೭ ||

ದೇವೀ ಚಾಸ್ಯ ಪ್ರಚಲದಲಕಾ ಲೋಲನೇತ್ರೇಂದುವಕ್ತ್ರಾ
ದಿವ್ಯಂ ಛತ್ರಂ ವ್ಯರಚಯದಹೋ ಧೈರ್ಯಮಿತ್ಯಾಲಪಂತೀ ।
ದೈತ್ಯಸ್ಯಾದ್ರಿರ್ಯದಭಿದಲನಂ ಶಕ್ತಿಯೋಗೇಽಪಿ ಕರ್ತುಂ
ಪ್ರತ್ಯಾದೇಶಾನ್ನ ಖಲು ಭವತೋ ಧೀರತಾಂ ಕಲ್ಪಯಾಮಿ || IV-೫೯ ||

ಕೆ. ಭುಜಬಲಶಾಸ್ತ್ರೀ.

ಅವಳಿಗಳ ರಹಸ್ಯ

ಪೀಠಿಕೆ

ನಮ್ಮ ಸುತ್ತಮುತ್ತಲಿರುವ ಜೀವಿಗಳನ್ನು ನೋಡಿದರೆ ಒಂದು ಇನ್ನೊಂದ ರಂತಿಲ್ಲ. ಎರಡು ಹುಣಿಸೆಯ ಮರಗಳಾದರೂ, ಎತ್ತರದಲ್ಲಿಯಾಗಲಿ ಕಾಯಿನ ಗಾತ್ರ ದಲ್ಲಿಯಾಗಲಿ ಒಂದನ್ನು ಇನ್ನೊಂದು ಹೋಲುವುದಿಲ್ಲ. ಪ್ರಾಣಿ ಮತ್ತು ಮಾನವ ಜೀವನದಲ್ಲಿ ಈ ವ್ಯತ್ಯಾಸ ಇನ್ನೂ ಹೆಚ್ಚಾಗಿ ಮನದಟ್ಟಾಗುತ್ತದೆ. ಮಾನವವರ್ಗ ದಲ್ಲಿ ಒಬ್ಬರನ್ನು ಇನ್ನೊಬ್ಬರು ಹೋಲುವುದು ವಿರಳ. ಒಂದೇ ತಂದೆಯ ಮಕ್ಕ ಳಾಗಿದ್ದು ಒಬ್ಬರು ಇನ್ನೊಬ್ಬರನ್ನು ಹೋಲುವ ಸಂದರ್ಭದಲ್ಲಿಯೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವರಲ್ಲಿಯೇ ವ್ಯತ್ಯಾಸಗಳು ಕಂಡುಬರುತ್ತವೆ. ಒಬ್ಬ ಮಗನ ಕಣ್ಣು ತಾಯಿಯದರಂತಿದ್ದರೆ ಮತ್ತೊಬ್ಬ ಮಗನ ಮೂಗು ತಂದೆಯ ಮೂಗಿ ನಂತಿರುತ್ತದೆ. ಒಬ್ಬ ಮಗಳ ಕೂದಲು ಗುಂಗುರಾಗಿದ್ದರೆ ಮತ್ತೊಬ್ಬಳ ಕೂದಲು ಸರಳವಾಗಿಯೂ ನುಣುಪಾಗಿಯೂ ಇರುತ್ತದೆ. ಪ್ರಕೃತಿಯು ಸೃಷ್ಟಿಸಮರದಲ್ಲಿ ತೊಟ್ಟ ಬಾಣವನ್ನು ತೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದಂತೆ ತೋರುತ್ತದೆ. ಆದರೂ ತೊಟ್ಟ ಬಾಣವನ್ನು ತೊಡುವ ಸಂದರ್ಭವೊಂದಿದೆ. ಈ ಸಂದರ್ಭವೇ ಅವಳಿಗಳ ಜನನ. ಈ ಸಂದರ್ಭವನ್ನು ಪ್ರಕೃತಿಯ ಪವಾಡವೆನ್ನಬಹುದು. ಇಂಥ ಆಶ್ಚರ್ಯಗಳನ್ನು ಜನರು ಅನಿಷ್ಟದ ಚಿಹ್ನೆ ಎಂದು ನಂಬಿದ್ದರು. ಈಚೆಗೆ ವಿಜ್ಞಾನ ಜ್ಯೋತಿಯ ಪ್ರಭೆಯು ಬೆಳಗಿದಂತೆಲ್ಲ ಈ ಅದ್ಭುತಗಳು ಪ್ರಕೃತಿಯಲ್ಲಿ ಆಗಾಗ ಸ್ವಾಭಾವಿಕವಾಗಿ ನಡೆಯಬಹುದಾದ ಸಂಗತಿಗಳೆಂದು ಗೊತ್ತಾಗಿದೆ.

ಯಾವ ದೇಶದ ಪುರಾಣ ಪುರಾತನಸಾಹಿತ್ಯಗಳನ್ನು ನೋಡಲಿ, ಅಲ್ಲಿ ಅವಳಿ ಗಳ ವಿಷಯವು ಕಂಡುಬರುತ್ತದೆ. ಭಾರತೀಯರಾದ ನಾವು ರಾಮಾಯಣದ ಕುಶ ಲವರ ವಿಷಯವನ್ನು ಓದಿದ್ದೇವೆ. ಜೋಗಿಗಳು ಹಾಡುವ ಗಂಗೆಗೌರಿಯರ ಜೋಗುಳದ ಇಂಪಿಗೆ ತಲೆದೂಗಿದ್ದೇವೆ. ಪತ್ರಿಕೆಗಳಲ್ಲಿ ಒಂದು ಕೂಸಿಗಿಂತ ಹೆಚ್ಚಾಗಿ ಕೂಸು ಗಳನ್ನು ಹಡೆದ ತಾಯಿಯರ ವೃತ್ತಾಂತವನ್ನು ಓದಿದ್ದೇವೆ. ಅನೇಕಬಾರಿ ಹಾಗೆ ಹುಟ್ಟಿದ ಮಕ್ಕಳೆಲ್ಲ ಬದುಕಿ ಅವುಗಳು ಬೆಳೆಯುವುದನ್ನು ನೋಡಿದ್ದೇವೆ. ಆಸ್ಪತ್ರೆ ಗಳಲ್ಲಿ ಒಂದು ಇನ್ನೊಂದರೊಡನೆ ಅಂಟಿಕೊಂಡು ಹುಟ್ಟಿರುವ ವಿಚಿತ್ರ ಮಕ್ಕಳನ್ನು ನೋಡಿ 'ದೈವವಿಲಾಸ'ವೆಂದು ಅಚ್ಚರಿಪಟ್ಟಿದ್ದೇವೆ.

ಸಾಹಿತ್ಯ ಪ್ರಪಂಚದಲ್ಲಿ ಅವಳಿಗಳಿಗೆ ಸಂಬಂಧಪಟ್ಟ ಕಾದಂಬರಿಗಳನ್ನೂ ಚಿಕ್ಕಕತೆಗಳನ್ನೂ ನಾಟಕಗಳನ್ನೂ ಓದದವರಿಲ್ಲ. ಇವುಗಳಲ್ಲಿ ಅವಳಿಗಳ ರೂಪು ರೇಖೆಗಳನ್ನು ಗುರುತಿಸಲಾರದೆ ಒದಗುವ ಹಾಸ್ಯಸನ್ನಿವೇಶಗಳನ್ನು ಒಳಗೊಂಡ 'ಭ್ರಾಂತಿವಿಲಾಸ' ಮುಂತಾದುವು ಪ್ರಸಿದ್ಧವಾಗಿವೆ.

ಅವಳಿಗಳಿಂದ ಹೀಗೆ ಬರಿಯ ಮನಸರಂಜನೆಯೊಂದೇ ಫಲವಲ್ಲ. ಆರ್ಥಿಕ ದೃಷ್ಟಿಯಿಂದಲೂ ವೈಜ್ಞಾನಿಕ ದೃಷ್ಟಿಯಿಂದಲೂ ಇವು ಉಪಯುಕ್ತವಾದವು. ಒಂದೇ ಸೂಲನ್ನು ಕೊಡುವ ಹಸು, ಎಮ್ಮೆ ಮುಂತಾದ ಪ್ರಾಣಿಗಳು ಒಂದಕ್ಕಿಂತ ಹೆಚ್ಚು ಸೂಲುಗಳನ್ನು ಕೊಟ್ಟರೆ ಲಾಭದಾಯಕವಲ್ಲವೆ? ಹೀಗೆ ಅಕಸ್ಮಾತ್ ಅವಳಿಗಳನ್ನು ಕೊಟ್ಟ ತಂದೆತಾಯಿಗಳನ್ನು ಜೇರ್ಪಡಿಸಿ ಅವುಗಳದೇ ಒಂದು ವಂಶವಾಗಿ ಮಾಡಿದರೆ ರೈತನಿಗೆ ಎಷ್ಟು ಉಪಕಾರವಾದಂತಾಯಿತು! ಅವಳಿಗಳ ಉಪಯೋಗವು ಇವೆಲ್ಲಕ್ಕಿಂತ ಮಿಗಿಲಾಗಿ ವೈಜ್ಞಾನಿಕ ದೃಷ್ಟಿಯಿಂದ ಅತ್ಯುಪಯುಕ್ತವಾದುದು. ಈಗ ಎಲ್ಲೆಲ್ಲಿಯೂ ಮಾನವಕುಲವನ್ನು ಉನ್ನತಿಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನಕ್ಕೆ ಅನುವಂಶೀಯತೆ ಮತ್ತು ಸನ್ನಿವೇಶಗಳ ಪರಸ್ಪರ ಪ್ರಭಾವಗಳ ಅರಿವು ಅತ್ಯಂತ ಸಹಾಯಕಾರಿ. ಉತ್ತಮಸನ್ನಿವೇಶದಲ್ಲಿ ಬೆಳೆದ ಜನರ ಸಂತತಿಯು ಸಾಮಾನ್ಯ ಸನ್ನಿವೇಶದಲ್ಲಿ ಬೆಳೆದ ಸಂತತಿಗಳಿಗಿಂತ ಉತ್ತಮವಾಗುತ್ತದೆಯೇ? ಬೆಳೆಯುವ ಮಕ್ಕಳಿಗೆ, ಬಡವರಾಗಲಿ ಬಲ್ಲಿದರಾಗಲಿ, ಒದಗಿಸುವ ವಿದ್ಯಾಭ್ಯಾಸ ಉತ್ತಮ ವಾತಾವರಣಗಳು ಅವರ ಸಂತತಿಯನ್ನು ಉತ್ತಮಗೊಳಿಸುತ್ತವೆಯೇ?— ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಅಗತ್ಯ. ಈ ಬಗೆಯ ಪ್ರಯೋಗ ಪರೀಕ್ಷೆ ನಡೆಸಲು ಅವಳಿಗಳಿಗಿಂತ ಉತ್ತಮ ವಸ್ತುಗಳಿಲ್ಲ. ಏಕೆಂದರೆ ಸ್ವಲ್ಪವೂ ವ್ಯತ್ಯಾಸ ವಿಲ್ಲದೆ ಒಂದೇ ಪ್ರಜನನ ವಸ್ತುವಿನಿಂದ ಹೊರಬಿದ್ದ ಎರಡು ಜೀವಿಗಳ ಮೇಲೆ ಬಗೆಬಗೆಯ ಸನ್ನಿವೇಶಗಳಿಂದುಂಟಾಗುವ ವಿವಿಧ ಪರಿಣಾಮಗಳ ಅರಿವು ಮಾನವ ಕುಲದ ಹಿತಚಿಂತಕರ ಪ್ರಯತ್ನದಲ್ಲಿ ಸಹಾಯಮಾಡುವುದರಲ್ಲಿ ಸಂಶಯವಿಲ್ಲ.

ಹೀಗೆ ಅವಳಿಗಳ ರಹಸ್ಯದ ತಿಳಿವು ವೈಜ್ಞಾನಿಕ ಮತ್ತು ಆರ್ಥಿಕ ದೃಷ್ಟಿಗಳಿಂದಲೂ ಉಪಯುಕ್ತವಾದುದು. ಈ ಸಮಸ್ಯೆಯ ರಹಸ್ಯವನ್ನು ಭೇದಿಸಲು ಹೊರಟ ಜೀವಶಾಸ್ತ್ರಜ್ಞರ ಪ್ರಯತ್ನದ ಫಲವಾಗಿ ಇದುವರೆಗೆ ತಿಳಿದುಬಂದಿರುವ ಸಂಗತಿಗಳನ್ನು ಕನ್ನಡಿಗರ ಮುಂದಿಡುವುದೇ ಈ ಲೇಖನದ ಉದ್ದೇಶ.

ವಂಶೋತ್ಪತ್ತಿಯ ರೀತಿಗಳು

ಜೀವರಾಜ್ಯದಲ್ಲಿ ವಂಶೋತ್ಪತ್ತಿಯು ಸಲಿಂಗರೀತಿ ಮತ್ತು ನಿರ್ಲಿಂಗರೀತಿ ಎಂದು ಎರಡು ರೀತಿಗಳಲ್ಲಿ ಆಗುತ್ತದೆ. ಗಂಡು ಪುರುಷಾಣುವೆಂಬ ಜೀವಕೋಶ

ವನ್ನೂ ಹೆಣ್ಣು ತತ್ತಿಯೆಂಬ ಜೀವಕಣವನ್ನೂ ಉತ್ಪತ್ತಿಮಾಡಿ ಇವುಗಳ ಮಿಲನ ದಿಂದ ಹೊಸಜೀವಿಯು ಉತ್ಪತ್ತಿಯಾಗುವುದು ಸಲಿಂಗರೀತಿಯ ಕ್ರಮ. ಯಾವ ಕೋಶಗಳ ಸಂಗಮವೂ ಇಲ್ಲದೆ ಏಕಕೋಶ ಜೀವಿಯಾದ ಅಮೀಬವು ಎರಡಾಗು ವಂತೆ ಸೀಳುವ ವಿಧಾನವು ನಿರ್ಲಿಂಗರೀತಿಯ ಕ್ರಮ. ಸಲಿಂಗರೀತಿಯ ವಂಶೋತ್ಪ ತ್ತಿಯು ಜೀವರಾಜ್ಯದಲ್ಲಿ ಹೆಚ್ಚಿನ ಮಟ್ಟದ್ದು; ಆದರೆ ಈ ಬಗೆಯದರಲ್ಲಿ ಹುಟ್ಟುವ ಸಂತತಿಯ ಸಂಖ್ಯೆ ಸಾಮಾನ್ಯವಾಗಿ ಕಡಮೆ.

ಸಸ್ತನಪ್ರಾಣಿಶಿಖರದಲ್ಲಿರುವ ಪ್ರಿಮೇಟ್ಸ್ ಎಂಬ ಪ್ರಾಣಿಜಾತಿಯಲ್ಲಿ ಒಂದು ಬಾರಿಗೆ ಹುಟ್ಟುವುದು ಒಂದೇ ಮರಿ. ಆದರೆ ಇವೂ ಕೆಲವು ಸಂದರ್ಭಗಳಲ್ಲಿ ಒಂದು ಬಾರಿಗೆ ಒಂದಕ್ಕಿಂತ ಹೆಚ್ಚು ಮರಿಗಳನ್ನು ಈಸುತ್ತವೆ. ಈ ರೀತಿಯ ಜನನಕ್ಕೆ ಅವಳಿಗಳ ಜನನ ಅಥವಾ ಯಮಳತೆಯೆಂದು ಹೆಸರು. ಒಂದು ಬಾರಿಗೆ ಒಂದಕ್ಕಿಂತ ಹೆಚ್ಚು ಮರಿಗಳು ಹುಟ್ಟುವ ಸಂದರ್ಭಗಳೆಲ್ಲ ಯಮಳತೆಯಲ್ಲ; ನಾಯಿ, ನರಿ, ಬೆಕ್ಕು, ಹಂದಿ, ಇವುಗಳಲ್ಲಿ, ಒಂದು ಬಾರಿಗೆ ಒಂದಕ್ಕಿಂತ ಹೆಚ್ಚು ಮರಿಗಳು ಹುಟ್ಟುವುದು ಸಾಮಾನ್ಯ ನಿಯಮ. ಯಾವ ಪ್ರಾಣಿಗಳಲ್ಲಿ ಸಾಧಾರಣವಾಗಿ ಒಂದು ಬಾರಿಗೆ ಒಂದೇ ಸಂತಾನ ಜನಿಸುವುದೋ ಅಂಥ ಪ್ರಾಣಿಗಳಲ್ಲಿ ಒಂದಕ್ಕಿಂತ ಹೆಚ್ಚು ಸಂತಾನ ಹುಟ್ಟಿದರೆ ಅದು ಅವಳಿ ಅಥವಾ ಯಮಳ.


ಯಮಳತೆಯು ಸಸ್ತನಿಗಳಲ್ಲಿ ಮಾತ್ರ ಕಂಡುಬರುವ ಸಂಗತಿಯಲ್ಲ—ಮೀನು, ಉರಗಾಮಿ, ದ್ವಿಚರಪ್ರಾಣಿಗಳು, ಪಕ್ಷಿಗಳು ಇವುಗಳಲ್ಲಿಯೂ ಉಂಟು. ಗ್ಯಾಂಬೂ ಸಿಯ ಎಂಬ ಮೀನಿಗೆ ಎರಡು ತಲೆ ಒಂದು ಬಾಲಗಳನ್ನೊಳಗೊಂಡು ಹುಟ್ಟಿರುವ ಅನೇಕ ಮರಿಗಳಿವೆ. ಕಪ್ಪೆಗೊದ್ದನ ಮರಿಗಳಲ್ಲಿ ಈ ರೀತಿಯ ಜನನ ಬಹಳವಾಗಿ ಆಗಿದೆ. ಫಂಡುಲಸ್ ಎಂಬ ಬೆನ್ನೆಲುಬಿಲ್ಲದ ಪ್ರಾಣಿಯಲ್ಲಿ ಸಲಿಂಗರೀತಿಯಿಂದಲೇ ಒಂದೇ ಒಂದು ಗರ್ಭಕಟ್ಟಿದ ತತ್ತಿಯಿಂದ ಒಂದೇ ಲಿಂಗದ ಸಾವಿರಾರು ಜೀವಿಗಳು ಹೊರಬೀಳುವುದು ಜೀವಶಾಸ್ತ್ರಜ್ಞರಿಗೆ ಮನೆಯ ಮಾತಾಗಿದೆ. ಸಸ್ತನ ಪ್ರಾಣಿಗಳು ಸೃಷ್ಟಿಯಲ್ಲಿ ಅತಿ ಹೆಚ್ಚಿನ ಮಟ್ಟದವಾದ್ದರಿಂದ ಯಮಳತೆಯೂ ಅವುಗಳಲ್ಲಿ ಹೆಚ್ಚಿನ ಮಟ್ಟದ್ದಾಗಿದೆ. ಮಾನವನೂ ಒಂದು ಸಸ್ತನ ಪ್ರಾಣಿಯೇ. ತನ್ನ ಇತರ ಸಂಗಾತಿಗಳಲ್ಲಿ ಕಂಡುಬರುವ ಜೀವನವ್ಯಾಪಾರದ ನೆನಪುಗಳು ಇವನ ಜೀವನದಲ್ಲಿವೆ. ಯಮಳತೆಯು ಇತರ ಸಸ್ತನಿಗಳಲ್ಲಿ ಕಂಡುಬರುವ ವಿಶೇಷ ಸಂಗತಿ. ಇದು ಮನುಷ್ಯನಲ್ಲಿಯೂ ಇದೆ. ಆದುದರಿಂದ ಮಾನವನಲ್ಲಿ ಯಮಳತೆಯ ರಹಸ್ಯವನ್ನರಿಯಲು ಸಸ್ತನಿಗಳ ಯಮಳತೆಯ ಜ್ಞಾನ ಆವಶ್ಯಕ. ಮತ್ತು ಯಮಳತೆಯಿಲ್ಲದ ಸಾಮಾನ್ಯ ಸಂದರ್ಭದಲ್ಲಿ ಆಗುವ ಭ್ರೂಣದ ಅವಸ್ಥಾಪರಿಣಾಮಗಳನ್ನು ಪರಿಶೀಲಿಸಿದರೆ, ಯಮಳತೆಯಾಗುವ ವಿಶೇಷ


ಸಂದರ್ಭಗಳಲ್ಲಿನ ವಿಚಿತ್ರ ಮಾರ್ಪಾಡುಗಳು ಸುಲಭವಾಗಿ ತಿಳಿಯುತ್ತವೆ. ಮಾನವ ವರ್ಗದಲ್ಲಿನ ಭ್ರೂಣದ ಬೆಳವಣಿಗೆ ಕೆಲವು ಸ್ಥೂಲವ್ಯತ್ಯಾಸಗಳನ್ನುಳಿದು ಇತರ ಸಸ್ತನಿಗಳದರಂತೆಯೇ ಇರುತ್ತದೆ.


ಸಸ್ತನಿಗಳಲ್ಲಿ ಭ್ರೂಣದ ಬೆಳವಣಿಗೆ

ಸಸ್ತನಿಗಳಲ್ಲಿ ಡಕ್‌ಬಿಲ್‌ನಂಥ ವಿಚಿತ್ರಪ್ರಾಣಿಗಳು ಕೆಲವನ್ನುಳಿದು ಇತರ ಎಲ್ಲ ಪ್ರಾಣಿಗಳೂ ಮರಿಗಳನ್ನೀನುತ್ತವೆಯೇ ಹೊರತು ಮೊಟ್ಟೆಗಳನ್ನಿಡುವುದಿಲ್ಲ. ಅಂಡಜಗಳ ಭ್ರೂಣವು ಮೊಟ್ಟೆಯಲ್ಲಿರುವ ಲೋಳೆಯಾದ ಆಹಾರದ್ರವವನ್ನು ಉಪಯೋಗಿಸಿಕೊಂಡು ಬೆಳೆದು ಮರಿಯಾಗಿ ಹೊರಗೆ ಬರುತ್ತದೆ. ಸಸ್ತನಿಗಳ ತತ್ತಿಯಲ್ಲಿ ಈ ಲೋಳೆಯು ಅತ್ಯಲ್ಪವಾದುದರಿಂದ ಭ್ರೂಣವು ತಾಯಿಯ ದೇಹದೊಳಗಡೆ ಗರ್ಭಕೋಶದಲ್ಲಿ ಸುರಕ್ಷಿತವಾಗಿ ನಿಂತು, ಆಕೆ ಒದಗಿಸಿದ ಆಹಾರದಿಂದ ಬೆಳೆದು ಹೊರಗೆ ಬರುತ್ತದೆ.

ಸಸ್ತನಿಗಳ ಅಂಡಾಣುಗಳು ಅತಿ ಸೂಕ್ಷ್ಮವಾಗಿವೆ. ಅತಿ ಸೂಕ್ಷ್ಮವೆಂದರೆ ಒಂದು ಹಿಡಿ ಮರಳನ್ನು ನೆಲದ ಮೇಲೆ ಹಾಕಿ ಆ ಮರಳಿನಲ್ಲಿರುವ ದೊಡ್ಡ ಕಣಗಳನ್ನು ಬೇರೆ ಮಾಡುತ್ತ ಹೋದರೆ ಕೊನೆಗೆ ಉಳಿಯುವ ಅತಿ ಸಣ್ಣನಾದ ಕಣದಷ್ಟು ಎಂದು ಹೇಳಬಹುದು. ಆದುದರಿಂದ ಅವನ್ನು ಸೂಕ್ಷ್ಮದರ್ಶಕಯಂತ್ರದ ಸಹಾಯದಿಂದ ನೋಡಲು ಮಾತ್ರ ಸಾಧ್ಯ. ತಾಯಿಯ ಅಂಡಾಶಯದಲ್ಲಿ ಈ ಅಂಡಾಣು ಅಥವಾ ತತ್ತಿಗಳು ಉತ್ಪತ್ತಿಯಾಗುತ್ತವೆ. ಈ ತತ್ತಿಗಳು ಪಕ್ವವಾಗಿ ಪೆಲೋಪಿಯನ್ ನಾಳದ ಮಾರ್ಗವಾಗಿ ಬರುವಾಗ ಗಂಡಿನಿಂದ ಪಡೆದ ಶುಕ್ಲಾಣುವೂ ಈ ನಾಳಕ್ಕೆ ಬರುತ್ತವೆ. ಸುಸಮಯ ಒದಗಿದಲ್ಲಿ ಪುರುಷಾಣು ತತ್ತಿಯೊಡನೆ ಲೀನವಾಗುತ್ತದೆ. ಇದೇ ಗರ್ಭಧಾರಣೆ. ಗರ್ಭ ಧರಿಸಿದ ತತ್ತಿಯು ಕೆಲವು ಕಾಲವಾದ ಮೇಲೆ ನಿಯಮಿತ ರೀತಿಯಿಂದ ವಿಭಾಗವಾಗುವುದಕ್ಕೆ ಮೊದಲಾಗುತ್ತದೆ. ಮೊದಲು ತತ್ತಿಯು ೨ ಹೋಳುಗಳಾಗಿಯೂ ಅನಂತರ ೪, ೮, ೧೬, ೩೨, ೬೪ ಹೋಳುಗಳಾಗಿಯೂ ಆಗಿ, ಕೊನೆಗೆ ಕೋಶಗಳ ಒಂದು ಗೋಳವಾಗುತ್ತದೆ. ಈ ಗೋಳದ ನಡುವೆ ಜಾಗವೊಂದು ಕಾಣಿಸಿಕೊಂಡು ಆ ಜಾಗವು ವಿಸ್ತರಿಸುವುದರಿಂದ ಗೋಳಾಕಾರದ ಕೋಶರಾಶಿಯಲ್ಲಿ ಒಂದು ಕಡೆ ಕೋಶಗಳ ಗುಚ್ಛವೂ ಮತ್ತೊಂದೆಡೆಗೆ ಒಂದೇ ಒಂದು ಕೋಶವೃತ್ತವೂ ಬೇರ್ಪಡುತ್ತವೆ. ಹೊರವರಸೆಯ ಕೋಶವೃತ್ತವು ಒಳಗುಚ್ಛವನ್ನು ಆವರಿಸಿರುವುದಲ್ಲದೆ ಇವೆರಡಕ್ಕೂ ಒಂದೇ ಒಂದು ಪ್ರದೇಶದಲ್ಲಿ ಸಂಬಂಧವಿದ್ದು ಒಂದು ಇನ್ನೊಂದಕ್ಕೆ ಅಂಟಿರುತ್ತದೆ. ಹೊರವರಸೆಯ ಕೋಶವೃತ್ತವನ್ನು ಭಕ್ಷಕ







ಚಿತ್ರ ೧. ಭ್ರೂಣದ ಉತ್ಪತ್ತಿ ಮತ್ತು ಬೆಳವಣಿಗೆ

1, 2, 3 ನೆಯ ಚಿತ್ರಗಳಲ್ಲಿ ಗರ್ಭಕಟ್ಟಿದ ತತ್ತಿಯು ಎರಡು, ನಾಲ್ಕು, ಎಂಟು ಹೋಳುಗಳಾಗಿ ಒಡೆಯುವುದನ್ನೂ, ನಾಲ್ಕನೆಯ ಚಿತ್ರದಲ್ಲಿ ಕೋಶಗಳ ಒಂದು ಉಂಡೆಯಾಗುವುದನ್ನೂ ತೋರಿಸಿದೆ. ಐದನೆಯ ಚಿತ್ರದಲ್ಲಿ ಈ ಕೋಶಗಳ ನಡುವೆ ಅವಕಾಶವು ಕಾಣಿಸಿಕೊಂಡು, ಅದು ಕೋಶಗಳನ್ನು ಒತ್ತಿ ವಿಶಾಲವಾಗುವುದನ್ನೂ, ಆರನೆಯ ಚಿತ್ರದಲ್ಲಿ ಒಳಕೋಶ ಗುಚ್ಛ ಮತ್ತು ಹೊರಕೋಶಗಣಗಳು ನಿರ್ಮಿತವಾಗುವುದನ್ನೂ ತೋರಿಸಿದೆ. ಹೊರಕೋಶಗಣ ಅಥವಾ ವಲಯವು ಗರ್ಭಕೋಶದ ಭಿತ್ತಿಗೂ ಬೆಳೆಯುವ ಭ್ರೂಣಕ್ಕೂ ಸಂಬಂಧ ಕಲ್ಪಿಸುತ್ತದೆ. ಒಳಕೋಶ ಗುಚ್ಛದಿಂದ ಮುಂದೆ ಭ್ರೂಣವಾಗುತ್ತದೆ.

ಕೋಶಗಣವೆಂದು ಕರೆಯಬಹುದು. ಇದು ತನ್ನ ದಾರಿಯಲ್ಲಿರುವ ಕೋಶಗಳನ್ನು ಭಕ್ಷಿಸಿ, ಬೆಳೆಯುವ ಭ್ರೂಣಕ್ಕೆ ಆಹಾರವನ್ನೊದಗಿಸುತ್ತದೆ. ಈ ಭಕ್ಷಕ ವೃತ್ತವನ್ನೇ 'ಬಹಿರ್ದ್ವರ್ಮ'ವೆಂದೂ ಕರೆಯುವರು. ಒಳಕೋಶ ಗುಚ್ಛದಲ್ಲಿ ಬಹಿರ್ದ್ವರ್ಮವೂ ಇನ್ನೊಂದು ಬಗೆಯ ಕೋಶ ಸಾಲೂ ಇದೆ. ಈ ಬೇರೆ ಬಗೆಯ ಕೋಶಕ್ಕೆ ಅಂತರ್ದರ್ಮವೆಂದು ಹೆಸರು. ಒಳಗುಚ್ಛದಿಂದಲೇ ಮುಂದಿನ ಜೀವಿಯ ಅಂಗಾಂಗಗಳೆಲ್ಲವೂ ರಚನೆಯಾಗುತ್ತವೆ. ಬೆಳೆಯುತ್ತಿರುವ ತತ್ತಿಯು ಈ ಅವಸ್ಥೆಯಲ್ಲಿ ಗರ್ಭಕೋಶದಲ್ಲಿ ಬಂದು ತಂಗುವುದು. ಗರ್ಭಕೋಶದಲ್ಲಿ ತತ್ತಿಯು ಬರುವುದಕ್ಕೆ ಮೊದಲು ಅದಕ್ಕೆ ಆಹಾರ ದ್ರವ್ಯಗಳನ್ನು ಒದಗಿಸುವ ಏರ್ಪಾಡು ನಡೆದಿರುತ್ತದೆ. ಗರ್ಭಕೋಶದಲ್ಲಿ ಭ್ರೂಣದ ಭಕ್ಷಕ ಕೋಶವೃತ್ತಕ್ಕೂ ತಾಯ ಗರ್ಭಕೋಶದ ಒಳಭಿತ್ತಿಗೂ ನಿಕಟವಾದ ಸಂಪರ್ಕವು ಸ್ಥಾಪಿತವಾಗಿ ತಾಯಿಯ ರಕ್ತನಾಳಗಳಿಂದ ಆಹಾರದ್ರವ್ಯಗಳು ಭ್ರೂಣದ ರಕ್ತನಾಳಕ್ಕೆ ಸ್ರವಿಸುತ್ತವೆ. ಇದಕ್ಕೆ ಮೊದಲೇ ಒಳಗುಚ್ಛದಲ್ಲಿ ಬಂದು ಹಳ್ಳವು ಕಾಣಿಸಿಕೊಂಡು ಅದು ಆಳವಾಗಿ ಅದರ ದಡದಿಂದ ಹೊರದರ್ಮದ ಕೋಡುಗಳು ಬೆಳೆದು ಈ ಕೋಡುಗಳ ಪರಸ್ಪರ ಸೇರುವಿಕೆಯಿಂದ ಅಪರಾಯು ಕೋಶವಾಗಿ ಅದು ಭ್ರೂಣವನ್ನು ಮುಚ್ಚಿ ರಕ್ಷಿಸುತ್ತದೆ. (ಚಿತ್ರ ೧.)

ಅವಳಿಗಳಾಗುವ ಬಗೆ

ಸಲಿಂಗರೀತಿಯಿಂದ ಹುಟ್ಟುವ ಸಂತಾನಗಳೆಲ್ಲಾ, ಒಂದು ತತ್ತಿಯೊಡನೆ ಒಂದು ಪುರುಷಾಣುವು ಸಂಧಿಸುವುದರಿಂದ ಆಗುತ್ತವೆಂದು ಹಿಂದೆಯೇ ಹೇಳಿದೆಯಷ್ಟೆ. ಒಂದಕ್ಕಿಂತ ಹೆಚ್ಚು ಸಂತಾನಗಳಾಗಲು ಒಂದು ತತ್ತಿಯು ವಿಭಾಗವಾಗಿ ಬೇರೆಬೇರೆ ಸಂತತಿಸ್ಥಾನವಾಗಬೇಕು ಅಥವಾ ಒಂದಕ್ಕಿಂತ ಹೆಚ್ಚು ತತ್ತಿಗಳು ಏಕಕಾಲದಲ್ಲಿ ಒಲಿತು ಬೇರೆಬೇರೆ ಪುರುಷಾಣುಗಳೊಡನೆ ಸಂಗಮವಾಗಿ ಗರ್ಭಧರಿಸಿ ಭ್ರೂಣಗಳ ಬೆಳವಣಿಗೆಯಾಗಬೇಕು. ಅವಳಿ ಸಂತಾನಗಳೆಲ್ಲವೂ ಏಕಲಿಂಗದವಾಗಿರಬಹುದು ಅಥವಾ ಬೇರೆಬೇರೆ ಲಿಂಗದವಾಗಿರಬಹುದು. ಗರ್ಭಕಟ್ಟಿದಾಗ, ತತ್ತಿಯ ಲಿಂಗವು ನಿರ್ಧರವಾಗುವುದರಿಂದ ಏಕಲಿಂಗದ ಅವಳಿಗಳು ಒಂದೇ ತತ್ತಿಯ ವಿಭಜನೆಯಿಂದಾಗಿರಬೇಕು; ಬೇರೆಬೇರೆ ಲಿಂಗದ ಅವಳಿಗಳು ಬೇರೆ ಬೇರೆ ತತ್ತಿಗಳ ಗರ್ಭಧಾರಣೆಯಿಂದಾಗಿರಬೇಕು. ಇದು ಲಿಂಗನಿರ್ಧಾರ ನಿಯಮಕ್ಕೆ ಅನುಸಾರಿಯಾದ ವಾದ.

ಆಧುನಿಕ ಪಿಂಡಶಾಸ್ತ್ರಜ್ಞರು ಅನೇಕ ಭ್ರೂಣಗಳ ಸೂಕ್ಷ್ಮ ಪರಿಶೀಲನೆಯಿಂದ ತತ್ತಿ ವಿಭಜನೆಯಾಗುವ ವಿಧಾನವನ್ನು ಅರಿತಿರುವುದಲ್ಲದೆ, ಯಮಳತೆ ಉಂಟಾಗಬಹುದಾದ ಇನ್ನು ಕೆಲವು ಸಂದರ್ಭಗಳನ್ನೂ ಅರಿತಿದ್ದಾರೆ.


ತತ್ತಿಯ ಬೆಳೆವಣಿಗೆ ಸಾಗಿ, ಒಳದರ್ಮ ಹೊರದರ್ಮಗಳು ರಚನೆಯಾಗಿ ಒಳಕೋಶಗುಚ್ಛವು ಬೇರ್ಪಡುವ ಸಮಯದಲ್ಲಿ ಈ ಗುಚ್ಛವು ಕಾರಣಾಂತರದಿಂದ ಎರಡು ಅಥವಾ ಹೆಚ್ಚು ಭಾಗಗಳಾಗಿ ಬೇರ್ಪಟ್ಟು ಒಂದೊಂದೂ ಒಂದೊಂದು ಭ್ರೂಣಸ್ಥಾನವಾಗಿ ಬೆಳೆಯಬಹುದು. ಈ ರೀತಿ ಏಕತತ್ತಿಯ ವಿಭಜನೆಯಿಂದ ಯಮಳತೆಯು ಆರ್ಮೊಡಿಲೋ ಎಂಬ ಅಮೆರಿಕಾ ದೇಶದ ಪ್ರಾಣಿಯಲ್ಲಿ ಸ್ವಭಾವ ಸಿದ್ಧವಾಗಿ ಪ್ರತಿ ಜನನದಲ್ಲಿಯೂ ಆಗುತ್ತದೆ. ಈ ಪ್ರಾಣಿಯಲ್ಲಿ ಒಂದೇ ಲಿಂಗದ ನಾಲ್ಕು ಮರಿಗಳು ಒಂದೇಬಾರಿಗೆ ಜನಿಸುತ್ತವೆ. ಲಿಂಗದಲ್ಲಿಯೂ ಬಿಂಬದಲ್ಲಿಯೂ ಒಂದೇ ಆದ ಈ ನಾಲ್ಕು ಮರಿಗಳು ಒಂದೇ ಪ್ರಜನನವನ್ನುಳ್ಳ ಏಕತತ್ತಿಯ ವಿಭಜನೆಯಿಂದಾದುವೆಂಬುದು ಸ್ಥಾಪಿಸಲ್ಪಟ್ಟಿದೆ. ಇದು ಒಂದೇ ತತ್ತಿಯ ವಿಭಜನೆ ಯಿಂದಾದ ಏಕಲಿಂಗದ ಅವಳಿಗಳ ವಿಷಯವಾಯಿತು. ಬೇರೆಬೇರೆ ಲಿಂಗದ, ಮತ್ತು ರೂಪಿನಲ್ಲಿ ಒಂದನ್ನೊಂದು ಹೋಲದ, ಅವಳಿಗಳ ಜನನವೂ ಇದೆ. ಇವುಗಳಾದ ಬಗೆಯ ಊಹೆ ಸುಲಭ. ತತ್ತಿಯ ಲಿಂಗ ಬೇರೆ, ಬಾಹ್ಯಗುಣ ಪ್ರತಿಬಿಂಬಕ್ಕೆ ಕಾರಣವಾದ ಗುಣಧಾರಿಗಳು ಬೇರೆ. ಆದ್ದರಿಂದ, ಈ ಅವಳಿಗಳು ಬೇರೆಬೇರೆ ತತ್ತಿಯಿಂದಲೇ ಉದ್ಭವಿಸಿವೆಯೆಂಬುದು ವ್ಯಕ್ತವಾಗುತ್ತದೆ. ಈ ಬೇರೆಬೇರೆ ತತ್ತಿಗಳು ಕಾರಣಾಂತರದಿಂದ ಏಕಕಾಲದಲ್ಲಿ ತಾಯಿಯ ಅಂಡಾಶಯದಿಂದ ಹೊರಬಿದ್ದು ಬಂದು ಗರ್ಭಕಟ್ಟಿ, ಒಂದು ಭ್ರೂಣದ ಬೆಳೆವಣಿಗೆಗೆ ಮಾತ್ರ ಸಾಕಾದ ಗರ್ಭಕೋಶ ದಲ್ಲಿಯೇ ಎಲ್ಲವೂ ತಂಗಿ, ಬೆಳೆದು, ಸಾಧಾರಣ ಜನನದಂತೆ ಜನನವಾಗಬಹುದು. ಹೀಗೆ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ತತ್ತಿಗಳು ಗರ್ಭಕಟ್ಟಿ ಮರಿಗಳಾಗುವುದು ಆರ್ಮೊಡಿಲೊ ಜಾತಿಗೆ ಸೇರಿದ ಇನ್ನೊಂದು ಪ್ರಾಣಿಯಲ್ಲಿಯೂ ಕಂಡುಬರುತ್ತದೆ. ಏಕತತ್ತಿಯ ವಿಭಜನೆಯಿಂದಾದ ಅವಳಿಗಳನ್ನು ಏಕರೂಪಿ (ಅವಳಿ)ಗಳೆಂದೂ ಬಹು ತತ್ತಿಗಳ ಗರ್ಭಧಾರಣೆಯಿಂದ ಆದ ಅವಳಿಗಳನ್ನು ಸೋದರ ಅವಳಿಗಳೆಂದೂ ಕರೆಯಬಹುದು.

ಸಸ್ತನ ಪ್ರಾಣಿಗಳ ಭ್ರೂಣ ಸಂಶೋಧನೆ ಕಷ್ಟ. ಅದರಲ್ಲಿಯೂ ಮಾನವ ಭ್ರೂಣಗಳಾದರೆ ಅವು ದೊರಕುವುದೇ ಕಷ್ಟ. ಆದುದರಿಂದ ಮಾನವ ಭ್ರೂಣಗಳ ಬೆಳೆವಣಿಗೆಯ ಜ್ಞಾನ ಇತರ ಸಸ್ತನಿಗಳದರಷ್ಟು ಸಂಪೂರ್ಣ ಮತ್ತು ಸಮರ್ಪಕವಾಗಿ ಇಲ್ಲ. ಆದರೂ ಮಾನವ ಭ್ರೂಣಗಳ ಬೆಳೆವಣಿಗೆ ಇತರ ಸಸ್ತನಿ ಭ್ರೂಣಗಳ ಬೆಳೆವಣಿಗೆಯನ್ನು ಹೋಲುವುದರಿಂದಲೂ, ದೊರಕಿರುವ ಕೆಲವು ಅತ್ಯುತ್ತಮವಾದ ಮಾನವ ಭ್ರೂಣಗಳ ಮೇಲೆ ನಡೆಸಿರುವ ಸಂಶೋಧನೆಯ ಸಹಾಯದಿಂದಲೂ ಮಾನವವರ್ಗದಲ್ಲಿ ಅವಳಿಗಳಾಗುವ ರೀತಿಯನ್ನು ಊಹಿಸಬಹುದು.

ಮನುಷ್ಯನಲ್ಲಿ ಯಮಳತೆಯಾಗುವುದು ಬಹುಮಟ್ಟಿಗೆ ಆರ್ಮ್ಮಡಿಲೋ ಗುಂಪಿನ ಪ್ರಾಣಿಗಳಲ್ಲಿ ಆಗುವ ಯಮಳತೆಯನ್ನೇ ಹೋಲುವುದೆಂದು ಊಹಿಸಲಾಗಿದೆ. ಈ ಊಹೆಗೆ ಈ ಪ್ರಾಣಿಗಳಲ್ಲಿನ ಭ್ರೂಣದ ಬೆಳವಣಿಗೆಯ ಕ್ರಮವೇ ಆಧಾರವಾಗಿದೆ. ಆರ್ಮ್ಮಡಿಲೋ ಪ್ರಾಣಿಗಳ ಗುಂಪಿನಲ್ಲಿ ಎರಡರಿಂದ ನಾಲ್ಕು ಸಂತಾನದ ಜನನವೂ ಏಳರಿಂದ ಹನ್ನೆರಡು ಸಂತಾನದ ಜನನವೂ ಸ್ವಾಭಾವಿಕವಾಗಿದೆ. ಹಾಗೆ ಅಧಿಕ ಸಂತಾನವಾಗುವುದೂ ಯಮಳತೆಯಿಂದಲೇ. ಇಂಥ ಯಮಳತೆಯು ಈ ಗುಂಪಿನ ಪ್ರಾಣಿಗಳಲ್ಲಿ ವಂಶಪಾರಂಪರ್ಯವಾಗಿ ನಡೆಯುವ ಪ್ರಕರಣ. ಈ ಪ್ರಾಣಿಗಳ ಗುಂಪಿನಲ್ಲಿ ತತ್ತಿಯ ಪಲ್ಲಟ ಗರ್ಭಧಾರಣೆ ಎಲ್ಲವೂ ಇತರ ಸಸ್ತನಿಗಳಲ್ಲಿ ಆಗುವಂತೆಯೇ ಆಗುತ್ತದೆ. ತತ್ತಿಯು ಬೆಳೆದು, ಹೊರಕೋಶಗಣ ಒಳಕೋಶಗುಚ್ಛಗಳು ನಿರ್ಮಿತವಾಗಿ, ಗರ್ಭಕೋಶದಲ್ಲಿ ನಿಲ್ಲುತ್ತದೆ. ಒಳಕೋಶಗುಚ್ಛದಲ್ಲಿ ಒಳದರ್ಮ ಹೊರದರ್ಮ ಕೋಶಗಳನ್ನು ಅವುಗಳ ಗಾತ್ರದಿಂದ ಗುರುತಿಸಬಹುದು. ಎಲ್ಲ ಸಸ್ತನಿಗಳಲ್ಲಿಯೂ ಸಾಮಾನ್ಯವಾಗಿ ಹೊರದರ್ಮವು ಒಳದರ್ಮವನ್ನು ಆವರಿಸಿರುತ್ತದೆ. ಆರ್ಮ್ಮಡಿಲೋವಿನಲ್ಲಾದರೋ ಹೊರದರ್ಮವು ಒಳಹೊಕ್ಕು ಒಳದರ್ಮವು ಹೊರಕ್ಕೆ ಬಂದಿರುವುದರಿಂದ ಭ್ರೂಣವಿಭಜನೆಗೆ ಸುಲಭವಾಗುತ್ತದೆ. ಇತರ ಸಸ್ತನಿಗಳಲ್ಲಾದಂತೆ ಒಳಕೋಶದೊಳಗಡೆ ಹಳ್ಳವೊಂದು ಕಾಣಿಸಿಕೊಂಡು ಈ ಹಳ್ಳದ ದಡದಿಂದ ಎರಡು ಚಪ್ಪಟೆಯಾದ ಹೊರದರ್ಮದ ಕೋಡುಗಳು ಬೆಳೆಯುತ್ತವೆ. ಈ ಕೋಡುಗಳೇ ಮುಂದಿನ ಭ್ರೂಣಾಧಾರಸ್ಥಾನಗಳು. ಒಂದೊಂದು ಕೋಡಿನಿಂದಲೂ ಎರಡೆರಡು ಭ್ರೂಣಗಳು ಬೆಳೆದು ನಾಲ್ಕು ಮರಿಗಳಾಗುತ್ತವೆ. ಎಂಟರಿಂದ ಹನ್ನೆರಡು ಮರಿಗಳಾಗುವ ಇನ್ನೊಂದು ಜಾತಿಯ ಆರ್ಮ್ಮಡಿಲೋವಿನಲ್ಲಿ ಒಂದೊಂದು ಕೋಡೂ ನಾಲ್ಕು ಭ್ರೂಣಗಳಿಗೆ ಆಧಾರವಾಗುತ್ತದೆ. ಈ ರೀತಿಯ ಯಮಳತೆಯ ವಿಧಾನವು ೨ ಮತ್ತು ೩ನೆಯ ಚಿತ್ರಗಳಿಂದ ವ್ಯಕ್ತವಾಗುತ್ತದೆ.


ಮಾನವವರ್ಗದಲ್ಲಿ ಅವಳಿಗಳಾಗುವ ಬಗೆ

ಮಾನವ ವರ್ಗದಲ್ಲಿ ಸಾಧಾರಣವಾಗಿ ಒಂದು ಬಾರಿಗೆ ಒಂದೇ ಮಗುವು ಹುಟ್ಟಿದರೂ, ಒಂದು ಬಾರಿಗೆ ಎರಡರಿಂದ ಐದರ ವರೆಗೂ ಮಕ್ಕಳು ಜನಿಸಿರುವ ವಿಚಿತ್ರ ಉದಾಹರಣೆಗಳು ಇದ್ದೇ ಇವೆ. ಇಂಗ್ಲಂಡಲ್ಲಿಯೂ ಅಮೆರಿಕನ್ನರಲ್ಲಿಯೂ ಪ್ರತಿ ೯೦ ಜನನಕ್ಕೆ ಒಂದು ಅವಳಿ ಜನನವಿದ್ದರೆ ಜಪಾನೀಯರಲ್ಲಿ ಪ್ರತಿ ೧೭೦ ಜನನಕ್ಕೆ ಒಂದು ಅವಳಿಯಾಗುತ್ತದೆ. ಒಂದು ಬಾರಿಗೆ ಎರಡು ಕೂಸುಗಳ ಜನನವು ಆಶ್ಚರ್ಯಕರವಾದರೂ, ಹೆಚ್ಚು. ಮೂರು ಕೂಸುಗಳ ಜನನ ಪ್ರತಿ ೮,೦೦೦ ಜನನಕ್ಕೆ



ಚಿತ್ರ ೨. ಆರ್ಮೊಡಿಲೋ ಪ್ರಾಣಿಯಲ್ಲಿ ಭ್ರೂಣದ ಬೆಳವಣಿಗೆ (i)

1-2 : ಒಳಕೋಶಗುಚ್ಛ ಹೊರಕೋಶವೃತ್ತಗಳಾಗಿರುವ ಸ್ಥಿತಿ : ಈ ಸ್ಥಿತಿಯಲ್ಲಿಯೇ ಹೊರದರ್ಮಕೋಶಗಳನ್ನೂ ಒಳದರ್ಮಕೋಶಗಳನ್ನೂ ಗುರುತಿಸಬಹುದು. (ಕಪ್ಪಗಿರುವ ಕೋಶಗಳೇ ಒಳದರ್ಮಕೋಶಗಳು.) 3. ಒಳಕೋಶ ಗುಚ್ಛದಲ್ಲಿ ಅಪರಾಯು ಕೋಶದ ಹಳ್ಳವು ಕಾಣಿಸಿಕೊಳ್ಳುವುದು. 4-5, ಈ ಹಳ್ಳವು ವಿಶಾಲವಾಗುವುದು. 6. ಇದರ ದಡದಿಂದ ಬಂದ ಕೋಡುಗಳು ಒಂದೊಂದೂ ಎರಡು ಭ್ರೂಣಾಧಾರಗಳಾಗುವುದು.



ಚಿತ್ರ ೩. ಆರ್ಮ್ಯಾಡಿಲೋ ಪ್ರಾಣಿಯಲ್ಲಿ ಭ್ರೂಣದ ಬೆಳೆವಣಿಗೆ (ii)

ಇದರಲ್ಲಿ ಪೂರ್ತಿಯಾಗಿ ಬೆಳೆದಿರುವ ನಾಲ್ಕು ಭ್ರೂಣಗಳನ್ನು ನೋಡಬಹುದು.

ಒಂದು, ಮತ್ತು ನಾಲ್ಕು ಕೂಸುಗಳ ಜನನ ಪ್ರತಿ ೨೦೦,೦೦೦ ಜನನಕ್ಕೆ ಒಂದು. ಇವೆಲ್ಲಕ್ಕಿಂತ ಹೆಚ್ಚಾಗಿ ಅತಿ ಆಶ್ಚರ್ಯೆನಿಸಿರುವ ಪಂಚಶಿಶುಗಳ ಜನನವು ೫೦೦ ವರ್ಷಗಳಲ್ಲಿ ಪ್ರಪಂಚಕ್ಕೆಲ್ಲ ೬ ಸಾರಿ ಮಾತ್ರ. ಅದರಲ್ಲಿಯೂ ಇವು ಬದುಕಲೇ ಇಲ್ಲ; ೫೦೦ ವರ್ಷಗಳಾದ ಮೇಲೆ ಒಂದು ಬಾರಿ ಮಾತ್ರ ೫ ಶಿಶುಗಳ ಜನನವಾಗಿ ಅವು ಬದುಕಿವೆ. ಹೀಗೆ ಒಂದಕ್ಕಿಂತ ಹೆಚ್ಚು ಸಂತಾನವಾಗುವುದು ಯಮಳತೆಯಿಂದ. ಈ ಯಮಳತಾ ವಿಧಾನವು ಮಾನವ ಕುಲದಲ್ಲಿಯೂ ಇತರ ಸಸ್ತನಿಗಳಲ್ಲಿರುವಂತೆಯೇ

ಇದೆ. ಏಕರೂಪಿ ಅವಳಿಗಳ ಪರಸ್ಪರ ಹೋಲಿಕೆಯು ಸರ್ವ ವಿಧಗಳಲ್ಲಿಯೂ ಆರ್ಮೊಡಿಲೋವಿನ ಮರಿಗಳಲ್ಲಿ ಇರುವಂತೆಯೇ ಇದ್ದು ಅತಿಯಾದ ಅಚ್ಚರಿಯನ್ನುಂಟುಮಾಡಿದೆ. ಇತರ ಕೆಲವು ಸಂದರ್ಭಗಳಲ್ಲಿ ಒಂದೇ ಬಾರಿಗೆ ಹೆಚ್ಚು ಮಕ್ಕಳು ಜನಿಸಿದರೂ ಅವುಗಳಲ್ಲಿ ಕೆಲವಕ್ಕೆ ಮಾತ್ರ ಹೋಲಿಕೆಯಿದ್ದು ಮತ್ತೆ ಕೆಲವಕ್ಕೆ ಏಕಲಿಂಗದವಾದರೂ ಹೋಲಿಕೆಯ ಸುಳಿವೇ ಇರುವುದಿಲ್ಲ. ಆಧುನಿಕ ಮಾನವ ಭ್ರೂಣಶಾಸ್ತ್ರಜ್ಞರ ಪರಿಶೋಧನೆಗಳಿಂದ, ಮನುಷ್ಯನಲ್ಲಿಯೂ ಇತರ ಸಸ್ತನಿಗಳಂತೆ ಸಂಯುಕ್ತತತ್ತಿಗಳು ಬಲಿತು ಕಾರಣಾಂತರದಿಂದ ಒಂದೇ ವೇಳೆಯಲ್ಲಿ ಅಂಡಾಶಯದಿಂದ ಕಿತ್ತುಬಂದು ಬೇರೆ ಬೇರೆ ಪುರುಷಾಣುಗಳೊಡನೆ ಸಂಗಮವಾಗಿ ಗರ್ಭಕಟ್ಟಿ ಸೋದರ ಅವಳಿಗಳ ಜನನವೂ, ಒಂದೇ ತತ್ತಿಯ ವಿಭಜನೆಯಿಂದ (ಆರ್ಮೊಡಿಲೋವಿನಲ್ಲಾಗುವಂತೆ) ಏಕರೂಪಿ ಅವಳಿಗಳೂ ಆಗುವುವೆಂದು ಸ್ಥಾಪಿಸಲ್ಪಟ್ಟಿದೆ. ಈ ನಿರ್ಧಾರಕ್ಕೆ ಕಾರಣಗಳೇನು?

ಹುಟ್ಟಿದ ಮಕ್ಕಳನ್ನೆಲ್ಲ ಲಿಂಗದೃಷ್ಟಿಯಿಂದ ವಿಂಗಡಿಸಿದರೆ ಏಕಲಿಂಗಗಳ ಅವಳಿಗಳ ಜನನ ಸಂಖ್ಯೆಯೇ ಹೆಚ್ಚೆಂಬುದು ನಿಕೋಲಾಸ್ ಅವರ ಈ ಪಟ್ಟಿಯಿಂದ ವ್ಯಕ್ತವಾಗುತ್ತದೆ.

ಅವಳಿಗಳ ಲಿಂಗ	ಗಂಡು.	ಮಿಶ್ರಲಿಂಗದವು.	ಹೆಣ್ಣು.
ಅವಳಿಗಳ ಸಂಖ್ಯೆ :	೨,೩೪೪,೪೯೭	೨,೬೪೪,೯೫೮	೨,೧೯೩,೩೧೨

ಮಿಶ್ರಲಿಂಗದ ಸಂಖ್ಯೆಗಳಿಗಿಂತ ಏಕಲಿಂಗಿಗಳ ಸಂಖ್ಯೆಯು ಹೆಚ್ಚು ; ಎಂದರೆ, ಏಕರೂಪಿಗಳ ಜನನ ಹೆಚ್ಚು. ಏಕರೂಪಿಗಳು ಹುಟ್ಟಬೇಕಾದರೆ ಒಂದೇ ತತ್ತಿಯಿಂದ; ಏಕೆಂದರೆ ತತ್ತಿಯ ಲಿಂಗವೂ ಗುಣವೂ ಅವಳಿಗಳೆಲ್ಲದರಲ್ಲಿಯೂ ಒಂದೇ ರೀತಿ ಇರುತ್ತವೆ. ಆದುದರಿಂದ ಮಾನವನಲ್ಲಿ ಏಕರೂಪಿ ಅವಳಿಗಳು ಏಕತತ್ತಿಯ ವಿಭಜನೆಯಿಂದಾಗುತ್ತವೆಂಬುದು ವ್ಯಕ್ತವಾಗುತ್ತದೆ.

ಮಾನವ ವರ್ಗದಲ್ಲಿ ಗರ್ಭಕೋಶವು ಅನೇಕ ತತ್ತಿಗಳ ಸ್ವಾಭಾವಿಕ ಗರ್ಭಧಾರಣೆಗೆ ಅನುಕೂಲವಾದಷ್ಟು ವಿಶಾಲವಾಗಿರದೆ ಆರ್ಮೊಡಿಲೋವಿನಲ್ಲಿರುವಂತೆ ಏಕತತ್ತಿಯ ವಿಭಜನ ರೀತಿಯ ಬೆಳವಣಿಗೆಗೆ ಮಾತ್ರ ಸಾಕಾಗುವಷ್ಟು ವಿಶಾಲವಾಗಿದೆ.

ತತ್ತಿಯು ಅಂಡಾಶಯದಿಂದ ಕಿತ್ತುಬಂದ ಮೇಲೆ ಆ ಸ್ಥಳವು ಖಾಲಿಯಾಗದೆ ಅಲ್ಲಿ ಇತರ ಕೋಶಗಳು ಬೆಳೆದು ಆವರಿಸಿಕೊಳ್ಳುತ್ತವೆ. ಈ ಕಣಗಣಕ್ಕೆ ಕಾರ್ಪಸ್ ಲೂಟಿಯಂ ಎಂದು ಹೆಸರು. ಈ ಹಳದಿ ವರ್ಣದ ಕಣಗಣವು ಒಂದು ತತ್ತಿ ಕಿತ್ತುಬಂದರೆ ಒಂದು ಬೆಳೆಯುತ್ತದೆ, ಎರಡು ತತ್ತಿ ಕಿತ್ತು ಬಂದರೆ ಎರಡು ಬೆಳೆಯುತ್ತದೆ. ಇದುವರೆಗೂ ನಡೆದಿರುವ ಸಂಶೋಧನೆಯ ಪ್ರಕಾರ ಮನುಷ್ಯನಲ್ಲಿ

ಒಂದೇ ಒಂದು ಲೂಟಿಯಂ ಬೆಳೆಯುವುದರಿಂದ ಏಕರೂಪಿಗಳು ಏಕತತ್ತಿಯಿಂದ ಆದುವೆಂಬುದು ವಾದವಿಲ್ಲದ ವಿಷಯ.

ಇತರ ಸಸ್ತನಿಗಳಲ್ಲಿ ಎಂದರೆ, ಮೂರು ಜಾತಿಯ ಆರ್ಮ್ಮಡಿಲೋವಿನಲ್ಲಿ, ಕುರಿಗಳಲ್ಲಿ, ಏಕತತ್ತಿಯಿಂದ ಸೋದರ ಅವಳಿಗಳಾಗುವುದು ಕಂಡ ವಿಷಯವಾದುದರಿಂದ ಮನುಷ್ಯನಲ್ಲಿಯೂ ಈ ರೀತಿಯ ಅವಳಿಗಳ ಜನನವೇಕಾಗಬಾರದೆಂಬ ಸಂಶಯುವು ಬರುತ್ತದೆ. ಇದರ ನಿವಾರಣೆಗಾಗಿ ಸ್ಪೀಟರ್ಸ್ ಎಂಬವರು ಮಾನವ ಭ್ರೂಣ ಸಂಶೋಧನೆ ನಡಸುತ್ತಿದ್ದಾಗ ಅವರಿಗೆ ವಿಭಜನಾವಸ್ಥೆಯಲ್ಲಿದ್ದ ಏಕತತ್ತಿಯು ದೊರಕಿದುದರಿಂದ ಇದೂ ಮೇಲಿನ ನಿರ್ಧಾರಕ್ಕೆ ಮತ್ತೊಂದು ಆಧಾರವಾಯಿತು.

ಎರಡು ಮಕ್ಕಳು ಒಂದರ ಪಡಿಯಚ್ಚು ಇನ್ನೊಂದು ಎಂದು ಹೇಳುವಷ್ಟು ಹೋಲಿಕೆ ಇರಬೇಕಾದರೆ ಅವುಗಳ ಬಾಹ್ಯಗುಣದ ಪ್ರತಿಬಿಂಬಕ್ಕೆ ಆಧಾರವಾದ ಪ್ರಜನನ ವಸ್ತುವೂ ಒಂದೇ ಆಗಿರಬೇಕು. ಮಕ್ಕಳು ಹುಟ್ಟುವ ಪ್ರಜನನ ವಸ್ತುವೆಂದರೆ ತತ್ತಿಪುರುಷಾಣುಗಳಿಂದ ಬಂದುದು. ಏಕರೂಪಿಗಳು ಏಕತತ್ತಿಯಿಂದ ಜನಿಸದ ಹೊರತು ಇವುಗಳಲ್ಲಿ ಕಾಣುವ ಅಸಾಧಾರಣ ಮತ್ತು ಅತ್ಯಾಶ್ಚರ್ಯಕರವಾದ ಹೋಲಿಕೆಗಳು ಬರಲಾರವು.








ಅವಳಿಗಳು ಕೈಗಳನ್ನು ಉಪಯೋಗಿಸುವ ರೀತಿ, ಅವುಗಳ ಹಲ್ಲುಗಳ ರಚನಾಕ್ರಮ, ಕೈಕಾಲುಗಳ ರೇಖಾಲಕ್ಷಣ, ಕೂದಲಿನ ಸ್ವಭಾವ ಇವುಗಳಲ್ಲೆಲ್ಲ ಎಷ್ಟರಮಟ್ಟಿನ ಹೋಲಿಕೆಯನ್ನು ಪಡೆದಿರಬಹುದೆಂದರೆ, ಅವು ಒಂದೇ ಕೇಂದ್ರದ ಎಡಬಲಗಳಾಗಿ ಬಂದಿರಬಹುದೆಂಬ ಸಂಶಯವುಂಟಾಗುತ್ತದೆ. ಎರಡು ಅವಳಿಗಳಲ್ಲಿ, ಒಂದು ಬಲಗೈಯನ್ನೂ ಇನ್ನೊಂದು ಎಡಗೈಯನ್ನೂ ಉಪಯೋಗಿಸುವ ರೂಢಿ ಇರಬಹುದು. ಒಂದರ ಎಡಗೈ ರೇಖೆ ಇನ್ನೊಂದರ ಬಲಗೈ ರೇಖೆಯ ಪ್ರತಿಬಿಂಬವಾಗಿರಬಹುದು. ಈ ಅಸಾಧಾರಣ ಸಾಮ್ಯವು ಸಯಾಮಿನ ಜಂಟಿ ಅವಳಿಗಳಲ್ಲಿ ಅತ್ಯಾಶ್ಚರ್ಯಕರವಾಗಿದೆ. ಒಂದು ಅವಳಿಗೆ ಎಡಗಡೆ ಹೃದಯವಿದ್ದರೆ ಇನ್ನೊಂದಕ್ಕೆ ಬಲಗಡೆ ಇದೆ. ಜಠರವೂ ಹೀಗೆಯೇ. ಹೀಗಿರುವಾಗ ಎರಡು ಅವಳಿಗಳು ಒಂದೇ ತತ್ತಿಯ ಪಾರ್ಶ್ವಗಳಾಗಿ ಬೆಳೆದಿರಬೇಕೆಂಬ ನಿರ್ಧಾರವು ಅನಿವಾರ್ಯವಾಗುತ್ತದೆ.


ಇವೆಲ್ಲಕ್ಕಿಂತ ಮಿಗಿಲಾದ ಆಧಾರವೆಂದರೆ ಮಾನವಭ್ರೂಣಗಳ ಬೆಳವಣಿಗೆಗೂ ಆರ್ಮ್ಮಡಿಲೋಭ್ರೂಣಗಳ ಬೆಳವಣಿಗೆಗೂ ಇರುವ ಅಸಾಧಾರಣ ಸಾಮ್ಯ. ಇವೆರಡರಲ್ಲಿಯೂ ಅಪರಾಯು ಕೋಶವಾಗುವ ರೀತಿ ಒಂದೇ. ನ್ಯೂಮನ್ ಮತ್ತು ಪ್ಯಾಟರ್‌ಸನ್ ಎಂಬವರು ಆರ್ಮ್ಮಡಿಲೋ ಮತ್ತು ಮಾನವಭ್ರೂಣಗಳ ಬೆಳವಣಿಗೆಯ ಸಂಶೋಧನೆಯಲ್ಲಿ ತೊಡಗಿ ಬಹು ತೂಕವಾದ ತೀರ್ಮಾನಕ್ಕೆ ಬಂದಿದ್ದಾರೆ.

ನ್ಯೂಮನ್ನರು ಸದ್ಯಕ್ಕೆ ಅವಳಿಗಳ ವಿಷಯದಲ್ಲಿ ಪ್ರಮಾಣಪುರುಷರಾಗಿದ್ದಾರೆ. ಅವರು ಅವಳಿಗಳ ಸಂಶೋಧನೆಗೆಂದೇ ಚಿಕಾಗೋನಗರದಲ್ಲಿ ಒಂದು ಪ್ರಯೋಗ ಶಾಲೆಯನ್ನು ತೆರೆದು ಅಲ್ಲಿ ಅನೇಕ ಸಂವತ್ಸರಗಳು ಶ್ರಮಿಸಿ ಸಂಶೋಧನೆ ನಡೆಸಿದ ಅನುಭವದಿಂದ ಯಮಳತೆಯು ಮಾನವನಲ್ಲಿಯೂ ಆರ್ಮ್ಮಡಿಲೋವಿನಲ್ಲಿಯಂತೆಯೇ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಇವರು, ಅವಳಿಗಳ ಮೇಲೆ ಬರೆಯುತ್ತ "ಮಾನವನಲ್ಲಿ ಅವಳಿಗಳಾಗುವುದು ಆರ್ಮ್ಮಡಿಲೋವನ್ನು ಹೋಲುತ್ತದೆ. ಆದರೆ ಅವುಗಳು ಬಹುಬೇಗನೆ ಬೇರ್ಪಡುವುದರಿಂದ ಅವುಗಳ ಅಂಗರಚನೆ ಸಂಪೂರ್ಣವಾಗಿ ಆಗುತ್ತದೆ. ಈ ವಿಯೋಗವು ತತ್ತಿಯ ಸೀಳುವಿಕೆಯ ಪರಮಾವಧಿಯಾದ ಎರಡು ಕೋಶಗಣರಚನೆಯ ಅವಸ್ಥೆಯಲ್ಲಿ ಆಗುತ್ತದೆ. ಒಳಕೋಶಗುಚ್ಛವು ಭ್ರೂಣಸ್ಥಾನಗಳ ವೈಪುಲ್ಯಸ್ಥಾನವಾಗಿರುವುದರಿಂದ ಇದು ವಿಭಜನೆಯಾದರೂ ಭ್ರೂಣಗಳ ರಚನೆ ಸಾಂಗವಾಗಿ ಸಾಗುತ್ತದೆ'' ಎಂದು ಹೇಳಿದ್ದಾರೆ. ಒಟ್ಟಿನ ಮೇಲೆ ಮನುಷ್ಯನಲ್ಲಿ ಅವಳಿಗಳಾಗುವ ರೀತಿ ಆರ್ಮ್ಮಡಿಲೋವಿನಲ್ಲಿರುವಂತೆಯೇ ಎಂದು ಹೇಳಬಹುದಾದರೂ ಇದೊಂದೇ ನಿರ್ದಿಷ್ಟವಾದ ಬಗೆಯೆನ್ನಲಾಗುವುದಿಲ್ಲ. ಮುಂದಿನ ವೈಜ್ಞಾನಿಕ ಪರಿಶೋಧನೆಗಳು ಈ ಯಮಳತಾಕ್ರಮದ ಸಮಸ್ಯೆಯ ಮೇಲೆ ಇನ್ನೂ ಹೆಚ್ಚಿನ ಬೆಳಕನ್ನು ಬೀರಬಹುದು.

ಮನುಷ್ಯರಲ್ಲಿ ಅವಳಿಗಳು

ಮಾನವ ವರ್ಗದಲ್ಲಿಯೂ ಏಕರೂಪಿ ಅವಳಿಗಳು, ಸೋದರ ಅವಳಿಗಳು ಎಂದು ಎರಡು ಬಗೆಯ ಅವಳಿಗಳಿವೆಯೆಂದು ಹಿಂದೆಯೇ ಹೇಳಿದೆ. ಇವುಗಳನ್ನು ಗುರುತಿಸುವುದು ಸುಲಭಸಾಧ್ಯವಲ್ಲ. ಏಕೆಂದರೆ, ಸಂಯುಕ್ತ ತತ್ತಿಯಿಂದ ಹುಟ್ಟುವ ಅವಳಿಗಳೂ ಆಕಸ್ಮಾತ್ತಾಗಿ ಏಕಲಿಂಗಿಗಳಾಗುವ ಸಂಭವವಿದ್ದೇ ಇದೆ. ಆಗ ಒಂದನ್ನೊಂದರಿಂದ ಗುರುತಿಸುವ ಬಗೆ ಹೇಗೆ? ವಿಜ್ಞಾನಿಗಳು ಈ ಸಮಸ್ಯೆಗೆ ಗಮನಕೊಟ್ಟು ಅನುಭವಸಿದ್ಧಮಾರ್ಗವನ್ನು ಅವಲಂಬಿಸಿದ್ದಾರೆ. ಗುರುತಿಸುವ ಮಾರ್ಗಗಳು ಎರಡು. ಒಂದು, ಹೋಲಿಕೆಯ ಮಾರ್ಗ ; ಇನ್ನೊಂದು "ಕಸ" ದ ಆಧಾರದಿಂದ ಹೇಳುವ ಮಾರ್ಗ. ಭ್ರೂಣವು ಬೆಳೆದು ಹೊರಬಿದ್ದ ಮೇಲೆ ಅದನ್ನು ರಕ್ಷಿಸುತ್ತಿದ್ದ ರಕ್ಷಾಕವಚವೂ ಆಹಾರ ಒದಗಲು ಏರ್ಪಟ್ಟಿದ್ದ ನಿಕಟಸಂಬಂಧವೂ ಬೇರೆಯಾಗಿ ಹೊರ ತಳ್ಳಲ್ಪಡುತ್ತವೆ. ಹೀಗೆ ಹೊರಕ್ಕೆ ತಳ್ಳಲ್ಪಟ್ಟ 'ಕಸ'ವು ಏಕರೂಪಿಯಾದಲ್ಲಿ ಒಂದೇ ಒಂದು ಬೀಳುವುದೆಂದು ಊಹಿಸುವುದು ಸಾಧುವಾದರೂ, ಅನೇಕ ಸಂದರ್ಭಗಳಲ್ಲಿ ಎರಡು 'ಕಸಗಳೂ' ಸೇರಿ ಒಂದೇ ಒಂದಾಗಿ ತೋರುವುದರಿಂದ ತಪ್ಪು ಅಭಿಪ್ರಾಯಕ್ಕೆ ಕಾರಣವಾಗುತ್ತದೆ. ಆದುದರಿಂದ ಸಾಮ್ಯದ ಪರೀಕ್ಷೆಯೇ ಹೆಚ್ಚು




ಚಿತ್ರ ೪. ಏಕರೂಪಿ ಅವಳಿಗಳು ಮತ್ತು ಸೋದರ ಅವಳಿಗಳು

ಈ ಚಿತ್ರದ ಎಡಗಡೆಯ ಶ್ರೇಣಿಯಲ್ಲಿ ಗರ್ಭಕಟ್ಟಿದ ಒಂದೇ ತತ್ತಿಯು ಎರಡು ಭಾಗವಾಗಿ ಸೀಳಿ, ಸೀಳುಗಳು ಭ್ರೂಣಾಧಾರ ಸ್ಥಾನಗಳನ್ನು ಪಡೆದು, ಭ್ರೂಣಗಳು ಬೆಳೆದು, ಒಂದೇ ಲಿಂಗದ (ಇಲ್ಲಿ ಗಂಡು), ಮತ್ತು ಒಂದೇ ರೂಪಿನ ಏಕರೂಪಿ ಅವಳಿಗಳಾಗುವುದನ್ನು ತೋರಿಸಿದೆ.

ಬಲಗಡೆಯ ಶ್ರೇಣಿಯಲ್ಲಿ ಎರಡು ಬೇರೆ ಬೇರೆ ತತ್ತಿಗಳು ಬೇರೆ ಬೇರೆ ಪುರುಷಾಣುಗಳಿಂದ ಗರ್ಭಕಟ್ಟಿ ಎರಡೂ, ಒಂದು ಹುಡುಗ ಒಂದು ಹುಡುಗಿ, ಎರಡು ಹುಡುಗಿಯರು, ಎರಡು ಹೋಲದ ಹುಡುಗಿಯರು, ಆಗಿ ಸೋದರ ಅವಳಿಗಳಾಗುವುದನ್ನು ತೋರಿಸಿದೆ.

ನಂಬಬಹುದಾದ ಮಾರ್ಗ. ಜೀವಿಗಳು ಒಂದನ್ನು ಇನ್ನೊಂದು ಹೋಲಬೇಕಾದರೆ ಅವು ಹುಟ್ಟುವ ಪ್ರಜನನ ವಸ್ತುವು ಒಂದೇ ಆಗಿರಬೇಕು, ಅಥವಾ ಪ್ರಜನನ ವಸ್ತುವಿನ ಸ್ವಲ್ಪ ಭಾಗವಾದರೂ ಹೋಲುವ ಪ್ರಾಣಿಯಿಂದ ಬಂದಿರಬೇಕು. ಈ ಬಾಹ್ಯ ಸಾಮ್ಯಗುಣಗಳ ಹೋಲಿಕೆಗೆ ಒಂದೇ ಪ್ರಜನನವಸ್ತು ಕಾರಣವಾದುದರಿಂದ ಏಕರೂಪಿಗಳು ಪ್ರತಿಯೊಂದು ಬಾಹ್ಯಗುಣದಲ್ಲಿಯೂ ಹೆಚ್ಚುಕಡಮೆ ಒಂದೇ. ಜೀವಿಯ ಗುಣಗಳೆಲ್ಲವೂ ಅನುವಂಶೀಯತೆಯೊಂದರಿಂದಲೇ ಪೂರ್ತಿಯಾಗಿ ಪ್ರಕಾಶ ಪಡುವುದಿಲ್ಲ. ಅವುಗಳು ಬೆಳೆಯುವ ಸನ್ನಿವೇಶದ ಕೈವಾಡವೂ ಮುಖ್ಯವಾದುದು. ಆದರೆ ಜೀವಿಗಳು ಹುಟ್ಟುವುದು ಬೇರೆ ಬೇರೆ ಪ್ರಜನನ ವಸ್ತುವಿನಿಂದಲೇ ಆದರೆ ಅವುಗಳು ಹೋಲುವ ಬಗೆ ಹೇಗೆ? ಹೋಲಿಕೆಯಲ್ಲಿ ಒಂದು ಶಿಶುವು ಇನ್ನೊಂದರ ಪ್ರತಿರೂಪವೇ ಎನ್ನುವಷ್ಟರ ಮಟ್ಟಿಗೆ ಇರುತ್ತವಲ್ಲದೆ, ಒಂದು ಇನ್ನೊಂದನ್ನು ಕಣ್ಣುಗುಡ್ಡೆ, ಕೂದಲು, ಚರ್ಮ, ಇವುಗಳ ಬಣ್ಣ, ಕೈಕಾಲು ಬೆರಳುಗಳ ಉದ್ದ, ಮೂಗಿನ ಆಕಾರ, ಕೆನ್ನೆಯ ಹೊಳಪು, ತಲೆಸುಳಿಯ ರೀತಿ, ಹಲ್ಲುಗಳ ರಚನೆ, ಮಚ್ಚೆಯ ಗುರುತು ಇವುಗಳಲ್ಲೆಲ್ಲಾ ಹೋಲುತ್ತವೆ.



ಚಿತ್ರ ೫. ಏಕರೂಪಿ ಅವಳಿಗಳಲ್ಲಿ ಕಂಡುಬರುವ ಎಡಬಲ ಗುಣಗಳು


ಈ ಚಿತ್ರದಲ್ಲಿ ಕಾಣುವ ಮಕ್ಕಳೆರಡೂ ಒಂದೇ ರೂಪದವಾಗಿಯೂ ಒಂದೇ ಲಿಂಗದವಾಗಿಯೂ ಇದ್ದರೂ, ಇವುಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಒಂದರ ತಲೆಯ ಸುಳಿ ಬಲಕ್ಕೆ ಸುರುಳಿಯಾಗಿದ್ದರೆ, ಇನ್ನೊಂದರದು ಎಡಕ್ಕೆ ಸುರುಳಿಯಾಗಿದೆ. ಒಂದಕ್ಕೆ ದೊಡ್ಡ ಕಣ್ಣು ಬಲಗಡೆ ಗಿದ್ದರೆ ಇನ್ನೊಂದಕ್ಕೆ ಎಡಗಡೆಗಿದೆ. ಕೆಟ್ಟಹಲ್ಲು, ಮಚ್ಚೆ, ಎಲ್ಲಾ ಹೀಗೆಯೇ. ಆದರೂ ಇವು ಏಕರೂಪಿಗಳು.


ಈ ಹೋಲಿಕೆಯು ಪೂರ್ತಿಯಾಗಿರದೆ, ಕೆಲವು ಅಂಶಗಳಲ್ಲಿ ಏಕರೂಪಿಗಳಲ್ಲೇ ಸ್ವಲ್ಪ ವ್ಯತ್ಯಾಸಗಳು ಕಂಡು ಬರುವುದು ಸ್ವಾಭಾವಿಕ. ಈ ವ್ಯತ್ಯಾಸಗಳಿಗೆ ಕಾರಣ ಇಲ್ಲದೆ ಇಲ್ಲ. ಬಹು ಜಾಗ್ರತೆಯಾಗಿ ಅವಳಿಗಳಾಗುವ ಭ್ರೂಣಗಳು ಬೇರ್ಪಟ್ಟರೆ


ಹೋಲಿಕೆ ಗಾಢವಾಗಿರುತ್ತದೆ. ಆದರೆ ತತ್ತ್ರಿಯ ಬೆಳವಣಿಗೆಯು ಸ್ವಲ್ಪ ಸಾಗಿ ಅದರ ಎಡಬಲ ಭಾಗಗಳು ನಿರ್ಧರಿಸಲ್ಪಟ್ಟ ಮೇಲೆ ಅವಳಿಗಳ ವಿಭಜನೆಯಾದರೆ ಹೋಲಿಕೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡು ಬರಬಹುದು. ಎಡಗಡೆಯ ಅವಳಿಯು ಬಲಗಡೆಯದಕ್ಕಿಂತ ಶೂಕದಲ್ಲಿ ಸ್ವಲ್ಪ ಹೆಚ್ಚಾಗಿ ಚೈತನ್ಯದಲ್ಲಿ ಬಲವಾಗಿರಬಹುದು. ಅಥವಾ ಬಲಗಡೆಯ ಅವಳಿಗೆ ಎಡಮುರಿಯ ತಲೆಸುಳಿಯಿದ್ದರೆ ಎಡಗಡೆಯದಕ್ಕೆ ಬಲಮುರಿಯ ಸುಳಿ ಇರಬಹುದು; ಎಡಗಡೆಯ ಅವಳಿಗೆ ಎಡಗಡೆ ಮಚ್ಚೆಯಿದ್ದರೆ ಇನ್ನೊಂದಕ್ಕೆ ಬಲಗಡೆ ಇರುತ್ತದೆ. ಹುಳುಕುಹಲ್ಲು ಒಂದು ಅವಳಿಗೆ ಎಡಗಡೆಗಿದ್ದರೆ ಇನ್ನೊಂದಕ್ಕೆ ಬಲಗಡೆ ಬಂದಿರುತ್ತದೆ. ಹೀಗೆ ಎಡಬಲಗಳ ವಿರುದ್ಧಗುಣಗಳು ಏಕರೂಪಿಗಳ ಗುಣವನ್ನೇ ಸೂಚಿಸುತ್ತವೆ.

ಇದುವರೆಗೂ ಎರಡು ಅವಳಿಗಳ ವಿಷಯವನ್ನೇ ವಿಮರ್ಶಿಸಿದ್ದಾಯಿತು. ಎರಡಕ್ಕಿಂತ ಹೆಚ್ಚಿನ ಸಂತಾನಗಳ ಜನನವೂ ಯಮಳತೆಯಿಂದಲೇ ಎಂದು ಹಿಂದೆ ಸೂಚಿಸಿದೆ. ಮೂರು ಅವಳಿಗಳು ಒಂದು ಬಾರಿಗೆ ಜನಿಸಿದಾಗ, ಮೂರೂ ಏಕರೂಪಿಗಳಾಗಬಹುದು. ಎರಡು ಏಕರೂಪಿಗಳು, ಒಂದು ಸೋದರ ಅವಳಿ, ಅಥವಾ ಮೂರೂ ಸೋದರ ಅವಳಿ ಆಗಬಹುದು. ಬದುಕಿ ಬಾಳಿ ಕೀರ್ತಿಗೆ ಬಂದಿರುವ ಇಂಥ ಏಕರೂಪಿಗಳಿಗೆ ಭೌತಶಾಸ್ತ್ರಜ್ಞನಾದ ರಾಬರ್ಟ್, ರಸಾಯನಶಾಸ್ತ್ರಜ್ಞನಾದ ವಾಲೇಸ್, ಪ್ರಾಣಿಶಾಸ್ತ್ರಜ್ಞನಾದ ಮಾಲ್‌ಕಂ ಬ್ರಾಂಡ್ ಎಂಬ ಅಮೇರಿಕಾ ದೇಶದ ಸೋದರ ವೈಜ್ಞಾನಿಕರು ಸುಪ್ರಸಿದ್ಧ ಉದಾಹರಣೆಗಳು. ನಾಲ್ಕು ಶಿಶುಗಳು ಜನಿಸಿದಾಗಲೂ ನಾಲ್ಕೂ ಸೋದರ ಅವಳಿಗಳಾಗಲಿ ಏಕರೂಪಿಗಳಾಗಲಿ ಆಗಬಹುದು; ಎರಡು ಏಕರೂಪಿಗಳು ಎರಡು ಸೋದರ ಅವಳಿಗಳು, ಮೂರು ಏಕರೂಪಿಗಳು ಒಂದು ಸೋದರ ಅವಳಿಯಾಗುವ ಸಂದರ್ಭಗಳೂ ಇವೆ. ಕಿಯಾದೇಶದ ರಾಬರ್ಟ್, ಮೋಸ, ಮೇರಿ, ಲಿಯೋಟ ಎಂಬವರ ಉದಾಹರಣೆ ಅಚ್ಚರಿಯದು. ಇವರಲ್ಲಿ ಇಬ್ಬರು ಹುಡುಗಿಯರು ಇನ್ನಿಬ್ಬರು ಹುಡುಗರು. ಇಬ್ಬರು ಹುಡುಗಿಯರು ಏಕರೂಪಿಗಳು; ಉಳಿದವರು ಸೋದರ ಅವಳಿಗಳು.

೧೯೩೪ನೆಯ ಸಂವತ್ಸರದ ಒಂದು ದಿನವು ವಿಜ್ಞಾನದ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಲರ್ಹವಾದದ್ದು. ಆ ದಿನ ರಾತ್ರಿ ಏಕಕಾಲದಲ್ಲಿ ಐದು ಶಿಶುಗಳು ವಿಜ್ಞಾನದೇವಿಯ ಉಡಿಗೆ ಬಿದ್ದುವು. ಈ ರೀತಿಯ ಅತ್ಯಾಶ್ಚರ್ಯ ಪ್ರಸಂಗ ಹಿಂದೆ ಎಂದೂ ನಡೆದಿರಲಿಲ್ಲವೆಂದಲ್ಲ. ೫೦೦ ವರ್ಷಗಳಲ್ಲಿ ೬ ಸಾರಿ ಐದು ಅವಳಿಗಳ ಜನನವಾದರೂ ಭೂಲೋಕವು ಅವುಗಳ ಬಾಳ್ವಿಗೆ ತಕ್ಕುದಾಗಿರಲಿಲ್ಲ. ಹುಟ್ಟಿದ ಮಕ್ಕಳೆಲ್ಲವೂ ಪರಲೋಕ ಸೇರಿ ವಿಜ್ಞಾನಿಗಳೆಲ್ಲ ಹತಾಶರಾದರು. ಈಗ ವಿಜ್ಞಾನಿಗಳ







ಚಿತ್ರ ೬. ಮೂರು ಮತ್ತು ಐದು ಅವಳಿಗಳಾಗುವ ಬಗೆ

ಹಿಂದೆ, ಮೇಲಿನ ಎರಡು ಚಿತ್ರಗಳಲ್ಲಿ ಮೂರು ಅವಳಿಗಳಾಗುವ ಬಗೆಯನ್ನು ತೋರಿಸಿದೆ. ಮೊದಲನೆಯದರಲ್ಲಿರುವಂತೆ, ಗರ್ಭಕಟ್ಟಿದ ಒಂದೇ ತತ್ತಿಯು ಎರಡು ಭಾಗಗಳಾಗಿ, ಒಂದು ಭಾಗ ಒಂದು ಭ್ರೂಣವನ್ನೂ ಇನ್ನೊಂದು ಭಾಗ ಒಡೆದು ಎರಡು ಭ್ರೂಣಗಳನ್ನೂ ಪಡೆಯಬಹುದು. ಎರಡನೆಯದರಲ್ಲಿರುವಂತೆ, ಎರಡು ತತ್ತಿಗಳು ಗರ್ಭಕಟ್ಟಿ, ಒಂದು ತತ್ತಿಯು ಒಂದು ಭ್ರೂಣವನ್ನೂ, ಇನ್ನೊಂದು ತತ್ತಿಯು ವಿಭಾಗವಾಗಿ ಎರಡು ಭ್ರೂಣಗಳನ್ನೂ ಪಡೆಯಬಹುದು.

ಕೆಳಗಿನ ಚಿತ್ರವು ಸುಪ್ರಸಿದ್ಧ "ಪಂಚಶಿಶು" ಗಳಾದ ಬಗೆಯನ್ನು ವಿವರಿಸುತ್ತದೆ. ಇಲ್ಲಿ ಒಂದು ತತ್ತಿ ಗರ್ಭದಲ್ಲಿ ಎರಡು ಭಾಗಗಳಾಗಿ, ಈ ಎರಡು ಭಾಗಗಳೂ ಒಡೆದು ನಾಲ್ಕಾಗಿ, ಆ ನಾಲ್ಕರಲ್ಲಿ ಮೂರು ಭಾಗಗಳು ಮೂರು ಭ್ರೂಣಗಳನ್ನೂ, ನಾಲ್ಕನೆಯ ಭಾಗ ಒಡೆದು ಮತ್ತೆರಡು ಭ್ರೂಣಗಳನ್ನೂ ಪಡೆದಿರಬಹುದೆಂದು ಊಹಿಸಲಾಗಿದೆ.

ಸುಯೋಗದಿಂದ "ಪಂಚಶಿಶುಗಳು" ಬದುಕಿ ಬಾಳುತ್ತಿದ್ದಾರೆ. ಇವೆಲ್ಲವೂ ಸೋದರ ಅವಳಿಗಳಾಗದೆ ಏಕರೂಪಿಗಳಾಗಿ ಸೋಜಿಗದ ಬುಗ್ಗೆಗೆ ಸ್ವರ್ಣದ ಬೆಳಕನ್ನು ಚೆಲ್ಲಿದಂತಾಗಿದೆ. ಇವುಗಳಲ್ಲಿ ಅನುಪಮವಾದ ಹೋಲಿಕೆಯಿದ್ದರೂ, ಗಾಢವಾದ ವ್ಯತ್ಯಾಸಗಳೂ ಇವೆ. ಈ ವ್ಯತ್ಯಾಸಗಳ ದೆಸೆಯಿಂದಲೇ ಅವುಗಳ ಜನನರಹಸ್ಯದ ಅರಿವಿಗೆ ಸಹಾಯವಾದುದು. ಈ ಸುಪ್ರಸಿದ್ಧ ಶಿಶುಗಳ ಹೆಸರು ಯೋನೆ, ಅನೆಟಿ, ಸೆಸಿಲಿ, ಎಮಿಲಿ ಮತ್ತು ಮೇರಿ ಎಂದು. ಎಲ್ಲವಕ್ಕೂ ಎರಡು ಮತ್ತು ಮೂರನೆಯ ಬೆರಳುಗಳ ನಡುವೆ ಜಲಪಾದದಂಥ ಪೊರೆ ಇದೆ. ಕಣ್ಣುಗಳು, ವರ್ಣ, ಕಣ್ಣುರೆಪ್ಪೆಯ ರೀತಿ ಒಂದೇ; ಕೂದಲು, ಕೆಂಪುಮಿಶ್ರವಾದ ಕಂದುಬಣ್ಣದ ಗುಂಗುರು; ವರ್ಣ, ಗೌರವರ್ಣ. ಎಲ್ಲರೂ ಹುಡುಗಿಯರು. ಎಲ್ಲ ವಿಧದಲ್ಲಿಯೂ ಒಂದು ಇನ್ನೊಂದರಂತೆ ಇದ್ದರೂ ಇಬ್ಬರು ಮಾತ್ರ ಇತರರಿಗಿಂತ ಬಹು ಅಗಾಧವಾಗಿ ಹೋಲುವರು. ಇವರು ಮೇರಿ ಮತ್ತು ಎಮಿಲಿ. ಇವರೆಲ್ಲರೂ ಏಕರೂಪಿಗಳೆನ್ನಲಡ್ಡಿಯಿಲ್ಲ. ಎಮಿಲಿ ಮತ್ತು ಮೇರಿಯರ ತೂಕವು ಉಳಿದವರಿಗಿಂತ ಸ್ವಲ್ಪ ಕಡಮೆ; ತಲೆಯ ಸುಳಿಯು ಒಬ್ಬಳಲ್ಲಿ ಎಡಮುಖನಾಗಿ ಸುತ್ತಿದ್ದರೆ ಇನ್ನೊಬ್ಬಳಲ್ಲಿಯೂ ಎಡಮುಖನಾಗಿ ಸುತ್ತಿಕೊಂಡಿದೆ. ದೃಷ್ಟಿತೀಕ್ಷ್ಣತೆ ಒಂದೇ. ಇಬ್ಬರೂ ಮೂರನೆಯ ವಯಸ್ಸಿನಲ್ಲಿ ಸ್ವಲ್ಪ ಕಾಯಿಲೆ ಅನುಭವಿಸಿದರು; ಇವರಿಬ್ಬರೂ ಏನನ್ನಾದರೂ ಹಿಡಿಯುವ ರೀತಿಯೇ ಬೇರೆ. ಹೀಗೆ ಇವರಿಬ್ಬರಿಗೂ ಇರುವ ಈ ಹತ್ತಿರ ಸಂಬಂಧಕ್ಕೆ ಕಾರಣವೇನು? ಇದಕ್ಕೆ ಉತ್ತರವೇ ಅವರಾದ ವಿಧಾನವನ್ನು ವಿವರಿಸುತ್ತದೆ. ಒಂದೇ ಒಂದು ತತ್ತಿಯಿಂದ ಐವರೂ ಜನ್ಮತಾಳಿರಬೇಕಾದರೆ, ಏಕತತ್ತಿಯು ಐದು ವಿಭಾಗ ಹೇಗೆ ಆಯಿತು? ಇದಕ್ಕೆ ಅನೇಕ ಊಹೆಗಳು ಸರಿದೋರುತ್ತವೆ,—

(೧) ಒಂದು ತತ್ತಿಯು ಎರಡು ಹೋಳುಗಳಾದಾಗ ಒಂದರ್ಧ ಮತ್ತೆ ವಿಭಾಗವಾಗದೆ, ಉಳಿದರ್ಧ ಎರಡುಬಾರಿ ವಿಭಾಗವಾಗಿ ನಾಲ್ಕು ಹೋಳಾಗಿ


ಈ ನಾಲ್ಕು ಹೋಳೂ, ಉಳಿದ ಅರ್ಧ ಹೋಳೂ ಸೇರಿ ಐದು ಶಿಶುಗಳಾಗಿರಬಹುದು.

(೨) ಎರಡು ಹೋಳುಗಳೂ ಎರಡುಸಾರಿ ಪುನರ್ವಿಭಜನೆಯಿಂದ ನಾಲ್ಕಾಗಿ ಯಾವುದಾದರೊಂದು ಭಾಗವು ಮೂರನೇ ಸಾರಿ ವಿಭಜಿಸಿ ಎರಡಾಗಿ ಒಟ್ಟು ಐದು ಶಿಶುಗಳಾಗಿರಬಹುದೇ? ಈ ಊಹೆಯೇ ಎಲ್ಲದಕ್ಕಿಂತ ಸಂಭವವಾಗಿರಬಹುದಾದ ಮಾರ್ಗ. ಏಕೆಂದರೆ ಐವರೂ ಒಬ್ಬರನ್ನೊಬ್ಬರು ಹೋಲಿದರೂ ಮೇರಿ ಎಮಿಲಿಯರ ಗಾಢವಾದ ಹೋಲಿಕೆಗೆ ಅವರ ಒಂದೇ ಹೋಳಿನ ಜನನವೇ ಕಾರಣವೆನ್ನಲಡ್ಡಿಯಿಲ್ಲ. ಇವರಿಬ್ಬರು ಹುಟ್ಟಿದ ಭ್ರೂಣಗಳು ಬೇರ್ಪಟ್ಟಿದ್ದು ಸ್ವಲ್ಪಕಾಲವಾದ ಮೇಲೆ ಹಿಂದೆ ಹೇಳಿದಂತೆ ತತ್ತಿಯ ಎಡಬಲ ಪಾರ್ಶ್ವಗಳ ನಿರ್ಧಾರವಾದ ಮೇಲೆ, ಆದುದರಿಂದಲೇ ಅವರಿಬ್ಬರಲ್ಲಿ ವಿರುದ್ಧ ಗುಣಗಳಾದ, ತಲೆ ಸುರುಳಿಯ ರೀತಿ, ಕೈಯನ್ನು ಉಪಯೋಗಿಸುವುದರಲ್ಲಿ ವ್ಯತ್ಯಾಸ, ಕಾಣುವುದು. ಇವರಿಗಿನ್ನೂ ಏಳು ವರ್ಷ; ಇವರು ಎಲ್ಲರಿಗಿಂತ ಹೆಚ್ಚು ದೀರ್ಘಾಯುಗಳಾಗಿ ಸನ್ನಿವೇಶಗಳ ಮತ್ತು ಅನುವಂಶೀಯತೆಯ ಪರಸ್ಪರ ಕೈವಾಡದ ಸಮಸ್ಯಾ ಪರಿಹಾರದಲ್ಲಿ ಸಹಾಯವಾಗಲೆಂಬುದು ಎಲ್ಲರ ಹಾರೈಕೆ. ಇದಕ್ಕಿಂತ ಹಿರಿಯಾಸೆಯೆಂದರೆ ಇಂಥ ವಿಚಿತ್ರ ಜನನವನ್ನು ಪ್ರಕೃತಿ ದೇವಿಯು ಮತ್ತೊಮ್ಮೆ ಕರುಣಿಸಲಾರಳೇ ಎಂಬುದು.

ಅಮಾನುಷ ಅವಳಿಗಳು—ಅವಳಿಗಳ ವೈಚಿತ್ರ್ಯ

ಅವಳಿಗಳು ಸಾಮಾನ್ಯ ಸಂದರ್ಭಗಳಲ್ಲೆಲ್ಲ ಬೇರೆ ಬೇರೆಯಾಗಿ ಜನಿಸುತ್ತವೆ. ಅನೇಕ ವೇಳೆ ಜನಿಸುವ ಶಿಶುಗಳಲ್ಲಿ ಪರಸ್ಪರ ಶಾರೀರಕ ಸಂಬಂಧವು ಕಂಡುಬರುವುದು. ಈ ರೀತಿಯ ಸಂಬಂಧವು ಒಂದು ವೇಳೆ ಹೆಚ್ಚಾಗಿರಬಹುದು, ಇನ್ನೊಂದು ವೇಳೆ ಕಡಮೆಯಾಗಿರಬಹುದು. ಒಂದು ಸಂದರ್ಭದಲ್ಲಿ ಶರೀರದ ಯಾವುದೋ ಒಂದು ಅವಯವದಲ್ಲಿ ಮಾತ್ರ ಒಂದಕ್ಕೊಂದರ ಸಂಬಂಧ ಕಲ್ಪಿತವಾಗಿರಬಹುದು, ಬೇರೆ ಸಂದರ್ಭಗಳಲ್ಲಿ ಬೇರೆ ಒಂದು ಅವಯವ ಅಥವಾ ಎಲ್ಲ ಅವಯವಗಳಲ್ಲಿಯೂ ಹೆಚ್ಚಾದ ಸಂಬಂಧವಿರಬಹುದು. ಒಂದರಲ್ಲಿ ಎರಡು ಅವಳಿಗಳಿಂದಲೂ ಒಂದೇ ಒಂದು ಮೂತ್ರಜನಕಾಂಗವಿರಬಹುದು, ಮತ್ತೊಂದರಲ್ಲಿ ಎರಡರಿಂದಲೂ ಒಂದೇ ಹೃದಯವಿರಬಹುದು. ಇಂಥ ಸೃಷ್ಟಿ ವೈಚಿತ್ರ್ಯಗಳ ಗೊಂದಲ ಸಾಮಾನ್ಯವಲ್ಲದಿದ್ದರೂ, ಎಲ್ಲ ಜನಗಳಲ್ಲಿಯೂ ಇವು ಅಪರೂಪವಾಗಿ ಕಂಡುಬರುತ್ತವೆ. ಹೀಗೆಯೇ ಯೋಚಿಸಿ ನೋಡಿದರೆ, ರಾಮಾಯಣದ ದಶಕಂಠನೆಂಬ ವ್ಯಕ್ತಿ ಯಾವುದೋ ಒಂದು ತೆರದ ಯಮಳತೆಯ ವಿಚಿತ್ರ ರೂಪವೇಕಿರಬಾರದೆಂಬ ಶಂಕೆ ಅಂಕುರಿಸುವುದಿಲ್ಲವೇ?


ಈ ವ್ಯಕ್ತಿ ಒಂದೇ ಗರ್ಭ ಕಟ್ಟಿದ ತತ್ತಿಯ ವಿಭಜನೆಯಿಂದಲೋ ಅಥವಾ ಅನೇಕ ತತ್ತಿಗಳ ಸಂಯೋಜನೆಯಿಂದಲೋ ಉದ್ಭವಿಸಿ ಏಕೆ ದಶಶಿರ, ಆದರೆ ಏಕ ದೇಹಿ, ಆಗಿರಬಾರದು ?



ಚಿತ್ರ ೭. ೩ ಅಮಾನುಷ ಅವಳಿಗಳು (i)


ಅವಳಿಗಳಲ್ಲಿ ಪರಸ್ಪರ ಸಂಬಂಧವು ಸೊಂಟದ ಭಾಗದಲ್ಲಿ ಪಾರ್ಶ್ವಮುಖನಾಗಿರಬಹುದು, ಕತ್ತಿನ ಭಾಗದಲ್ಲಿರಬಹುದು, ಬೆನ್ನ ಮುಖನಾಗಿರಬಹುದು. ಹೀಗೆ ಅವಳಿಗಳು ಅಂಟಿಕೊಳ್ಳಲು ಕಾರಣ ಬಹುಶಃ ಗರ್ಭಕೋಶದಲ್ಲಿ ಸ್ಥಳಾಭಾವವೇ ಎಂದು ಊಹಿಸಬಹುದು. ಕೆಲವು ವೇಳೆ ಸಂಬಂಧವು ಸೊಂಟದ ಭಾಗದಲ್ಲಿ ಅತಿ ಸೂಕ್ಷ್ಮವಾಗಿದ್ದು ಶಸ್ತ್ರಪ್ರಯೋಗದಿಂದ ಅವಳಿಗಳು ಬೇರ್ಪಡಿಸಲ್ಪಟ್ಟು ಅವು

ಬದುಕಲೂ ಬಹುದು. ಅವಳಿಗಳೆರಡರಲ್ಲಿ ಒಂದು ಅತಿ ಚಿಕ್ಕದಾಗಿದ್ದು ಇನ್ನೊಂದಕ್ಕೆ ಅಂಟಿಕೊಂಡಿರುವಾಗ ಅವು ಕೇವಲ ಆಶ್ರಿತ ಜೀವಿಯಂತೆ ತೋರುವುದು. ಇಂಥ



ಚಿತ್ರ ೭. b ಅಮಾನುಷ ಅವಳಿಗಳು (ii)

ಪುಟ್ಟದಾಗಿಯೂ ಕೆಲಕಾಲ ಬೆಳವಣಿಗೆಯ ಚಿಹ್ನೆಯನ್ನೇ ತೋರದೆಯೂ ಇರುವ ಆಶ್ರಿತ ಯಮಳಭ್ರೂಣವು ಕೆಲವು ಕಾಲವಾದ ಮೇಲೆ ಬೆಳವಣಿಗೆಯನ್ನು ಹೊಂದಿ ಸಾಧಾರಣ ಶಿಶುವಿನಂತೆ ಆಕಾರವನ್ನೂ ಅಂಗಾಂಗಗಳನ್ನೂ ಪಡೆಯುಬಹುದು. ನ್ಯೂಮನ್ನರು ಬ್ಲಂಡೆಲ್ ಎಂಬ ಹುಡುಗನ ಮೇಲೆ ಪ್ರಯೋಗ ನಡೆಸುತ್ತಿರುವಲ್ಲಿ ಇಂಥದೊಂದು ವಿಚಿತ್ರವನ್ನು ಕಂಡುಹಿಡಿದರು. ಈ ಹುಡುಗನು ಚಿಕ್ಕವನಾಗಿದ್ದಾಗ ಅವನ ಹೊಟ್ಟೆಯಲ್ಲಿ ಚೀಲದೋಪಾದಿಯಲ್ಲಿದ್ದ ಒಂದು ಗಂಟು ಇದ್ದು ಇದಕ್ಕೂ







ಚಿತ್ರ ೭. ೮ ಅಮಾನುಷ ಅವಳಿಗಳು (iii)

ಅವನ ಹೊಕ್ಕುಳಿಗೂ ಸಂಬಂಧವಿದ್ದಿತು. ಈ ಗಂಟು ಒಂದು ಭ್ರೂಣವೆಂದು ಎಕ್ಸ್‌ರೇ ಮೂಲಕ ಗೊತ್ತಾಯಿತು. ಅದು ಮೂರು ನಾಲ್ಕು ವರ್ಷ ಹಾಗೇ ಇದ್ದು


ಅನಂತರ ಬೆಳೆಯಲು ಮೊದಲಾಗಿ ೮–೧೦ ವರ್ಷಗಳಲ್ಲಿ ಹುಡುಗನ ಹೊಟ್ಟೆಯನ್ನೆಲ್ಲ ಆವರಿಸಿಕೊಂಡು ಅವನ ಮರಣಕ್ಕೆ ಕಾರಣವಾಯಿತು. ಕುರಿ, ಮೇಕೆ, ಹಸು ಇವುಗಳಲ್ಲಿ ನಾಲ್ಕು ಜತೆ ಕಾಲು ಒಂದೇ ತಲೆ, ಎರಡು ತಲೆ ನಾಲ್ಕು ಕಾಲು, ತಲೆಯ ಮಧ್ಯದಲ್ಲಿರುವ ಕಣ್ಣು, ಕೆಳದವಡೆಯೊಂದೇ ಇರುವ ವಿಕಾರ ಮುಂತಾದ ವೈಚಿತ್ರ್ಯಗಳಿಗೇನೂ ಕಡಮೆಯಿಲ್ಲ.

ದನಗಳಲ್ಲಿ ಗೊಡ್ಡು ಆಗುವ ರೀತಿ ಅವಳಿಗಳ ಪರಸ್ಪರ ಸಂಬಂಧ ವೈಚಿತ್ರ್ಯದಿಂದಲೇ. ಈ ಗೊಡ್ಡುಗಳಲ್ಲಿ ಹೆಣ್ಣಿನ ಬಾಹ್ಯಗುಣಗಳಿದ್ದರೂ ಅವು ಹಾಲನ್ನು ಕರೆಯಲಾರವು, ಕರುಗಳನ್ನು ಈನಲಾರವು. ಇಷ್ಟೇ ಅಲ್ಲದೆ ಕೆಲವು ಹೆಣ್ಣಿನ ಗುಣಗಳ ಜೊತೆಗೆ ಗಂಡಿನ ಗುಣಗಳೂ ಇರುತ್ತವೆ. ಇಂಥ ಸಂದರ್ಭದಲ್ಲಿ ಎರಡು ಅವಳಿ ಭ್ರೂಣಗಳಿಗೂ ತಾಯಿಗೆ ಸಂಬಂಧ ಕಲ್ಪಿಸುವ ಜರಾಯುವಿನ ಮೂಲಕ ಸಂಬಂಧವಿದ್ದು ಒಂದರಿಂದ ಇನ್ನೊಂದಕ್ಕೆ ರಕ್ತವು ಪ್ರವಿಸಬಲ್ಲುದು. ಈ ಸಂದರ್ಭದಲ್ಲಿ ಅವಳಿಗಳೆರಡೂ ಒಂದೇ ಲಿಂಗದವಾಗಿದ್ದರೆ ತೊಂದರೆಯೇನೂ ಇಲ್ಲ. ಆದರೆ ಒಂದು ಹೆಣ್ಣು ಒಂದು ಗಂಡು ಆಗಿರುವಾಗ ಗಂಡಿನ ಪ್ರಜನನಾಂಗಗಳು ಹೆಣ್ಣಿನ ಪ್ರಜನನಾಂಗಗಳಿಗಿಂತ ಮೊದಲು ಬಲಿಯುವುದರಿಂದಲೂ, ಗಂಡಿನಿಂದ ಉತ್ಪತ್ತಿಯಾದ ಓಜೋದ್ರವವು ಹೆಣ್ಣು ಭ್ರೂಣದಲ್ಲಿಯೂ ಪ್ರವಿಸಿ ಭ್ರೂಣದ ಹೆಣ್ತನಕ್ಕೆ ಧಕ್ಕೆ ತಂದು ಗಂಡಿನ ಪ್ರಭಾವವನ್ನು ಬೀರಿ ಹೆಣ್ಣಿನಲ್ಲಿ ಗಂಡು ಗುಣಗಳ ಪ್ರಕಾಶಕ್ಕೆ ಕಾರಣವಾಗುತ್ತದಲ್ಲದೆ ಹೆಣ್ಣು ಗುಣಗಳಲ್ಲಿ ಕೆಲವನ್ನು ಮರೆಮಾಜುತ್ತದೆ. ಮುಂದಿನ ಪುಟದಲ್ಲಿ ಕೊಟ್ಟಿರುವ ಚಿತ್ರದಿಂದ ಗೊಡ್ಡುಗಳಲ್ಲಿ ಆಗುವ ಓಜೋರಸದ ಪ್ರಭಾವವನ್ನರಿಯಬಹುದು.

ಯಮಳತೆಯು ಅನುವಂಶೀಯವೆ?

ಯಮಳತೆಯಿಂದ ಪ್ರಯೋಜನವೇನಾದರೂ ಆದಲ್ಲಿ ಅಕಸ್ಮಾತ್ ಜನಿಸುವ ಅವಳಿಗಳಿಂದಾಗುವುದಿಲ್ಲ. ಈ ಗುಣವು ವಂಶಪಾರಂಪರ್ಯವಾಗಿ ಬಂದಲ್ಲಿ ಬಹು ಉಪಯೋಗಕಾರಿಯಾಗುತ್ತದೆ. ಹಾಲು ಬೆಣ್ಣೆ ಹೋರಿಗರುಗಳನ್ನು ಕೊಡುವ 'ಕಾಮಧೇನು' ಎರಡು ಕರುಗಳನ್ನು ಒಮ್ಮೆಗೆ ಕೊಟ್ಟಿತೆಂದರೆ ಬಡರೈತನು ಎಷ್ಟು ಹಿಗ್ಗುವನು! ಹೀಗೆ ಹಠಾತ್ತಾಗಿ ಅವಳಿಗಳನ್ನು ಕೊಟ್ಟ ಹಸುವಿನ ಸಂತತಿಯೆಲ್ಲ ಅವಳಿಗಳನ್ನು ಈನುತ್ತ ಬಂದರೆ ಎಷ್ಟು ಪ್ರಯೋಜನವಾಗುವುದು! ಆದುದರಿಂದ ಯಮಳತೆಯು ಅನುವಂಶೀಯಗುಣವೇ ಎಂದು ವಿಮರ್ಶಿಸಬೇಕು.

ಆರ್ಮೊಡಿಲೋವಿನಲ್ಲಿ ಈ ಗುಣವು ಅನುವಂಶೀಯ. ಇದರ ತತ್ತಿಯಲ್ಲಿ ಅವಳಿಗಳನ್ನಾಗಿ ವಿಭಾಗಿಸುವ ಶಕ್ತಿಯಿದೆ. ಈ ಶಕ್ತಿಯು ಯಾವುದೋ ಒಂದು



ಚಿತ್ರ ೮. ದನಗಳಲ್ಲಿ ಗೊಡ್ಡುಗಳ ಜನನವನ್ನು ವಿವರಿಸುವ ಚಿತ್ರ

ಎಡಗಡೆಗೆ ಇರುವುದು ಗಂಡು ; ಬಲಗಡೆಗೆ ಇರುವುದು ಹೆಣ್ಣು. ಎರಡಕ್ಕೂ ಶುದ್ಧ ಮತ್ತು ಮಲಿನ ರಕ್ತನಾಳಗಳ ಮೂಲಕ ಸಂಬಂಧವಿದೆ. ಹೆಣ್ಣಿನ ಮೊಲೆಗಳು ದೂರದೂರವಾಗಿವೆ. ಗಂಡಿನವು ಹತ್ತಿರ ಹತ್ತಿರ ಇವೆ.

ಗುಣಧಾರಿಯಲ್ಲಿ ಅಡಗಿದ್ದು ಈ ಗುಣಧಾರಿಯು ತತ್ತಿಯಲ್ಲಿರುವುದರಿಂದಲೇ ತತ್ತಿಯನ್ನು ಎರಡು ಕೋಶಗುಚ್ಛಗಳಾಗುವ ಅವಸ್ಥೆಯಲ್ಲಿ ವಿಭಜನೆಯಾಗುವಂತೆ ಮಾಡುತ್ತದೆ. ಯೂಪ್ರೆಕ್ಟಿಸ್ ಎಂಬ ಪ್ರಾಣಿಯಲ್ಲಿ ಯಾವುದೋ ಗುಣಧಾರಿಯ ಪ್ರೇರಣೆಯಿಂದ ಒಂದೇ ಋತುವಿನಲ್ಲಿ ಬೇರೆ ಬೇರೆ ಅಂಡಾಶಯದಿಂದ ಎರಡು ತತ್ತಿಗಳು ಕಿತ್ತುಬಂದು ಎರಡೂ ಗರ್ಭಕಟ್ಟಿ ಗರ್ಭಕೋಶದಲ್ಲಿ ಬೆಳೆದು ಭ್ರೂಣವಾಗುತ್ತವೆ.


ಮೆಲುಕು ಹಾಕುವ ಪ್ರಾಣಿಗಳಲ್ಲಿ ಈ ಗುಣವು ಅನುವಂಶೀಯವೆಂದು ಹೇಳಲು ಆಧಾರಗಳಿವೆ. ಬೆಲ್ ಎಂಬ ವೈಜ್ಞಾನಿಕನು ಅವಳಿಗಳನ್ನು ಹಾಕಿದ ಕುರಿಗಳನ್ನು ಪರೀಕ್ಷಿಸಲು ಅವಕ್ಕೆ ಸ್ವಾಭಾವಿಕ ಮೊಲೆಗಳ ಜೊತೆಗೆ ಮೋಟು ಮೊಲೆಗಳಿದ್ದುವು. ಈ ಮೋಟು ಮೊಲೆಗಳಿಗೂ ಯಮಳತೆಗೂ ಸಂಬಂಧವೇನಾದರೂ ಇದೆಯೇ ಎಂದು ಮೋಟು ಮೊಲೆಯುಳ್ಳ ಕುರಿಗಳನ್ನು ವಿಂಗಡಿಸಲು ಅವು ಅವಳಿಗಳನ್ನು ಕೊಡಲಿಲ್ಲ. ಆದರೆ ಅವನು ಧೈರ್ಯಗುಂದದೆ ಅವಳಿಗಳನ್ನು ಹಾಕಿದ ತಾಯಿಯರನ್ನು ಬೇರ್ಪಡಿಸಿ ಅವಳಿಗಳಿಂದ ಅವಳಿಯಾಗಿ ಹುಟ್ಟಿದ ಗಂಡಿನೊಡನೆ ಮಿಶ್ರ ಸಂತಾನೋತ್ಪತ್ತಿ ಮಾಡಿಸಲು ಉಳಿದ ಮರಿಗಳೆಲ್ಲ ಅವಳಿಗಳನ್ನು ಕೊಟ್ಟವು. ಇವುಗಳಿಂದ ನೋವಸ್ಕೋಷಿಯಾದಲ್ಲಿ ಬರಿಯ ಅವಳಿಗಳನ್ನೇ ಕೊಡುವ ಕುರಿಯ ಮಂದೆ ಸ್ಥಾಪಿತವಾಯಿತು. ಹಸುಗಳಲ್ಲಿ ಯಮಳತೆಯ ಅನುವಂಶೀಯತೆ ಅಷ್ಟು ಆಧಾರಪೂರಿತವಾಗಿ ತಿಳಿಯದಿದ್ದರೂ ಅನುವಂಶೀಯವೆಂದು ಹೇಳಬಹುದಾದ ಉದಾಹರಣೆಗಳು ಹಲವಿವೆ. ಯಮಳತೆಯು ಹಲವು ವೇಳೆ ಸನ್ನಿವೇಶಗಳ ಪ್ರಭಾವದಿಂದ ಆಗಬಹುದು. ಹೋರಿಯು ಹಸುವಿನೊಡನೆ ಸೇರುವಾಗ, ಹಸುವು ಪುಷ್ಟಿಯಾಗಿದ್ದರೆ ಅವಳಿಗಳು ಜನಿಸಿವೆ; ವಸಂತಕಾದಲ್ಲಿ ಹುಲ್ಲು ಹೆಚ್ಚು ಇರುವಾಗ ಅವಳಿಗಳು ಜನಿಸುತ್ತವೆಂದೂ ತಿಳಿದಿದೆ. ಆದರೂ ಅವಳಿಗುಣವು ಅನುವಂಶೀಯವೆಂದೂ ಈ ಗುಣಧಾರಿಗಳನ್ನು ತಳೆದ ತಂದೆತಾಯಿಗಳನ್ನು ಬೇರ್ಪಡಿಸಿ ಅವರಲ್ಲೇ ಸಂತಾನ ಬೆಳೆಸುವುದರಿಂದ ಅವಳಿಗಳ ವಂಶವನ್ನು ಸ್ಥಾಪಿಸಬಹುದೆಂದೂ ಒಂದು ಆಶೆಯುಂಟಾಗುತ್ತದೆ.

ಮನುಷ್ಯರಲ್ಲಿ ಅವಳಿಗಳ ಜನನವು ಕೆಲವು ವಂಶಗಳಲ್ಲಿ ಮಾತ್ರ ಕಂಡುಬರುವುದರಿಂದಲೂ, ಒಂದು ಮನೆತನದಲ್ಲಿ ಹಿಂದೆ ಯಾರಾದರೂ ಅವಳಿಗಳಿದ್ದರೇ ಈ ತೆರದ ಜನನಗಳಾಗುತ್ತವೆಂದು ತಿಳಿದಿರುವುದರಿಂದಲೂ, ಯಮಳತೆಯು ಮಾನವ ವರ್ಗದಲ್ಲಿ ಅನುವಂಶೀಯವೆಂದು ಹೇಳಬಹುದು. ೫೦ ಜತೆ ಅವಳಿಗಳಿಗೆ ೧೭೧ ಜನ ಒಂಟಿಯಾಗಿ ಒಡಹುಟ್ಟಿದ ಸೋದರ ಸೋದರಿಯರಿದ್ದರು. ಈ ಅವಳಿಗಳ ತಂದೆತಾಯಿಗಳಿಗೆ ೩೧೮ ಒಂಟಿಯಾಗಿ ಹುಟ್ಟಿದ ಸೋದರಸೋದರಿಯರೂ ೧೦ ಜತೆ ಅವಳಿ

ಗಳೂ ಇದ್ದರು. ಆದುದರಿಂದ ಯಮಳತೆಯು ಅನುವಂಶೀಯವೆಂದಾಯಿತು. ಆದರೆ ಅವಳಿಗಳನ್ನುಂಟುಮಾಡುವ ಗುಣಧಾರಿಯು ತಂದೆಯಲ್ಲಿದೆಯೋ ತಾಯಿಯಲ್ಲಿದೆಯೋ ಹೇಳಲಾಗುವುದಿಲ್ಲ. ತಂದೆಯಲ್ಲಿದ್ದಿರಬಹುದೆಂದು ಊಹಿಸಬಹುದಾದ ಪ್ರಸಂಗ ಒಂದಿದೆ. ಒಬ್ಬ ಗೃಹಸ್ಥ ಮೊದಲನೆಯ ಮದುವೆಯಾದ. ಗೃಹಿಣಿಯು ಹನ್ನೊಂದು ಸಾರಿ ಪ್ರಸವಿಸಿದಳು. ಒಂದುಬಾರಿ ನಾಲ್ಕು ಮಕ್ಕಳನ್ನೂ ಇನ್ನು ಹತ್ತುಬಾರಿ ಎರಡೆರಡು ಅವಳಿಗಳನ್ನೂ ಹೆತ್ತು ಅವಳು ಮಡಿದಳು. ಗೃಹಸ್ಥನಿಗೆ ಎರಡನೆಯ ಮದುವೆಯಾಯಿತು. ಎರಡನೆಯ ಹೆಂಡತಿಯ ಹೊಟ್ಟೆಯಲ್ಲಿ ಒಂದುಸಾರಿ ೩ ಕೂಸುಗಳೂ ೧೦ ಬಾರಿ ಅವಳಿಗಳೂ ಜನಿಸಿದುವು. ಮಾನವನಿಗೆ ಯಮಳತೆಯು ಪ್ರಿಯವೂ ಲಾಭದಾಯಕವೂ ಆದರೆ, ಅವಳಿಗಳನ್ನು ಹಡೆಯುವ ವಂಶಾವಳಿಯಲ್ಲಿ ಅಂತರ್ವಿವಾಹದಿಂದ ಅವಳಿಗಳ ವಂಶಸ್ಥಾಪನೆ ಮಾಡಬಹುದು. ಆದರೆ ಸಂತಾನನಿರೋಧವನ್ನು ಪ್ರಿಯವಾಗಿ ಪಾಲಿಸುವ ಈ ಯುಗದಲ್ಲಿ ಈ ಗುಣವನ್ನು ಬಯಸುವವರಾರು ? ಅಂಥವರಿಲ್ಲವೆಂದಲ್ಲ. ಪುರುಷಬಲವೇ ಜನಾಂಗದ ವೀರ್ಯಚಿಹ್ನೆ ಎಂದು ಪುರುಷ ಸಂಖ್ಯೆಯನ್ನು ಹೆಚ್ಚಿಸಿ ಯುದ್ಧರಂಗದಲ್ಲಿ ಬಲಿಕೊಡಲು ತೊಳಲುತ್ತಿರುವ ಸರ್ವಾಧಿಕಾರಿಗಳು ಈ ಗುಣವನ್ನು ವರಪ್ರಸಾದವಾಗಿ ಸ್ವೀಕರಿಸುವರಲ್ಲವೆ ?


ಅವಳಿಗಳ ರೇಖಾಲಕ್ಷಣ

ಮನುಷ್ಯರಲ್ಲಿ ಒಬ್ಬರನ್ನೊಬ್ಬರು ಸ್ಥೂಲವಾಗಿ ಹೋಲುವುದೂ ಅಪರೂಪವಾಗಿರುವಾಗ, ಅವರ ಅಂಗೈ ಅಂಗಾಲು ಕಾಲುಬೆರಳುಗಳಲ್ಲಿರುವ ರೇಖೆಗಳಲ್ಲಿ ಹೋಲಿಕೆ



ಚಿತ್ರ ೯a. ಏಕರೂಪಿಗಳೆರಡರ ಹೆಜ್ಜೆಯ ರೇಖಾಸಾಮ್ಯ

ಯಿರುವುದು ಇನ್ನೂ ಅಪರೂಪ. ಒಬ್ಬೊಬ್ಬರ ರೇಖಾಲಕ್ಷಣ ಒಂದೊಂದು ರೀತಿ ಯಿರುವುದೂ, ಈ ವೈವಿಧ್ಯದ ಮೇಲೆಯೇ ಸಾಮುದ್ರಿಕರು ಅವರವರ ಆಗುಹೋಗು ಗಳನ್ನು ನುಡಿಯುವುದೂ ನಮಗೆ ತಿಳಿದ ವಿಷಯ. ಒಬ್ಬನ ಹಸ್ತದಲ್ಲಿ 'ಏಕಚಕ್ರ' ವಿದ್ದು ಅವನು 'ಸದಾ ಭೋಗಿ'ಯಾಗಬಹುದು. ಇನ್ನೊಬ್ಬನ ಹಸ್ತದಲ್ಲಿ 'ಪಂಚಚಕ್ರ' ಗಳಿದ್ದು ಆತನು 'ಸನ್ಯಾಸಿ'ಯಾಗಬಹುದು. ಇಂಥ ಭವಿಷ್ಯವಾಣಿಗಳೆಷ್ಟನ್ನು ನಾವು ಕಾಸುಕೊಟ್ಟು ಕೇಳಿಲ್ಲ? ಅವಳಿಗಳಲ್ಲಾದರೆ, ಏಕರೂಪಿಗಳಲ್ಲಿ ಒಂದರ ಪ್ರತಿಬಿಂಬ ಇನ್ನೊಂದು ಎನ್ನುವಷ್ಟು ಅಗಾಧ ಹೋಲಿಕೆ ಇರುವಾಗ, ರೇಖಾಲಕ್ಷಣವೂ ಒಂದು ಇನ್ನೊಂದರಲ್ಲಿರುವಂತೆಯೇ ಇರುತ್ತದೆ. ಏಕರೂಪಿಗಳೆಂದು ಗುರುತಿಸಲು ಇದೂ ಒಂದು ಮಾರ್ಗ. ಡಾ|| ವಿಲ್ಡರ್ ಎಂಬವರು ರೇಖಾಲಕ್ಷಣ ಪರೀಕ್ಷೆಯಲ್ಲಿ ನುರಿತವರು. ಅವರು ಅನೇಕ ಅವಳಿಗಳ ರೇಖೆಗಳನ್ನು ಪರೀಕ್ಷಿಸಿ ಅವುಗಳಲ್ಲಿ ಕಂಡುಬರುವ ಸಾಮ್ಯಾಸಾಮ್ಯಗಳ ವಿಷಯವಾಗಿ ಒಂದು ಪುಸ್ತಕವನ್ನೇ ಬರೆದಿದ್ದಾರೆ. ಅವರು ಹೇಳುವ ಮೂರು ಅವಳಿಗಳಲ್ಲಿ ಕಂಡುಬಂದ ರೇಖಾಸಾಮ್ಯವು ಆಶ್ಚರ್ಯಕರವಾಗಿದೆ.




ಚಿತ್ರ ೯೬. ಮೂರು ಅವಳಿಗಳ ಹಸ್ತರೇಖಾ ಲಕ್ಷಣಗಳು

ಇವುಗಳಲ್ಲಿ 1-2, 3-4 ಏಕರೂಪಿಗಳವಾದ್ದರಿಂದ ಒಂದನ್ನೊಂದು ಹೋಲುತ್ತವೆ. 5-6 ಸೋದರ ಅವಳಿಗಳವಾದ್ದರಿಂದ ಅವುಗಳ ರೇಖಾಲಕ್ಷಣವೇ ಬೇರೆ.



ಈ ಅವಳಿಗಳಲ್ಲಿ ಎರಡು ಹುಡುಗರು, ಒಂದು ಹುಡುಗಿ. ಹುಡುಗರೆರಡರ ಅಂಗೈ ಅಂಗಾಲು ರೇಖೆಗಳಲ್ಲಿ ಸ್ವಲ್ಪವೂ ವ್ಯತ್ಯಾಸವಿರದೆ ಒಂದೊಂದಕ್ಕೂ ಅಗಾಧ ಹೋಲಿಕೆ ಯಿತ್ತು. ಇದನ್ನು ಮೇಲಿನ ಚಿತ್ರದಲ್ಲಿ ಗಮನಿಸಬಹುದು. ಹುಡುಗಿಯ ಕೈಕಾಲ

ಬೆರಳ ರೇಖೆ ಹುಡುಗರ ರೇಖೆ ಯಾವುದನ್ನೂ ಹೋಲುತ್ತಿರಲಿಲ್ಲ. ಹುಡುಗರಿಬ್ಬರೂ, ಇನ್ನೂ ಕೆಲವು ಹೋಲಿಕೆಯ ಆಧಾರದಿಂದ ಏಕರೂಪಿಗಳೆಂದೂ ಹುಡುಗಿಯ ಸೋದರ ಅವಳಿಗಳೆಂದೂ ಅವರು ನಿರ್ಧರಿಸಿದರು. ಇದಕ್ಕಿಂತ ಇನ್ನೊಂದು ಉದಾಹರಣೆ ಆಶ್ಚರ್ಯಕರವಾಗಿದೆ. ಮಾರ್ಗರೆಟ್ ಮೇರಿ ಎಂಬ ಇಬ್ಬರು ಸೇರಿದ ಅವಳಿಗಳಿದ್ದರು. ಇವರ ರೇಖಾಲಕ್ಷಣ ಪರೀಕ್ಷೆಯಲ್ಲಿ ಇಬ್ಬರ ಅಂಗೈ ರೇಖೆಗಳಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ಒಬ್ಬಳ ಎಡಗೈ ರೇಖಾಲಕ್ಷಣವು ತನ್ನದೇ ಬಲಗೈ ರೇಖಾಲಕ್ಷಣವನ್ನು

ಮಾರ್ಗರೆಟ್‌ನ ಪಾದರೇಖೆ




ಮೇರಿಯ ಪಾದರೇಖೆ





ಚಿತ್ರ ೧೦. ಪಾದರೇಖೆಗಳ ಲಕ್ಷಣ— ಸಾಮ್ಯವೈಷಮ್ಯಗಳು


ಮೇಲಿನ ಎರಡು ಪಾದಗಳು ಮಾರ್ಗರೆಟ್‌ನವು. ಕೆಳಗಿನ ಎರಡು ಮೇರಿಯವು. ಮಾರ್ಗರೆಟ್‌ನ ಪಾದರೇಖೆಗಳು ಮೇರಿಯ ಎಡ ಪಾದರೇಖೆಗಳ ಪ್ರತಿಬಿಂಬ. ಮೇರಿಯ ಬಲ ಪಾದರೇಖೆಗಳು ಯಾವ ಹೋಲಿಕೆಯನ್ನೂ ತೋರುವುದಿಲ್ಲ.

ಹೋಲುತ್ತಿತ್ತಲ್ಲದೆ ತನ್ನ ಸಂಗಾತಿಯ ಎಡಗೈ ರೇಖಾಲಕ್ಷಣದ ಪ್ರತಿಬಿಂಬವಾಗಿತ್ತು. ಅಂಗಾಲು ರೇಖಾಸಾಮ್ಯವೂ ಹೀಗೆಯೇ. ಒಬ್ಬಳ ಎಡ ಅಂಗಾಲಿನ ರೇಖೆಗಳನ್ನು ಇನ್ನೊಬ್ಬಳ ಅಂಗಾಲಿನಲ್ಲಿ ಒರೆದಂತಿತ್ತು; ಆದರೆ ಮೇರಿಯ ಬಲ ಅಂಗಾಲಿನ ರೇಖೆಗೂ ಮತ್ತೆ ಯಾವ ಅವಳಿಯ ಕಾಲಿನ ರೇಖೆಗೂ ಸಾಮ್ಯವಿರಲಿಲ್ಲ. ರೇಖಾ ಲಕ್ಷಣಗಳು ಅವಳಿಗಳಲ್ಲಿ ಹೋಲಿಯೇ ಹೋಲಬೇಕೆಂಬ ಕಡಿದಾದ ನಿಯಮ ವಿಲ್ಲದಿದ್ದರೂ ಏಕರೂಪಿಗಳಲ್ಲಿ ಮಾತ್ರ ಈ ಹೋಲಿಕೆ ಕಂಡೇ ಕಂಡು ಬರುತ್ತದೆ. ಏಕೆಂದರೆ ಒಂದೇ ಪ್ರಜನನ ವಸ್ತುವಿನಿಂದ ಪ್ರತಿಬಿಂಬಿತವಾದ ಗುಣಗಳಲ್ಲಿ ರೇಖಾ ಲಕ್ಷಣವೂ ಒಂದು.


ಪ್ರಯೋಗ ಪರೀಕ್ಷೆಯ ದೃಷ್ಟಿಯಿಂದ ಅವಳಿಗಳು ಅನುವಂಶೀಯತೆ ಮತ್ತು ವಾತಾವರಣಗಳ ಪರಸ್ಪರ ಕೈವಾಡವನ್ನು ನಿರ್ಧರಿಸಲು ಅತಿ ಉತ್ತಮ ವಸ್ತುಗಳೆಂದು ಹಿಂದೆ ಹೇಳಿದೆ. ಇವು ಹುಟ್ಟುತ್ತ ಏಕರೂಪಿಗಳಾದರೂ ಬೆಳೆಯುತ್ತ ಇವರಲ್ಲಿಯೇ ವ್ಯತ್ಯಾಸ ತೋರಬಹುದು. ಹುಟ್ಟಿದ ಏಕರೂಪಿಗಳೆಲ್ಲ ಒಂದೇ ವಿಧವಾದ ಸನ್ನಿವೇಶ ಪೋಷಣೆಗೆ ಒಳಗಾಗುವುದು ಅತಿ ವಿರಳ. ಹೀಗೆ ಒಂದೇ ಮನೆಯಲ್ಲಿ ಹುಟ್ಟಿದ ಏಕ ರೂಪಿಗಳು ಕಾರಣಾಂತರದಿಂದ ಬೇರೆಯಾಗಿ ಒಂದು ಅವಳಿಯು ಐಶ್ವರ್ಯವಂತರ ಮನೆಯಲ್ಲಿ ಎಲ್ಲ ಸುಖಗಳೊಡನೆ ಬೆಳೆದು ಇನ್ನೊಂದು ಬಡತನದ ಬೇಗೆಗೆ ಸಿಕ್ಕಿ ಬಳಲಿ ಅದರ ಗುಣಪ್ರಕಾಶಕ್ಕೆ ಅವಕಾಶವಿಲ್ಲದೇ ಇರಬಹುದು. ಬೇರೆ ಬೇರೆ ವಾತಾವರಣದಲ್ಲಿ ಬೆಳೆದರೂ ಏಕರೂಪಿಗಳು ಕೆಲಕಾಲವಾದ ಮೇಲೆ ರೂಪಿನಲ್ಲಿಯೂ ಬುದ್ಧಿಯಲ್ಲಿಯೂ ಅಷ್ಟೇನು ವ್ಯತ್ಯಾಸ ತೋರದ ಅನೇಕ ಉದಾಹರಣೆಗಳಿವೆ. ಬೇರೆ ಬೇರೆ ಪ್ರಜನನ ವಸ್ತುವಿನಿಂದ ಬಂದ ಅವಳಿಗಳನ್ನು ಒಂದೇ ರೀತಿಯ ಎರಡು ವಾತಾ ವರಣದಲ್ಲಿ ಬಹುಕಾಲ ಬೆಳೆಯಗೊಟ್ಟಾಗ, ಕೆಲಕಾಲ ಕಳೆದನಂತರ ಅವುಗಳಲ್ಲಿ ಆತ್ಯಾಶ್ಚರ್ಯಕರವಾದ ಹೊಸ ವ್ಯತ್ಯಾಸಗಳು ತೋರಿ ಬಂದುದರಿಂದ ವಾತಾವರಣದ ಕೈವಾಡವು ಜೀವಿಯ ಗುಣಪ್ರಕಾಶದಲ್ಲಿ ಮೇಲೆಂಬ ವಿಷಯ ವ್ಯಕ್ತವಾಗುತ್ತದೆ. ಒಂದೇ ಸನ್ನಿವೇಶದಲ್ಲಿ ಏಕರೂಪಿಗಳನ್ನು ಬೆಳೆಸಿದರೂ ಅನೇಕ ವೇಳೆ ಹೆಚ್ಚು ವ್ಯತ್ಯಾಸಗಳು ಕಂಡುಬಂದಿವೆ. ಆದುದರಿಂದ ಅನುವಂಶೀಯತೆಯ ಕೈ ಮೇಲಾಯಿ ತೆನ್ನಲಾಗದು. ಅನುವಂಶೀಯತೆ ಮತ್ತು ಸನ್ನಿವೇಶಗಳ ಪರಸ್ಪರ ಕೈವಾಡದ ಪ್ರಭಾವ ವನ್ನು ನಿರ್ಧರಿಸುವ ಉದ್ದೇಶದಿಂದ ಅವಳಿಗಳ ಮತ್ತು ಸೋದರ ಸೋದರಿಯರಾದ ಮಕ್ಕಳುಗಳ ಮೇಲೆ ಪ್ರಯೋಗ ನಡೆದಿದೆ. ಮುಂದಿನ ಚಿತ್ರದಲ್ಲಿ (೧೧) ಇಂಥ ಪ್ರಯೋಗ ಒಂದರ ಫಲಿತಾಂಶವನ್ನು ಕೊಟ್ಟಿದೆ. ಅಂಕಿಗಳು ಬುದ್ಧಿಶಕ್ತಿಯನ್ನು ಸೂಚಿಸುತ್ತವೆ.



ಬೇರೆ ಬೇರೆ ಸನ್ನಿವೇಶದಲ್ಲಿ ಬೆಳೆದ ಏಕರೂಪಿಗಳು



ಒಂದೇ ಸನ್ನಿವೇಶದಲ್ಲಿ ಬೆಳೆದ ಸೋದರ ಅವಳಿಗಳು



ಸೋದರ ಸಹೋದರಿಯರು.

ಒಂದೇ ಸನ್ನಿವೇಶದಲ್ಲಿ ಬೆಳೆದವು

 ← 14.5 → 

ಬೇರೆ ಬೇರೆ ಸನ್ನಿವೇಶ

 ← 15.5 → 

ಸಂಬಂಧವಿಲ್ಲದ ಮಕ್ಕಳುಗಳು.

ಒಂದೇ ಸನ್ನಿವೇಶದಲ್ಲಿ ಬೆಳೆದವು

 ← 17.75 → 

ಬೇರೆ ಬೇರೆ ಸನ್ನಿವೇಶದಲ್ಲಿ ಬೆಳೆದವು

 ← 17.72 → 

ಚಿತ್ರ ೧೧. ಅನುವಂಶೀಯತೆ ಮತ್ತು ಸನ್ನಿವೇಶ—ಅವುಗಳ ಪ್ರಭಾವ
(ಸಂಖ್ಯೆಗಳು ಬುದ್ಧಿಶಕ್ತಿಯನ್ನು ಸೂಚಿಸುತ್ತವೆ)

ವಾತಾವರಣ ಅನುವಂಶೀಯತೆಗಳ ಪರಸ್ಪರ ಕೈವಾಡದ ಪ್ರಶ್ನೆಯ ವಿಷಯದಲ್ಲಿ ಮನಶ್ಶಾಸ್ತ್ರಜ್ಞರಾದ ಡಾ|| ಗೋಪಾಲಸ್ವಾಮಿಯವರು ಅನೇಕ ಅವಳಿಗಳ ಮೇಲೆ ಪ್ರಯೋಗ ನಡೆಸಿದ್ದಾರೆ. ಅವರ ಪ್ರಯೋಗದ ಫಲವಾಗಿ, ವಾತಾವರಣವು ಅನು

ವಂಶೀಯತೆಯೊಡನೆ ಸೇರಿ ಎಷ್ಟು ಫಲಕಾರಿಯಾಗಿ ಅವರ ಬುದ್ಧಿಯ ಬೆಳವಣಿಗೆಯಲ್ಲಿ ವ್ಯತ್ಯಾಸವನ್ನುಂಟುಮಾಡುತ್ತದೆಂಬುದು ವ್ಯಕ್ತವಾಗುತ್ತದೆ. ಈ ಮಕ್ಕಳ ಜೀವನದ ಮೊದಲನೆಯ ವರ್ಷದಲ್ಲಿ ಅವಕ್ಕೆ ನಾವು ಆರೋಗ್ಯ ಆಹಾರಗಳ ವಿಷಯದಲ್ಲಿ ತೋರುವ ಆಸಕ್ತಿಯ ವ್ಯತ್ಯಾಸದಿಂದ ಬೇರೆಬೇರೆ ಪರಿಣಾಮಗಳಾಗಿವೆ. ಎರಡು ಮೂರು ವರುಷ ಮಕ್ಕಳು ಬೆಳದಂತೆಲ್ಲ ಅವುಗಳಿಗೆ ನಾವು ಒದಗಿಸಿಕೊಡುವ ಆಟದ ಸಾಮಾನು, ಅವು ಕೇಳುವ ಬಗೆಬಗೆಯ ಪ್ರಶ್ನೆಗೆ ಉತ್ತರಕೊಡುವ ರೀತಿ ಇವುಗಳ ಪರಿಣಾಮವೂ ಬಗೆಬಗೆಯ ಬುದ್ಧಿಶಕ್ತಿಯನ್ನುಂಟುಮಾಡಿದೆ. ಆದುದರಿಂದ ವಾತಾವರಣವು ಅನುವಂಶೀಯತೆಯನ್ನು ಬಿಟ್ಟು ತನ್ನ ಪ್ರಭಾವವನ್ನು ಬೀರುವಂತಿಲ್ಲ. ಅನುವಂಶೀಯತೆಯೂ ವಾತಾವರಣವನ್ನು ಬಿಟ್ಟು ತನ್ನ ವರ್ಚಸ್ಸನ್ನು ಬೀರಲಾಗುವುದಿಲ್ಲ. ಇವೆರಡೂ ಒಂದು ಬಟ್ಟೆಗೆ ಹಾಸುಹೊಕ್ಕುಗಳಿದ್ದಂತೆ. ಪ್ರತಿಯೊಂದು ಜೀವಿಯೂ ಅನುವಂಶೀಯತೆ ಮತ್ತು ಸನ್ನಿವೇಶ ಈ ಎರಡು ಆಧಾರಗಳ ಅನ್ಯೋನ್ಯ ಸಂಸರ್ಗದಿಂದ ಜನಿಸಿದೆ. ಇವೆರಡರ ವರ್ಚಸ್ಸನ್ನೂ ಬೇರೆಮಾಡಲು ಯತ್ನಿಸುವುದು ವ್ಯರ್ಥ.

ಈ ಲೇಖನದ ವಿಷಯವನ್ನು ಸೂಚಿಸಿ ಅದಕ್ಕೆ ಬೇಕಾಗುವ ಗ್ರಂಥಗಳನ್ನೊದಗಿಸಿ ಕೊಟ್ಟು ನನ್ನಲ್ಲಿ ತೀವ್ರ ಆಸಕ್ತಿ ತೋರಿ ಪ್ರೋತ್ಸಾಹಿಸಿದ ನನ್ನ ವಿದ್ಯಾಗುರುಗಳಾದ ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಎಫ್.ಆರ್.ಎಂ.ಎಸ್. ಅವರಿಗೆ ನನ್ನ ಭಕ್ತಿಪೂರ್ವಕ ವಂದನೆಗಳು.

ಡಿ. ಎಚ್. ವೀರಯ್ಯ.

ಪ್ರಮಾಣಗ್ರಂಥಗಳು

Vertebrate Embryology. By JENKINSON.

The Biology of Twins (Mammals). By HORATIO HACKETT NEWMAN.

Twins, Heredity and Environment. By NEWMAN.

Chordate Development. By KELLICOT.

Science From an Easy Chair. By E. RAY LANKEASTER (A Chapter on Monstrosities).

Science of Life. By H. G. WELLS, G. P. WELLS, J. HUXLEY.

Textbook of Zoology. By POLTER.

ಪಾರಿಭಾಷಿಕ ಪದಗಳು

ಅಂಡಜ=Oviparous

ಅಂತರ್ದ್ವರ್ಮ = Endoderm

ಅಂಡಾಶಯ = Ovary

ಅಪರಾಯುಕೋಶ = Amnion

ಏಕರೂಪಿ ಅವಳಿಗಳು = Identical Twins

ಉರಗಾಮಿಗಳು = Reptiles

ಒಳಕೋಶ ಗುಚ್ಛ = Inner Cell Mass

ಓಜೋದ್ರವ=Harmone

ಕಪ್ಪೆ ಗೊದ್ದ = Tadpole

ಕಾರ್ಪಸ್ ಲೂಟಿಯಂ = Corpus Luteum

ಗೊಡ್ಡು = Free martin

ಗರ್ಭಚೀಲ = Uterus

ತತ್ತಿ (ಅಂಡಾಣು) = Ovum

ತತ್ತಿಯ ಸ್ಥಾನಪಲ್ಲಟ = Ovulation

ಪಿಂಡಶಾಸ್ತ್ರ = Embryology

ಪ್ರಜನನವಸ್ತು = Germ plasm

ಪ್ರಿಮೇಟ್ಸ್ = Primates

ಬಹಿರ್ದ್ವರ್ಮ = Ectoderm

ಭಕ್ಷಕಕೋಶಗಣ = Trophoblast

ಲಿಂಗ = Sex

ಸಲಿಂಗರೀತಿ = Sexual

ನಿರ್ಲಿಂಗರೀತಿ = Asexual

ಲೋಳೆ = Yolk

ವಿಭಜನೆ = Division

ಶುಕ್ಲದ್ರವ = Semen

(ಶುಕ್ಲಾಣು) ಪುರುಷಾಣು = Sperm

ಕಾವ್ಯಾವಲೋಕನ

ರಾಘವಾಂಕ ಕವಿಯ ಸಿದ್ಧರಾಮ ಚಾರಿತ್ರ—ಸಂಪಾದಕರು: ಪ್ರೊ. ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಶ್ರೀ. ಡಿ. ಎಲ್. ನರಸಿಂಹಾಚಾರ್, ಎಂ.ಎ. ಅವರು, ಮೈಸೂರು; ಪ್ರಕಾಶಕರು: ಕರ್ಣಾಟಕ ಸಂಘ, ಶಿವಮೊಗ್ಗ; ಕ್ರೌನ್ ಅಷ್ಟಪತ್ರ, ೭೦ + ೨೦೪. ಬೆಲೆ, ಸಾದಾ ಪ್ರತಿ, ರೂ. ೧—೮—೦; ಕ್ಯಾಲಿಕೊ, ರೂ. ೨—೦—೦.

ಪ್ರಾಚೀನ ಕನ್ನಡ ಸಾಹಿತ್ಯದ ಮುಖ್ಯಾಂಗಗಳಾದ ಚಂಪೂ ಮತ್ತು ಷಟ್ಪದೀ ಕಾವ್ಯಗಳಲ್ಲಿ ಪ್ರತ್ಯೇಕವಾದ ವೈಶಿಷ್ಟ್ಯವಿದ್ದರೂ, ಕಥಾಸಂವಿಧಾನ, ಸ್ವಭಾವಚಿತ್ರ, ಕತೆ ಹೇಳುವ ಕ್ರಮ, ವರ್ಣನೆಗಳಲ್ಲಿ ಪ್ರಮಾಣ ಮುಂತಾದ ವಿಷಯಗಳಲ್ಲಿ ಷಟ್ಪದೀ ಕಾವ್ಯಗಳಿಗೆ ಮೇಲ್ಪಂಕ್ತಿ ದೊರೆಯಬಹುದು. ಇದರಿಂದ ಅಷ್ಟಾದಶ-ವರ್ಣನಾ-ವೈಖರಿಗಳಿಗೆ ಬೇಕಾಗುವ ಊಹಾಕ್ರಮವು ಇವುಗಳಲ್ಲಿ ಕಡಿಮೆಯಾಗಿದೆಯೆಂದಲ್ಲ. ಅದನ್ನು ಅಲ್ಲಿ ಕಾಣಬಹುದು, ಮಾತ್ರ ಪ್ರಮಾಣಕ್ಕನುಸರಿಸಿ. ವೀರಶೈವರೇ ಹೆಚ್ಚಾಗಿ ಷಟ್ಪದೀ ಕಾವ್ಯಗಳಿಗೆ ಗಮನಕೊಟ್ಟಿರುವುದರಿಂದ ಅವರು ಪುರಾಣ ಕಾವ್ಯಗಳೆಂದು ಹೇಳುವ ಗ್ರಂಥಗಳು ಬಹುತರವಾಗಿ ಚರಿತ್ರಾತ್ಮಕವಾಗಿವೆ. ಅವುಗಳ ಚರಿತ್ರ ನಾಯಕರು ಪುರಾಣಪುರುಷರಾಗಿರದೆ ಐತಿಹಾಸಿಕಪುರುಷರು. ಆದುದರಿಂದ ಅವರ ಜೀವನಗಳಲ್ಲಿ ಕಂಡುಬರುವ ಅನುಭವಗಳು ಓದುಗರಿಗೆ ಹೆಚ್ಚು ಮನದಟ್ಟಾಗಿ ಆನಂದವನ್ನುಂಟುಮಾಡುತ್ತವೆ. ಇಂತಹ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವುದೂ ಸಾಹಿತ್ಯಸೇವೆಯ ಒಂದು ಅಂಗ, ಸಾಹಿತ್ಯದ ಇತಿಹಾಸಕ್ಕೆ ಒಂದು ಸಹಾಯ. ಈ ಕ್ರಮವನ್ನು ದಿವಂಗತ ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು ಇಟ್ಟುಕೊಂಡಿದ್ದರು. ಅದು ಅವರಿಗೆ ಭೂಷಣ. ಪ್ರಕೃತ, ಅವರ ನೇತೃತ್ವದಲ್ಲಿ ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ರಾಘವಾಂಕನ ಸಿದ್ಧರಾಮಚಾರಿತ್ರವನ್ನು ಸಿದ್ಧಪಡಿಸಿ ಪ್ರೊ. ವೆಂಕಣ್ಣಯ್ಯನವರು ಸ್ವರ್ಗವಾಸಿಗಳಾದ ಮೇಲೆ ಪ್ರಕಟಿಸಿದ್ದಾರೆ. ಪ್ರೊ. ವೆಂಕಣ್ಣಯ್ಯನವರು ಈ ಪ್ರಕಟನೆಯನ್ನು ಕಣ್ಣು ತುಂಬ ನೋಡಿದ್ದರೆ ಅವರಿಗೆ ಎಷ್ಟೋ ಆನಂದವಾಗಬಹುದಿತ್ತು.

ಪ್ರಕೃತ ಗ್ರಂಥವನ್ನು ತಮ್ಮ ವಿದ್ವತ್ಪೂರ್ಣವಾದ ಮುನ್ನುಡಿ-ಟೀಕೆ-ಟಿಪ್ಪಣಿ-ಶಬ್ದಕೋಶಗಳಿಂದ ಅಲಂಕರಿಸಿದುದಕ್ಕೆ ಓದುಗರೆಲ್ಲರೂ ಶ್ರೀ. ಡಿ. ಎಲ್. ನರಸಿಂಹಾಚಾರ್ಯರವರನ್ನು ಅಭಿನಂದಿಸಲೇಬೇಕು. ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು ತೋರಿಸಿದ ಗ್ರಂಥಪರಿಷ್ಕರಣದ ಮಾರ್ಗವನ್ನು ಅನೇಕ ಪಂಡಿತರು ಗ್ರಹಿಸಿ ಕನ್ನಡದ

10

ಮರೆತುಹೋದ ಅಪಾರ ಸಾಹಿತ್ಯ ಗ್ರಂಥಗಳನ್ನು ಹೀಗೆ ಬಯಲಿಗೆಳೆದು ಓದುಗರನ್ನು ಉಪಕೃತಗೊಳಿಸಬೇಕೆಂದು ನಮ್ಮ ನಮ್ರ ವಿಜ್ಞಾಪನೆ.

ಹರಿಹರನ ಕಾಲನಿರ್ಣಯವು 'ಜಟಿಲ-ಸಮಸ್ಯೆ'ಯೆಂದು ಡಿ. ಎಲ್. ನರಸಿಂಹಾಚಾರ್ಯರು ಆ ಸಂದರ್ಭದಲ್ಲಿ ಸೂಚಿಸಿದ್ದಾರೆ (ಮುನ್ನುಡಿ, ಪು. xvi). ಆ ಬಗ್ಗೆ ಶ್ರೀಮಾನರುಗಳಾದ ಕಿಟ್ಟೆಲ್, ರಾ. ನರಸಿಂಹಾಚಾರ್ಯರು, ವೆಂಕಟಸುಬ್ಬಯ್ಯನವರು, ಏ. ಆರ್. ಕೃಷ್ಣಶಾಸ್ತ್ರಿಗಳವರು, ಕುಂದಣಗಾರ-ಮಾಳವಾಡರವರು, ಗೋವಿಂದಪೈಯವರು ಮುಂತಾದ ಪಂಡಿತರ ಖಂಡನಮಂಡನಗಳನ್ನು ಅವರು ತೂಗಿನೋಡಿ ಹರಿಹರನು 'ಒಂದನೆಯ ನರಸಿಂಹನ ಆಳಿಕೆಯಲ್ಲಿಯೋ ಅವನ ಮಗನಾದ ವೀರಬಲ್ಲಾಳನಲ್ಲಿಯೋ (೧೧೭೩-೧೨೨೦) ಕೆಲವು ವರ್ಷ ಕರಣಿಕನಾಗಿದ್ದು ಹಂಪೆಗೆ ಬಂದು ಅಲ್ಲಿ ನೆಲಸಿ ೧೨೦೦ ರ ಸುಮಾರಿಗೆ ಪಂಪಾಶತಕ-ಗಿರಿಜಾಕಲ್ಯಾಣಗಳನ್ನು ರಚಿಸಿ ಆ ಮೇಲೆ ರಗಳೆಗಳನ್ನು ಬರೆದು ಎರಡನೆಯ ನರಸಿಂಹನ ಆಳಿಕೆಯ ಪ್ರಾರಂಭದಲ್ಲಿ ಎಂದರೆ ಸು. ೧೨೨೫ ರಲ್ಲಿ ವಿರೂಪಾಕ್ಷನಲ್ಲಿ ಐಕ್ಯವಾದಂತೆ ಊಹಿಸಬಹುದು' (ಪೀ. xxi) ಎಂಬ ಸಿದ್ಧಾಂತಕ್ಕೆ ಬಂದಿದ್ದಾರೆ. ಇದರಿಂದ ಪ್ರೊ. ಕುಂದಣಗಾರ-ಮಾಳವಾಡರವರು ನಿರ್ದೇಶಿಸಿದ ಹರಿಹರನ ಕಾಲವು ಆಧಾರಗಳ ಬಲದಿಂದ ೧೨೧೬ ಕ್ಕಿಂತ ಹೆಚ್ಚು ನಿಶ್ಚಿತಕ್ಕೆ ಬಂದಿದೆಯೇ ಹೊರತು ಅದು ಖಂಡಿತವಾಗಿಲ್ಲ. ಆದರೆ ರಾಘವಾಂಕನ ವಿಷಯವಾಗಿ ಶ್ರೀ. ಡಿ. ಎಲ್. ನರಸಿಂಹಾಚಾರ್ಯರವರು ಹೇಳುವ 'ಇವರಿಬ್ಬರಿಗಿಂತಲೂ ೧೫-೨೦ ವರ್ಷಗಳು ಕಿರಿಯವರಾಗಿದ್ದ ರಾಘವಾಂಕ—ಕುಮಾರಪದ್ಮರಸರು ೧೨೫೬ ರ ವರೆಗೂ ಆಳಿದ ವೀರಸೋಮೇಶ್ವರನ ಆಳಿಕೆಯಲ್ಲಿ ಕೆಲವು ವರ್ಷಗಳ ವರೆಗೂ ಇದ್ದು ಸು. ೧೨೪೦ ರಲ್ಲಿ ಗತಿಸಿರಬೇಕು' (ಪು. xxi) ಎಂಬ ಮಾತು ಎಲ್ಲರಿಗೂ ಒಪ್ಪಿಗೆಯಾಗಲಾರದೆಂದು ತೋರುತ್ತದೆ. ಯಾಕೆಂದರೆ **ರಾಘವಾಂಕನ ಚರಿತ್ರೆಯನ್ನು ಸಿದ್ಧನಂಜೇಶನು** ಬರೆದಿದ್ದಾನಷ್ಟೆ. ಅದರಲ್ಲಿ ಹರಿಹರನು ಬದುಕಿರುವಾಗಲೇ ಆತನ ಶಿಷ್ಯ ರಾಘವಾಂಕನು ಗತಿಸಿದಂತೆಯೂ ಆತನ ಅಂತ್ಯವಿಧಿಯ ಬಗ್ಗೆ ಬ್ರಾಹ್ಮಣ-ವೀರಶೈವರಲ್ಲಿ ವ್ಯಾಜ್ಯವುಂಟಾದಂತೆಯೂ ಅದನ್ನು ಹರಿಹರನು ಸಮಂಜಸವಾಗಿ ತೀರ್ಪುಗೊಳಿಸಿದಂತೆಯೂ ಹೇಳಿದೆ. ಇದನ್ನು '**ಹರಿಹರದೇವ**'ದಲ್ಲಿ ತೋರಿಸಲಾಗಿದೆ (ಪು. ೩೧). ಶ್ರೀ. ಗೋವಿಂದ ಪೈಯವರು ಇದನ್ನು ಸಮರ್ಥಿಸಿದ್ದಾರೆ. ಇದು ಪರಂಪರೆಯಿಂದ ಸಿದ್ಧನಂಜೇಶನ ವರೆಗೆ ಬಂದ ವಿಷಯವಾಗಿರುವುದರಿಂದ ಇದರಲ್ಲಿ ಸತ್ಯಾಂಶವಿಲ್ಲದಿಲ್ಲ. ಶ್ರೀ. ಡಿ. ಎಲ್. ನರಸಿಂಹಾಚಾರ್ಯರವರು ಈ ಕಡೆಗೆ ತಮ್ಮ ಬೆರಳು ತೋರಿಸಿಲ್ಲ. ಕಾರಣವೇನೋ ತಿಳಿಯದು. ಈ ಆಧಾರದ ಮೇರೆಗೆ ರಾಘವಾಂಕನ ಕಾಲನಿರ್ಣಯದಲ್ಲಿ ಕೆಲಮಟ್ಟಿಗೆ ಬದಲಾವಣೆಯಾಗಬೇಕಾಗುತ್ತದೆ.

ರಾಘವಾಂಕನ ಕಾಲನಿರ್ಣಯದಲ್ಲಿ **ದೇವಾಂಗ-ದಾಸಿಮಯ್ಯನ ಪುರಾಣ,** **'ವಡಿ'** ಎಂಬ ಛಂದಸ್ಸು, **ಕುಱುಗೋಡಿನ ಸಿಂದರಾಜರ ಪೀಳಿಗೆ** ಮುಂತಾದ ಆಧಾರಗಳು ನಿರ್ಣಾಯಕವಾಗಿವೆ. ಆದುದರಿಂದ ಶ್ರಿ. ಡಿ. ಎಲ್. ನರಸಿಂಹಾಚಾರ್ಯ ರವರನ್ನು ನಾವು ಮನಃಪೂರ್ವಕ ಅಭಿನಂದಿಸುತ್ತೇವೆ.

ಸಿದ್ಧರಾಮಚಾರಿತ್ರ, ಸಿದ್ಧರಾಮೇಶ್ವರ ವಚನಗಳು, ಶೂನ್ಯಸಂಪಾದನೆ, ಕರ್ಣಾಟಕ ಕವಿಚರಿತೆ ಮುಂತಾದ ಗ್ರಂಥಗಳಿಂದ ಸಿದ್ಧರಾಮಚರಿತೆಯನ್ನು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಸಂಗ್ರಹಿಸಿದ್ದಾರೆ. ಇದು ಸರಿಯೇ. ಆದರೆ ಆ ಕಾಲದ ಉತ್ತರ ಕರ್ಣಾಟಕದ ಸಾಮಾಜಿಕ ಇತಿಹಾಸದ ಕಡೆಗೆ ನೋಡುವುದಾದರೆ 'ಸಿದ್ಧರಾಮನು ಸೊನ್ನಲಾಪುರದಲ್ಲಿರುವಾಗ ಕೆರೆ-ಬಾವಿ-ತೋಟ-ದೇಗುಲಗಳನ್ನು ಕಟ್ಟಿಸಿ ಪರೋಪಕಾರನಿರತನಾದ **ಶೈವನಾಗಿದ್ದನೆಂದೂ** ಪ್ರಭುವಿನ ಕರುಣೆಯಿಂದ ಆತನಿಗೆ ಬಸವ-ಚೆನ್ನಬಸವರ ಪರಿಚಯವುಂಟಾಗಿ ಅವನು ವೀರಶೈವನಾದನೆಂದೂ— ಈ ವಚನಗಳನ್ನು ನಂಬಬಹುದಾದರೆ—ಊಹಿಸಲು ಸಾಧ್ಯವಾಗಿದೆ.' ಎಂಬ ಅವರ ಮಾತು ಓದುಗರ ಮನಸ್ಸನ್ನು ಎಳೆಯುತ್ತದೆ. ಸಿದ್ಧರಾಮನು ಶೈವನಾಗಿದ್ದ ಪಕ್ಷದಲ್ಲಿ ಆತನು ಯಾವ **ಶೈವಪಂಗಡಕ್ಕೆ** ಸೇರಿದವನು ಎಂಬುದನ್ನೂ ನಿರ್ಣಯಿಸ ಬೇಕಾಗುತ್ತದೆ. ಸಿದ್ಧರಾಮ ಚಾರಿತ್ರದಲ್ಲಿ ಕಾಳಾಮುಖರ, ಪಾಶುಪತರ, ಭೈರವರ ವರ್ಣನೆಗಳು ಕಂಡುಬರುತ್ತವೆ (೪—೬-೮ ; ೬-೧ ; ೭-೨೭). ಈ ಪಂಗಡಗಳಿಗೆ ಆತನು ಸೇರಿದವನಲ್ಲೆಂದು ಆ ವರ್ಣನೆಗಳ ಮೇಲಿಂದಲೇ ತಿಳಿದುಬರುವಂತಿದೆ. ಇದಕ್ಕಾಗಿ ಬೇರೆ ಶೋಧ ನಡೆಯಬೇಕು. ಆ ಕಾಲದಲ್ಲಿ ಉತ್ತರ ಕರ್ಣಾಟಕದಲ್ಲಿ ನವನಾಥಸಿದ್ಧರ ಪಂಗಡವು ಜನರ ಮನಸ್ಸನ್ನು ಆಕರ್ಷಿಸಿತ್ತೆಂದು ಹೇಳಬಹುದು. ಕೆಲವು ವಚನಕಾರರು ಈ ಪಂಗಡಕ್ಕೆ ಸೇರಿದ್ದರೆಂಬ ಸಂಗತಿಯು ಅವರ ಅಂಕಿತಗಳಿಂದ ತಿಳಿದುಬರುತ್ತದೆ. ಆದುದರಿಂದ ಇಂತಹ ವಚನಕಾರರ ಹೆಸರುಗಳನ್ನೂ ಅವರ ಅಂಕಿತಗಳನ್ನೂ ಪರೀಕ್ಷಿಸುವುದು ಅಪ್ರಸ್ತುತವಲ್ಲ. ಈ ಮುಂದಿನ ಪಟ್ಟಿಯನ್ನು ನೋಡಬಹುದು :

ವಚನಕಾರರ ಹೆಸರು.		ಅಂಕಿತ.
ಸಿದ್ಧರಾಮ	....	ಕಪಿಲಸಿದ್ಧ-ಮಲ್ಲಿಕಾರ್ಜುನ
ಜೇಡರದಾಸಿಮಯ್ಯ	....	ರಾಮನಾಥ
ರಾಮಣ್ಣ	....	ಗೋಪಿನಾಥ
ಗುಪ್ತಮಂಚಣ್ಣ	....	ರಾಮನಾಥ
ಬಹುರೂಪಿ ಚೌಡಯ್ಯ	....	ರೇವಣ್ಣಪ್ರಿಯ-ನಾಗಿನಾಥ
ಶಾಂತರಸ	....	ಅಲೇಖನಾಥ

ಇವರೆಲ್ಲರು ನಾಥಪಂಥಾನ್ವಯಿಗಳು. ಮತಾಂತರ ಮಾಡಿದನಂತರ (ವೀರಶೈವ-ದೀಕ್ಷೆ-ಗೊಂಡ ನಂತರ) ತಮ್ಮ ಪೂರ್ವಾಶ್ರಮದ ಸ್ಮರಣಕ್ಕೆಂದು ಈ ಅಂಕಿತಗಳನ್ನು (ನಾಥಾಂತ್ಯಗಳನ್ನು) ಇಟ್ಟುಕೊಂಡಿರಬಹುದು. ಇವುಗಳಲ್ಲಿ ಶಾಂತರಸನ ಅಲೇಖ ನಾಥ—ಅಲಖ್‌ನಾಥ—ಅಂಕಿತವು ಈ ಊಹೆಯನ್ನು ಸ್ಪಷ್ಟೀಕರಿಸುತ್ತದೆ. ಇವು ಗಳಲ್ಲದೆ ನಾಸ್ತಿನಾಥ, ರೇಕನಾಥಯ್ಯ, ಘನಗುರುಪ್ರಿಯ-ಸೋಮನಾಥ ಎಂಬ ಅಂಕಿತಗಳೂ ದೊರೆಯುತ್ತವೆ. ನಾಥರು ಹಠಯೋಗಿಗಳು; ಆದುದರಿಂದ ಅವರಿಗೆ ಸಿದ್ಧರು ಎಂದು ಹೇಳುವುದುಂಟು. ಅದರಂತೆ ಅಮುಗಿದೇವನಿಗೆ ಅಮಾಕಸಿದ್ಧನೆಂದೂ ರೇವಣನಿಗೆ ರೇವಣಸಿದ್ಧನೆಂದೂ ಮರುಳನಾಥನಿಗೆ ಮರುಳಸಿದ್ಧನೆಂದೂ ಹೆಸರುಗಳಿವೆ. ರೇವಣಸಿದ್ಧನು ಹಠಯೋಗಿಯೆಂದು ಹರಿಹರದೇವನು ಹೇಳಿದ್ದಾನೆ. ಅಲ್ಲದೆ ಅವನು ಗೋರಕ್ಷನಾಥ ಮುಂತಾದ ನಾಥಪಂಥೀಯರ ಹೆಸರುಗಳನ್ನು ತನ್ನ ರಗಳೆಗಳಲ್ಲಿ ಎತ್ತಿದ್ದಾನೆ. (ಆ ಗೋರಕ್ಷನ ಗುಡಿಯು ಕೊಲ್ಹಾಪುರದಲ್ಲಿದೆ.) ಅವರು ವೀರಶೈವ ವನ್ನು ಸ್ವೀಕರಿಸಿದಂತೆ ಆತನು ರಗಳೆಗಳಲ್ಲಿ ಹೇಳುತ್ತಾನೆ. ವಿಜಾಪುರಜಿಲ್ಹೆಯಲ್ಲಿರುವ ಈಗಿನ ಸುಡುಗಾಡಸಿದ್ಧರು ಆ ನಾಥಸಿದ್ಧರ ಅವಶೇಷವೆಂದು ಹೇಳಬಹುದು. ಸಿದ್ಧ ರಾಮನು ಈ ಪಂಗಡಕ್ಕೆ ಸೇರಿದವನು. ಚೆನ್ನಬಸವಣ್ಣನವರು ದೀಕ್ಷೆ ಕೊಡಲು ವೀರಶೈವ ನಾಗಿರಬಹುದು. ಅಲ್ಲಮ-ಪ್ರಭುದೇವರುಗಳು ಈ ಪಂಗಡಕ್ಕೆ ಸೇರಿದವರೆಂದು **ಹಠಯೋಗ ಪ್ರದೀಪಿಕೆಯಲ್ಲಿ** ಹೇಳಿದೆ. ನಾಗನಾಥ-ಕಪಿಲನಾಥರೂ ಈ ಸಂಪ್ರ ದಾಯದವರು. ಅವರ ಹೆಸರಿನ ಗುಡಿಗಳು ಉತ್ತರಕರ್ಣಾಟಕದಲ್ಲಿವೆ. (ಈ ಸಂಗತಿಯು ರಾ. ಬ. ಪಿ. ಜಿ. ಹಳಕಟ್ಟಿಯವರಿಂದ ಸೂಚಿತವಾಗಿದೆ.) ಇನ್ನು ಒಳಸಾಕ್ಷಿಗಳನ್ನು ನೋಡುವಾಗ ರಾಘವಾಂಕನು ಸಿದ್ಧರಾಮನನ್ನು ಈ ರೀತಿಯಾಗಿ ಸಂಬೋಧಿಸಿದುದು ಕಂಡುಬರುತ್ತದೆ: ಸಿದ್ಧಕುಲಚಕ್ರೇಶ (೧—೩೪; ೪—೧೦), ಸಿದ್ಧೇಂದ್ರ (೨—೩೪, ೩೭; ೩—೩೪; ೪—೨೧), ಸಿದ್ಧಪತಿ (೩—೧, ೧೦, ೨೫, ೪೧), ಸಿದ್ಧಕುಲಪತಿ (೩—೮), ಸಿದ್ಧಕುಲತಿಲಕ (೩—೩೭), ಮುನಿವರವಲ್ಲಭ (೩—೫೦), ಸಿದ್ಧೇಶ್ವರ (೪—೮), ಸಿದ್ಧಕುಲಕಮಲರವಿ (೪—೨೧), ಸಿದ್ಧವರೇಣ್ಯ (೬—೩೫), ಸಿದ್ಧರದೇವ (೬—೩೬), ಸಿದ್ಧರಾಧಿತ್ಯ (೬—೪೩; ೭—೫೪), ಸಿದ್ಧನಿಧಾನ (೮—೯), ಮುಂತಾದವುಗಳು. ಇವು ಗಳಲ್ಲದೆ ದ್ರವ್ಯಸಿದ್ಧಿ, ಸಿದ್ಧಮಂತ್ರ (೪—೪), ದಾನ (೪—೩), ನಿತ್ಯಹೋಮ (೪—೩, ೪; ೭—೨೮), ಹೋಮಧೂಮ (೬—೩೩), ಬ್ರಹ್ಮವಧೆ (೮—೨೬) ಮುಂತಾದ ಪದಪ್ರಯೋಗಗಳು ಸಿದ್ಧರಾಮನ ನಾಥಸಂಪ್ರದಾಯವನ್ನು ಪುಷ್ಟೀಕರಿಸುತ್ತವೆ.

ಲಾಕುಳದೆ (೪—೧೬), ಶೈವಕೀರ್ತಿ (೪—೧೯), ಶೈವಸಾಮ್ರಾಜ್ಯ (೭—೩೫), ಲಾಕುಳೇಶ್ವರಪಿಡಿದು (೧—೮೧) ಎಂಬ ಪದಪ್ರಯೋಗಗಳು ಮೇಲಿನ ಊಹೆಗೆ

ಪೋಷಕವಾಗದೆ ಶೋಷಕವಾಗಬಹುದು. ಆದರೆ ನಾಥಸಿದ್ಧರು ದತ್ತಾತ್ರೇಯನ ಭಕ್ತರು. ಅವರಿಗೆ ಹರಿ-ಹರ-ಬ್ರಹ್ಮರು ಸಮಾನವಾಗಿ ಪೂಜ್ಯರು. ಆದುದರಿಂದ ಅವರು ಶೈವಮಾರ್ಗವನ್ನು ಅಲ್ಲಗಳೆಯರು; ಆದರೆ ವೀರಶೈವರೂ ಅಲ್ಲ, ವೀರವೈಷ್ಣವರೂ ಅಲ್ಲ. ಕರ್ನಾಟಕದ ಶೈವರಲ್ಲಿ ಲಕುಲೀಶಪಾಶುಪತರಿದ್ದರೆಂದು ಮುತ್ತಗೆಯ (ವಿಜಾಪುರಜಿಲ್ಲೆ) ಶಾಸನಗಳಲ್ಲಿ ಹೇಳಿದೆ. ಅವರು ಲಾಕುಳಾಗಮವನ್ನು ಅನುಸರಿಸುತ್ತಿದ್ದರು. ಸಿದ್ಧರಾಮನು ಲಾಕುಳಾಗಮವನ್ನು ಬಲ್ಲವನೆಂಬರ್ಥವನ್ನು ಇಟ್ಟುಕೊಳ್ಳುವುದು ಉಚಿತವೆಂದು ಇಲ್ಲಿ ತೋರುತ್ತದೆ.

ಸಿದ್ಧರಾಮನು ವೀರಶೈವನಾಗಿರಲಿಲ್ಲವೆಂಬಂಶವನ್ನು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಸಾಧಕಬಾಧಕಪ್ರಮಾಣಗಳನ್ನು ಸರಿಯಾಗಿ ತೂಗಿ ತಮ್ಮ ಆ ನಿರ್ಣಯವನ್ನು ಧೈರ್ಯವಾಗಿ ಹೇಳಿದ್ದಾರೆ. ಅದಕ್ಕಾಗಿ ಅವರನ್ನು ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ. ಇದೊಂದು ಜಟಿಲ ಸಮಸ್ಯೆ. ಈ ವಿಷಯದಲ್ಲಿ ಇನ್ನೂ ಸಂಶೋಧನವಾಗಬೇಕು. ಮಹಾದೇವಿಯಕ್ಕನ ರಗಳೆಯಲ್ಲಿ ಹರಿಹರನು ಬಸವಣ್ಣನವರ ಹೆಸರನ್ನೇ ಎತ್ತಿಲ್ಲ. ಆದರೂ ಮಹಾದೇವಿಯಕ್ಕನ ವಚನಗಳಲ್ಲಿ ಬಸವಣ್ಣನವರ ವಿಷಯಕವಾದ ಅವರ ಆದರವು ಅನ್ಯಾದೃಶವಾಗಿರುವುದು ಕಂಡುಬಂದಿದೆ. ಆ ವಚನಗಳು ಹುಟ್ಟುಗೆಗಳೆಂದು ಈವರೆಗೆ ಯಾರೂ ಸಿದ್ಧಪಡಿಸಿಲ್ಲ. ಅದೇ ಮೇರೆಗೆ ಸಿದ್ಧರಾಮೇಶ್ವರ ವಚನಗಳಲ್ಲಿ (ಪುಟ ೨೦-೨೧) ಚೆನ್ನಬಸವಣ್ಣನವರ ಹೆಸರು ಆದರಪೂರ್ವಕ ಎತ್ತಲಾಗಿದೆ (ವಚನಗಳು—೧೧೩, ೧೧೪, ೧೧೫, ೧೨೧, ೧೨೪, ೧೨೭ ಮು.). ಇವೆಲ್ಲವುಗಳಲ್ಲಿ ಸಿದ್ಧರಾಮನ ಕಪಿಲ ಸಿದ್ಧಮಲ್ಲಿಕಾರ್ಜುನ ದೇವಯ್ಯ, ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ, ಕಪಿಲ ಸಿದ್ಧಮಲ್ಲಯ್ಯ, ಕಪಿಲ ಸಿದ್ಧಮಲ್ಲಿಕಾರ್ಜುನಾ ಎಂಬ ಅಂಕಿತಗಳಿವೆ. ಈ ವಚನಗಳು ಹುಟ್ಟುಗೆಗಳೆಂದು ಯಾರು ಹೇಳಬೇಕು? ಆಧಾರಗಳೇನು? ಆದುದರಿಂದ ಈ ಸಮಸ್ಯೆ ಬಹುಮಟ್ಟಿಗೆ ಭಾವನಾ ಪಕ್ಷತೆಗೆ ಕಾರಣವಾಗಬಹುದೆಂಬ ಬಲವಾದ ಸಂಶಯವುಂಟಾಗುವಂತಿದೆ.

ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಕಥಾಸಾರವನ್ನು ಕೊಟ್ಟು ಓದುಗರನ್ನು ಉಪಕೃತರನ್ನಾಗಿ ಮಾಡಿದ್ದಾರೆ. ಇಷ್ಟರಿಂದ ಅವರಿಗೆ ತೃಪ್ತಿಯಿಲ್ಲ. ಅವರ ಸಂಶೋಧಕಸ್ವಭಾವಪ್ರೇರಣೆಯಿಂದ ಕಥೆಯ ಮೂಲ ಅದರ ಬೆಳವಣಿಗೆಗಳನ್ನು ಕೊಟ್ಟು ಓದುಗರ ಉತ್ಸುಕತಾಪ್ರಚೋದನೆಗೆ ಕಾರಣವಾಗಿದ್ದಾರೆ.

ಸಿದ್ಧರಾಮನ ಮೂರ್ತಿಸ್ವರೂಪವು ಸಂಪಾದಕರ ಕುಶಾಗ್ರಬುದ್ಧಿಯನ್ನು ಎಲ್ಲೆಡೆಯಲ್ಲಿ ತೋರಿಸುತ್ತದೆ. ವಿಷಯಗ್ರಹಣ, ಅದಕ್ಕೆ ತಕ್ಕ ಸಂಶೋಧನೆ, ನೈಜಭಾವ, ಆಳವಾದ ಸಂಶೋಧಕ ವಿಚಾರ, ಇವುಗಳಿಂದ ಹಿಡಿತಕ್ಕೆ ಸಿಕ್ಕ ವಿಷಯವನ್ನು

ಕೂಲಂಕಷವಾಗಿ ಚರ್ಚಿಸುವ ಕೈಚಳಕ ಮತ್ತು ಭಾಷಾಶೈಲಿಗಳು ಶ್ರೀಮಾನರವರ ಪಾಂಡಿತ್ಯವನ್ನು ಕ್ಷಣಕ್ಷಣಕ್ಕೂ ಎಲ್ಲರ ನಿದರ್ಶನಕ್ಕೆ ತಂದುಕೊಡುತ್ತವೆ.

ಕಾವ್ಯವಿಮರ್ಶೆಯಲ್ಲಿಯೂ ಅವರು ಸಮತೂಕವನ್ನು ಬಿಡದೆ ಅದಕ್ಕೆ ಯೋಗ್ಯ ಸ್ಥಾನವನ್ನು ಕೊಟ್ಟಿರುವರು. ಆದರಿಂದ ಅವರ ಸಾಹಿತ್ಯಭಕ್ತಿ, ಭಿನ್ನ-ಭಿನ್ನ ಮತಗಳಲ್ಲಿರುವ ಅವರ ಸಮಭಾವ, ಕವಿಗಳ ವಿಷಯಕವಾದ ಆದರ, ವಿಷಯಪ್ರತಿಪಾದನೆಯಲ್ಲಿರುವ ಪ್ರೌಢಿಮೆ, ಮುಂತಾದ ಗುಣಗಳು ಹೊಗಳತಕ್ಕವುಗಳಾಗಿವೆ.

ಸಂಪಾದಕರು ನಾಲ್ಕು ಪ್ರತಿಗಳ ಸಹಾಯದಿಂದ ತಮ್ಮ ಅಚ್ಚಿನ ಪ್ರತಿಯನ್ನು ಸಿದ್ಧಗೊಳಿಸಿಕೊಂಡಿದ್ದಾರೆ. ಈ ಕಾರ್ಯವು ಯಾವಾಗಲೂ ದುಷ್ಕರ. ಯಾಕೆಂದರೆ ಒಂದೊಂದು ಸಮಯದಲ್ಲಿ ಒಂದೊಂದು ಪ್ರತಿಯಲ್ಲಿಯೂ ಭಿನ್ನಪಾಠವು ಕಂಡು ಬರಬಹುದು. ಇಂತಹ ಸಂದರ್ಭಗಳು ಸಿದ್ಧರಾಮ ಚಾರಿತ್ರದಲ್ಲಿವೆ. ಆಗ ಸಾಧು ಪಾಠವಾವುದು ? ಕವಿ ಆವುದನ್ನು ಇಟ್ಟುಕೊಂಡಿರಬಹುದು ? ಎಂಬ ಸಮಸ್ಯೆಯನ್ನು ಬಿಡಿಸುವುದು ಸುಲಭವಲ್ಲ. ಕೆಲವೆಡೆಯಲ್ಲಿ ಇದ್ದ ಪಾಠಗಳಿಗೆ ಅರ್ಥವೇ ಆಗದಿರಬಹುದು. ಈ ಬಗೆಯ ಸಮಸ್ಯೆಗಳನ್ನು ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಮತ್ತು ಶ್ರೀ. ತೀ. ನಂ. ಶ್ರೀಕಂಠಯ್ಯನವರ ಸಹಾಯ-ಸಹಾನುಭೂತಿಗಳಿಂದ ಶೋಧಿಸಿ ಅಂದವಾದ ಪ್ರತಿಯನ್ನು ಜನರ ಮುಂದಿರಿಸಿದ್ದಾರೆ ಸಂಪಾದಕರು. ಅಚ್ಚಿನ ದೋಷಗಳೂ ತೀರ ಕಡಿಮೆಯಾಗಿವೆ. ಕಾವ್ಯಾಂಗದಲ್ಲಿ ಮೈಸೂರ ಪದ್ಧತಿಯಂತೆ ಕೆಲವೆಡೆಯಲ್ಲಿ ಸಮಸ್ತ ಪದಗಳನ್ನು ಬಿಡಿಸಿ ಬರೆದಿದೆ. ಉದಾ:

ತನುಧರ್ಮ ಕರ್ಮ ಕಲ್ಮಷತೆಯಿಲ್ಲದ ೧-೩೭
ಹಗೆ ಕೆಳೆಗಳೆಂದಿಲ್ಲ ೧-೪೦
ಮೃದು ಕಠಿನವೆಂದಿಲ್ಲ ೧-೪೦
ವಿನಯ ಮೃದು ಮಧುರ ವಾಕ್ಯದಿಂದಿರುತ ೮-೨೪

ಮುಂತಾದವುಗಳು.

ಸಮಸ್ತಪದಗಳು ಸರಿಯಾದ ಉದಾಹರಣೆಗಳೂ ಉಂಟು. ಉದಾ:

ನಾರಿಪುರುಷವ್ರಾತವೆಂದಿಲ್ಲ ೧-೪೦

ಮುಂತಾದವು.

ಮೇಲಿನ ಉದಾಹರಣೆಗಳಂತೆ ಎರಡೂ ರೀತಿಯಾಗಿ ಬರೆಯುವ ಪದ್ಧತಿಯಿದೆಯೆಂದು ಹೇಳುವುದು ಸರಿಯಲ್ಲ. ಸಮಾಸನಿಯಮಗಳನ್ನು ತಪ್ಪದೆ ಪಾಲಿಸುವುದು ಉಚಿತವೆಂದು ಹೇಳಬಹುದು. ಮೇಲೆ ತೋರಿಸಿದಂತಹ ಸಮಾಸದೋಷಗಳು ಒಂದು ವೇಳೆ ಅಚ್ಚಿನ ದೋಷಗಳಾಗಿರಲೂ ಬಹುದು. ಅವುಗಳನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬಹುದು.

ಓದುಗರ ಸೌಕರ್ಯಕ್ಕೆಂದು ಅಂತ್ಯದಲ್ಲಿ ಟಿಪ್ಪಣಿ ಶಬ್ದಕೋಶಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಉತ್ತರಕರ್ಣಾಟಕದಲ್ಲಿ ಪ್ರಚಾರದಲ್ಲಿವೆ ಮತ್ತೆ ಕೆಲವುಗಳ ಬಗ್ಗೆ ಅವರ ಸಂಶೋಧನಶ್ರಮವು ಸಫಲವಾಗಿಲ್ಲ.

ಉದಾ:

ಕೋರಾಂಟ—'ಹಠಯೋಗ-ಪ್ರದೀಪಿಕಾ, ವೆಂಕಟೇಶ್ವರ ಮುದ್ರಣಾಲಯ, ಮುಂಬಯಿ, ಶಕೆ ೧೮೧೬'—ಈ ಗ್ರಂಥದ ೮-೯ ನೆಯ ಪುಟಗಳಲ್ಲಿ ಹಠಯೋಗಿಗಳ ಹೆಸರುಗಳು ಕೊಡಲಾಗಿವೆ. ಅವುಗಳನ್ನು ಇಲ್ಲಿ ಉದ್ಧರಿಸಲಾಗಿದೆ.—

ಶ್ರೀ ಆದಿನಾಥ ಮತ್ಸ್ಯೇಂದ್ರಶಾಬರಾನಂದಭೈರವಾಃ |
ಚೌರಂಗೀಮೀನ ಗೋರಕ್ಷವಿರೂಪಾಕ್ಷಬಿಲೇಶಯಾಃ || ೫ ||

ಮಂಥಾನೋ ಭೈರವೋ ಯೋಗೀ ಸಿದ್ಧಿರ್ಬುದ್ಧಶ್ಚ ಕಂಥಡಿಃ |
ಕೋರಂಟಕಃ ಸುರಾನಂದಃ ಸಿದ್ಧಪಾದಶ್ಚ ಚರ್ಪಟಿಃ || ೬ ||

ಕಾನೇರೀ ಪೂಜ್ಯಪಾದಶ್ಚ ನಿತ್ಯನಾಥೋ ನಿರಂಜನಃ |
ಕಪಾಲೀ ಬಿಂದುನಾಥಶ್ಚ ಕಾಕಚಂಡೀಶ್ವರಾಹ್ವಯಃ || ೭ ||

ಅಲ್ಲಾಮಃ ಪ್ರಭುದೇವಶ್ಚ ಘೋಡಾ ಚೋಲೀಚ ಟಿಂಟಿಣಿಃ |
ಭಾನುಕೀ ನರದೇವಶ್ಚ ಖಂಡಃ ಕಾಪಾಲಿಕಸ್ತಥಾ || ೮ ||

ಇಲ್ಲಿ **ಗೋರಕ್ಷನನ್ನೂ ಕೋರಂಟಕನನ್ನೂ** ಬೇರೆ ಬೇರೆಯಾಗಿ ಹೇಳಿರುವುದರಿಂದ ಕೋರಾಂಟನು ಗೋರಕ್ಷನಾಗಿರಲಾರನು.

ನಾಗಾರ್ಜುನ—ರಾ.ಬ. ಪಿ.ಜಿ. ಹಳಕಟ್ಟಿಯವರು ೧೯೩೪ರಲ್ಲಿ ಪ್ರಕಟಿಸಿದ ಶಿವಾನುಭವ ಗ್ರಂಥಮಾಲೆಯ ಸಂ. ೪೧ **ಬಸವೇಶ್ವರ-ಷಟ್ಸ್ಥಲ-ವಚನದ ಕಥಾಸಾರ** ಎಂಬ ಪುಸ್ತಕದ ೭೬ನೆಯ ಪುಟದಲ್ಲಿ ನಾಗಾರ್ಜುನನ ಕಥೆ ಕೊಡಲಾಗಿದೆ.

ಅಡೆ (೪—೪೩)—**ಸೆಗಣಿ** ಎಂಬ ಅರ್ಥ ಇಲ್ಲಿ ಸರಿಹೋಗುವುದಿಲ್ಲ. ಇದಕ್ಕೆ **'ಹೊದಿಕೆ'** ಎಂಬ ಮತ್ತೊಂದು ಅರ್ಥವಿದೆ. ಅದನ್ನು ಇಟ್ಟುಕೊಳ್ಳಬಹುದು. ಉತ್ತರಕರ್ಣಾಟಕದಲ್ಲಿ 'ಹಣ್ಣಿನ ಅಡೆ' ಎಂದು ಹೇಳುವುದುಂಟು. 'ರಾಶಿ' ಎಂದೂ ಅರ್ಥವಾಗಬಹುದು.

ಉರಗೆಜ್ಜೆ (೩—೪೭)—ಎದೆಯ ಗೆಜ್ಜೆ. ಮೊಹರಮ್ಮದ ಕಾಲಕ್ಕೆ ಉತ್ತರ ಕರ್ಣಾಟಕದಲ್ಲಿ ಅರಳೆಬಾವಾಗಳ ಸೋಗು ಹಾಕುತ್ತಾರೆ. ಆಗ ಗೆಜ್ಜೆಯ ಸರಗಳನ್ನು ಸವ್ಯಾಪಸವ್ಯವಾಗಿ ಧರಿಸುತ್ತಾರೆ. ಅದನ್ನು **'ಹುರಿಗೆಜ್ಜೆ'** ಎಂದು ಹೇಳುತ್ತಾರೆ. ಎತ್ತುಗಳ ಕೊರಳಲ್ಲಿ ಕಟ್ಟಿದ ಗೆಜ್ಜೆಯ ಸರಗಳಿಗೂ 'ಹುರಿಗೆಜ್ಜೆ'ಯೆನ್ನುವರು. ಈ ಪದವು **ಉರಗೆಜ್ಜೆಯ** ಅಪಭ್ರಂಶ.

ಖಂಡೆಯ (೩–೪೩)—ಕಡೆತ, ಕೊರೆಯುವುದು ಎಂಬ ಅರ್ಥವು ಅಷ್ಟು ಸಾಧುವಲ್ಲ. 'ಆಯುಧ' ಎಂಬ ಮತ್ತೊಂದು ಅರ್ಥವನ್ನು ಇಟ್ಟುಕೊಳ್ಳಬಹುದು. ನವರಾತ್ರಿಯಲ್ಲಿ 'ಖಂಡೆಯ-ನವಮಿಯ' ದಿನ 'ಖಂಡೆಯ-ಪೂಜೆ' (ಆಯುಧ-ಪೂಜೆ) ಮಾಡುತ್ತಾರೆ.

ನಖಮಿತ್ತು (೮–೮೫)—ಉತ್ತರಕರ್ಣಾಟಕದಲ್ಲಿ **ಉಗುರೊತ್ತು** ಎಂಬ ಪಕ್ವಾನ್ನದ ಪದಾರ್ಥವನ್ನು ಗೋದಿಯ ಹಿಟ್ಟಿನಿಂದ ಮಾಡುತ್ತಾರೆ.

ಪರಡಿ (೮–೫೧)—ಗೋದಿಯ ಸೇವಗೆಯಲ್ಲ ಅದು. ಗೋದಿಯ ಹಿಟ್ಟಿನಿಂದ ಬಟ್ಟಲಿನ ಆಕಾರದ ಚಿಕ್ಕಚಿಕ್ಕ ಕಾಳುಗಳನ್ನು ಮಾಡುತ್ತಾರೆ. ಅದರ ಪಾಯಸ ಉತ್ತರಕರ್ಣಾಟಕದಲ್ಲಿ ಪ್ರಸಿದ್ಧ.

ವತ್ಸನಾಭಿ (೫–೧೪)—ಇದಕ್ಕೆ **ಬಚನಾಗವೆಂದು** ಉತ್ತರಕರ್ಣಾಟಕದಲ್ಲಿ ಹೆಸರಿದೆ.

ಶೈವಾಲ (೧–೧೩)—ಪಾಚಿ; ಉತ್ತರಕರ್ಣಾಟಕದಲ್ಲಿ **ಹಾವಸೆ.**

ಸರವಳಿಗೆ (೮–೫೧, ೮೫)—ಒಂದು ಬಗೆಯ ಭಕ್ಷ್ಯ ಎಂದು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಹೇಳುತ್ತಾರೆ. ಉತ್ತರಕರ್ಣಾಟಕದಲ್ಲಿ **ಸರಗುಳಿಗೆಯೆಂಬ** ಪಕ್ವಾನ್ನದ ಪದಾರ್ಥವಿದೆ. ಇದನ್ನು ಗೋಧಿಯ ಹಿಟ್ಟಿನಿಂದ ತಯಾರಿಸುತ್ತಾರೆ. ಅವು ಸಬ್ಬಕ್ಕಿಯ ಆಕಾರದವುಗಳು. 'ಸೇವಗೆ, ಸರಗುಳಿಗೆ, ಉಗುರೊತ್ತು, ಪರಡಿ, ಸವತಿಯ ಬೀಜ, ಗವಲಿ' ಮುಂತಾದ ಪದಾರ್ಥಗಳು ಗೋದಿಯ ಹಿಟ್ಟಿನಿಂದ ಮಾಡಲಾಗುತ್ತವೆ.

ಹಂಜಕ್ಕಿ (೨–೨೮)—ನವಣೆಯಕ್ಕಿ (?). ಉತ್ತರಕರ್ಣಾಟಕದಲ್ಲಿ ಅರ್ಧಬೆಂದ ಅನ್ನಕ್ಕೆ 'ಹಂಜಕ್ಕಿ' ಎಂದು ಹೇಳುವುದುಂಟು. ಅದನ್ನೇ 'ಉದುರಾದ ಅನ್ನ' ಎಂದು ಹೇಳಬಹುದು.

ಮೇಲಿನ ವಿಮರ್ಶೆಯಲ್ಲಿ ಕೆಲವು ಮಾತುಗಳು ಸಂಪಾದಕರ ಮನಸ್ಸಿನಲ್ಲಿ ಆಂದೋಲನೆಗಳನ್ನುಂಟುಮಾಡಬಹುದು. ಅದರಿಂದ ಅವರು ವಿಷಾದಗೊಳ್ಳಬಾರದೆಂದು ನಮ್ಮ ನಮ್ರ ಸೂಚನೆ. 'ನಡೆಯುವವನು ಎಡಹುತ್ತಾನೆ' ಎಂಬ ಮಾತನ್ನು ಅವರು ನೆನಪಿಗೆ ತರಬೇಕು. ನಡೆಯುವುದು ಎಷ್ಟು ಸ್ವಾಭಾವಿಕವೋ ಅಷ್ಟೇ ಸ್ವಾಭಾವಿಕವು ಎಡಹುವುದು. ಕುಳಿತಿರುವವನು ಎಂದೂ ಎಡಹುವುದಿಲ್ಲ.

ಕೊನೆಯಲ್ಲಿ, ಗ್ರಂಥವು ಸಂಶೋಧನಪರಿಶ್ರಮ-ಪಾಂಡಿತ್ಯಗಳಿಂದ ಗಾಡಿವಡೆದು ಸಹೃದಯರಿಗೆ ಹೃದಯಂಗಮವಾಗಿದೆ. ಹೀಗೆಯೇ ಅನೇಕ ಗ್ರಂಥಗಳು ಶ್ರೀ. ಡಿ. ಎಲ್. ನರಸಿಂಹಾಚಾರ್ಯರವರಿಂದ ಪ್ರಕಟವಾಗಲೆಂದು ಬಯಸುತ್ತೇವೆ.

ಕೆ. ಜಿ. ಕುಂದಣಗಾರ.

ಸಾದರ ಸ್ವೀಕಾರ

೧. **ಹದಿಬದೆಯ ಧರ್ಮ**—ಸಂಪಾದಿಕೆಯರು: ಶ್ರೀಮತಿ ಡಿ. ಚಂಪಾಬಾಯಿ, ಎಂ.ಎ.; ಪ್ರಕಾಶಕರು: ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೦, ಕ್ರೌನ್ ಅ. ೬೦ + ೧೪೧; ಬೆಲೆ, ೧೨ ಆಣೆ.

೨. **ರಾಘವಾಂಕ ಕವಿಯ ಸಿದ್ಧರಾಮ ಚಾರಿತ್ರ**—ಸಂಪಾದಕರು: ಪ್ರೊ. ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.; ಪ್ರಕಾಶಕರು: ಕರ್ಣಾಟಕಸಂಘ, ಶಿವಮೊಗ್ಗ, ೧೯೪೧, ಕ್ರೌನ್. ಅ. ೭೨ + ೨೦೪; ಬೆಲೆ, ರೂ. ೧-೮-೦.

೩. **ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ, ಭಾಗ ೧**—ಲೇಖಕರು: ಮಹಾತ್ಮಾ ಗಾಂಧಿ; ಅನುವಾದಕರು, ಶ್ರೀಮಾನ್ ಎಸ್, ವಿ. ಕೃಷ್ಣಮೂರ್ತಿರಾವ್, ಬಿ.ಎ. ಎಲ್‌ಎಲ್.ಬಿ. ಪ್ರಕಾಶಕರು: ಕಾವ್ಯಾಲಯ, ಶಿವಮೊಗ್ಗ, ೧೯೪೧. ಕ್ರೌನ್. ಅ. ೧೬ + ೧೪೪; ಬೆಲೆ, ೧೨ ಆಣೆ.

೪. **ಮಗಳಿಗೆ ತಂದೆಯ ಓಲೆಗಳು**—ಲೇಖಕರು: ಪಂ. ಜವಾಹರಲಾಲನೆಹರು: ಕನ್ನಡಿಸಿದವರು: ಶ್ರೀ ಕಪಟರಾಳ ಕೃಷ್ಣರಾಯರು; ಪ್ರಕಾಶಕರು: ಸಾಹಿತ್ಯಭಂಡಾರ, ಹುಬ್ಬಳ್ಳಿ, ೧೯೪೧. ಕ್ರೌನ್. ಅ. ೧೬ + ೧೧೮; ಬೆಲೆ, ರೂ. ೧.

೫. **ವಯಸ್ಕರ ಓದುವ ಪುಸ್ತಕ**—ಪ್ರಕಾಶಕರು: ಅಕ್ಷರ ಪ್ರಚಾರಸಮಿತಿ, ವಿಶ್ವವಿದ್ಯಾನಿಲಯಸಂಘ, ಮೈಸೂರು, ೧೯೪೧. ಕ್ರೌನ್. ಅ. ೧೦ + ೧೦೪; ಬೆಲೆ?

೬. **ಮೈಸೂರಿನ ಆಡಳಿತಕ್ರಮ** (ಹೊಸ ಸುಧಾರಣೆಗಳು)—ಲೇಖಕರು: ಶ್ರೀಮಾನ್ ಎ. ಶೇಷ ಐಯಂಗಾರ್, ಎಂ.ಎ.; ಪ್ರಕಾಶಕರು: ಅಕ್ಷರ ಪ್ರಚಾರಸಮಿತಿ, ಮೈಸೂರು; ವಯಸ್ಕರ ಶಿಕ್ಷಣ ಪುಸ್ತಕಮಾಲೆಯ, ಸಂಖ್ಯೆ ೧. ಕ್ರೌನ್. ಅ. ೨೪; ಬೆಲೆ, ಅರ್ಧಾಣೆ.

೭. **ಜ್ಞಾನೋಪಾಸನೆ**—ಬರೆದವರು: ಪ್ರೊ. ಶ್ರೀ. ನಾ. ಬನಹಟ್ಟಿ, ಎಂ.ಎ., ಅನುವಾದಕರು: "ಸ್ವಾತಂತ್ರ್ಯಪ್ರಿಯರು". ಮಿಂಚಿನಬಳ್ಳಿಯ ನಾಲ್ಕನೆಯ ವರ್ಷದ ೧-೨ನೆಯ ಕುಡಿ. ೧೯೪೧. ಕ್ರೌನ್. ಅ. ೮ + ೨೩೨; ಬೆಲೆ, ರೂ. ೧-೮-೦.

೮. **ಬಿಡುಗಡೆಯ ಬೆಲೆ** (ಒಬ್ಬ ಸ್ವಯಂಸೇವಕನ ದಿನಚರಿ)—ಬರೆದವರು: ಶ್ರೀಮಾನ್ ವಡಗೇನಹಳ್ಳಿ ಅಶ್ವಥನಾರಾಯಣರಾವ್; ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ; ೪೩ನೆಯ ಕುಸುಮ; ಕ್ರೌನ್. ಅ. ೧೦ + ೧೪೬; ಬೆಲೆ, ೧೪ ಆಣೆ.

೯. **೧೯೪೨ನೆಯ ಇಸವಿಯ ಮಿಡಲ್ ಮತ್ತು ಅಪ್ಪರ್ ಪ್ರೈಮರಿ ಪರೀಕ್ಷೆಗಳಿಗೆ ಗೊತ್ತಾದ ಕನ್ನಡ ಗ್ರಂಥಗಳು**—ಡೆಮಿ. ಅ. ೮ + ೧೮೪; ಬೆಲೆ, ರೂ. ೨-೫-೯

೧೦. ೧೯೪೨ನೆಯ ಇಸವಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಗೊತ್ತಾದ ಕನ್ನಡ ಪದ್ಯಸಂಗ್ರಹ—ಡೆಮಿ. ಅ. ೧೩ + ೬೬; ಬೆಲೆ, ರೂ. ೦-೪-೬.

೧೧. ಅಂಕಗಣಿತದ ಮೊದಲನೆಯ ಪುಸ್ತಕ—ಲೇಖಕರು: ಶ್ರೀಮಾನ್. ಬಿ. ಸುಬ್ಬಣ್ಣಾಚಾರ್, ಬಿ.ಎಸ್‌ಸಿ., ಬಿ.ಟಿ.; ಡೆಮಿ. ಅ. ೧೮ + ೧೬೦; ಬೆಲೆ, ರೂ. ೦-೪-೯.

೧೨. ಅಂಕಗಣಿತ (ಎರಡನೆಯ ಪುಸ್ತಕ)—ಲೇಖಕರು: ಶ್ರೀಮಾನ್ ಟಿ. ಎಸ್. ರಾಮ ಶಾಸ್ತ್ರಿ, ಬಿ.ಎ., ಬಿ.ಟಿ.; ಡೆಮಿ. ಅ. ೧೦ + ೧೯೩; ಬೆಲೆ, ರೂ. ೦-೫-೬.

ಮೇಲಿನ ನಾಲ್ಕು ಪುಸ್ತಕಗಳೂ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯಿಂದ ಪ್ರಕಾಶಿತವಾಗಿವೆ.

೧೩-೨೮. ಶ್ರೀವಿಷ್ಣು ಸಹಸ್ರನಾಮ ಸ್ತೋತ್ರ; ಶ್ರೀಕೃಷ್ಣಾಷ್ಟೋತ್ತರ ಶತನಾಮಸ್ತೋತ್ರ; ವಾಯುಸ್ತುತಿಃ; ದ್ವಾದಶಸ್ತೋತ್ರಂ; ದಶಾವತಾರಸ್ತೋತ್ರ; ಲಕ್ಷ್ಮೀಹೃದಯಂ; ದೇವಪೂಜಾ ವಿಧಿ; ಗೋಪೀಗೀತಂ; ಹರಿಭಕ್ತಿಸಾರ; ಯಜುರ್ವೇದಿ ಶ್ರೀಸೂಕ್ತ ಪುರುಷಸೂಕ್ತ; ಋಗ್ವೇದಿ ಶ್ರೀಸೂಕ್ತ ಪುರುಷಸೂಕ್ತ; ಸುಂದರಕಾಂಡ ಕಥಾ ಸಂಗ್ರಹ; ಗಜೇಂದ್ರಮೋಕ್ಷಃ; ಆದಿತ್ಯ ಹೃದಯಂ; ಅಭಿಷೇಕ ಸೂಕ್ತಗಳು—ಕ್ರೌನ್, ಅ. ದ ಆಕಾರ. ಪರಿಶೋಧಕರು: ಸಾಹಿತ್ಯ ವಿದ್ವಾನ್, ವೇದಾಂತ ಶಿರೋಮಣಿ, ಪಿ. ಶ್ರೀನಿವಾಸತಂತ್ರಿಗಳು; ಪ್ರಕಾಶಕರು: ಪಿ. ಎ. ಉಪಾಧ್ಯಾಯರು; ಉಡುಪಿ (ಬ್ರಾಂಚ್, ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ, ಬೆಂಗಳೂರು.)

೨೯. ಅಂದಿನ ಆವೂರು—ಲೇಖಕರು: ಎಮ್. ಎನ್. ಕಾಮತ್. ಪ್ರಕಾಶಕರು: ಮಿತ್ರಮಂಡಳಿ, ಮಂಗಳೂರು. ೧೯೪೧. ಅಖಿಲ ಸೇವಾ ಗ್ರಂಥಮಾಲೆಯ ೧೧ನೆಯ ಕುಸುಮ; ಕ್ರೌನ್. ಅ. ೬೮ + ೧೧೮; ಬೆಲೆ, ೧ ರೂ.

೩೦. ಅಕ್ಕನ ಬಾಳು—ಲೇಖಕರು: ಶ್ರೀ ಚನ್ನಬಸವರಾಜೇಂದ್ರಸ್ವಾಮಿಗಳು, ಗೊಳೂರು ಶ್ರೀ ನಿಡುಮಾಮಿಡಿ ಮಠ; ಪ್ರಕಾಶಕರು: ಮಡಿವಾಳಪ್ಪ ಅಂಡ್ ಬ್ರದರ್ಸ್, ಗದಗ ಸಿಟಿ ಕ್ರೌನ್. ಅ. ೧೦ + ೮೪; ಬೆಲೆ, ೮ ಆಣೆ.

೩೧. ಬಾಳಿದ ಊರುಗಳು ೧ (ಬಸುರಿವಾಳು)—ಲೇಖಕರು: ಶ್ರೀಮಾನ್ ಬಿ. ಎಸ್. ಚಂದ್ರಶೇಖರಯ್ಯ, ಬಿ.ಎ., ಎಲ್.ಜಿ.; ೧೯೪೧. ಪ್ರಕಾಶಕರು: ಶ್ರೀ ಬಿ. ಶ್ರೀಕಂಠಯ್ಯನವರು, ಬೆಂಗಳೂರು; ಕ್ರೌನ್. ಅ. ೧೬+೬೬; ಬೆಲೆ, ೪ ಆಣೆ.

೩೨. ಚಂದ್ರಗುಪ್ತಮೌರ್ಯ—ಲೇಖಕಿಯರು: ಶ್ರೀಮತಿ ಆರ್. ಕಲ್ಯಾಣಮ್ಮ; ಬೆಂಗಳೂರು, ಕ್ರೌನ್. ಅ. ೬೪; ಬೆಲೆ, ೬ ಆಣೆ.

೩೩. ಬೆಳಗು—ಸಂಚಿಕೆ ೪, ಸಂಪುಟ ૩; ಏಪ್ರಿಲ್, ೧೯೪೧. ಸಚಿತ್ರ ಕೈಬರಹದ ಪತ್ರಿಕೆ; ಲೇಖಕರು ಮತ್ತು ಪ್ರಕಾಶಕರು: ಬೆಳಗಿನ ಸದಸ್ಯರು, ಗೋಕಾಕ, ಬೆಳಗಾಂ ಡಿಸ್ಟ್ರಿಕ್ಟು.

೩೪. ಶ್ರೀಮಹಾದೇವಿಯಮ್ಮನ ವಚನಗಳು—ಸಂಗ್ರಾಹಕರು, ಶ್ರೀ ನಿಡುಮಾಮಿಡಿ ಸಂಸ್ಥಾನದ ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರಸ್ವಾಮಿಗಳು; ಪ್ರಕಾಶಕರು: ಶ್ರೀ ಸಿದ್ಧವೀರದೇವರು, ಹೊಸಮಠ, ಹುಬ್ಬಳ್ಳಿ, ೧೯೪೦; ಕ್ರೌನ್. ಅ. ೪ + ೨೪; ಬೆಲೆ, ೨ ಆಣೆ.

೩೫. **ಶ್ರೀ ಸದ್ಗುರು ಮಹಿಮೆ**—ಲೇಖಕರು: ಶ್ರೀ. ರಾ. ವೇಂಕಟಸುಬ್ಬಶಾಸ್ತ್ರೀ ಭಾರತಿಗಳು; ಡೆಮಿ ಷೋ. ೧೬; ಬೆಲೆ, ೬ ಪೈ.

೩೬. **ಗದ್ಯಕನ್ನಡಮಾಲೆ ೨**—ಸಂಪಾದಕರು: ಶ್ರೀಮಾನ್ ಎಸ್. ಎಸ್. ಮಾಳವಾಡ, ಎಂ.ಎ.; ಪ್ರಕಾಶಕರು: ಸ್ಟೂಡೆಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ, ೧೯೪೧; ಕ್ರೌನ್ ಅ. ೨೪ + ೧೬೪; ಬೆಲೆ, ರೂ. ೧.

೩೭. **ಭಕ್ತ ಸಿರಿಯಾಳಸೆಟ್ಟಿ**—ಲೇಖಕರು: ಶ್ರೀಮಾನ್ ಜಿ. ವಿ. ದೊಡ್ಡವೀರಪ್ಪ, ಬಿ.ಎ., ಬೆಂಗಳೂರು, ೧೯೪೧. ಕ್ರೌನ್ ಅ. ೬೬, ಬೆಲೆ. ?

೩೮. **ಪ್ರಬಂಧಪ್ರಕಾಶ** (ಕಿರಿಯರ ಆವೃತ್ತಿ)—ಬರೆದವರು: ಶ್ರೀಮಾನ್ ಮ. ಶ್ರೀ ದೇಶಪಾಂಡೆ, ಎಂ.ಎ., ಅಥಣಿ. ಎರಡನೆಯ ಮುದ್ರಣ, ೧೯೪೧. ಕ್ರೌನ್. ಅ. ೮ + ೧೭೨; ಬೆಲೆ, ೧೨ ಆಣೆ.

೩೯. **ಅಮೃತ**—ಸಂಪಾದಕರು: ಶ್ರೀಮಾನ್ "ಮಧುರಚೆನ್ನ" ಹಲಸಂಗಿ, ಜಿ. ಬಿಜಾಪುರ; ಸಂಚಿಕೆ ೧, ಸಂಪುಟ ೧. (೨೦-೨-೧೯೪೧.), ಸಚಿತ್ರ; ಕ್ರೌನ್. ಅ. ೨೪. ವಾರ್ಷಿಕ ಚಂದಾ ರೂ. ೨.

೪೦. **The Bombay Karnataka.**—A Ceographical Survey. ಲೇಖಕರು ಶ್ರೀಮಾನ್ ಬಿ.ಎಸ್. ಶೇಷಗಿರಿ, ಬಿ.ಎಜಿ., ಬಿ.ಎಸ್‌ಸಿ., ಎಂ.ಎಸ್‌ಸಿ., ಲಿಂಗರಾಜ ಕಾಲೇಜು, ಬೆಳಗಾಂ; ೧೯೪೧; ಕ್ರೌನ್. ಅ. ೮ + ೨೦೮; ಬೆಲೆ, ೨ ರೂ.

೪೧. **ಕರ್ಣಪಾರ್ಯವಿರಚಿತಂ ನೇಮಿನಾಥಪುರಾಣಂ**(ಹರಿವಂಶ ಪುರಾಣಂ)—ಸಂಪಾದಕರು: ಶ್ರೀಮಾನ್ ಎಚ್. ಶೇಷಯ್ಯಂಗಾರ್. ಮದರಾಸ್ ಯೂನಿವರ್ಸಿಟಿ ಕರ್ಣಾಟಕ ಗ್ರಂಥಮಾಲಾ ಸಂಖ್ಯೆ ೮, ೧೯೪೦. ರಾಯಲ್ ಅ. ೬೦ + ೬೦೦; ಬೆಲೆ, ೫ ರೂಪಾಯಿ.

ವಸ್ತುಕೋಶ

ಕೃತಜ್ಞತೆ

ಈ ಸಂಚಿಕೆಯಿಂದ "ಪ್ರಬುದ್ಧ ಕರ್ಣಾಟಕ"ದ ಇಪ್ಪತ್ತ ಮೂರನೆಯ ಸಂಪುಟವು ಆರಂಭವಾಗುತ್ತದೆ. ಇದನ್ನು ಇದುವರೆಗೆ ಪೋಷಿಸಿ ಕೊಂಡು ಬಂದಿರುವ ವಿದ್ವಲ್ಲೇಖಕರ ಮತ್ತು ಗ್ರಾಹಕರ ಮಂಡಲಿಗೆ ಈ ಮೂಲಕ ನಮ್ಮ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ.

*
* *


ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವ

ಮೈಸೂರಿನಲ್ಲಿ, ವಿಶ್ವವಿದ್ಯಾನಿಲಯದ ಸಂಬಂಧವಾಗಿ ಈಚೆಗೆ ನಡೆದ ದೊಡ್ಡ ಸಂಗತಿ—ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವ. ಭರತಖಂಡದ ನಾನಾ ವಿಶ್ವವಿದ್ಯಾನಿಲಯಗಳ, ಹಲವು ವಿದ್ವತ್ಪ್ರತಿನಿಧಿಗಳು ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದದ್ದು ಒಂದು ಅಪೂರ್ವ ಸಂದರ್ಭ. ನಮ್ಮ ವಿಶ್ವವಿದ್ಯಾನಿಲಯದ ನಾನಾ ಸಂಸ್ಥೆಗಳ ಅಧ್ಯಾಪಕರನ್ನೂ ಆಗ ಒಂದು ಕಡೆ ನೋಡುವ ಸುಯೋಗ ದೊರೆತಿತ್ತು. ಹಬ್ಬವು ವೈಭವದಿಂದಲೂ ಸಂಭ್ರಮದಿಂದಲೂ ನಡೆಯಿತು. ಇದರ ವಿವರವನ್ನು ಮುಂದೆ ಈ ಸಂಚಿಕೆಗೆ ಅನುಬಂಧವಾಗಿ ಕೊಟ್ಟಿದೆ.

*
* *

ದಿವಂಗತ ರವೀಂದ್ರನಾಥ ಠಾಕೂರರವರು

ಇದೇ ಆಗಸ್ಟ್ ತಿಂಗಳು ೭ನೆಯ ತಾರೀಖಿನ ದಿನ ಶ್ರೀ ರವೀಂದ್ರನಾಥ ಠಾಕೂರರವರು ತಮ್ಮ ೮೧ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಕೂಡಲೆ ಈ ವರ್ತಮಾನವು ಕಾಡುಕಿಚ್ಚಿನಂತೆ ಭರತಖಂಡದ ಆದ್ಯಂತವಾಗಿ ಹಬ್ಬಿತು. ಅವರ ಮರಣದಿಂದ ಆಧುನಿಕ ಪ್ರಪಂಚಕ್ಕೇ ಆಗಿರುವ ಒಂದು ನಷ್ಟವನ್ನೂ ಶೋಕವನ್ನೂ ಸೂಚಿಸಲು ಎಲ್ಲೆಲ್ಲಿಯೂ ಸಂತಾಪ ಸಭೆಗಳು ನಡೆದುವು. ಮಹಾರಾಜಾ ಕಾಲೇಜಿನ ಅಂಗಳದಲ್ಲಿಯೂ ಮರುದಿನ ಸಂಜೆ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಒಂದು ದೊಡ್ಡ ಸಭೆ ಸೇರಿ, ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಭಾಷಣಗಳನ್ನು ಮಾಡಿ, ಒಂದು ಗೊತ್ತುವಳಿಯನ್ನು ಅಂಗೀಕರಿಸಿ, ಅದನ್ನು ರವೀಂದ್ರರ ಬಂಧುಗಳಿಗೆ ಕಳುಹಿಸಿ ಕೊಟ್ಟಿತು. ಅದನ್ನು ಮುಂದೆ ಕನ್ನಡಿಸಿ ಕೊಟ್ಟಿದೆ :—



ಡಾಕ್ಟರ್ ಶ್ರೀ. ರವೀಂದ್ರನಾಥ ಠಾಕೂರ್ ಅವರು

(ಜನನ: ಮೇ ೬, ೧೮೬೧ — ಮರಣ: ಆಗಸ್ಟ್ ೭, ೧೯೪೧)

ಪಡಿಯಚ್ಚು: ಶ್ರೀ. ಬಿ. ಎಸ್. ಅಯ್ಯಂಗಾರ್ ಅವರು ದಯೆಯಿಟ್ಟು ಕೊಟ್ಟುದು

"ಗುರುದೇವ ಠಾಕೂರರ ಆವಶ್ಯಕತೆ ಪ್ರಪಂಚಕ್ಕೆ ತೀವ್ರವಾಗಿದ್ದ ಸಮಯದಲ್ಲಿ ಅವರು ವಿಧಿವಶರಾದದ್ದರಿಂದ ನಮಗುಂಟಾಗಿರುವ ಅತಿಶಯ ನಷ್ಟವನ್ನು ನೆನೆದು, ಮೈಸೂರು ಮಹಾರಾಜರವರ ಕಾಲೇಜಿನ ಮತ್ತು ಇಣ್ಟರ್ ಮೀಡಿಯೆಟ್ ಕಾಲೇಜಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ, ವಿಶ್ವವಿದ್ಯಾನಿಲಯ ಸಂಘದ ಸದಸ್ಯರೂ ಆದ ನಾವು ತುಂಬ ಶೋಕಪಡುತ್ತಿದ್ದೇವೆ. ಭರತಖಂಡವು ತನ್ನ ಕವಿಯನ್ನು, ಭವಿಷ್ಯ ದರ್ಶಿಯನ್ನು, ಆಚಾರ್ಯನನ್ನು ಕಳೆದುಕೊಂಡಿತೆಂದೂ, ಪ್ರಪಂಚವು ಪ್ರಾಚ್ಯ ಪಾಶ್ಚಾತ್ಯ ಸಂಸ್ಕೃತಿಗಳ ಸಂಗಮಕ್ಕಾಗಿ ನಿಲುವಿಲ್ಲದೆ ದುಡಿಯುತ್ತಿದ್ದ ಶ್ರೇಷ್ಠ ಪೌರನನ್ನು ಕಳೆದುಕೊಂಡಿತೆಂದೂ ಅರಿಯುತ್ತೇವೆ. ನಮಗೆ ಸಮಾಧಾನ ತಂದು ಕೊಳ್ಳಲು ಆಗಿರುವುದು ರವೀಂದ್ರನಾಥ ಠಾಕೂರರ ಚೈತನ್ಯ ಅಮರವಾದದ್ದರಿಂದ. ಅವರು ತಮ್ಮ ಗೀತಗಳಲ್ಲೂ, ತಮ್ಮಿಂದ ಸ್ಫೂರ್ತಿಪಡೆದ ಅಸಂಖ್ಯ ಸ್ತ್ರೀಪುರುಷರಲ್ಲೂ ಜೀವಿಸಿದ್ದಾರೆ. ನಮ್ಮ ಆಲೋಚನೆಗಳೆಲ್ಲ ಅವರ ಬಂಧುಗಳಲ್ಲಿ, ಆಪ್ತೇಷ್ಟರಲ್ಲಿ ನೆಲಸಿವೆ; ಇವರಿಗೆ ತಟ್ಟಿರುವ ನಷ್ಟದ ಭಾವವನ್ನು ಕಾಲಗತಿ ಕೂಡ ಕುಗ್ಗಿಸ ಲಾರದು. ಈ ದಾರುಣವಾದ ಗಳಿಗೆಯಲ್ಲಿ ಇವರೆಡೆಗೆ ನಮ್ಮ ಹೃದಯಗಳೂ ಹರಿದು ಪರಿತಪಿಸುತ್ತಿವೆ.''

ಮೈಸೂರು ವಿಶ್ವವಿದ್ಯಾನಿಲಯವು, ಕವಿಗಳೂ ಕವಿಹೃದಯಜ್ಞರೂ ಆದ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್, ಎಂ.ಎ., ಅವರಿಂದ ಈಗ ಆರು ವರ್ಷಗಳ ಹಿಂದೆ ರವೀಂದ್ರರವರ ಜೀವನಚರಿತ್ರೆಯನ್ನು ಬರೆಯಿಸಿ ಪ್ರಕಟಿಸಿದರು. ಶ್ರೀಮಾನ್ ವೆಂಕಟೇಶಯ್ಯಂಗಾರ್ಯರು ಇಂಗ್ಲಿಷಿನಲ್ಲಿಯೂ ಮೂಲದಲ್ಲಿಯೂ ಠಾಕೂರರವರ ಗ್ರಂಥಗಳನ್ನು ಸ್ವತಃ ಓದಿ ಪರಿಚಯಮಾಡಿಕೊಂಡದ್ದೇ ಅಲ್ಲದೆ ಶಾಂತಿನಿಕೇತನಕ್ಕೇ ಹೋಗಿ ಕವಿವರ್ಯರನ್ನು ಸಂದರ್ಶಿಸಿ ಎಷ್ಟೋ ವಿಷಯಗಳನ್ನು ನೇರವಾಗಿ ಅವರಿಂದಲೇ ತಿಳಿದುಕೊಂಡು ಅಮೂಲ್ಯವಾದ ಗ್ರಂಥವನ್ನು ಬರೆದಿದ್ದಾರೆ. ರವೀಂದ್ರರು ಜೀವಂತರಾಗಿದ್ದಾಗಲೇ ಅವರಿಗೆ ಈ ಕಾಣಿಕೆ ಸಲ್ಲಿಸಲು ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಾಧ್ಯವಾದದ್ದು, ಅವರಿಗೆ ಆಗ ಸಂತೋಷವನ್ನೂ ನಮಗೆ ಈಗ ಒಂದು ವಿಧವಾದ ಸಮಾಧಾನವನ್ನೂ ತರಲು ಅವಕಾಶಕೊಟ್ಟಿತು.

ಶ್ರೀ ರವೀಂದ್ರರು ಬಂಗಾಳಿಗಳು, ಆದರೂ ಹದಿನಾರಾಣೆಯ ಭಾರತೀಯರು; ಅಷ್ಟೇ ಅಲ್ಲ; ಸಾರ್ವಲೌಕಿಕ ವ್ಯಕ್ತಿಗಳಲ್ಲಿ ಒಬ್ಬರು. ಅವರ ವ್ಯಕ್ತಿತ್ವಸಾಮರ್ಥ್ಯಗಳ ಔನ್ನತ್ಯವು ಬಹುದೂರಕ್ಕೆ ಕಾಣುವ ಮಹಾಪರ್ವತ ಶಿಖರದ ಔನ್ನತ್ಯದಂತೆ. ಅವರು ಕೇಶವಚಂದ್ರಸೇನ, ರಾಜಾ ರಾಮಮೋಹನರಾಯ್, ಈಶ್ವರಚಂದ್ರವಿದ್ಯಾಸಾಗರ, ಬಂಕಿಂಚಂದ್ರಚಟ್ಟೋಪಾಧ್ಯಾಯ, ಸ್ವಾಮಿವಿವೇಕಾನಂದ ಈ ಮಹಾ ವ್ಯಕ್ತಿಗಳ

ಪಂಕ್ತಿಗೆ ಸೇರಿ ಬಂಗಾಳಕ್ಕೆ, ಬಂಗಾಳಿಗೆ, ಆ ಮೂಲಕ ಭರತಖಂಡಕ್ಕೆ, ಭಾರತೀಯರಿಗೆ, ಪ್ರಾಶಸ್ತ್ಯವನ್ನೂ ಪ್ರಶಸ್ತಿಯನ್ನೂ ತಂದವರು. ಅವರು ಒಂದು ಮಾತನ್ನಾಡಿದರೆ, ಅದು ಪ್ರಪಂಚವೆಲ್ಲಕ್ಕೂ ಕೇಳುತ್ತಿತ್ತು; ಒಂದು ಕಾರ್ಯವನ್ನು ಮಾಡಿದರೆ ಅದರ ಬೆಳಕು ಜಗತ್ತಿನಲ್ಲೆಲ್ಲಾ ಬೀಳುತ್ತಿತ್ತು. ಅವರು ಅಂಥ ಯೋಗ್ಯತೆ, ಗೌರವ ಧೀಶಕ್ತಿಗಳನ್ನು ಗಳಿಸಿಕೊಂಡಿದ್ದರು. ಆದ್ದರಿಂದ ವಿಶ್ವಮಾನ್ಯವಾದ ನೋಬೆಲ್ ಬಹುಮಾನವು ಅವರನ್ನು ವರಿಸಿಬಂತು.

ರವಿಯ ದೃಷ್ಟಿಯು ಹೇಗೋ ರವೀಂದ್ರರ ದೃಷ್ಟಿಯೂ ಹಾಗೇ ವಿಶ್ವವ್ಯಾಪಿಯಾದದ್ದು; ಆದ್ದರಿಂದ ಅವರು ಪ್ರತಿಯೊಂದನ್ನೂ ವಿಶ್ವದೃಷ್ಟಿಯಿಂದಲೇ ನೋಡುತ್ತಿದ್ದರು. ವಿಶ್ವಭಾರತಿಯನ್ನು ಸ್ಥಾಪಿಸಿದರು; ಅಲ್ಲಿ ವಿಶ್ವದ ನಾನಾ ಕಡೆಯಿಂದ ಸುಪ್ರಸಿದ್ಧರಾದ, ಪ್ರಥಮಶ್ರೇಣಿಯ, ವಿದ್ವಾಂಸರು ಬಂದು ತಮ್ಮ ಪೂರ್ಣ ಪಾಂಡಿತ್ಯದ, ಪರಿಪಕ್ವವಾದ ಬುದ್ಧಿಯ, ಸಂಸ್ಕಾರಗೊಂಡ ಸಂಸ್ಕೃತಿಯ, ಮಧುರ ಫಲವನ್ನು ಕೊಟ್ಟು ಹೋದರು. ಇದು ಎಷ್ಟು ಸ್ವಲ್ಪಕಾಲ ನಡೆಯಲಿ, ಈ ಭಾವವೂ, ಏರ್ಪಾಡೂ, ಯೋಜನೆಯೂ ಪ್ರಪಂಚದ ಮತ್ತಾವ ವಿದ್ಯಾಸಂಸ್ಥೆಯಲ್ಲಿಯೂ ಕಂಡದ್ದಲ್ಲ, ಕೇಳಿದ್ದಲ್ಲ. ವಿಶ್ವಭಾರತಿಯ ದಯೆಯಿಂದಲೇ ನಾವೂ ಮೈಸೂರಿನಲ್ಲಿ ಸಿಲ್ವೇಲೆವಿ, ವಿಂಟರ್‌ನಿಟ್ಸ್ ಮುಂತಾದ ನಾನಾ ಜನಾಂಗಗಳ ವಿದ್ವನ್ಮಕುಟಗಳಂತಿದ್ದ ವಿದ್ವಾಂಸರನ್ನು ನೋಡುವಂತಾದದ್ದು.

ಅವರ ಜೀವನದ, ಭಾವದ, ಭಾವನೆಯ, ಪ್ರತಿಯೊಂದು ವಿವರದಲ್ಲಿಯೂ ಒಂದು ವಿಶೇಷತೆಯಿತ್ತು. ಅವರನ್ನು ಒಂದುಸಾರಿ ನೋಡಿದರೆ ಸಾಕು, ಇದೊಂದು ಅಪೂರ್ವವಾದ, ಅಸಾಧಾರಣವಾದ ವ್ಯಕ್ತಿಯೆಂದು ಯಾರಿಗಾದರೂ ಮನವರಿಕೆಯಾಗುವಂತಿತ್ತು. ವಿಶ್ವವಿದ್ಯಾನಿಲಯದ ಯಾವುದೊಂದು ಪದವಿಯನ್ನೂ ಪರೀಕ್ಷೆ ಕೊಟ್ಟು ಸಂಪಾದಿಸದಿದ್ದರೂ, ಹಾಗೆ ದೊಡ್ಡದೊಡ್ಡ ಪದವಿಗಳನ್ನು ಪಡೆದವರಿಗಿಂತ ಮೇಲ್ಮೆಯಾಗಿದ್ದವರು ರವೀಂದ್ರರು. ಇಂಗ್ಲಿಷಿನಲ್ಲಿ ಇಂಗ್ಲಿಷರಿಗಿಂತ ಚೆನ್ನಾಗಿ ಬರೆಯಬಲ್ಲವರಾಗಿದ್ದರೂ, ಮೊದಲು ಬಂಗಾಳಿಯಲ್ಲಿ ಬರೆಯುತ್ತಿದ್ದ ಭಾಷಾಭಿಮಾನಿಗಳು. ಕಲ್ಕತ್ತಾ ವಿಶ್ವವಿದ್ಯಾನಿಲಯದ ಪದವೀಧರರಿಗೆ ಅವರು ಬಂಗಾಳಿಯಲ್ಲಿ ಉಪದೇಶಭಾಷಣಮಾಡಿದ್ದು ಎಲ್ಲ ವಿಧದಿಂದಲೂ ಒಂದು ಅಪೂರ್ವವಾದ ಘಟನೆ.

ಅವರು ಕವಿಗಳು ಮಾತ್ರವಲ್ಲ; ಗದ್ಯ, ಪದ್ಯ, ನಾಟಕ ಪ್ರಬಂಧಗಳನ್ನು ಬರೆದದ್ದಷ್ಟೇ ಅಲ್ಲ. ಅವುಗಳಲ್ಲಿ ಏನು ಸತ್ವ, ವೈವಿಧ್ಯ, ನವೀನತೆ! ಅವರ ಸಣ್ಣಕಥೆಗಳು ದೊಡ್ಡರತ್ನಗಳು. ಸಾಹಿತ್ಯದ ಜೊತೆಗೆ ಸಂಗೀತ, ಚಿತ್ರಕಲೆ, ನಾಟ್ಯ, ಮಾಧುರ್ಯ, ಸೌಂದರ್ಯ, ಸಂಪತ್ತು, ದೇಶಾಭಿಮಾನ ಹೀಗೆ ಮತ್ತಾರಲ್ಲಿ ಒಟ್ಟಿಗೆ ಸೇರಿದ್ದಾವು?

ಸೃಷ್ಟಿಕರ್ತನು ಅವರಿಗೆ ಇವೆಲ್ಲವನ್ನೂ ತನಗೆ ಎಷ್ಟು ಕೈಗಳಿವೆಯೋ ಅಷ್ಟು ಕೈಗಳಿಂದಲೂ ಧಾರಾಳವಾಗಿ ಕೊಟ್ಟಿದ್ದನು.

ಅವರ ಮರಣದಿಂದ ಸಂಸ್ಕೃತಿ ಪ್ರಪಂಚಕ್ಕೇ ನಷ್ಟ.—ಮುಖ್ಯವಾಗಿ ಭರತಖಂಡಕ್ಕೆ. ನಮ್ಮ ದೇಶ ಈಗ ವಿಷಮಸ್ಥಿತಿಯಲ್ಲಿದೆ, ದುರ್ಬಲಸ್ಥಿತಿಯಲ್ಲಿದೆ. ಅದಕ್ಕೆ ಅವಲಂಬನ ಬೇಕು, ಪೋಷಣೆ ಬೇಕು, ಪ್ರೋತ್ಸಾಹ ಬೇಕು. ರವೀಂದ್ರರು ಇವೆಲ್ಲವೂ ಆಗಿದ್ದರು; ಅವರು ಸ್ವರ್ಗಸ್ಥರಾದ್ದರಿಂದ ನಾವು ಇವೆಲ್ಲವನ್ನೂ ಕಳೆದುಕೊಂಡೆವು.

ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೂ ಸದ್ಗತಿಯನ್ನೂ ದಯಪಾಲಿಸಲಿ.

ಪ್ರಾಚ್ಯಲೇಖನಾವಳಿ

ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ—ಜನವರಿ, ೧೯೪೧.

ವೈದಿಕ ವಾಙ್ಮಯದಲ್ಲಿ ರಂಗ ಮುಂತಾದವುಗಳ ಲೇಖನ ಮತ್ತು ಉಚ್ಚಾರಣ—ವಿದ್ಯಾನಿಧಿ ಸಿದ್ಧೇಶ್ವರಶಾಸ್ತ್ರೀ ಚಿತ್ರಾವ.

(ರಂಗವು ಅನುನಾಸಿಕ; ಅನುಸ್ವಾರ ಮತ್ತು ಗುಂಕಾರಗಳಿಂದ ಬೇರೆ; ಅದರ ಭೇದಗಳು ೧೮; ಅದಕ್ಕೆ ೧, ೧⅓, ೨, ೨⅓ ಮಾತ್ರೆಗಳು; ಋಗ್ವೇದ ಮಂತ್ರಗಳಿಗೆ ಮಾತ್ರ ರಂಗಗಳಿವೆ; ಇವುಗಳ ವಿಚಾರವನ್ನು ಪ್ರಾತಿಶಾಖ್ಯ, ಶಿಕ್ಷಾ, ಅಷ್ಟಾಧ್ಯಾಯಿಗಳಲ್ಲಿ ಹೇಳಿದೆ.)

ಜೈನಸಿದ್ಧಾಂತ ಭಾಸ್ಕರ—ಜೂನ್, ೧೯೪೧.

೧. 'ಜೈನಪುರಾಣ' (೧)—ಕೆ. ಭುಜಬಲಶಾಸ್ತ್ರೀ.

೨. 'ಶ್ರವಣಬೆಳ್ಗೊಳಕೆ ಶಿಲಾಲೇಖೋಮೆ ಭೌಗೌಳಿಕನಾಮ'—ಕಾಮತಾಪ್ರಸಾದ ಜೈನ.

೩. 'ಶ್ರವಣಬೆಳ್ಗೊಳಕೆ ಶಿಲಾಲೇಖೊಮೆ ಕತಿಪಯ ಜೈನಾಚಾರ್ಯ'—ವಿ. ಆರ್. ರಾಮಚಂದ್ರ ದೀಕ್ಷಿತರ್.

೪. 'ತತ್ವಾರ್ಥಸೂತ್ರ ಔರ ಅಕಲಂಕ'—ಪ್ರೊ. ಜಗದೀಶಚಂದ್ರ.

೫. 'Jaina Literature in Tamil'—A. CHAKRAVARTHI.

೬. 'New Studies in South Indian Jainism, III: Sravanabelgola Culture.'

೭. 'Jaina Traditions in Rajavali Kathe'—S. SRIKANTHA SASTRI.

Bulletin of the Deccan College Research Institute.—June, 1941.

1. 'Arabic Version of the Mahabharatha Legend'—BY R. G. HARSHE.

2. 'Dravidian Notes'—BY C. R. SANKARAN.

[1. Dravidian words for 'Plaiting.' 2. Name transference in Dravidian with special reference to some words expressive of relationship—ಇಱ್ಱೈ. 3. Dravidian-Numeration. 4. Picture writing in Ancient Dravidian India. 5. On the Tamil word ತೀರ್ವೈ. 6. The Semantics of the Tamil word, ನೂಲ್. 7. On the Malayalam words, *oppol* and *ettal*].

3. 'A Further Note on the Logical Analysis of the Three Probable Stages of Primitive Indo-European Compound Formation'—By C. R. Sankaran.
4. 'The Phonemic Variants of Āytam in Old Tamil'—By C. R. Sankaran and N. K. Srinivasan.

Annals of Oriental Research.—Vol. V, Part I. 1941.

೧. 'Place-name Suffixes in Tamil'—By R. P. Setu Pillai.

(ವಯಲ್, ವೇಲಿ, ಕಾಣಿ, ಮರುದಂ, ಕಾಟಣಿ, ಪಟ್ಟು, ಕೊಲ್ಲೈ, ಕೀಡಾರ್, ತೋಟ್ಟಂ, ಪಡಪ್ಪು, ವೋಣಿ, ಪಣ್ಣೈ, ವಿಳೈ, ಪುಂಜೈ, ಕರಿಚಲ್, ಚೆವಲ್, ವಂಡಲ್, ಕರಂಬೈ, ಮಣಲಿ, ಪಡುಕೈ, ಪಾಟ್ಟಂ, ಕುತ್ತಕೈ, ವೆಟ್ಟು, ತಿರುತ್ತು, ವಿರುತ್ತಿ, ಆಟ್ಟಿ, ನಿಲಂ, ಪುಲಂ, ತರೈ, ಸತ್ತಂ, ಕಳಂ, ಪೊಟ್ಟಲ್, ಮೇಡು, ತಿಡಲ್, ತಿಟ್ಟು, ಕುಟಿ, ಪಳ್ಳಂ, ತಾವು, ಕಿಡಂಗು, ವೆಳಿ, ಏಂದಲ್, ವಟ್ಟಂ, ವಳೈವು, ಕುಟ್ಟಿ, ಚೇತ್ತಿ.)

೨. 'Lengthening of the Quantity of a Letter'—By V. Venkata Rajulu Reddiar.

(ತಮಿೞಿಲ್ ಅಳಪೆಡೈವರುಂ ಇಡಂಗಳ್.)

೩. 'Telugu Literature Outside the Telugu Country'—By K. Ramakrishnayya.

[Preface—Periods in the History of Telugu Literature—Telugus and Their Country—Telugu Literature in the South—Under the Naiks of Tanjore—Under Mahratta Kings of Tanjore—Under the Naik Kings of Madura—In Karnataka—Tondaman Kings Under Pudukkota—An Age of Transition—Some Characteristic Features—Revival of Dvipada and Desi Prose—Women Poets, Music and Dancing—Desi Types Mentioned by Palkuriki—Yakshagana and Desi].

೪. 'ಕವಿಜಿಹ್ವಾಬಂಧನ ವಿಮರ್ಶೆ'—ಎಚ್. ಶೇಷಯ್ಯಂಗಾರ್ (ಪರಿಶಿಷ್ಟಗಳು—ಮುಗಿದಿದೆ).

೫. 'ಪಂಪಾದಿ ಕರ್ಣಾಟಕ ಪ್ರಾಚೀನ ಮಹಾ ಕವಿಗಳ ಕಾವ್ಯಗಳಲ್ಲಿ ಕಂಡು ಬರುವ ಕೆಲವು ವಿಶೇಷ ಪದಾರ್ಥಗಳ ಸ್ವರೂಪನಿರ್ಣಯ ವಿಚಾರ'—ಎಚ್. ಶೇಷಯ್ಯಂಗಾರ್.

(ಅಗುಂತಿ = ದಗುಂತಿ, ಬಲ್ಲಣಿಗೆ, ಸೂಯಾಣ.)

೬. 'Ancient Kerala'—By C. Achyutha Menon.

೭. 'ಮಣಿ ಪ್ರವಾಳ ಸ್ವರೂಪಂ'—By P. KRISHNAN NAIR.

೮. 'Arabic and Persian Words in the Tamil Language'—By S. MUHAMMAD HUSAYN NAINOR.

(ಚುಕ್ಕಾನ್, ಮಾಲುಮಿ, ನಂಗೂರಂ, ಸೋಃದಾ, ಮೋಃಶಾ (ಸುಂದರ), ರೊಕ್ಕ, ತಮಾಷ್.)

A.B.O.R.I.—Vol. XXI—Parts iii—iv (1-4-1941).

1. 'Asura Varuna'—By R. N. DANDEKAR.

[Various theories examined: It is likely that the rivalry between Aryan war-god Indra and the Asura was accentuated through the historical rivalry between the Aryans and Assyrians; confusion between the names Asura and Assyrians; can it be that nomadic Aryans under the leadership of *Purandara* destroyed that culture? Was Indus civilization Assyrian civilization? Process of transformation in the personality of Varuna may have started independently in Central Asia].

2. 'Ancient Indian Tribes'—By B. C. LAW.

[The Kalingas—Kulaṭas or Kulūtās—the Ramaṭhas—The Pāradas].

3. 'Pagets' Gesture-Theory of the Origin of Human Speech'—C. R. SANKARAN.

[The 'call' made by the vibration of the vocal chords inside man's Adam's apple converted the appropriate symbolic gestures performed by the tongue and lips into the spoken words].

4. 'A Controverted Reading in Meghaduta'—By HIRALAL AMRITA LAL SHAH.

[ಆಷಾಢಸ್ಯ ಪ್ರಶಮ ದಿವಸೇ is the correct reading].

5. 'Side-Lights on the Racial Origin of Nambudri Brahmans of South India'—By K. R. CHATTERJEE.

[At some remote past the Nambudaries migrated from North India with the republican Ayudhajivin constitution and settled in the South; they are racially only a branch of the Indo-Aryan family].

6. 'Ravana's Lanka'—By DANIEL JOHN.

[It was not on the Vindhya Range but on an island in the midst of the sea off the southern or south-eastern coast of the island of Ceylon].

B.S.O.A.S.—Vol. X, Part iii, 1940.

1. 'Rama II'—By H. W. Bailey.

   [Translation of and brief commentary on the Khotanese Rama text].

2. 'The Iranian Festivals Adopted by the Christians and Condemned by the Jews'—By S. H. Taqizadeh.

3. 'The Nanda Couplet'—By Alfred Master.

ಭಾರತಿ—ಏಪ್ರಿಲ್, ೧೯೪೧.

೧. 'ಆಮುಕ್ತಮಾಲ್ಯದ ಕರ್ತೃಯೆವರು?'—ಓ. ನೀಲಕಂಠಶಾಸ್ತ್ರೀ.

   (ಪೆದ್ದನನೂ ಅಲ್ಲ, ಕೃಷ್ಣದೇವರಾಯನೂ ಅಲ್ಲ; ಶ್ರೀಕಾಕುಳ ವಿಷ್ಣುದಾಸರಲ್ಲಿ ಒಬ್ಬ ವೈಷ್ಣವಾಗ್ರೇಸರ.)

೨. ಶ್ರೀನಾಥುಡು-ಕರ್ಣಾಟ ಭಾಷ—ಕುಂದೂರಿ ಈಶ್ವರದತ್ತು.

   (ಭೀಮಖಂಡದಲ್ಲಿ ಶ್ರೀನಾಥನು 'ನನ್ನ ಕವಿತ್ವ ನಿಜವಾಗಿ ಕರ್ಣಾಟ ಭಾಷೆ' ಯೆಂದಿದ್ದಾನೆ. ಇಲ್ಲಿ 'ಕರ್ಣಾಟ' ಶಬ್ದಕ್ಕೆ ಆಂಧ್ರ ದೇಶಾಂತರ್ಭಾಗವಾದ ಕಪ್ಪುನಾಡು ಎಂದರೆ ಈಶಾನ್ಯ ಮತ್ತು ಆಗ್ನೇಯ ಭಾಗಗಳು ಎಂದು ಅರ್ಥ.)

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

---

೧. ಕುಮಾರವ್ಯಾಸ ಪ್ರಶಸ್ತಿ

ಬೆಲೆ, ಕ್ಯಾಲಿಕೊ ಪ್ರತಿ ರೂ. ೨-೮-೦; ಸಾದಾ ಪ್ರತಿ ರೂ. ೨-೦-೦

ದೊರೆಯುವ ಸ್ಥಳ:

ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು

ಕರ್ಣಾಟಕ ಸಂಘ,
ಶಿವಮೊಗ್ಗ

---

೨. ಕಿರಿಯಕಾಣಿಕೆ (ಎರಡನೆಯ ಮುದ್ರಣ)—ಕ್ಯಾಲಿಕೊ ಪ್ರತಿ ರೂ. ೧- ೮-೦
ಸಾದಾ ಪ್ರತಿ ,, ೧- ೦-೦

೩. ತಳಿರು— ಕ್ಯಾಲಿಕೊ ಪ್ರತಿ ,, ೧- ೪-೦
ಸಾದಾ ಪ್ರತಿ ,, ೦-೧೨-೦

ಮಾರಾಟಗಾರರು:

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

---

೪. ಆಷಾಢಭೂತಿ (ಶ್ರೀ. ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧-೮-೦
ಸಾದಾ ಪ್ರತಿ ,, ೧-೦-೦

೫. ಸಾವಿನ ಸಮಸ್ಯೆ (ಶ್ರೀ. ಬೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಕ್ಯಾಲಿಕೊ ಪ್ರತಿ ರೂ. ೧-೪-೦

ಮಾರಾಟಗಾರರು:

ಕೃಷ್ಣ ಮತ್ತು ಕಂಪನಿ, ಮೈಸೂರು

ಕಾರ್ಯದರ್ಶಿ, ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು,
ಮೈಸೂರು

ಶ್ರೀ


ಮೈಸೂರು ವಿಶ್ವವಿದ್ಯಾನಿಲಯದ

ರಜತಮಹೋತ್ಸವದ



ಸವಿನೆನಪು

೧೯೪೧



ಮೈಸೂರು ವಿಶ್ವವಿದ್ಯಾನಿಲಯದ ಈಗಿನ ಛಾನ್ಸೆಲರವರಾದ
ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್
ಬಹದ್ದೂರ್ ಅವರು

ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವ

(ತಾರೀಖು ೧೨, ೧೩, ೧೪, ಜುಲೈ ೧೯೪೧)

ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವವು ಇದೇ ಜುಲೈ ತಿಂಗಳು ೧೨ನೆಯ ತಾರೀಖಿನಿಂದ ಮೂರು ದಿನ ಮೈಸೂರು ನಗರದಲ್ಲಿ ಬಹು ವೈಭವದಿಂದ ಜರುಗಿತು. ಉತ್ಸವವನ್ನು ಮೊದಲನೆಯ ದಿನ ಬೆಳಗ್ಗೆ ಹತ್ತು ಘಂಟೆಗೆ ವಿಶ್ವವಿದ್ಯಾನಿಲಯದ ಛಾನ್ಸೆಲರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಜಗನ್ಮೋಹನ ಬಂಗಲೆಯ ಸಭಾಭವನದಲ್ಲಿ ಆರಂಭಗೊಳಿಸಿದರು. ವೈಸ್ ಛಾನ್ಸೆಲರವರಾದ ಶ್ರೀಮಾನ್ ಎನ್. ಎಸ್. ಸುಬ್ಬರಾವ್, ಎಂ.ಎ., ಬಾರ್.-ಅಟ್-ಲಾ ಅವರು ಮೊದಲು ಸ್ವಾಗತ ಭಾಷಣಮಾಡಿ ಎಲ್ಲರನ್ನೂ ಬರಮಾಡಿಕೊಂಡರು. ಅನಂತರ ಭರತಖಂಡದ ನಾನಾ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು ತಾವು ತಂದಿದ್ದ ಸಂದೇಶವನ್ನು ಒಪ್ಪಿಸಿದರು. ಬರಲಾಗದೆ ಇದ್ದವರು ಕಳುಹಿಸಿಕೊಟ್ಟಿದ್ದ ಸಂದೇಶಗಳನ್ನು ವೈಸ್‌ಛಾನ್ಸೆಲರವರು ಓದಿದ ಮೇಲೆ, ಛಾನ್ಸೆಲರವರು ಇಂಗ್ಲಿಷಿನಲ್ಲಿ ತಮ್ಮ ಭಾಷಣವನ್ನು ಅಪ್ಪಣೆ ಕೊಡಿಸಿದರು. ಆದರ ಕನ್ನಡ ಭಾಷಾಂತರವನ್ನು ಮುಂದೆ ಕೊಟ್ಟಿದೆ (ಪುಟ ೬).

ಮಧ್ಯಾಹ್ನ ಎರಡು ಘಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ.ಎ. ಉಪನ್ಯಾಸ ಮಂದಿರದಲ್ಲಿ ಸಂಸ್ಕೃತ ಕನ್ನಡ ಕವಿ ಸಮ್ಮೇಳನವು ನಡೆಯಿತು. ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರು ಕನ್ನಡ ವಿಭಾಗಕ್ಕೂ ಸಾಹಿತ್ಯರತ್ನಂ ಅಲಂಕಾರ ರಕ್ಷಾಮಣಿ ಮಹಾವಿದ್ವಾನ್ ಕೆ. ಗೋಪಾಲಕೃಷ್ಣಶಾಸ್ತ್ರಿಗಳವರು ಸಂಸ್ಕೃತ ವಿಭಾಗಕ್ಕೂ ಅಧ್ಯಕ್ಷರಾಗಿದ್ದರು. ಶ್ರೀಮಾನ್ ಕೆ. ಕೃಷ್ಣರಾಯರು "ವೇದಾಸುದ್ಧರತೇ ಜಗಂತಿ ವಹತೇ" ಎಂಬ ಸಂಸ್ಕೃತ ಶ್ಲೋಕವನ್ನೂ, "ಶ್ರೀವನಿತೆಯರಸನೆ" ಎಂಬ ಕನ್ನಡ ಪದ್ಯವನ್ನೂ ಹಾಡಿ ದೇವತಾ ಪ್ರಾರ್ಥನೆ ನಡಸಿದ ಮೇಲೆ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರು ಸ್ವಾಗತಭಾಷಣಮಾಡಿದರು. ಅನಂತರ ೧೩ ಜನ ಸಂಸ್ಕೃತದಲ್ಲಿಯೂ ೧೪ ಜನ ಕನ್ನಡದಲ್ಲಿಯೂ ಉತ್ಸವಕ್ಕಾಗಿ ತಾವು ಬರೆದುಕೊಂಡು ಬಂದಿದ್ದ ತಮ್ಮ ತಮ್ಮ ಕವನಗಳನ್ನು ಓದಿದರು. ಆಮೇಲೆ ಅಧ್ಯಕ್ಷರುಗಳ ಉಪಸಂಹಾರ ಭಾಷಣವಾಯಿತು. ಕೊನೆಗೆ ಶ್ರೀಮಾನ್ ಸಿ. ಆರ್ ನರಸಿಂಹಶಾಸ್ತ್ರೀ, ಎಂ.ಎ.

ಅವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ಕವಿಗಳಿಗೆ ಪುಷ್ಪಮಾಲಿಕೆಗಳನ್ನು ಹಾಕಿ ಮರ್ಯಾದೆ ಮಾಡಿದ ಮೇಲೆ, ಸ್ಕೌಟುಗಳು "ಕಾಯೌ ಶ್ರೀಗೌರೀ" ಹಾಡಲು, ಮಂಗಳದಿಂದ ಸಮ್ಮೇಳನವು ಮುಗಿಯಿತು. ಅನಂತರ ಒಂದಿದ್ದ ಅತಿಥಿಗಳೆಲ್ಲರೂ ವಿಶ್ವವಿದ್ಯಾನಿಲಯವು ಏರ್ಪಡಿಸಿದ್ದ ಫಲಾಹಾರಕ್ಕೆ ಎದ್ದರು.

ಸಂಜೆ ಐದು ಗಂಟೆಗೆ ವಿದ್ಯಾಮಂತ್ರಿಗಳಾದ ಶ್ರೀ. ಮುಹಮ್ಮದ್ ಜೆ. ಇಮಾಂ, ಬಿ.ಎ., ಬಿ.ಎಲ್. ಅವರು ಪ್ರದರ್ಶನವನ್ನು ಆರಂಭಮಾಡಿದರು. (ಅವರ ಭಾಷಣವನ್ನು ಮುಂದೆ ಕೊಟ್ಟಿದೆ. ಪುಟ ೨೦.) ಇದನ್ನು ಇಂಟರ್‌ಮೀಡಿಯಟ್ ಮತ್ತು ಮಹಾರಾಜಾ ಕಾಲೇಜುಗಳ ಮಹಡಿಯ ಮೇಲೂ ಓರಿಯಂಟಲ್ ಲೈಬ್ರರಿ ಕಟ್ಟಡದಲ್ಲಿಯೂ ಏರ್ಪಡಿಸಿತ್ತು. ಅದರಲ್ಲಿ ಮುಂದೆ ಹೇಳುವಂತೆ ಇಪ್ಪತ್ತಕ್ಕೆ ಮೇಲ್ಪಟ್ಟು ವಿಭಾಗಗಳಿದ್ದುವು:—ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಶಾಸ್ತ್ರ, ಮನಶ್ಶಾಸ್ತ್ರ, ಗಣಿತಶಾಸ್ತ್ರ, ಯಾಂತ್ರಿಕ ಮತ್ತು ವಿದ್ಯುತ್ತು, ಕಟ್ಟಡಶಿಲ್ಪ, ದೇಹರಚನಶಾಸ್ತ್ರ, ಶರೀರಕ್ರಿಯಾಶಾಸ್ತ್ರ, ಮೂಲಿಕಾಶಾಸ್ತ್ರ, ಆರೋಗ್ಯಶಾಸ್ತ್ರ, ರೋಗಪರೀಕ್ಷಾಶಾಸ್ತ್ರ, ಗಣಿತಾರ್ಥಶಾಸ್ತ್ರ ಮತ್ತು ಅಂಕಿಗಳು, ಕಲೆ, ಕನ್ನಡ, ಅಕ್ಷರಪ್ರಚಾರ, ಸ್ಕೌಟುಕಾರ್ಯ ಮತ್ತು ಕೈಗಾರಿಕೆ, ಪ್ರಾಕ್ತನಶಾಖೆ, ಓರಿಯಂಟಲ್ ಲೈಬ್ರರಿಯ ಗ್ರಂಥಶಾಖೆ.

ಇದನ್ನು ವಿವರಿಸುವ ಕೈಪಿಡಿಯೊಂದನ್ನು ಇಂಗ್ಲಿಷಿನಲ್ಲಿ ರಚಿಸಿ ಪ್ರಕಟಿಸಲಾಗಿತ್ತು. ಪ್ರದರ್ಶನವನ್ನು ೧೨ನೆಯ ತಾರೀಖಿನಿಂದ ೧೫ನೆಯ ತಾರೀಖಿನವರೆಗೆ ಸಾವಿರಾರು ಜನ ಹೆಂಗಸರೂ ಗಂಡಸರೂ ಬಂದು ನೋಡಿಕೊಂಡು ಹೋದರು. ಪ್ರವೇಶಧನ ಒಂದಾಣೆ.

೧೨ನೆಯ ತಾರೀಖು ಸಂಜೆ ಅತಿಥಿ ಅಭ್ಯಾಗತರು ಚಾಮುಂಡಿಯ ಬೆಟ್ಟಕ್ಕೆ ಹೋಗಿಬಂದರು. ಆಸ್ಥಾನ ವಿದ್ವಾನ್ ಚೌಡಯ್ಯನವರ ಪಿಟೀಲುವಾದನವೂ ಔತಣವೂ ನಡೆದುವು.

ಎರಡನೆಯ ಮತ್ತು ಮೂರನೆಯ ದಿನ ಮಧ್ಯಾಹ್ನ, ಹಿಂದಿನ ಮತ್ತು ಇಂದಿನ ವಿದ್ಯಾರ್ಥಿಗಳಿಗೆ ಕ್ರಿಕೆಟ್, ಟೆನ್ನಿಸ್, ಹಾಕಿ ಮುಂತಾದ ಆಟದ ಪಂದ್ಯಗಳು ಜರುಗಿದುವು.

೧೩ನೆಯ ತಾರೀಖು ಮಧ್ಯಾಹ್ನ ಎರಡು ಘಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಹಿಂದಿ-ಉರ್ದು-ಪಾರಸಿ ಕವಿಸಮ್ಮೇಳನವು (ಮುಶಾಯಿರಾ) ನಡೆಯಿತು. ಮಹಾರಾಜಾ ಕಾಲೇಜಿನಲ್ಲಿ ಮೊಟ್ಟಮೊದಲು ಉರ್ದು ಪರ್ಷಿಯನ್ ಮುನ್ಷಿಗಳಾಗಿದ್ದು ವಿಶ್ರಾಂತರಾಗಿರುವ ಮೌಲ್ವಿ ಸುಲ್ತಾನ್ ಮುಹಮ್ಮದ್ ಖಾನ್ ಸಾಹೇಬರು



೧೯೧೬ರಿಂದ ೧೯೪೦ರ ವರೆಗೆ ಛಾನ್ಸೆಲರವರಾಗಿದ್ದ
ಶ್ರೀಮನ್ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್
ಬಹದ್ದೂರ್, ಜಿ. ಸಿ. ಎಸ್. ಐ., ಜಿ. ಬಿ. ಇ. ಅವರು

ಅಧ್ಯಕ್ಷರಾಗಿದ್ದರು. ಶ್ರೀಮಾನ್ ಎ. ಆರ್. ವಾಡಿಯಾ, ಬಿ.ಎ., ಬಾರ್.-ಅಟ್-ಲಾ ಅವರು ಸ್ವಾಗತ ಭಾಷಣ ಮಾಡಿದ ಮೇಲೆ, ಉರ್ದುವಿನಲ್ಲಿ ೧೪, ಪಾರಸಿಯಲ್ಲಿ ೬, ಹಿಂದಿಯಲ್ಲಿ ೧೦, ಹೀಗೆ ಮುವ್ವತ್ತು ಕವಿತೆಗಳನ್ನು ಆಯಾ ಲೇಖಕರು ಓದಿದರು. ಇವುಗಳಲ್ಲಿ, ಉತ್ತಮವಾದ ಆರು ಕವಿತೆಗಳಿಗೆ (ಒಂದೊಂದು ಭಾಷೆಗೆ ಎರಡೆರಡರಂತೆ) ಬಹುಮಾನಗಳು ಕೊಡಲ್ಪಟ್ಟವು. ಹೀಗೆ ಸ್ಪರ್ಧೆಗೂ ಬಹುಮಾನಕ್ಕೂ ನಿಲ್ಲದ ಮತ್ತಾರು ಜನ ಹಿರಿಯರು ತಾವು ಬರೆದು ತಂದಿದ್ದ ಕವಿತೆಗಳನ್ನೂ ಓದಿದರು. ಶ್ರೀಮಾನ್ ಎಚ್. ಆರ್. ಅಬ್ದುಲ್ ಮಜೀದ್, ಎಂ.ಎ. ಅವರು ವಂದನೆಗಳನ್ನು ಅರ್ಪಿಸಿದ ಮೇಲೆ ಸಮ್ಮೇಳನವು ಮುಗಿಯಿತು. ಅನಂತರ ಅತಿಥಿಗಳೆಲ್ಲರೂ ವಿಶ್ವ ವಿದ್ಯಾನಿಲಯವು ಏರ್ಪಡಿಸಿದ್ದ ಫಲಾಹಾರಕ್ಕೆ ಎದ್ದರು.

ಸಂಜೆಗೆ ಸಂಗೀತ ವಿದ್ವಾನ್ ಬಿ. ಪುಟ್ಟಸ್ವಾಮಯ್ಯನವರ ಹಾಡುಗಾರಿಕೆ ಯಾಯಿತು. ಅತಿಥಿಗಳು ಕನ್ನಂಬಾಡಿಯ ಕೃಷ್ಣರಾಜಸಾಗರದ ಸುಂದರ ದೃಶ್ಯ ವನ್ನು ನೋಡಿಕೊಂಡು ಬಂದರು. ರಾತ್ರಿ ೯-೩೦ ಘಂಟೆಗೆ ಜಗನ್ಮೋಹನ ಬಂಗಲೆ ಯಲ್ಲಿ ಒಂದು ವಿನೋದಾವಳಿ ಏರ್ಪಾಡಾಗಿತ್ತು. ಅದನ್ನು ನೋಡಲು ಸಾವಿರ ಕ್ಕಿಂತ ಹೆಚ್ಚು ಜನ ಬಂದಿದ್ದರು. ಮೈಸೂರಿನ ವಿಶ್ವವಿದ್ಯಾನಿಲಯ ಸಂಘದ ಸದಸ್ಯರು "ಹುಡುಗ ಮನೆಗೆ ಬರುತ್ತಾನೆ" (*The Boy Comes Home*) ಎಂಬ ಇಂಗ್ಲಿಷ್ ನಾಟಕವನ್ನೂ ಬೆಂಗಳೂರಿನ ವಿಶ್ವವಿದ್ಯಾನಿಲಯ ಸಂಘದ ಸದಸ್ಯರು "ಗಂಡನ ಜುಲ್ಮಾನೆ" ಎಂಬ ಕನ್ನಡ "ನೋಟಕ"ವನ್ನೂ ಆಡಿದರು. ಸೆಂಟ್ರಲ್ ಕಾಲೇಜಿ ನಲ್ಲಿ ರಸಾಯನಶಾಸ್ತ್ರದ ಅಧ್ಯಾಪಕರಾಗಿರುವ ಶ್ರೀಮಾನ್ ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ. ಅವರು ತಮ್ಮ ನಾಟ್ಯಪ್ರದರ್ಶನದಿಂದ ಎಲ್ಲರನ್ನೂ ಸಂತೋಷಪಡಿಸಿ ದರು. ಆ ದಿನ ಅವರು ಅಲರಿಪ್ಪು ತಿಲ್ಲಾನ ಎಂಬ ಎರಡು ಶಾಸ್ತ್ರ ಭಾಗಗಳನ್ನೂ ಅಂಬಿಗ, ಹಾವಾಡಿಗ ಎಂಬ ಎರಡು ನಾಟ್ಯಗಳನ್ನೂ ಕುರುಕ್ಷೇತ್ರದಲ್ಲಿ ಅರ್ಜುನ ಮತ್ತು ಸಂಹಾರತಾಂಡವ ಎಂಬ ಎರಡು ಪೌರಾಣಿಕ ಸನ್ನಿವೇಶಗಳನ್ನೂ ಅಭಿ ನಯಿಸಿದರು. ಬೆಂಗಳೂರಿಂದ ಬಂದಿದ್ದ ಅವರ ಪರಿವಾರದವರೂ ಹಿಮ್ಮೇಳದವರೂ ನಾಟ್ಯಕ್ಕೆ ಹೊಸ ಕಳೆಯನ್ನು ಕೊಟ್ಟರು.

ರಜತಮಹೋತ್ಸವದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪರಿಚಯ ಮಾಡಿಕೊಡುವ ಸುಂದರವಾದ ಒಂದು ಸವಿನೆನಪನ್ನು (Souvenir) ಇಂಗ್ಲಿಷಿನಲ್ಲಿ ಪ್ರಕಟಿಸಲಾಗಿತ್ತು. ಅದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಕ್ಷಿಪ್ತ ಚರಿತ್ರೆ, ಅದರ ರಚನೆ, ನಾನಾ ಇಲಾಖೆಗಳು, ನಮ್ಮ ವಿಶ್ವವಿದ್ಯಾನಿಲಯದ ವೈಶಿಷ್ಟ್ಯಗಳೆಂದು ಹೇಳಬಹುದಾದ ಸಂಗತಿಗಳು. ಇವುಗಳ ವಿವರಣೆಗಳೆಲ್ಲವೂ ಅಂಕಿ ಅಂಶಸಹಿತವಾಗಿ

ಕೊಡಲ್ಪಟ್ಟಿವೆ. ಈ ವೈಶಿಷ್ಟ್ಯಗಳು ಯಾವುವೆಂದರೆ—ಪ್ರಾಚ್ಯಪುಸ್ತಕಭಂಡಾರ, ಪ್ರಾಕ್ತನ ಸಂಶೋಧನ ಶಾಖೆಗಳಲ್ಲಿನ ನಡೆದಿರುವ ಕಾರ್ಯ, ಕನ್ನಡಕ್ಕೆ ಪ್ರಾಶಸ್ತ್ಯ, ಇಂಗ್ಲಿಷ್-ಕನ್ನಡ ನಿಘಂಟು, ಪ್ರಬುದ್ಧಕರ್ಣಾಟಕ, ಕನ್ನಡಭಾಷೆಯ ಪ್ರಾಂತೀಯ ವಿಭೇದಗಳ ಪರಿಶೀಲನೆ, ಪ್ರಚಾರಕಾರ್ಯ, ಪ್ರಚಾರಪುಸ್ತಕಮಾಲೆ, ಅಕ್ಷರ ಪ್ರಚಾರ, ವಿಶ್ವವಿದ್ಯಾನಿಲಯದ ಪತ್ರಿಕೆ, ಮನಶ್ಶಾಸ್ತ್ರದ ಪ್ರಯೋಗಶಾಲೆ, ವಿದ್ಯಾರ್ಥಿ ವಸತಿಗಳು, ವಿಶ್ವವಿದ್ಯಾನಿಲಯ ಸಂಘಗಳು, ಪ್ಲ್ಯಾಟುಗಳು, ದೈಹಿಕ ಶಿಕ್ಷಣ, ಸೈನಿಕ ಶಿಕ್ಷಣ, ಉಚಿತವಾದ ತಿಂಡಿಯ ಏರ್ಪಾಡು—ಮುಂತಾದವುಗಳು.

ಈ ಗ್ರಂಥದಿಂದ ಮುಂದೆ ಕೆಲವು ಅಂಶಗಳನ್ನು ಸಂಗ್ರಹಿಸಿ ಕೊಟ್ಟಿದೆ—ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾದದ್ದು ೧೯೧೬ ರಲ್ಲಿ. ಇದು ದೇಶೀಯ ರಾಜರಿಂದ ತಮ್ಮ ಪ್ರಜೆಗಳ ಪ್ರಯೋಜನಕ್ಕಾಗಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳಲ್ಲಿ ಮೊಟ್ಟಮೊದಲನೆಯದು. ಇದಕ್ಕೆ ಮೂಲಸಂಸ್ಥೆಗಳಾದ ಮಹಾರಾಜಾ ಕಾಲೇಜೂ ಸೆಂಟ್ರಲ್ ಕಾಲೇಜೂ ಕ್ರಮವಾಗಿ ೧೮೩೩ ಮತ್ತು ೧೮೭೮ ರಿಂದ ನಡೆದುಬಂದಿದ್ದುವು.

ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಯೋಚಿಸಿ, ರಚಿಸಿ, ಅದಕ್ಕೆ ಬೇಕಾದ ಕೆಲಸ ನಡಸಿದವರು ಆಗ ಇಲ್ಲಿ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು. ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರವರು ಅಪ್ಪಣೆ ಕೊಡಿಸಿದಂತೆ ಅವರ ದೇಶಾಭಿಮಾನ ಉತ್ಸಾಹಗಳೇ ಇದರ ಹುಟ್ಟಿಗೆ ಕಾರಣ. ೨೭—೭—೧೯೧೬ರಲ್ಲಿ ಈ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮಹಾರಾಜರವರ ಸಮ್ಮತಿ ದೊರೆಯಿತು. ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರು ಛಾನ್ಸೆಲರಾಗಿ ಮೊದಲನೆಯ ಸೆನೆಟ್ ಸಭೆಯನ್ನು ಆರಂಭಿಸುವಾಗ ಹೊಸ ವಿಶ್ವವಿದ್ಯಾನಿಲಯದ ಆಶಯಗಳನ್ನೂ ಉದ್ದೇಶಗಳನ್ನೂ ವಿವರಿಸಿದರು. ಅವುಗಳಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರೋತ್ಸಾಹ, ಪ್ರಜಾಸಾಮಾನ್ಯಕ್ಕೆ ಉಪಯುಕ್ತವಾಗುವ ಪ್ರಚಾರೋಪನ್ಯಾಸಗಳು, ಪ್ರಕಟನೆಗಳು, ಇವುಗಳನ್ನು ಒತ್ತಿ ಹೇಳಿದರು. ಅದರಂತೆ ಈಗ ಮೈಸೂರಿನ ಕಾಲೇಜಿನಲ್ಲಿ ಎಂ.ಎ. ಪರೀಕ್ಷೆಯವರೆಗೆ ಕನ್ನಡಪಾಠ ಹೇಳಿಕೊಡಲಾಗುತ್ತಿದೆ. ಕನ್ನಡವನ್ನು ದ್ವಿತೀಯ ಭಾಷೆಯಾಗಿಯೂ ಐಚ್ಛಿಕವಾಗಿಯೂ ವ್ಯಾಸಂಗಮಾಡಬಹುದಾಗಿದೆ. ಕನ್ನಡದ ಅಧ್ಯಾಪಕರು ಸ್ವತಂತ್ರವಾಗಿಯೂ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿಯೂ ಹಲವು ವಿಷಯಗಳ ಮೇಲೆ ಉತ್ತಮ ಗ್ರಂಥಗಳನ್ನು ಬರೆದು ಪ್ರಕಟಿಸಿ ಗಣ್ಯರಾಗಿದ್ದಾರೆ. ಕನ್ನಡಗ್ರಂಥ ಪ್ರಕಟನ ಸಮಿತಿಯೂ ಪ್ರಚಾರಪುಸ್ತಕಮಾಲೆಯೂ ಏರ್ಪಟ್ಟು ಹಲವು ಒಳ್ಳೆಯ ಗ್ರಂಥಗಳು ಬೆಳಕಿಗೆ ಬಂದಿವೆ. ಬೆಂಗಳೂರು ಮೈಸೂರು ಕಾಲೇಜು



೧೯೧೬ರಿಂದ ೧೯೪೦ರ ವರೆಗೆ ಪ್ರೊ-ಛಾನ್ಸಲರವರಾಗಿದ್ದ
ಶ್ರೀ ಕಂಠೀರವ ನರಸಿಂಹರಾಜ ಒಡೆಯರ್
ಬಹದ್ದೂರ್, ಅವರು

ಗಳಲ್ಲಿ ಕರ್ಣಾಟಕ ಸಂಘಗಳು ಹುಟ್ಟಿ, ಕನ್ನಡನಾಡಿನ ಅನೇಕ ಇತರ ಸಂಘಗಳಿಗೆ ತಾಯಾಗಿ, ಉಪನ್ಯಾಸಗಳನ್ನು ಏರ್ಪಡಿಸಿ, ಪುಸ್ತಕಗಳನ್ನು ಪ್ರಕಟಿಸಿ ಮೇಲ್ಪಂಕ್ತಿ ಹಾಕಿ ಕೊಟ್ಟಿವೆ. 'ಪ್ರಬುದ್ಧ ಕರ್ಣಾಟಕವು' ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಸ್ಥಾಪಿತವಾದದ್ದು. ಅದು ಮೊದಲಿನಿಂದ ವಿಶ್ವವಿದ್ಯಾನಿಲಯದ ಆಶ್ರಯ ದಲ್ಲಿಯೇ ಬೆಳೆದು ಈಗ್ಗೆ ಸುಮಾರು ಹತ್ತು ವರ್ಷಗಳ ಕೆಳಗೆ ಅದರ ನೇರವಾದ ಪೋಷಣೆಗೇ ಬಂತು. ವಿಶ್ವವಿದ್ಯಾನಿಲಯದ ಅಧ್ಯಾಪಕರು ಒಂದು ಸಂಘವಾಗಿ ಸೇರಿ ಮೈಸೂರಿನ ನಾನಾ ಭಾಗಗಳಿಗೆ ಹೋಗಿ ಹಲವು ಉಪಯುಕ್ತ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿ ಬರುತ್ತಿದ್ದಾರೆ. ವಿಶ್ವವಿದ್ಯಾನಿಲಯವು ಇದಕ್ಕೆ ಉದಾರ ವಾದ ಪ್ರೋತ್ಸಾಹವನ್ನೂ ಬೆಂಬಲವನ್ನೂ ಕೊಟ್ಟಿದೆ.

ಈಗ (೧೯೪೦–೪೧) ವಿಶ್ವವಿದ್ಯಾನಿಲಯದಲ್ಲಿ ಇರುವ ವಿದಾರ್ಥಿಗಳು, ೪,೬೮೫; ಉಪಾಧ್ಯಾಯರು, ೨೮೦ ; ಪುಸ್ತಕಗಳು (೧೨ ಪುಸ್ತಕ ಭಾಂಡಾರಗಳಿಂದ ಒಟ್ಟು) ೧,೪೪,೯೨೫; ಮಹಾಜನರಿಂದ ಬಂದ ಪುದುವಟ್ಟುಗಳ ಸಂಖ್ಯೆ, ೧೧೬; ಅವುಗಳಿಗಾಗಿ ಬಂದ ಹಣ, ರೂ. ೪,೫೦,೦೦೦ ; ಆದಾಯ, ರೂ. ೧೭,೧೨,೦೦೦ ; ವೆಚ್ಚ, ರೂ. ೧೫,೯೪,೦೦೦ ; ಪದವಿಗಳನ್ನು ಪಡೆದವರು, ೪೦೬.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರೂ
ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರರವರೂ ಆದ
ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರವರು
ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವದಲ್ಲಿ ದಯಪಾಲಿಸಿದ ಭಾಷಣ

೧೯೪೧ನೆಯ ಇಸವಿ ಜುಲೈ ತಿಂಗಳು ೧೩ನೆಯ ತಾರೀಖು

ಭರತಖಂಡದ ವಿಶ್ವವಿದ್ಯಾನಿಲಯಗಳ ವೈಸ್-ಛಾನ್ಸೆಲರುಗಳೇ, ಪ್ರತಿನಿಧಿಗಳೇ, ಮಹಿಳೆಯರೇ ಮತ್ತು ಮಹಾಶಯರೇ,

ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವವನ್ನು ನೆರವೇರಿಸಲು ನಾವು ಒಟ್ಟಿಗೆ ಸೇರಿದ್ದೇವೆ. ವಿಶ್ವವಿದ್ಯಾನಿಲಯಕ್ಕೆ ವಯಸ್ಸು ಪ್ರಾಪ್ತವಾಗಿದೆ ಯೆಂಬುದನ್ನು ಈ ಉತ್ಸವವು ಸೂಚಿಸುತ್ತದೆಂದು ನಮ್ಮ ಮನಸ್ಸಿಗೆ ತೋರುತ್ತದೆ. ಈ ಉತ್ಸವಕಾಲದಲ್ಲಿ ಭರತಖಂಡದ ಇತರ ಅನೇಕ ವಿಶ್ವವಿದ್ಯಾನಿಲಯಗಳ ಮತ್ತು ವಿದ್ಯಾಸಂಸ್ಥೆಗಳ ಪ್ರತಿನಿಧಿಗಳಿಗೆ ಸ್ವಾಗತವನ್ನು ಬಯಸುವುದು ನಮ್ಮ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡಿದೆ. ವಿಶ್ವವಿದ್ಯಾನಿಲಯದಂತಹ ಒಂದು ವಿದ್ಯಾ ಪೀಠವು ಏರ್ಪಟ್ಟು ಇಪ್ಪತ್ತೈದು ವರ್ಷಗಳು ಕಳೆದಿದ್ದರೂ ಸಹ, ಈ ಅವಧಿಯು ಅದರ ಬಾಳ್ವೆಯಲ್ಲಿ ಅಲ್ಪ ಭಾಗವು ಮಾತ್ರವೇ. ಆದರೆ ಘಟನೆಗಳು ಬಹು ಶೀಘ್ರ ಶೀಘ್ರವಾಗಿ ನಡೆಯುತ್ತಿರುವ ಈ ಕಾಲದಲ್ಲಿ, ಆ ಸಂಸ್ಥೆಯಿಂದ ಎಷ್ಟುಮಟ್ಟಿಗೆ ಕೆಲಸ ನಡೆದಿದೆ, ಅದನ್ನು ಸ್ಥಾಪಿಸಿದವರ ಆಶೋತ್ತರಗಳೂ ಉದ್ದೇಶಗಳೂ ಎಷ್ಟರ ಮಟ್ಟಿಗೆ ನೆರವೇರಿವೆ, ಕ್ಷಣಕ್ಷಣವೂ ಪರಿವರ್ತನ ಹೊಂದುತ್ತಿರುವ ಪ್ರಪಂಚದ ಅನುಭವದ ದೃಷ್ಟಿಯಿಂದ ಪರಿಗಣಿಸಿ ನೋಡಿದರೆ ಉತ್ತಮವಾದ ವಿದ್ಯಾಭ್ಯಾಸವು ನಡೆದಿರುವುದು ಅದರ ಸಾಧನೆಗಳಿಂದ ಎಷ್ಟುಮಟ್ಟಿಗೆ ಫಲಿತವಾಗಿದೆ ಎಂಬೀ ವಿಚಾರ ಗಳನ್ನು ಪರಿಶೀಲಿಸಿ ತೂಗಿ ನೋಡಲು ಇಪ್ಪತ್ತೈದು ವರ್ಷಗಳ ಅವಧಿಯು ಯುಕ್ತ ವಾದ ಅವಧಿಯೇ ಸರಿ; ಇಪ್ಪತ್ತೈದು ವರ್ಷಗಳ ಅವಧಿಯಾದ ಮೇಲೆ ಹಾಗೆ ಪರಿಶೀಲಿಸಿ ತೂಗಿ ನೋಡಬೇಕಾದುದು ಆವಶ್ಯಕವೆಂದೂ ಹೇಳಬಹುದು.

ಒಟ್ಟು ಭರತಖಂಡದ ವಿಶ್ವವಿದ್ಯಾನಿಲಯಗಳಲ್ಲಿ ಹಲವು ವಿಶ್ವವಿದ್ಯಾನಿಲಯಗಳ ವಿಷಯದಲ್ಲಿ ಹಾಗೆ ಪರಿಶೀಲಿಸಿ ತೂಗಿ ನೋಡಬೇಕಾದ ಕೆಲಸವು ಅನೇಕ ಸಾರಿ



ಮೈಸೂರು ವಿಶ್ವವಿದ್ಯಾನಿಲಯದ ರಜತೋತ್ಸವ ಸಮಾರಂಭಕಾಲದಲ್ಲಿ ಛಾನ್ಸೆಲರಾದ

ಶ್ರೀಮನ್ಮಹಾರಾಜರವರು ಭಾಷಣಮಾಡುತ್ತಿರುವ ಚಿತ್ರ


ಫೋಟೋ—ಶ್ರೀ. ಎನ್. ಶ್ರೀನಿವಾಸಮೂರ್ತಿ ("ತಾಯಿನಾಡು")

ನಡೆದಿದೆ. ಈಗ್ಗೆ ಒಂದು ಶತಮಾನಕ್ಕೆ ಹಿಂದೆ ಭರತಖಂಡದ ಪಾಠಶಾಲೆಗಳಲ್ಲಿಯೂ ಮತ್ತು ಕಾಲೇಜುಗಳಲ್ಲಿಯೂ ಪಾಶ್ಚಾತ್ಯ ವಿದ್ಯಾಭ್ಯಾಸ ವಿಧಾನವನ್ನನುಸರಿಸಬೇಕೆಂದು ಇತ್ಯರ್ಥವಾದುದು; ಹಳೆಯ ಪಡಿಯಚ್ಚುಗಳನ್ನು ಈ ಹೊಸ ಎರಕಕ್ಕೆ ಹೊಂದಿಸಿ ಹಾಗೆ ಸಿದ್ಧಪಡಿಸಿದುದರ ಪರಿಣಾಮವಾಗಿ ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಭರತಖಂಡದ ಮೊಟ್ಟಮೊದಲನೆಯ ತಂಡದ ಮೂರು ವಿಶ್ವವಿದ್ಯಾನಿಲಯಗಳು ಏರ್ಪಟ್ಟುದು; ಈಗ್ಗೆ ಐವತ್ತು ವರ್ಷಗಳಿಗಿಂತ ಹೆಚ್ಚು ಕಾಲದಿಂದಲೂ ಭರತಖಂಡದ ಆಡಳಿತವನ್ನು ನಿರ್ವಹಿಸಿ, ಭರತಖಂಡದಲ್ಲಿ ವಿದ್ಯಾಭ್ಯಾಸ ಸಂಬಂಧದ ಕಾರ್ಯಗಳನ್ನು ನಡೆಯಿಸಿ, ಭರತಖಂಡದ ಸಾರ್ವಜನಿಕ ಕಾರ್ಯಗಳನ್ನು ನೆರವೇರಿಸಲು ಅವಶ್ಯವಾದವರಲ್ಲಿ ಬಹುಭಾಗದವರನ್ನು ಸಿದ್ಧಪಡಿಸಿ ಒದಗಿಸಲು ಆ ವಿಶ್ವವಿದ್ಯಾನಿಲಯಗಳೂ ಅವುಗಳ ಅಂಗಸಂಸ್ಥೆಗಳಾದ ಕಾಲೇಜುಗಳೂ ಜವಾಬ್ದಾರಿ ವಹಿಸಿ ಕೆಲಸಮಾಡುತ್ತ ಬಂದುದು; ಇವು ಸರ್ವರಿಗೂ ತಿಳಿದಿರುವ ಅಂಶಗಳು. ಆ ವಿಶ್ವವಿದ್ಯಾನಿಲಯಗಳಿಂದ ಕೆಲಸ ನಡೆಯಲು ಪ್ರಾರಂಭವಾದ ಸ್ವಲ್ಪ ಕಾಲದಲ್ಲೇ ಅವುಗಳ ನ್ಯೂನತೆಗಳೂ ಗೋಚರವಾದುವು. ಅವುಗಳು ಕಾಲೇಜುಗಳನ್ನು ಅಂಗಸಂಸ್ಥೆಗಳಾಗಿ ಸೇರಿಸಿಕೊಂಡು ಅಲ್ಲಿ ವ್ಯಾಸಂಗಮಾಡಿದ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಿ ಪ್ರಶಸ್ತಿಗಳನ್ನು ಕೊಡುವ ಸಂಸ್ಥೆಗಳಾಗಿ ಮಾತ್ರವೇ ಇದ್ದುದರಿಂದ ಆ ನ್ಯೂನತೆಗಳುಂಟಾದುವು. ಬೋಧನೆಗೂ ಪರೀಕ್ಷಾ ವ್ಯವಸ್ಥೆಗೂ ಸಂಬಂಧ ತಪ್ಪಿ ಅವು ಪ್ರತ್ಯೇಕವಾದುದು; ಬೋಧಕವರ್ಗದವರಿಗೆ ವಿಶ್ವವಿದ್ಯಾನಿಲಯದ ಆಡಳಿತ ವಿಚಾರದಲ್ಲಿ ಹೆಚ್ಚು ಪ್ರವೇಶವಿಲ್ಲದಿದ್ದುದು, ಮತ್ತು ವಿದ್ಯಾರ್ಥಿಗಳಿಗೆ ಸಾಂಘಿಕ ಜೀವನ ಸೌಕರ್ಯದ ಅಭಾವವುಂಟಾದುದು—ಇವು ಮೂರೂ ಆ ನ್ಯೂನತೆಗಳಲ್ಲಿ ಬಹು ಮುಖ್ಯವಾದುವುಗಳು. ೧೯೦೪ನೆಯ ಇಸವಿಯಲ್ಲಿ ಆಚರಣೆಗೆ ಬಂದ "ಇಂಡಿಯಾ ದೇಶದ ವಿಶ್ವವಿದ್ಯಾನಿಲಯಗಳ ಆಕ್ಟು" ಎಂಬ ಕಾನೂನಿಂದ ಆ ನ್ಯೂನತೆಗಳನ್ನು ಪರಿಹಾರ ಮಾಡುವ ಪ್ರಯತ್ನ ನಡೆಯಿತು. ೧೯೧೩ನೆಯ ಇಸವಿಯಲ್ಲಿ ಬೋಧನಾ ವ್ಯವಸ್ಥೆಗೆ ವಿಶೇಷವಾಗಿ ಗಮನಕೊಡುವ ಹೊಸ ಮಾದರಿಯ ವಿಶ್ವವಿದ್ಯಾನಿಲಯಗಳು ಏರ್ಪಡಬೇಕಾದುದೇ ತಮಗೆ ಸಮ್ಮತವೆಂದು ಇಂಡಿಯಾ ಸರ್ಕಾರದವರು ನಿರೂಪಿಸಿದರು. ಆ ಹೊಸ ಮಾದರಿಯದಾಗಿ ಮೊಟ್ಟಮೊದಲು ಏರ್ಪಟ್ಟುದು ೧೯೧೫ನೆಯ ಇಸವಿಯಲ್ಲಿ ಏರ್ಪಟ್ಟ ಕಾಶೀ ನಗರದ ಹಿಂದೂ ವಿಶ್ವವಿದ್ಯಾನಿಲಯ. ಅನಂತರ ಏರ್ಪಟ್ಟ ಆ ಹೊಸ ಮಾದರಿಯ ವಿಶ್ವವಿದ್ಯಾನಿಲಯವೆಂದರೆ, ನಮ್ಮ ಸಂಸ್ಥಾನದಲ್ಲಿ ೧೯೧೬ನೆಯ ಇಸವಿಯಲ್ಲಿ ಏರ್ಪಟ್ಟ ಮೈಸೂರು ವಿಶ್ವವಿದ್ಯಾನಿಲಯದ ರೆಗ್ಯುಲೇಷನಿನ ಮೇರೆಗೆ ಸ್ಥಾಪಿತವಾದ ನಮ್ಮ ವಿಶ್ವವಿದ್ಯಾನಿಲಯ. ಆ ಬಳಿಕ ಸ್ವಲ್ಪ

ಕಾಲದ ಮೇಲೆ ಕಲ್ಕತ್ತೆಯ ವಿಶ್ವವಿದ್ಯಾನಿಲಯದ "ಕಮಿಷನ್" ಸಭೆಯು ಏರ್ಪಟ್ಟಿತು. ಆ ಸಭೆಯವರೂ ಸಹ, ಬೋಧನಾ ವ್ಯವಸ್ಥೆಗೆ ವಿಶೇಷವಾಗಿ ಗಮನ ಕೊಡುವ ಹೊಸ ಮಾದರಿಯ ವಿಶ್ವವಿದ್ಯಾನಿಲಯಗಳೇ ಮೇಲೆಂದು ಅಭಿಪ್ರಾಯ ಪಟ್ಟು ವರದಿಮಾಡಿದರು. ವಿಶ್ವವಿದ್ಯಾನಿಲಯದವರು ಬೋಧನಾ ವ್ಯವಸ್ಥೆಯ ಮೇಲ್ವಿಚಾರಣೆಯ ಹಕ್ಕೋಟಿ ನೋಡಿಕೊಳ್ಳಬೇಕು; ಪರೀಕ್ಷೆಗಳ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಪ್ರಾಧಾನ್ಯವಿರುವುದಕ್ಕೆ ಪ್ರತಿಯಾಗಿ ಬೋಧನಾ ವ್ಯವಸ್ಥೆ ಯನ್ನು ನೋಡಿಕೊಳ್ಳುವುದಕ್ಕೇ ಪ್ರಾಧಾನ್ಯವಿರುವ ಶಿಸ್ತು ಏರ್ಪಡಬೇಕು; ಭಾಷಾಶಾಸ್ತ್ರದೃಷ್ಟಿಯಿಂದ ದೇಶಭಾಷೆಗಳ ಕ್ರಮವಾದ ವ್ಯಾಸಂಗವು ನಡೆದು ಹೈಸ್ಕೂಲು ತರಗತಿಗಳಲ್ಲಿ ವಿದ್ಯಾರ್ಥಿಗಳ ತಾಯಿನುಡಿಯ ಮೂಲಕವೇ ಹೆಚ್ಚು ಹೆಚ್ಚಾಗಿ ಬೋಧನೆಯು ನಡೆಯಬೇಕು; ಹೈಸ್ಕೂಲು ವ್ಯಾಸಂಗವು ಎಲ್ಲಿಗೆ ನಿಲ್ಲಬೇಕೆಂಬುದೂ, ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗವು ಎಲ್ಲಿಂದ ಉಪಕ್ರಮವಾಗ ಬೇಕೆಂಬುದೂ ಖಚಿತಪಡಲನುಕೂಲಿಸುವುದಕ್ಕಾಗಿ ಇಂಟರ್ಮೀಡಿಯೆಟ್ ಕಾಲೇಜು ಗಳು ಏರ್ಪಡಬೇಕು—ಎಂದು ಆ "ಕಮಿಷನ್" ಸಭೆಯವರು ಒತ್ತಿ ಹೇಳಿದರು. ಒಟ್ಟಿನಲ್ಲಿ ಈಗಿನ ಪರಿಸ್ಥಿತಿಯು ಹೀಗಿದೆ: ಭರತಖಂಡದಲ್ಲಿರುವ ೧೮ ವಿಶ್ವವಿದ್ಯಾ ನಿಲಯಗಳಲ್ಲಿ ಒಟ್ಟು ೧,೩೭,೦೦೦ ಮಂದಿ ವ್ಯಾಸಂಗಮಾಡುತ್ತಿದ್ದಾರೆ. ಅವರಲ್ಲಿ ೪೭೦೦ ಮಂದಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದಾರೆ. ಅವರಲ್ಲಿ ಬಹು ಭಾಗದವರು ಸರ್ಕಾರಿ ಹುದ್ದೆಗಳು, ವೈದ್ಯವೃತ್ತಿ, ಉಪಾಧ್ಯಾಯ ವೃತ್ತಿ ಮತ್ತು ಲಾಯರ ವೃತ್ತಿ—ಇವಕ್ಕೆ ಸೇರಲು ಪ್ರಯತ್ನಿಸುತ್ತಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾಗಿ ಇಪ್ಪತ್ತೈದು ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಅದು ಸಾಧಿಸಿರುವ ಫಲಿತಾಂಶಗಳನ್ನು ಸೂಚಿಸುವುದ ಕ್ಕಿಂತ ಮುಂಚೆ, ಅದನ್ನು ಸ್ಥಾಪಿಸಿದವರ ಮತ್ತು ಅದರ ಆಡಳಿತವನ್ನು ನೋಡಿ ಕೊಂಡಿರುವವರ ಉದ್ದೇಶಗಳಾವುವೆಂಬುದನ್ನು ವಿಚಾರಮಾಡುವುದು ಉಚಿತವೆಂದು ತೋರುತ್ತದೆ.

ಮೊಟ್ಟಮೊದಲು, ಸರ್ ಬ್ರಜೇಂದ್ರನಾಥ ಶೀಲರವರ ಕೆಲವು ವಾಣಿಗಳನ್ನು ಉದಾಹರಿಸಬಹುದಾಗಿದೆ. ಅವರು ಹಿಂದೆ ವೈಸ್-ಛಾನ್ಸೆಲರ್ ಹುದ್ದೆಯಲ್ಲಿದ್ದ ಮೇಧಾವಿಗಳು; ಅವರು ತಮ್ಮ ವಿದ್ಯಾಪ್ರೌಢಿಮೆಯೊಡನೆ ರಾಜನೀತಿ ನೈಪುಣ್ಯ ವನ್ನೂ ಪಡೆದಿದ್ದರು. ಅವರ ಆ ವಾಣಿಗಳು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ವಿವರಿಸುವುದಕ್ಕಿಂತ ಹೆಚ್ಚಾಗಿ ಒಟ್ಟಿನಲ್ಲಿ ನಮ್ಮ ದೇಶದ ವಿದ್ಯಾಭ್ಯಾಸ ವ್ಯವಸ್ಥೆಯೂ, ಪುರೋಭಿವೃದ್ಧಿಸಾಧನೆಯೂ ಹೇಗಿರಬೇಕೆಂಬುದನ್ನು ಸೂಚಿಸುತ್ತವೆ. ವೃತ್ತಿ ಶಿಕ್ಷಣ



ಸರ್ ಎಂ. ವಿಶ್ವೇಶ್ವರಯ್ಯನವರು.

ಕೆ.ಸಿ.ಐ.ಇ., ಎಲ್ಎಲ್.ಡಿ., ಡಿ.ಎಸ್‌ಸಿ., ಎಂ. ಇನ್‌ಸ್ಟ್. ಸಿ.ಇ.

ಶಾಲೆಯೊಂದನ್ನೇರ್ಪಡಿಸತಕ್ಕ ವಿಚಾರದಲ್ಲಿ ಸಲಹೆಗಳನ್ನು ಹೇಳಿದಾಗ್ಗೆ ಅವರು ಸೂಚಿಸಿರುವುದೇನೆಂದರೆ: "ನಮ್ಮ ಭಾರತೀಯರು ದೇಹಬಲದಲ್ಲಿ ಜೀಳಾಗಿದ್ದಾರೆ. ಅವರ ವಸ್ತುರಚನಾಸಾಮರ್ಥ್ಯವು ಬಹಳ ಕೆಳಮಟ್ಟದಲ್ಲಿದೆ. ನಮ್ಮ ದೇಶದಲ್ಲಿ ಸಮೃದ್ಧವಾಗಿರುವ ಸಾಧನಸಂಪತ್ತುಗಳನ್ನು ರೂಢಿಸಿ ನಮ್ಮ ಜೀವನಕ್ಕೆ ಮುಖ್ಯವಾಗಿ ಬೇಕಾದ ಆವಶ್ಯಕತೆಗಳನ್ನೊದಗಿಸಿಕೊಳ್ಳುವುದಕ್ಕೆ ಸಾಧಕವಾದ ಕೈಗಾರಿಕೆಗಳನ್ನು ಏರ್ಪಡಿಸಿ ಸುವ್ಯವಸ್ಥೆಗೆ ತರುವುದೇ ಈ ನ್ಯೂನತೆಗಳನ್ನು ಪರಿಹರಿಸಲು ನಮಗಿರುವ ಮಾರ್ಗ (ಈ ಕೈಗಾರಿಕೆಗಳಲ್ಲಿ ನಮ್ಮ ದೇಶದ ಪ್ರಧಾನ ಕೈಗಾರಿಕೆಯಾಗಿರುವ ವ್ಯವಸಾಯ ವೃತ್ತಿಯೂ ಸೇರಿದೆ); ನಮ್ಮ ಉದ್ದೇಶವು ನೆರವೇರಬೇಕಾದರೆ, ಎಲ್ಲಕ್ಕೂ ಮೊದಲು ಅತ್ಯವಶ್ಯವಾಗಿ ಆಗಬೇಕಾದ ಕಾರ್ಯವು, ನಮ್ಮ ದೇಶದ ವ್ಯವಸಾಯ ವ್ಯವಸ್ಥೆಯನ್ನೂ ಕೈಗಾರಿಕೆಗಳ ವ್ಯವಸ್ಥೆಯನ್ನೂ ಈಗಿನ ವಿಜ್ಞಾನ ಶಾಸ್ತ್ರಕ್ಕನು ಗುಣವಾದ ತಿಳಿವಳಿಕೆಗೂ ಕಾರ್ಯವಿಧಾನಕ್ಕೂ ಹೊಂದಿಸುವುದು. ನಮ್ಮ ದೇಶದಲ್ಲಿ ಒದಗುವ ಖನಿಜಸಂಪತ್ತು ಮುಂತಾದುವುಗಳನ್ನೂ ನಮ್ಮ ಸಂಸ್ಥಾನದ ಬೆಳೆಗಳೇ ಮುಂತಾದ ಉತ್ಪನ್ನಗಳನ್ನೂ ಗಮನದಲ್ಲಿಟ್ಟುಕೊಂಡು ಈ ರೀತಿ ಹೊಂದಿಸಿ ಕೆಲಸ ನಡೆಯಿಸಬೇಕು." ಆ ಸಂಬಂಧದ ಪರಿಸಮಾಪ್ತಿ ವಚನಗಳಾಗಿ ಅವರು "ಈ ಸಮಗ್ರ ವಿಚಾರವನ್ನೂ ನಾವು ಸಮರ್ಪಕವಾಗಿ ಬಗೆಹರಿಸಿ ಕೆಲಸಮಾಡಬೇಕು. ವ್ಯಕ್ತಿಯ ದೃಷ್ಟಿಯಿಂದಲೂ ಒಟ್ಟು ಜನಾಂಗದ ದೃಷ್ಟಿಯಿಂದಲೂ ಜೀವನ ಸಮರವು ನಡೆಯುತ್ತಿರುವ ಈಗಿನ ಕಾಲದ ನವೀನ ಸನ್ನಿವೇಶಗಳಲ್ಲಿ ನಾವು ಬದುಕಿ ಬಾಳುವಂತಾಗ ಬೇಕಾದರೆ, ಆ ರೀತಿ ಮಾಡುವುದೊಂದೇ ನಮಗಿರುವ ಮಾರ್ಗ" ಎಂದು ಸೂಚಿಸಿದರು. ಇನ್ನು ಸರ್ ಎಂ. ವಿಶ್ವೇಶ್ವರಯ್ಯನವರ ಕೆಲವು ವಾಣಿಗಳನ್ನೂ ಉದಾಹರಿಸಬಹುದಾಗಿದೆ. ನಮ್ಮ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಎಲ್ಲರಿಗಿಂತ ಮಿಗಿಲಾಗಿ ಅವರೇ ಕಾರಣರು. ಅವರು ತಮ್ಮ ಗಮನದಲ್ಲಿಟ್ಟುಕೊಂಡಿದ್ದ ಧ್ಯೇಯವೇನೆಂಬುದು ಅವರ ವಾಣಿಗಳಿಂದ ವ್ಯಕ್ತವಾಗುತ್ತದೆ. ಅವರು ಹೇಳಿರುವುದೇನೆಂದರೆ: "ಸ್ಥೂಲವಾಗಿ ನೋಡಿದರೆ, ವಿದ್ವತ್ತಿಗೆ ಪ್ರೋತ್ಸಾಹ ಕೊಡುವುದು, ಪ್ರೌಢವಿದ್ಯಾಭ್ಯಾಸ ಮಾಡಿಸುವುದು, ಸಂಸ್ಕೃತಿ ಕೇಂದ್ರವೊಂದನ್ನೇರ್ಪಡಿಸುವುದು, ನಮ್ಮ ದೇಶದಲ್ಲಿ ಅಜ್ಞಾನದ ಅಂಧಕಾರ ಕವಿದಿರುವ ಮೂಲೆಮೂಲೆಗಳನ್ನೂ ಬೆಳಗಿಸುವ ಬೆಳುದೀವಿಗೆಯನ್ನು ಹೊತ್ತಿಸುವುದು—ಇವುಗಳೇ ಒಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಉದ್ದೇಶಗಳು. . . . ಮೈಸೂರು ಸಂಸ್ಥಾನದಲ್ಲಿ ನಡೆಯಬೇಕಾದ ಕೆಲಸಗಳ ನಿರ್ದಿಷ್ಟವಾದ ಗುರಿಯು ಇಷ್ಟು: ನಮ್ಮ ಸಂಸ್ಥಾನದ ಪ್ರಜೆಗಳ ಮೇಧಾಶಕ್ತಿಯನ್ನೂ ಕ್ರಿಯಾಸಾಮರ್ಥ್ಯವನ್ನೂ ಹೆಚ್ಚಿಸಿ, ಮುಂದಿನ ತಲೆಮಾರಿನ ಕೈಗಾರಿಕೆಗಳ ಯೋಜಕರೂ, ವರ್ತಕರೂ,

ವ್ಯಾಪಾರೋದ್ಯಮ ನಿರ್ವಾಹಕರೂ, ಅರ್ಥಶಾಸ್ತ್ರ ಪರಿಣತರೂ, ಲಾಯರುಗಳೂ, ಸೈರ್ವಲ್ಯರಕ್ಷಕರೂ, ಶಿಲ್ಪಕೋವಿದರೂ, ರಾಜನೀತಿ ಕೋವಿದರಾದ ಆಡಳಿತಗಾರರೂ, ಇತರ ವೃತ್ತಿಗಳವರೂ ಆಗಲು ಆವಶ್ಯಕವಾದ ಶಿಕ್ಷಣವನ್ನು ಅವರಿಗೆ ಕೊಡಬೇಕು.'' ಪೂಜ್ಯರಾದ ನಮ್ಮ ದೊಡ್ಡಪ್ಪನವರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ದಯಪಾಲಿಸಿದ ಮೊಟ್ಟಮೊದಲನೆಯ ಭಾಷಣದಲ್ಲಿ ಸೂಚಿಸಿದ ಕೆಲವು ಅಂಶಗಳನ್ನೂ ಇದೇ ಸಂದರ್ಭದಲ್ಲಿ ಉದಾಹರಿಸಬಹುದಾಗಿದೆ; ಉದ್ದೇಶಗಳಿಗಿಂತಲೂ ಹೆಚ್ಚಾಗಿ ಕಾರ್ಯವಿಧಾನವನ್ನು ಕುರಿತು ಅವರು ಒತ್ತಿಹೇಳಿ ಸೂಚಿಸಿದರು. ಇತರ ಯಾವ ಹುದ್ದೆಯ ಹವ್ಯಾಸವೂ ಇಲ್ಲದೆ ತಮ್ಮ ಪೂರ್ತಾ ಕಾಲವನ್ನೂ ವಿಶ್ವವಿದ್ಯಾನಿಲಯದ ಕಾರ್ಯಗಳಿಗೇ ವಿನಿಯೋಗಿಸಿ ಕೆಲಸಮಾಡುವವರನ್ನು ವೈಸ್-ಛಾನ್ಸೆಲರ್ ಹುದ್ದೆಗೆ ನೇಮಕಮಾಡುವ ಏರ್ಪಾಡಿನಿಂದಲೂ ಕಾಲೇಜುಗಳ "ಪ್ರಿನ್ಸಿಪಾಲ" ರುಗಳಿಗೂ ಮತ್ತು ಅಧ್ಯಾಪಕರುಗಳಿಗೂ ("ಪ್ರೊಫೆಸರು"ಗಳಿಗೂ) ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣಕಾರ್ಯದಲ್ಲಿ ಸಂಬಂಧವಿರುವಂತೆ ಮಾಡುವುದರಿಂದಲೂ ನಿರೀಕ್ಷಿಸಬಹುದಾದ ಕಾರ್ಯವಿಚಕ್ಷಣೆ; ಅಧ್ಯಾಪಕರುಗಳಿಗೂ ವಿದ್ಯಾರ್ಥಿಗಳಿಗೂ ಇನ್ನೂ ಹೆಚ್ಚಿನ ಸ್ನೇಹ ಸಂಬಂಧವನ್ನು ಕಲ್ಪಿಸುವ ವಿಚಾರ; ವಿದ್ಯಾರ್ಥಿಜೀವನದ ಮೇಲೆ ಇರಬೇಕಾದ ಇನ್ನೂ ಹೆಚ್ಚು ಕಟ್ಟುನಿಟ್ಟಾದ ಹತೋಟಿ; ವಿದ್ಯಾರ್ಥಿನಿಲಯಗಳನ್ನೂ ವ್ಯಾಯಾಮಶಾಲೆಗಳನ್ನೂ ಏರ್ಪಡಿಸುವುದರಿಂದ ನಿರೀಕ್ಷಿಸಬಹುದಾದ ಹೆಚ್ಚಿನ ಆರೋಗ್ಯ ಸ್ಥಿತಿ; ವಿದ್ಯಾರ್ಥಿನಿಲಯಗಳಲ್ಲಿಯೂ "ಯೂನಿಯನ್" ಸಂಘಗಳಲ್ಲಿಯೂ ಅತ್ಯುತ್ತಮವಾದ ಸಾಂಘಿಕ ಜೀವನ ("ಕ್ಲಬ್‌ಲೈಫ್") ವಿಧಾನವನ್ನು ಏರ್ಪಡಿಸುವುದರಿಂದ ಅವರಲ್ಲಿ ಉಂಟಾಗುವಂತೆ ನಿರೀಕ್ಷಿಸಬಹುದಾದ ಹೆಚ್ಚಿನ ದೃಷ್ಟಿ ವೈಶಾಲ್ಯ; ದೇಶಭಾಷಾವ್ಯಾಸಂಗ, ಸಾರ್ವಜನಿಕ ಶಿಕ್ಷಣ ಮತ್ತು ಪ್ರಚಾರೋಪನ್ಯಾಸಗಳ ಮೂಲಕ ವಿಶ್ವವಿದ್ಯಾನಿಲಯವು ಪ್ರಜೆಗಳೊಡನೆ ಕಲ್ಪಿಸಿಕೊಳ್ಳಬಹುದಾದ ಹೆಚ್ಚಿನ ಸಂಬಂಧ—ಇವುಗಳು, ಆಗ್ಗೆ ಅವರು ಒತ್ತಿಹೇಳಿ ಸೂಚಿಸಿದ ಅಂಶಗಳು.

ಕೇವಲ ಸಂಖ್ಯಾಬಲವೊಂದೇ ಮುಖ್ಯವೆಂದೆಣಿಸಿದರೂ ಕೂಡ, ನಮ್ಮ ವಿಶ್ವವಿದ್ಯಾನಿಲಯವು ಕಳೆದ ಇಪ್ಪತ್ತೈದುವರ್ಷಗಳ ಅವಧಿಯಲ್ಲಿ ನೆರವೇರಿಸಿರುವ ಸಾಧನೆಗಳು ಏಕಪ್ರಕಾರವಾಗಿ ಯಶಸ್ವಿಯಾಗಿವೆಯೆಂದೇ ಹೇಳಬಹುದಾಗಿದೆ. ನಮ್ಮ ವಿಶ್ವವಿದ್ಯಾನಿಲಯವು ಸ್ಥಾಪಿತವಾದಾಗ್ಗೆ ಅದರ ಆಡಳಿತದಲ್ಲಿ ಎರಡೇ ಎರಡು ಕಾಲೇಜುಗಳಿದ್ದುವು; ಈಗ ಅದರ ಆಡಳಿತದಲ್ಲಿ ಐದು ಕಾಲೇಜುಗಳಿವೆ. ಇಂಜನಿಯರಿಂಗ್ ಕಾಲೇಜೂ ಮತ್ತು ಮೆಡಿಕಲ್ ಕಾಲೇಜೂ ಸಹ, ವಿಶ್ವವಿದ್ಯಾನಿಲಯವು ಸ್ಥಾಪಿತವಾದ



ಈಗಿನ ವೈಸ್-ಛಾನ್ಸೆಲರವರಾದ

ರಾಜಕಾರ್ಯಪ್ರವೀಣ

ಶ್ರೀಮಾನ್ ಎನ್. ಎಸ್. ಸುಬ್ಬರಾವ್, ಎಂ.ಎ., ಬಾರ್-ಅಟ್-ಲಾ, ಅವರು

ಮೇಲೆ ಹೊಸದಾಗಿ ಏರ್ಪಟ್ಟ ಕಾಲೇಜುಗಳು. ಇವುಗಳೂ ಮತ್ತು ಮಹಿಳೆಯರಿಗಾಗಿ ಏರ್ಪಟ್ಟಿರುವ ಮಹಾರಾಣೀ ಕಾಲೇಜೂ ಅಲ್ಲದೆ, ಹೊಸದಾಗಿ ಕೆಲವು ಸಂಸ್ಥೆಗಳೂ ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟಿವೆ. "ಮೆಡಿಕಲ್ ಸ್ಕೂಲ್", "ಇಂಜನಿಯರಿಂಗ್ ಸ್ಕೂಲ್", "ಓರಿಯಂಟಲ್ ಲೈಬ್ರರಿ" ಎಂಬ ಪ್ರಾಚ್ಯ ಪುಸ್ತಕ ಭಂಡಾರ ಮತ್ತು "ಆರ್ಕಿಯಲಾಜಿಕಲ್ ಆಫೀಸ್" ಎಂಬ ಪ್ರಾಕ್ತನ ಸಂಶೋಧನ ಕಾರ್ಯಾಲಯ—ಇವುಗಳು ಆ ಸಂಸ್ಥೆಗಳು. "ಇಂಜನಿಯರಿಂಗ್ ಮತ್ತು ಮೆಡಿಕಲ್ ಫ್ಯಾಕಲ್ಟಿ" ಗಳೆಂಬ ಎರಡು ವ್ಯಾಸಂಗ ಶಾಖೆಗಳು (ಎಂದರೆ "ಫ್ಯಾಕಲ್ಟಿ" ಗಳು) ಹೊಸದಾಗಿ ಏರ್ಪಟ್ಟಿದೆ. ಮೊದಲಿನಿಂದ ಇದ್ದವುಗಳ ಆಡಳಿತಕ್ಕೆ ಹೆಚ್ಚಿನ ಶಾಖೆಗಳು ಸೇರಿವೆ; ಅರ್ಥಶಾಸ್ತ್ರ ಸಂಬಂಧವಾದ ಗಣಿತಶಾಸ್ತ್ರ ("ಮ್ಯಾಥಮ್ಯಾಟಿಕಲ್ ಎಕನಾಮಿಕ್ಸ್"), ಲೆಕ್ಕಗಳ ಸಂಗ್ರಹ ಸಂಬಂಧವಾದ ವಿಜ್ಞಾನ ("ಸ್ಟಟಿಸ್ಟಿಕ್ಸ್"), ಪ್ರಯೋಗರೂಪದ ಮನಶ್ಶಾಸ್ತ್ರ ("ಎಕ್ಸ್‌ಪೆರಿಮೆಂಟಲ್ ಸೈಕಾಲಜಿ"), ಶಿಕ್ಷಣವಿಜ್ಞಾನ, ಸಮಾಜವಿಜ್ಞಾನ ಮತ್ತು ಭೂಗೋಳಶಾಸ್ತ್ರ—ಇವುಗಳು ಆ ಶಾಖೆಗಳಲ್ಲಿ ಕೆಲವು. ವಿಜ್ಞಾನಸಂಬಂಧವಾಗಿ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮುಂತಾದುವುಗಳಲ್ಲಿ ಪ್ರತಿಯೊಂದೂ ಸುಸಜ್ಜಿತವಾದ ಒಂದೊಂದು ಪ್ರತ್ಯೇಕ ಶಾಖೆಯಾಗಿ ಏರ್ಪಟ್ಟಿದೆ.

ಇನ್ನು ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿರುವ ವಿಚಾರ. ೧೯೧೭-೧೮ ನೆಯ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ೭೨೦ ಮಂದಿಗಳೂ, ಎಂಟ್ರೆನ್ಸ್ ತರಗತಿಯಲ್ಲಿ ೪೨೦ ಮಂದಿಗಳೂ ವ್ಯಾಸಂಗಮಾಡುತ್ತಿದ್ದರು; ೧೯೪೦-೪೧ ನೆಯ ಸಾಲಿನಲ್ಲಿ ವ್ಯಾಸಂಗಮಾಡುತ್ತಿದ್ದವರ ಸಂಖ್ಯೆಯು ೪,೭೦೦ ಕ್ಕೆ ಹೆಚ್ಚಿತು. ಮೊಟ್ಟಮೊದಲನೆಯ ಘಟಿಕೋತ್ಸವದಲ್ಲಿ ೫೫ ಮಂದಿ "ಡಿಗ್ರಿ" ಪ್ರಶಸ್ತಿಗಳನ್ನು ಪಡೆದಿದ್ದರು. ಕಳೆದ ಘಟಿಕೋತ್ಸವದಲ್ಲಿ ೪೦೬ ಮಂದಿ "ಡಿಗ್ರಿ" ಪ್ರಶಸ್ತಿಗಳನ್ನು ಪಡೆದರು. ವೃತ್ತಿಗಳ ದೃಷ್ಟಿಯಿಂದ ಸಮಾಲೋಚನೆಮಾಡಿ ನೋಡಿದರೆ, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕಲಾಭಾಗದಲ್ಲಿ ೪,೩೩೧ ಮಂದಿಗಳೂ, ವಿಜ್ಞಾನಭಾಗದಲ್ಲಿ ೧,೯೪೪ ಮಂದಿಗಳೂ, ಶಿಲ್ಪಕಲೆಯಲ್ಲಿ ("ಇಂಜನಿಯರಿಂಗ್") ೭೩೮ ಮಂದಿಗಳೂ ಮತ್ತು ವೈದ್ಯಕಲೆಯಲ್ಲಿ ೧೩೬ ಮಂದಿಗಳೂ ಗ್ರ್ಯಾಜುಯೇಟ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರಲ್ಲಿ ಅನೇಕರು ನಮ್ಮ ದೇಶದ ಸಾರ್ವಜನಿಕ ಜೀವನದಲ್ಲಿ ಮುಂದಾಳುಗಳಾಗಿದ್ದಾರೆ. ಅಲ್ಲದೆ ನೂತನ ಸಚಿವರುಗಳಲ್ಲಿಬ್ಬರೂ, ನ್ಯಾಯವಿಧಾಯಕ ಸಭೆಯ ಅಧ್ಯಕ್ಷರೂ ನಮ್ಮ ವಿಶ್ವವಿದ್ಯಾನಿಲಯದ ಗ್ರ್ಯಾಜುಯೇಟ್ ಪ್ರಶಸ್ತಿಯನ್ನು ಪಡೆದವರೇ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಗ್ರ್ಯಾಜುಯೇಟ್ ಪ್ರಶಸ್ತಿಯನ್ನು

ಪಡೆದವರಲ್ಲಿ ಅನೇಕರು ಇತರ ಪ್ರದೇಶಗಳಲ್ಲಿ ಸಹ ಖ್ಯಾತಿಹೊಂದಿ ಕೆಲಸಮಾಡುತ್ತಿದ್ದಾರೆ. ಆದಾಗ್ಗೂ, ಸರ್ ಎಂ. ವಿಶ್ವೇಶ್ವರಯ್ಯನವರು ನಿರೂಪಿಸಿದಂತೆ ನಮ್ಮ ಸಂಸ್ಥಾನದ ಪ್ರಜೆಗಳ ಮೇಧಾಶಕ್ತಿಯನ್ನೂ ಕ್ರಿಯಾಶಕ್ತಿಯನ್ನೂ ವೃದ್ಧಿಗೊಳಿಸಿ ಕೈಗಾರಿಕೆಗಳ ವ್ಯವಸ್ಥಾಪಕರೂ, ವರ್ತಕರೂ, ವ್ಯಾಪಾರೋದ್ಯಮ ನಿರ್ವಾಹಕರೂ, ಲಾಯರುಗಳೂ ನಮ್ಮ ವಿಶ್ವವಿದ್ಯಾನಿಲಯದಿಂದ ಒದಗುವಂತೆ ಮಾಡುವ ಮಟ್ಟಿಗೆ ಇನ್ನೂ ಕಾರ್ಯಸಾಧನೆಯಾಗಿಲ್ಲ.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಆರೋಗ್ಯ ರಕ್ಷಣೆಯ ವಿಚಾರ. ವಿಶ್ವವಿದ್ಯಾನಿಲಯದ ಹತೋಟಿಯಲ್ಲಿ ಎಂಟು ವಿದ್ಯಾರ್ಥಿ ವಿದ್ಯಾರ್ಥಿನೀ ನಿಲಯಗಳಿವೆ. ಅವುಗಳ ಜೊತೆಗೆ, ವಿಶ್ವವಿದ್ಯಾನಿಲಯದಿಂದ ಧನ ಸಹಾಯವನ್ನು ಪಡೆಯುವ ಕೆಲವು ಖಾಸಗಿ ಸಂಸ್ಥೆಗಳೂ ಇವೆ. ಸ್ಕೂಲುಗಳಲ್ಲಿ ವ್ಯಾಸಂಗಮಾಡುವವರಿಗೂ ಮತ್ತು ಕಾಲೇಜುಗಳಲ್ಲಿ ವ್ಯಾಸಂಗಮಾಡುವವರಿಗೂ ಕೆಲವು ಸಂಸ್ಥೆಗಳಲ್ಲಿ ವಾಸಕ್ಕೆ ಅವಕಾಶವುಂಟು. ಮುಖ್ಯವಾದ ಕಾಲೇಜುಗಳಲ್ಲಿ ಕೆಲಸ ನಡೆಯುವ ದಿನಗಳಲ್ಲಿ ವಿರಾಮ ದೊರೆತ ವೇಳೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿದಿನವೂ ಸುಲಭವೆಚ್ಚದಲ್ಲಿ ಆರೋಗ್ಯಕರವಾದ ಉಪಾಹಾರವನ್ನು ದೊರೆಯಿಸುವ ವ್ಯವಸ್ಥೆಯು ("ಕ್ಯಾಂಟೀನ್") ಏರ್ಪಟ್ಟಿದೆ. ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಕಾಲೇಜುಗಳಲ್ಲಿ ಸೊಗಸಾದ ಆಟದ ಬಯಲುಗಳಿವೆ. ವಿಶ್ವವಿದ್ಯಾನಿಲಯದಲ್ಲಿ ಅಧಿಕ ಸಂಖ್ಯೆಯವರು ವ್ಯಾಸಂಗಮಾಡುತ್ತಿರುವುದು ಸರಿಯಷ್ಟೆ. ಅವರಿಗೆ ಕಲ್ಪಿಸಿರುವ ಸೌಕರ್ಯಗಳನ್ನೂ ಸಹ, ಆ ಸಂಖ್ಯಾಬಲದ ಸಂಬಂಧವಾಗಿ ಪರಿಗಣಿಸಬೇಕಾಗಿದೆ. ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡುತ್ತಿರುವ ಒಟ್ಟು ೪,೭೦೦ ಮಂದಿಗಳಲ್ಲಿ ೪೦೦ ಮಂದಿಗಳಿಗೆ ಮಾತ್ರವೇ, ವಿಶ್ವವಿದ್ಯಾನಿಲಯದ ಹತೋಟಿಯಲ್ಲಿರುವ ವಿದ್ಯಾರ್ಥಿ ವಿದ್ಯಾರ್ಥಿನೀ ನಿಲಯಗಳಲ್ಲಿ ವಾಸಕ್ಕೆ ಅನುಕೂಲವಿದೆ. ವಿಶ್ವವಿದ್ಯಾನಿಲಯದ "ಟ್ರೇನಿಂಗ್ ಕೋರ್" ಶಿಕ್ಷಣ ವ್ಯವಸ್ಥೆಯಲ್ಲಿ ೩೫೫ ಮಂದಿ ಸೈನಿಕ ಶಿಕ್ಷಣ ಪಡೆಯುತ್ತಿದ್ದಾರೆ; ೧,೪೦೦ ಮಂದಿ ಕ್ರಿಕೆಟ್ ಮುಂತಾದ ಆಟಪಾಟಗಳ ವ್ಯವಸ್ಥೆಗೆ ಸೇರಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಹಿಂದೆ ವ್ಯಾಸಂಗಮಾಡುತ್ತಿದ್ದವರಿಬ್ಬರು ಕ್ರಿಕೆಟ್ ಚಂಡಾಟದಲ್ಲಿ ಮೇಲ್ಮೆಯನ್ನು ಪಡೆದು ಒಟ್ಟು ಭರತಖಂಡದಲ್ಲೇ ಪ್ರಸಿದ್ಧರಾಗಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡಿದವರು ಮತ್ತಿಬ್ಬರು ಒಲಿಂಪಿಕ್ ಆಟಗಳ ಸ್ಪರ್ಧೆಯಲ್ಲಿ ಜಯಶೀಲರಾಗಿ ಹೆಸರುವಾಸಿಯಾಗಿದ್ದಾರೆ. ಆದರೆ, ಕೆಲವರು ಹೀಗಿದ್ದರೂ ಇತರ ವಿದ್ಯಾರ್ಥಿ ವಿದ್ಯಾರ್ಥಿನಿಯರ ಆರೋಗ್ಯ ಪರೀಕ್ಷೆಯನ್ನು ಮಾಡಿದ ವೈದ್ಯರ ವರದಿಗಳು ಮಾತ್ರ ಉತ್ಸಾಹಭಂಗವನ್ನುಂಟುಮಾಡುವಂತಿವೆ.



ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರುಗಳು

ಅವರು ರೋಗಗಳಿಗೆ ಮೊದಲು ಗುರಿಯಾಗುವುದು ಸ್ಕೂಲುಗಳಲ್ಲಿಯ ವ್ಯಾಸಂಗ ಕಾಲದಲ್ಲೇ ಹೊರತು ಕಾಲೇಜುಗಳಲ್ಲಿಯ ವ್ಯಾಸಂಗಕಾಲದಲ್ಲಲ್ಲವೆಂಬುದೇನೊ, ಆ ವರದಿಗಳಿಂದ ದೃಢಪಡುತ್ತದೆ. ಆದರೆ, ಕಾಲೇಜುಗಳಲ್ಲಿಯ ವ್ಯಾಸಂಗಕಾಲದಲ್ಲಿ ನಿರೀಕ್ಷಿತವಾದಂತೆ ಅವರ ಆರೋಗ್ಯಸ್ಥಿತಿಯು ಉತ್ತಮವಾದ ಅಂಶವು ಮಾತ್ರ ಆ ವರದಿಗಳಿಂದ ವ್ಯಕ್ತವಾಗುವುದಿಲ್ಲ.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡುವವರ ಸಾಂಘಿಕ ಜೀವನದ ವಿಚಾರ. ಅವರುಗಳು "ಯೂನಿವರ್ಸಿಟಿ ಯೂನಿಯನ್" ಸಂಘಗಳಲ್ಲಿ ಬಹಳ ಆಸಕ್ತಿ ವಹಿಸಿ ಆದರ ತೋರುತ್ತಿದ್ದಾರೆ. ಆದಕಾರಣ ಅಲ್ಲಿ ಚರ್ಚೆಗಳು ನಡೆಯುವಾಗ್ಗೆ, ನಿಲ್ಲುವುದಕ್ಕೆ ಸ್ಥಳ ಸಿಕ್ಕುವುದು ಕೂಡ ದುರ್ಲಭವಾಗುವಷ್ಟು ಮಟ್ಟಿಗೆ ಜನರು ಕಿಕ್ಕಿರಿದು ತುಂಬಿರುತ್ತಾರೆ. ಆದರೆ ಅವುಗಳ ಸದಸ್ಯರ ಭಾರಿ ಸಂಖ್ಯೆಯನ್ನು ನೋಡಿದರೆ, ಅವರಲ್ಲಿ ಅಲ್ಪಭಾಗದ ಕೆಲವರು ಹೊರತಾಗಿ ಅಧಿಕ ಮಂದಿಗಳು ನಡವಳಿಕೆಗಳಲ್ಲಿ ಭಾಗಿಗಳಾಗುವುದು ಸಾಧ್ಯವಿಲ್ಲದಂತಿದೆ. ಸ್ವಲ್ಪಸ್ವಲ್ಪ ಮಂದಿಗಳೇ ಸೇರಿ ಪ್ರತ್ಯೇಕ ಪ್ರತ್ಯೇಕವಾಗಿ ಏರ್ಪಡಿಸಿಕೊಂಡಿರುವ ಚಿಕ್ಕಚಿಕ್ಕ ಆಪ್ತಗೋಷ್ಠಿಗಳೇನಾದರೂ ಇವೆಯೋ ಇಲ್ಲವೋ ಹೇಳುವಂತಿಲ್ಲ; ಅವು ಹೇಗಿರಬೇಕೆಂದು ಸೂಚಿತವಾಗಿರುವ ವಿವರಣೆಗನುಸಾರವಾಗಿ—ಎಂದರೆ "ಕೆಲಕೆಲವರು ಮಿತ್ರರು ಸೇರಿಕೊಂಡು ಒಟ್ಟು ವಿಶ್ವಸೃಷ್ಟಿಯಲ್ಲಿರುವ ಸಮಸ್ತ ವಿಚಾರಗಳನ್ನೂ ಕುರಿತು ಹಗಲಿರುಳೆನ್ನದೆ ಎಷ್ಟು ಕಾಲವೆಂದರೆ ಅಷ್ಟುಕಾಲ ಅನಿರ್ಬಂಧ ರೀತಿಯಲ್ಲಿ ಸ್ವೇಚ್ಛೆಯಾಗಿ ಚರ್ಚಿಸಬೇಕು. ವಾದಗಳು ಹೀಗೆಯೇ ನಡೆಯಬೇಕೆಂಬ ಪರಿಮಿತಿಯಿಲ್ಲದೆ ಅವು ಯಾವ ಕಡೆಗೆ ಹೋದರೆ ಆ ಕಡೆಗೆ ಹೋಗಬೇಕು. ಯುವಕರಾದ ಚರಿತ್ರೆಯ ವಿದ್ಯಾರ್ಥಿಗಳು, ವೈದ್ಯಶಾಸ್ತ್ರದ ವಿದ್ಯಾರ್ಥಿಗಳು, ರಸಾಯನಶಾಸ್ತ್ರವನ್ನೋ ಅಥವಾ ಆಧ್ಯಾತ್ಮಿಕ ಶಾಸ್ತ್ರವನ್ನೋ ಅಥವಾ ಶಿಲ್ಪಶಾಸ್ತ್ರವನ್ನೋ ವ್ಯಾಸಂಗಮಾಡುತ್ತಿರುವವರು, ಸಾಮಾಜಿಕ ಪಂಗಡಗಳಲ್ಲಿ ಬೇರೆಬೇರೆಯವುಗಳಿಗೆ ಸೇರಿದವರು, ಮುಂತಾದವರೆಲ್ಲರೂ ಚರ್ಚೆಗಾರಂಭಿಸಿ ವಾದಗಳು ಬೆಳೆಯಬೇಕು. ಅವರುಗಳೆಲ್ಲರೂ ತಮ್ಮತಮ್ಮ ಅನುಭವಗಳಿಗನುಸಾರವಾಗಿಯೂ ಮತ್ತು ತಮ್ಮತಮ್ಮ ಮನಸ್ಸಿನ ಇಷ್ಟಾನಿಷ್ಟದೃಷ್ಟಿಗಳಿಗನುಸಾರವಾಗಿಯೂ ವಿಷಯನಿರೂಪಣೆ ಮಾಡಬೇಕು. ಇದೆಲ್ಲದರ ಫಲಿತಾಂಶವಾಗಿ, ಬೇರೆಬೇರೆ ದೃಷ್ಟಿಗಳಿಂದ ವಿಷಯಗಳನ್ನು ಪರಿಶೀಲಿಸುವುದು ಸಹಜವೆಂದೂ, ಅದಕ್ಕೆಲ್ಲ ಅವಕಾಶಕೊಟ್ಟು ಸಿದ್ಧಾಂತಕ್ಕೆ ಬರಬೇಕಾದುದು ಆವಶ್ಯಕವೆಂದೂ ಅವರಿಗೆ ಮನದಟ್ಟಾಗಬೇಕು. ಇದೆಲ್ಲದರಲ್ಲಿಯೂ ಸಾಹಸಪ್ರಿಯತೆಯಿಂದಲೂ, ಹೊಸಹೊಸ ರೀತಿಗಳಲ್ಲಿ ಪರಾಮರ್ಶೆಮಾಡುವ ಧೋರಣೆಯಿಂದಲೂ ಬುದ್ಧಿಪಾಟವವು ತಾಂಡವ

ವಾಡಿ ಮನಸ್ಸು ಉತ್ಸಾಹದಿಂದಲೂ ಹರ್ಷದಿಂದಲೂ ತುಂಬಿ ಓಲಾಡಬೇಕು " ಎಂಬ ವಿವರಣೆಗನುಸಾರವಾಗಿರುವ—ಆಪ್ತಗೋಷ್ಠಿಗಳೇನಾದರೂ ಇರುವುವಾದರೂ ಅವು ತೀರ ಅಲ್ಪಸಂಖ್ಯೆಯಲ್ಲಿವೆಯೆಂದು ತೋರುವುದು. ನಮಗೆ ತಿಳಿದಮಟ್ಟಿಗೆ "ವಿದ್ಯಾರ್ಥಿ ನಿಲಯಗಳಲ್ಲಿ ಕೂಡ ವಾಸ್ತವವಾದ ಸ್ನೇಹ ಮಮತೆಗಳಿಂದ ಬೆಳಗುವ ಸಾಂಘಿಕ ಜೀವನ ವ್ಯವಸ್ಥೆಯು ಹೆಚ್ಚಾಗಿ ಪರಿಸ್ಫುಟವಾಗಿಲ್ಲ. ಈ ದೃಷ್ಟಿಯಿಂದ ನೋಡಿದರೆ, ಬೇರೆಬೇರೆ ಜಾತಿಮತಗಳವರಿಗೇ ಪ್ರತ್ಯೇಕಪ್ರತ್ಯೇಕವಾಗಿ ವಿದ್ಯಾರ್ಥಿನಿಲಯಗಳು ಏರ್ಪಡುವುದು ಸಮಸ್ತ ಜಾತಿ ಪಂಗಡಗಳವರೂ ಸಂಮಿಳಿತವಾಗಿ ಒಟ್ಟುಗೂಡು ವುದಕ್ಕೆ ಸಾಧಕವಲ್ಲದಿರಬಹುದಾದ ಕಾರ್ಯಕ್ರಮವಲ್ಲವೇ—ಎಂದು ನಮ್ಮ ಮನಸ್ಸಿಗೆ ತೋರುತ್ತಿದೆ. ಇದಕ್ಕೆ ಪ್ರತಿಯಾಗಿವೆ, ವಿಶ್ವವಿದ್ಯಾನಿಲಯದ ಸಮಾಜಸೇವಾ ವ್ಯವಸ್ಥೆ ಮತ್ತು ಅಕ್ಷರ ಪ್ರಚಾರಕಾರ್ಯ ವ್ಯವಸ್ಥೆಗಳು. ಇವುಗಳಿಗೆ ಸಂಬಂಧಪಟ್ಟ ಕಾರ್ಯಕಲಾಪಗಳಲ್ಲಿ ಸಮಸ್ತ ಜಾತಿಪಂಗಡಗಳ ವಿದ್ಯಾರ್ಥಿಗಳೂ ಯಾವ ಭೇದವೂ ಇಲ್ಲದೆ ಒಟ್ಟುಗೂಡಿ ಸಹಕರಿಸುತ್ತಾರೆ; ತಮ್ಮಂತೆ ಅಕ್ಷರಜ್ಞರಲ್ಲದ ವಯಸ್ಕರಿಗೆ ವಿದ್ಯಾದಾನಮಾಡುವ ಸೇವಾದೀಕ್ಷೆಯಲ್ಲಿ ನಿರತರಾಗುವುದಕ್ಕೆ ಈ ಹೊಸ ಏರ್ಪಾಡು ಗಳಲ್ಲಿ ಬಹಳ ಅವಕಾಶವಿದೆ. ಇವು ಮನಸ್ಸಿಗೆ ಬಹಳ ಹಿತವಾಗಿಯೂ ಉಪಯುಕ್ತ ವಾಗಿಯೂ ಇರುವ ನೂತನ ವ್ಯವಸ್ಥೆಗಳು.

ಹೀಗೆ, ನಮ್ಮ ವಿಶ್ವವಿದ್ಯಾನಿಲಯವು ಈಗ್ಗೆ ಇಪ್ಪತ್ತೈದು ವರ್ಷಗಳಿಂದಲೂ ಬಹುಮುಖವಾಗಿ ಉಪಯುಕ್ತ ರೀತಿಯಲ್ಲಿ ಕೆಲಸಮಾಡುತ್ತಬಂದಿದೆ. ಅದರಿಂದ ಸಂಸ್ಥಾನದ ಪ್ರಜೆಗಳ ಮೇಧಾಶಕ್ತಿಯ ಬೆಳೆವಣಿಗೆಗೂ ವಿದ್ಯಾಭಿವೃದ್ಧಿಗೂ ಬಹು ವಾಗಿ ಸಾಧಕವಾಗುವ ಸತ್ಪರಿಣಾಮಗಳುಂಟಾಗಿವೆ. ಇನ್ನು ಮುಂದೆ ನಮ್ಮ ಕಾರ್ಯವಿಧಾನವೇನಾದರೂ ಮಾರ್ಪಡಬೇಕೇ, ಹಾಗಾದರೆ ನಾವು ಅದನ್ನು ಹೇಗೆ ಮಾರ್ಪಡಿಸಬೇಕು—ಎಂಬುದನ್ನು ನಾವು ಈಗ ಪರ್ಯಾಲೋಚಿಸಬೇಕಾಗಿದೆ. ಈ ವಿಚಾರವನ್ನು ಮುಖ್ಯವಾಗಿ ನಾವು ಮೂರು ದೃಷ್ಟಿಗಳಿಂದ ಆಲೋಚನೆಮಾಡಬಹು ದಾಗಿದೆ. ಮೊದಲನೆಯದಾಗಿ, ಸಂಪ್ರದಾಯಬದ್ಧವೆನಿಸಿ ಅನೂಚಾನವಾಗಿ ಬಹು ಕಾಲದಿಂದ ಬಂದಿರುವ ಭಾವನೆಯೊಂದು ಇದ್ದೇ ಇದೆ. ಜ್ಞಾನ ಸಂಪತ್ತನ್ನು ಸುರಕ್ಷಿತವಾಗಿ ಕಾಪಾಡುವುದು, ಸಂಸ್ಕೃತಿಯನ್ನು ವೃದ್ಧಿಪಡಿಸುವುದು, ಸಂಶೋ ಧನಗಳನ್ನು ಹೆಚ್ಚಿಸುವುದು ಮತ್ತು ಜೀವನದ ಪರಮಾರ್ಥಗಳನ್ನು ಕಾಪಾಡಿ ಅವುಗಳ ಮೇಲ್ಮೆಯನ್ನು ಎತ್ತಿಹಿಡಿಯುವುದು, ಸರ್ ಪಿ. ಸಿ. ರಾಯ್ ಅವರು ಸೂಚಿಸಿರು ವಂತೆ ವಿದ್ಯಾ ವಿವೇಕಗಳ ಪ್ರಭೆಯನ್ನು ಹರಡುವ ಕೇಂದ್ರವಾಗಿ ವಿರಾಜಿಸುವುದು— ಇವುಗಳು ವಿಶ್ವವಿದ್ಯಾನಿಲಯದ ಕರ್ತವ್ಯಗಳೆಂಬುದು ಆ ಭಾವನೆ. ಆ ಕರ್ತವ್ಯಗಳನ್ನು



ಮಹಾರಾಜಾ ಕಾಲೇಜಿನಲ್ಲಿ ಚರಿತ್ರೆಯ ಮುಖ್ಯಾಧ್ಯಾಪಕರೂ ಅನಂತರ
ಅಧ್ಯಕ್ಷರೂ ಆಗಿದ್ದು, ಮೈಸೂರು ವಿಶ್ವವಿದ್ಯಾನಿಲಯದ
ಮೊದಲನೆಯ ರಿಜಿಸ್ಟ್ರಾರರಾಗಿ ವಿಶ್ರಾಂತಿ ಪಡೆದ

ಥಾಮಸ್ ಡೆನ್ಹಂ, ಎಂ.ಎ. ಅವರು



ನಾವು ಲೇಶಮಾತ್ರವೂ ಉಪೇಕ್ಷಿಸುವಂತಿಲ್ಲ. ನಮ್ಮಿಂದ ಸಾಧ್ಯವಿರುವ ಸರ್ವ ಪ್ರಯತ್ನಗಳಿಂದಲೂ ಅದನ್ನು ನೆರವೇರಿಸಬೇಕಾದುದು ಅತ್ಯಾವಶ್ಯಕ.

ಎರಡನೆಯದಾಗಿ ವಿಶ್ವವಿದ್ಯಾನಿಲಯದ ಕಾರ್ಯವಿಧಾನದಲ್ಲಿ ಯಾವ ದೃಷ್ಟಿಯಿಂದ ನಾವು ಮಾರ್ಪಾಡುಗಳನ್ನು ಮಾಡಬಹುದೋ ಅದರ ವಿಚಾರ. ಆ ದೃಷ್ಟಿಯು ಸಂಸ್ಥಾನದ ಸರ್ಕಾರದ ಮತ್ತು ಪ್ರಜೆಗಳ ದೃಷ್ಟಿ. ಈಗಿನ ಕಾಲವಾದರೋ, ಸರ್ಕಾರದ ಸಹಾಯದ ಅವಲಂಬನದ ಮೇಲೆ ಬಹುಮಟ್ಟಿಗೆ ನಿಂತಿರುವ ಸಂಸ್ಥೆಗಳು ಮಹಾಜನರ ಆದರಕ್ಕೆ ಒಡನೆಯೇ ಪಾತ್ರವಾಗುವ ಫಲಿತಾಂಶಗಳನ್ನು ಪಡೆದು ತಮ್ಮ ಸಾರ್ಥಕ್ಯವನ್ನು ತೋರಿಸಿಕೊಂಡು ನಡೆದು ಬರಬೇಕಾದ ಕಾಲ. ವಿಶ್ವವಿದ್ಯಾನಿಲಯವು ಸರ್ಕಾರಿ ಹುದ್ದೆಗಳಿಗೆ ವಿದ್ಯಾವಂತರನ್ನು ಒದಗಿಸಿಕೊಡುವುದಲ್ಲದೆ, ಸಂಶೋಧನ ಕಾರ್ಯದಿಂದ ನೂತನ ವಿಚಾರಗಳನ್ನು ಕಂಡು ಹಿಡಿಯುವುದರ ಮೂಲಕವೂ ಮತ್ತು ಮೊದಲೇ ತಿಳಿದಿರುವ ವಿಚಾರಗಳನ್ನು ಮತ್ತಷ್ಟು ಪ್ರಯೋಜನವಾಗುವಂತೆ ಪುಷ್ಟೀಕರಿಸುವುದರ ಮೂಲಕವೂ ಸರ್ಕಾರದ ಕೈಗಾರಿಕೆ ಕಾರ್ಖಾನೆಗಳ ಅಭಿವೃದ್ಧಿ ಪ್ರಯತ್ನದಲ್ಲಿ ತಮ್ಮೊಡನೆ ಸಹಕರಿಸಬೇಕೆಂದೂ ಸರ್ಕಾರದವರು ನಿರೀಕ್ಷಿಸುತ್ತಾರೆ. ಅಷ್ಟೇ ಅಲ್ಲ. ಇದಕ್ಕಿಂತಲೂ ಪ್ರಾಮುಖ್ಯವಾದ ಮತ್ತೊಂದು ಕಾರ್ಯವೂ ವಿಶ್ವವಿದ್ಯಾನಿಲಯದಿಂದ ನೆರವೇರಬೇಕೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ. ಜ್ಞಾನಭಂಡಾರದ ಪ್ರಯೋಜನವು ಜನಸಾಮಾನ್ಯಕ್ಕೂ ಲಭಿಸುವಂತೆ ಮಾಡಿ ವಿದ್ಯಾವಂತರಲ್ಲದವರ ತಿಳಿವಳಿಕೆಯನ್ನು ಹೆಚ್ಚಿಸಿ, ಅವರಿಗೂ ವಿದ್ಯಾವಂತರಿಗೂ ಅಂತರವು ಹೆಚ್ಚಾಗಿರುವುದನ್ನು ಹೋಗಲಾಡಿಸುವುದರಲ್ಲಿ ವಿಶ್ವವಿದ್ಯಾನಿಲಯವು ತನ್ನ ಭಾಗದ ಕರ್ತವ್ಯವನ್ನು ನೆರವೇರಿಸಬೇಕೆಂಬುದೇ ಸರ್ಕಾರದವರು ವಿಶ್ವವಿದ್ಯಾನಿಲಯದಿಂದ ನಿರೀಕ್ಷಿಸುವ ಆ ಮುಖ್ಯ ಕಾರ್ಯ. ಅದರ ವಿಚಾರದಲ್ಲೇನೂ ನಮ್ಮ ವಿಶ್ವವಿದ್ಯಾನಿಲಯವು ಮೊದಲಿನಿಂದಲೂ ತನ್ನ ಜವಾಬ್ದಾರಿಗಳನ್ನು ಪೂರ್ತಿಯಾಗಿ ಅರಿತುಕೊಂಡಿದೆ. ಪ್ರಚಾರೋಪನ್ಯಾಸಗಳ ಮೂಲಕವೂ ಕನ್ನಡ ಭಾಷೆಯಲ್ಲಿ ಗ್ರಂಥಪ್ರಕಟನ ಮಾಡುವ ಮೂಲಕವೂ ವಿಜ್ಞಾನ ಸಂಬಂಧವಾದ ತಿಳಿವಳಿಕೆಯನ್ನು ಜನರಲ್ಲಿ ಹೆಚ್ಚಿಸುವುದಕ್ಕಾಗಿ ಮತ್ತು ಕನ್ನಡ ಸಾಹಿತ್ಯದಲ್ಲಿ ಜನರ ಆದರವನ್ನು ಹೆಚ್ಚಿಸುವುದಕ್ಕಾಗಿ ವಿಶ್ವವಿದ್ಯಾನಿಲಯದಿಂದ ಬಹಳ ಕೆಲಸ ನಡೆದಿದೆ. ಗ್ರಾಮಜೀವನಕ್ಕೆ ಸಂಬಂಧಪಟ್ಟ ಆರ್ಥಿಕವಿಚಾರಗಳನ್ನು ಪರಿಶೀಲಿಸಲು ಗ್ರಾಮಗಳಿಗೆ ಹೋಗಿ, ಅಲ್ಲಿಯ ಜನರ ಆಯವ್ಯಯಗಳು ಸಾಲಸೋಲಗಳು ಸಾಧನ ಸಂಪತ್ತು ಮುಂತಾದುವುಗಳನ್ನು ವಿಚಾರಮಾಡುವುದು; ವಯಸ್ಸಾದ ಜನರಲ್ಲಿ ಓದುಬರಹಗಳನ್ನರಿಯದ ಜನರಿಗೆ ಅವುಗಳನ್ನು ಕಲಿಸುವುದು; ಬಡವರಾದ ಕೆಲಸಗಾರರಿಗೆ ಅನುಕೂಲವಾಗು

ವಂತೆ ಸಮಾಜಸೇವೆ ಮಾಡುವುದು ; ಈ ಮೂರು ವಿಚಾರಗಳಲ್ಲಿಯೂ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಯುತ್ತಿರುವ ಪ್ರಯತ್ನಗಳು ಅತ್ಯಧಿಕವಾದ ಶ್ಲಾಘನೆಗೆ ಅರ್ಹವಾಗಿವೆ.

ಮೂರನೆಯದಾಗಿ, ವಿಶ್ವವಿದ್ಯಾನಿಲಯದ ಕಾರ್ಯವಿಧಾನವನ್ನು ಮಾರ್ಪಡಿಸುವ ವಿಷಯವನ್ನು ಪರ್ಯಾಲೋಚಿಸಬಹುದಾದ ಮತ್ತೊಂದು ದೃಷ್ಟಿಯೆಂದರೆ ಅದು ವಿದ್ಯಾರ್ಥಿಗಳಿಗೇ ಸಂಬಂಧಪಟ್ಟುದಾಗಿದೆ. ಈ ವಿಷಯವಾಗಿ ಹೇಳಬೇಕಾದುದು ಬಹಳವಾಗಿದೆ. ಆದರೆ, ನಾವು ಮೂರೇ ಮೂರು ಅಂಶಗಳನ್ನು ಮಾತ್ರವೇ ಕುರಿತು ಇಲ್ಲಿ ಪ್ರಸ್ತಾವಿಸುವೆವು. ಮೊದಲನೆಯದು ; ವಿಶ್ವವಿದ್ಯಾನಿಲಯದ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅವರ ಆವಶ್ಯಕತೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಗಮನ ಕೊಟ್ಟು ಪಾಠ ಹೇಳುವುದು ಸಾಧ್ಯವಾಗುವ ಪರಿಮಿತಿಯಲ್ಲಿರುವಂತೆಯೂ, ತಕ್ಕಷ್ಟು ಮೇಧಾವಿಗಳಾದವರನ್ನು ಮಾತ್ರವೇ ವಿಶ್ವವಿದ್ಯಾನಿಲಯದ ವ್ಯಾಸಂಗಕ್ಕೆ ಸೇರಿಸಿಕೊಳ್ಳುವಂತೆಯೂ ಮಾಡುವ ಬಗೆ ಹೇಗೆಂಬ ಕಠಿನ ಸಮಸ್ಯೆಯ ವಿಚಾರ. ಈ ಸಂಬಂಧದಲ್ಲಿ, ವಿಶ್ವವಿದ್ಯಾನಿಲಯದ ವ್ಯಾಸಂಗಕ್ಕೆ ಕೆಲಕೆಲವರಿಗೆ ಮಾತ್ರವೇ ಪ್ರವೇಶ ದೊರೆಯಬೇಕೆಂಬ ವಿಷಯವೂ, ಹೈ ಸ್ಕೂಲುಗಳ ಮತ್ತು ಇಂಟರ್ಮೀಡಿಯೆಟ್ ಕಾಲೇಜುಗಳ ಕಾರ್ಯನೀತಿಯ ವಿಷಯವೂ ಏಳುತ್ತವೆ. ಅವುಗಳ ಸಂಬಂಧವಾಗಿ ಬಹಳ ತೊಡಕಿನ ಸಂಗತಿಗಳೆಲ್ಲ ಸೇರಿವೆಯೆಂದೂ ಮತ್ತು ಅವುಗಳನ್ನೆಲ್ಲ ಸಮರ್ಪಕವಾಗಿ ಬಗೆಹರಿಸಬಲ್ಲ ಸ್ಥಿತಿಗೆ ನಾವಿನ್ನೂ ಬಂದಂತಿಲ್ಲವೆಂದೂ ಮಾತ್ರವೇ ನಾವು ಹೇಳಲಿಚ್ಛಿಸುವೆವು. ಎರಡನೆಯದು, ಆರೋಗ್ಯ ವಿಚಾರ. ಒಳ್ಳೆಯ ಸನ್ನಿವೇಶದಲ್ಲಿ ವಾಸ, ತಕ್ಕಷ್ಟುಪ್ರಮಾಣದಲ್ಲಿ ಒಳ್ಳೆಯ ಆಹಾರ ಮತ್ತು ಆಟಪಾಟಗಳಲ್ಲಿ ಭಾಗವಹಿಸಿ ಪಡೆಯುವ ವ್ಯಾಯಾಮ—ಇವುಗಳನ್ನು ನಮ್ಮ ವಿದ್ಯಾರ್ಥಿಗಳ ಆರೋಗ್ಯವು ಅವಲಂಬಿಸಿರುತ್ತದೆ. ಇವುಗಳ ಸಂಬಂಧವಾಗಿ ಅವಶ್ಯವಾದಷ್ಟು ಸೌಕರ್ಯಗಳನ್ನೊದಗಿಸಲು ಇನ್ನೂ ಬಹಳ ಕೆಲಸ ನಡೆಯಬೇಕಾಗಿದೆ. ನಾನಾ ಸ್ಥಳಗಳಲ್ಲಿಯೂ ಕಾಲೇಜುಗಳ ವ್ಯಾಸಂಗಮಾಡುವವರಿಗೆ ವಾಸದ ಸೌಕರ್ಯಗಳನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ಸಿದ್ಧಪಡಿಸಲು ವಿಶ್ವವಿದ್ಯಾನಿಲಯದವರು ಸ್ವಲ್ಪವೂ ಆಲಸ್ಯಮಾಡದೆ ಪ್ರಯತ್ನಮಾಡುವರೆಂದು ನಾವು ಹಾರೈಸುವೆವು. ಮೂರನೆಯದು ; ವಿದ್ಯಾವಂತರ ನಿರುದ್ಯೋಗವನ್ನು ತಪ್ಪಿಸುವ ವಿಚಾರ. ಭರತಖಂಡದಲ್ಲಿ ಮಾತ್ರವೇ ಅಲ್ಲದೆ, ಪ್ರಪಂಚದ ಇತರ ಸಮಸ್ತ ದೇಶಗಳಲ್ಲಿಯೂ ವಿಶ್ವವಿದ್ಯಾನಿಲಯಗಳ ಸಂಬಂಧವಾಗಿ ಈ ದೊಡ್ಡ ಸಮಸ್ಯೆಯು ಒದಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾವಂತರಿಗೆ ನಿರುದ್ಯೋಗದ ಕಷ್ಟವು ಪ್ರಪಂಚ

ದಲ್ಲೆಲ್ಲ ಬಹಳವಾಗಿ ಹೆಚ್ಚಿ ಹೋಗಿ, ಕೆಲಸಗಾರರ ಸಂಬಂಧವಾದ ಅಂತರರಾಷ್ಟ್ರೀಯ ಕಾರ್ಯಾಲಯದವರೇ ಗಮನಕೊಡಬೇಕಾಗುವ ಸ್ಥಿತಿಗೆ ಬಂದಿದೆ; ಅವರು ಈಚೆಗೆ ಅದಕ್ಕೆ ಗಮನಕೊಡುತ್ತಿದ್ದಾರೆ. ಭರತಖಂಡದ ವಿಶ್ವವಿದ್ಯಾನಿಲಯಗಳನ್ನು, ಅನೇಕ ಉಪನದಿಗಳಿಂದ ನೀರು ಬರುವ ಒಂದು ಮಹಾನದಿಗೆ ನಾವು ಹೋಲಿಸಬಹುದಾಗಿದೆ. ಉಪನದಿಗಳ ನೀರೆಲ್ಲ ಮಹಾನದಿಗೆ ಸೇರದಂತೆ ತಪ್ಪಿಸುವುದಕ್ಕಾಗಿ ಅಣೆಯನ್ನು ಕಟ್ಟಿ ಅವುಗಳ ನೀರಿನಲ್ಲೊಂದು ಭಾಗವನ್ನು ಉಪಯುಕ್ತವಾದ ಇತರ ರೀತಿಗಳಲ್ಲಿ ಉಪಯೋಗಿಸಿಕೊಳ್ಳುವಂತೆ ವಿದ್ಯಾರ್ಥಿಗಳ ವಿಷಯದಲ್ಲಿ ಸಹ ಆಗಿಂದಾಗ್ಗೆ ಕಾರ್ಯಕ್ರಮಗಳು ನಡೆದಿವೆ; ವಿದ್ಯಾರ್ಥಿಗಳೆಲ್ಲರೂ ವಿಶ್ವವಿದ್ಯಾನಿಲಯಗಳಿಗೇ ಬಂದು ಸೇರದೆ ಇತರ ಉಪಯುಕ್ತ ರೀತಿಗಳಲ್ಲಿ ಪ್ರವರ್ತಿಸಲು ಅವಕಾಶಗಳು ಕಲ್ಪಿತವಾಗಿವೆ. ವಿಶ್ವವಿದ್ಯಾನಿಲಯವೆಂಬ ಮಹಾನದಿಯಿಂದ ಆಗಿಂದಾಗ್ಗೆ ಕಾಲುವೆಗಳನ್ನು ತೋಡಿ ಜನಪದ ಜೀವನಕ್ಷೇತ್ರಕ್ಕೆ ಚೈತನ್ಯವರ್ಧಕವಾದ ಜಲರಾಶಿಯನ್ನು ತಿರುಗಿಸಿ ಫಲಪ್ರದವಾಗುವಂತೆ ಮಾಡುವ ಅನುಕೂಲವೂ ಕಲ್ಪಿತವಾಗಿದೆ. ಆದರೆ ನದಿಯ ನೀರು ವಿಶೇಷವಾಗಿ ಹಳೆಯ ಕಾಲುವೆಗಳಿಗೇ ನುಗ್ಗಿ ಅವುಗಳ ದಡಗಳ ಮೇಲಿಂದ ಉರುಳಿಹೋಗಿ ನಿರುದ್ಯೋಗ ರೂಪದಲ್ಲಿ ಗುಂಡಿಗಟ್ಟಿ ನಿಲ್ಲಬಹುದೆಂಬ ಶಂಕೆಯೂ ಸಂತತವಾಗಿ ತಲೆದೋರುತ್ತ ಬಂದಿದೆ. ನಿರುದ್ಯೋಗದ ಬಾಧೆಯು ಬಹಳವಾಗಿ ಹರಡಿ ಉಲ್ಬಣವಾಗಿರುವಲ್ಲಿ, ಅದಕ್ಕೆ ಅತಿ ಸರಳವಾದ ನಿವಾರಣೋಪಾಯವೊಂದನ್ನು ಸಲಹೆ ಮಾಡುವುದು ಸುಲಭವಲ್ಲ. ಆದರೆ, ನಿರುದ್ಯೋಗ ರೋಗವು ಬಹಳವಾಗಿ ಪ್ರಬಲಿಸಿರುವುದರಿಂದ ಅದಕ್ಕೆ ಯಾವುದೊಂದು ಉಪಶಮನ ದೊರೆತರೂ ಸಾಕೆಂದು ಆಸಕ್ತಿಯಿಂದ ನಿರೀಕ್ಷಿಸಿ ನೋಡಬೇಕಾಗಿದೆ. ಇಂಡಿಯಾ ಸರ್ಕಾರದ ವಿದ್ಯಾಭ್ಯಾಸದ ಕಮಿಷನರವರಾದ ಶ್ರೀಮಾರ್ ಜಾನ್ ಸಾರ್ಜೆಂಟ್ ಎಂಬವರು ಈಚಿನ ತಮ್ಮ ಭಾಷಣವೊಂದರಲ್ಲಿ ಹೇಳಿರುವ ಕೆಲವು ವಾಣಿಗಳನ್ನು ಈ ಸಂದರ್ಭದಲ್ಲಿ ಉದಾಹರಿಸಲಿಚ್ಛಿಸುವೆವು. ಅವರ ವಾಣಿಗಳು, ಈ ಮೊದಲೇ ನಾವು ಉದಾಹರಿಸಿರುವ ಸರ್ ಬ್ರಜೇಂದ್ರನಾಥ ಶೀಲರವರ ವಾಣಿಗಳನ್ನೇ ಸ್ವಲ್ಪಮಟ್ಟಿಗೆ ಹೋಲುತ್ತವೆ. ಶ್ರೀಮಾರ್ ಸಾರ್ಜೆಂಟ್‌ರವರು "ಭರತಖಂಡದಲ್ಲಿ ಜನಸಾಮಾನ್ಯದ ಜೀವನದ ಅಂತಸ್ತನ್ನು ಹೆಚ್ಚಿಸಿ ಜನಗಳು ಇನ್ನೂ ಸುಖವಾಗಿರುವಂತೆ ಮಾಡುವುದು, ಪ್ರಜೆಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾಭಿವೃದ್ಧಿಯುಂಟಾಗುವಂತೆ ಮಾಡಿ ತಿಳಿವಳಿಕೆಯನ್ನು ಹರಡುವುದು, ಮುಂತಾದ ಕೆಲವು ಕೆಲಸಗಳು ಅವಶ್ಯವಾಗಿ ನಡೆಯಬೇಕಾಗಿವೆ. ಅವು ನೆರವೇರಬೇಕಾದರೆ, ಹೆಚ್ಚಿನ ಹಣವು ಅಗತ್ಯವಾಗಿ ಬೇಕು ಹಾಗೆ ಬೇಕಾದ ಹಣವು ಒದಗಬೇಕಾದರೆ, ವ್ಯವಸಾಯದಲ್ಲಿ ನಿರತರಾಗಿರುವವರ

ಸಂಖ್ಯೆಯೊಡನೆ ಕೈಗಾರಿಕೆಗಳಲ್ಲಿ ನಿರತರಾಗಿರುವವರ ಸಂಖ್ಯೆಗಿರುವ ದಾಮಾಷಾ ಪ್ರಮಾಣವು ಈಗಿರುವುದಕ್ಕಿಂತಲೂ ಅಧಿಕವಾಗಿ, ಯುಕ್ತಪ್ರಮಾಣದಲ್ಲಿ ವಿಹಿತವಾದ ಮಟ್ಟಕ್ಕೆ ಏರುವಂತೆ ಮಾಡುವುದರಿಂದ ಮಾತ್ರನೇ ಸಾಧ್ಯ" ಎಂದು ಹೇಳಿದ್ದಾರೆ. ಈಗಿನ ವಿದ್ಯಾಭ್ಯಾಸಕ್ರಮವನ್ನು ಕುರಿತೂ ಅವರು ಟೀಕೆ ಮಾಡಿದ್ದಾರೆ. ಅಧ್ಯಾಪಕ ವೃತ್ತಿಗೆ ಶ್ರೇಷ್ಠರತ್ನಪ್ರಾಯರಾಗಿರುವ ಅವರು ಆ ರೀತಿ ಟೀಕೆ ಮಾಡಿ, ವಿಶ್ವವಿದ್ಯಾನಿಲಯಗಳ ಅಧ್ಯಾಪಕರು ತಮ್ಮ ವಶಕ್ಕೆ ಬಂದ ಅಮೂಲ್ಯಸಾಧನಗಳಾಗಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಲಭಿಸಿದ ಮೇಲೆ ಸುಸೂತ್ರವಾಗಿ ಉದ್ಯೋಗಗಳು ಲಭಿಸುವಂತೆ ನೋಡಿಕೊಳ್ಳುವ ಹವ್ಯಾಸವನ್ನೇ ಅಷ್ಟಾಗಿ ಇಟ್ಟುಕೊಂಡಿಲ್ಲವೆಂದೂ ಹೇಳಿದ್ದಾರೆ. ಈ ನ್ಯೂನತೆಯು ನಿವಾರಣೆಯಾಗಬೇಕಾದರೆ, ನಮ್ಮ ವಿಚಾರಸರಣಿಯೂ, ಲೋಕಾನುಭವವೂ ಮತ್ತು ಕಾರ್ಯಾನುಭವವೂ ಒಂದೇ ಒಂದು ಸಾಧನೋಪಾಯವನ್ನು ನಮಗೆ ತೋರ್ಪಡಿಸುತ್ತಿವೆಯೆಂದೂ ಅವರು ಕಂಠೋಕ್ತವಾಗಿ ಹೇಳಿದ್ದಾರೆ. ವಿಶ್ವವಿದ್ಯಾನಿಲಯದ ಪ್ರೌಢಶಿಕ್ಷಣದಲ್ಲಿ ಸೇರಿರುವ ವ್ಯಾಸಂಗ ವಿಷಯಗಳಲ್ಲಿ ಅತ್ಯಂತ ಅಧಿಕವಾದ ವೈವಿಧ್ಯವಿದ್ದು ಅನೇಕಾನೇಕ ವೃತ್ತಿಗಳನ್ನವಲಂಬಿಸಲು ತಕ್ಕಂತೆ ಶಿಕ್ಷಣಕೊಡುವ ವ್ಯವಸ್ಥೆಯನ್ನು ಕಲ್ಪಿಸುವುದೇ ಅವರು ಸೂಚಿಸಿರುವ ಆ ಸಾಧನೋಪಾಯ.

ಮಹಿಳೆಯರೇ, ಮತ್ತು ಮಹಾಶಯರೇ, ಹಿಂದೆ ಸಾಧಿಸಿರುವ ಕಾರ್ಯಸಿದ್ಧಿಗಳು ವಿಪುಲವಾಗಿವೆ. ಮುಂದಿನ ಕಾರ್ಯಸಾಧನೆಯ ಅವಕಾಶಗಳು ಅಪರಿಮಿತವಾಗಿ ಆಶಾದಾಯಕವಾಗಿವೆ. ನಾವುಗಳು ರೂಢಿಸಿ ಉಪಯೋಗಿಸಿಕೊಳ್ಳಲು ಸಿದ್ಧವಾಗಿರುವ ಸಮೃದ್ಧವಾದ ಸಾಧನಸಂಪತ್ತುಗಳು ನಮ್ಮಲ್ಲುಂಟು. ವ್ಯವಸಾಯ ಕೈಗಾರಿಕೆಗಳ ಸಂಬಂಧದಲ್ಲಿ ಈಗ ಅನುಸರಿಸುತ್ತಿರುವ ಕಾರ್ಯನೀತಿಯೂ ಮತ್ತು ಕಾರ್ಯಕ್ರಮವೂ ಸರ್ವತೋಮುಖವಾದ ಪುರೋಭಿವೃದ್ಧಿ ಸಾಧನೆಗೆ ಅನುಕೂಲಿಸುವಷ್ಟು ಮಟ್ಟಿನ ವ್ಯಾಪ್ತಿಯುಳ್ಳವುಗಳಾಗಿರಬೇಕೆಂಬ ಆಶೆಯಿಂದ ಕಲ್ಪಿತವಾಗಿವೆ. ವಿದ್ಯಾಭ್ಯಾಸಮಾಡಲು ಉತ್ಸಾಹದಿಂದ ಮುಂದೆ ಬರುತ್ತಿರುವ ಮತ್ತು ಪುರೋಭಿವೃದ್ಧಿ ಸಾಧನೆಯಲ್ಲಿ ಭಾಗವಹಿಸುವ ಬಗೆ ಹೇಗೆಂಬುದನ್ನು ತಮಗೆ ತೋರಿಸಬೇಕೆಂದು ಬಯಸುತ್ತಿರುವ ವರ್ಧಿಷ್ಣುಗಳಾದ ಯುವಕರ ಸಂಖ್ಯೆಯು ಅತ್ಯಧಿಕವಾಗಿದ್ದು ಅದು ಏಕಪ್ರಕಾರವಾಗಿ ಹೆಚ್ಚುತ್ತ ಬರುತ್ತಿದೆ. ಅವರಿಗೆ ಯುಕ್ತ ರೀತಿಯಲ್ಲಿ ಶಿಕ್ಷಣಕೊಟ್ಟು ಅತ್ಯುಪಯುಕ್ತವಾದ ಫಲಿತಾಂಶಗಳುಂಟಾಗುವಂತೆ ನಾನಾ ಸ್ಥಾನಗಳಿಗೆ ಅವರನ್ನು ನಿಯೋಜಿಸುವುದು ನಮ್ಮ ಮುಂದಿರುವ ಕೆಲಸ. ಅದು ವಿಶೇಷ ಕಷ್ಟಸಾಧ್ಯವಾದ ಕೆಲಸ; ಅದಕ್ಕೆ ಮುಂದಾಲೋಚನೆಯ ಕಲ್ಪನಾ

ಸಾಮರ್ಥ್ಯವೂ, ಕ್ರಿಯಾಶಕ್ತಿಯೂ, ಜ್ಞಾನ ಸಂಪತ್ತೂ ಮತ್ತು ಸ್ಥಿರನಿಶ್ಚಯವೂ ಆವಶ್ಯವಾಗಿ ಬೇಕು. ಅಂತೂ ನಮ್ಮ ಮುಂದಿರುವ ಕೆಲಸವು ವಿಶೇಷ ಕಷ್ಟಸಾಧ್ಯವೆಂಬುದೇನೊ ನಿಜ. ಆದರೆ ಅದು ಅಷ್ಟು ಕಷ್ಟಸಾಧ್ಯವಾಗಿರುವ ಕಾರಣದಿಂದಲೇ ಪೂರ್ಣ ಫಲದಾಯಕವಾಗುವಂತೆ ಅದನ್ನು ನೆರವೇರಿಸುವ ಪ್ರಯತ್ನದಲ್ಲಿ ನಮ್ಮ ಸರ್ವಸಾಮರ್ಥ್ಯವನ್ನೂ ವಿನಿಯೋಗಿಸಿ ಶ್ರಮಿಸಬೇಕಾದುದು ಅಧಿಕತರವಾಗಿ ಆವಶ್ಯಕವೂ ಹೌದು; ಅಲ್ಲದೆ ಅಧಿಕತರವಾಗಿ ಅಪೇಕ್ಷಣೀಯವೂ ಹೌದು.

ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವದ ಸಂಬಂಧವಾಗಿ ನಡೆದ ಪ್ರದರ್ಶನವನ್ನು ತೆರೆಯುವಾಗ


ವಿದ್ಯಾಮಂತ್ರಿಗಳಾದ

ಶ್ರೀ ಮಿರ್ಜಾ ಮಹಮದ್ ಜೆ. ಇಮಾಂ, ಬಿ.ಎ., ಬಿ.ಎಲ್.

ಅವರು ಮಾಡಿದ ಭಾಷಣ

ಮಹಿಳೆಯರೆ ಮತ್ತು ಮಹನೀಯರೆ,

ನಾನು ಈ ದಿನ ಈ ಪ್ರದರ್ಶನವನ್ನು ಉದ್ಘಾಟನ ಮಾಡಬೇಕೆಂದು ಕೇಳಿ ನನಗೆ ವಿಶೇಷ ಗೌರವವನ್ನುಂಟುಮಾಡಿರುವುದಕ್ಕಾಗಿ ನಾನು ಸ್ಥಾನಪತಿಗಳಿಗೆ ಅನೇಕ ವಂದನೆಗಳನ್ನರ್ಪಿಸುವುದಲ್ಲದೆ ನಾನು ವಿದ್ಯಾಮಂತ್ರಿತ್ವಾಧಿಕಾರವನ್ನು ವಹಿಸಿದ ಅಲ್ಪಕಾಲದಲ್ಲಿಯೆ ಎಲ್ಲ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳನ್ನೂ ಭೇಟಿ ಮಾಡುವ ಸುಯೋಗವು ನನಗೆ ದೊರೆತುದು ನನ್ನ ಸುದೈವವೆಂದು ಭಾವಿಸುತ್ತೇನೆ. ಅಲ್ಲದೆ ಅವರು ಈ ದಿವಸ ಇಲ್ಲಿಗೆ ದಯಮಾಡಿಸಿ ನಮಗೂ ನಮ್ಮ ವಿಶ್ವವಿದ್ಯಾನಿಲಯಕ್ಕೂ ಉಂಟುಮಾಡಿರುವ ಗೌರವಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ಇಂದಿನಂತಹ ಅತಿ ಮುಖ್ಯವಾದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಾಕ್ಷಾತ್ತಾಗಿ ಸಂಬಂಧಪಡದವರೆಲ್ಲರೂ—ದೇಶದ ಇತರ ಭಾಗಗಳಿಂದ ಇಲ್ಲಿಗೆ ದಯಮಾಡಿಸಿರತಕ್ಕ ಪ್ರತಿನಿಧಿಗಳೂ ಕೂಡ—ನಮ್ಮ ವಿಶ್ವವಿದ್ಯಾನಿಲಯವು ಕಳೆದ ಕಾಲುಶತಮಾನದಲ್ಲಿ ಏನನ್ನು ಸಾಧಿಸಿದೆಯೆಂಬುದನ್ನು ತಿಳಿಯಲು ಬಹಳ ಕುತೂಹಲರಾಗಿರುತ್ತಾರೆ. ಆಳುವ ಮಹಾಸ್ವಾಮಿಯವರು ಈ ದಿವಸ ಪ್ರಾತಃಕಾಲ ತಮ್ಮ ಉಜ್ವಲವಾದ ಭಾಷಣದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಕಲಾಪಗಳನ್ನೂ, ಅದು ಪ್ರಾರಂಭವಾದಂದಿನಿಂದ ಇಂದಿನ ವರೆಗೆ ಬೆಳೆದು ಬಂದ ರೀತಿಯನ್ನೂ ವಿಸ್ತಾರವಾಗಿ ಅಪ್ಪಣೆ ಕೊಡಿಸಿದ್ದಾರೆ. ವಿಶ್ವವಿದ್ಯಾನಿಲಯದ ವಿವಿಧ ಸಂಸ್ಥೆಗಳನ್ನು ಪರಿಶೀಲಿಸಲು ತಮ್ಮನ್ನು ಆಹ್ವಾನಿಸುತ್ತೇನೆ. ಅಲ್ಲದೆ ತಮಗೆ ಈ ಸಂಸ್ಥೆಯ ಕಾರ್ಯಕ್ರಮಗಳ ಪ್ರತ್ಯಕ್ಷಾನುಭವವನ್ನುಂಟುಮಾಡುವುದಕ್ಕಾಗಿ ಈ ವಿಶ್ವವಿದ್ಯಾನಿಲಯವನ್ನೇ ತಾವು ಪರಿಶೀಲಿಸಬೇಕಾದ ಪ್ರದರ್ಶ್ಯವಸ್ತುವನ್ನಾಗಿ ಸಮರ್ಪಿಸುತ್ತೇನೆ. ಮಹಾಪ್ರಭುಗಳು ಸೂಚಿಸಿರುವ ಹಾಗೆ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಅನ್ವಯಕ್ರಮಾನುಗತವಾಗಿ



ಮೈಸೂರು ವಿಶ್ವವಿದ್ಯಾನಿಲಯದ ರಜತೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಸ್ತುಪ್ರದರ್ಶನದ ಆರಂಭೋತ್ಸವವನ್ನು ವಿದ್ಯಾಮಂತ್ರಿಗಳಾದ ಮಿ|| ಜಿ. ಮಹಮದ್ ಇಮಾಮ್, ಬಿ.ಎ., ಬಿ.ಎಲ್. ಅವರು ನೆರವೇರಿಸಿದರು. ಇದು ಆಗ ತೆಗೆದ ಚಿತ್ರ. ಅವರೊಡನೆ ರಾಜಕಾರ್ಯಪ್ರವೀಣ ಎನ್. ಎಸ್. ಸುಬ್ಬರಾವ್, ಡಾ|| ಎಂ. ವಿ. ಗೋಪಾಲಸ್ವಾಮಿ ಮತ್ತು ಶ್ರೀ. ಎಂ. ಶೇಷಯ್ಯಂಗಾರ್ಯರುಗಳಿದ್ದಾರೆ.

ಫೋಟೋ—ಶ್ರೀ. ಎನ್. ಶ್ರೀನಿವಾಸಮೂರ್ತಿ (“ತಾಯಿನಾಡು”)

ಬಂದ ಎರಡು ಪ್ರೌಢಶಾಲೆಗಳಿಂದ ಆರಂಭವಾದ ನಮ್ಮ ಈ ವಿಶ್ವವಿದ್ಯಾನಿಲಯವು ಈಗ ಅಂಗಸಂಸ್ಥೆಗಳಾದ ಐದು ಪ್ರೌಢಶಾಲೆಗಳನ್ನೂ ಶಿಲ್ಪಕಲೆ ಮತ್ತು ವೈದ್ಯಕ್ಕೆ ಸಂಬಂಧಪಟ್ಟ ಎರಡು ಶಾಲೆಗಳನ್ನೂ ಒಳಕೊಂಡಿದೆ. ಈ ಕಾಲುಶತಮಾನದ ಕಾಲ ದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಆರುನೂರರಿಂದ ನಾಲ್ಕು ಸಾವಿರದ ಏಳುನೂರಕ್ಕೂ ಪದವೀಧರರ ಸಂಖ್ಯೆಯು ಐವತ್ತರಿಂದ ನಾನೂರಕ್ಕೂ ಏರಿದೆ. ಈ ತ್ವರಿತವಾದ ಬೆಳವಣಿಗೆಯು ಎಷ್ಟು ಅನೇಕ ಹೊಸ ಸಮಸ್ಯೆಗಳನ್ನು ನಮ್ಮೆದುರಿಗೆ ತಂದೊಡ್ಡು ವುದೆಂಬ ವಿಷಯವು ತಮಗೆ ತಿಳಿದ ವಿಷಯವೇ ಆಗಿದೆ. ಈ ಸಂದರ್ಭದಲ್ಲಿ ಭರತ ಖಂಡದ ಪ್ರಧಾನ ಪ್ರೌಢಶಾಲೆಗಳಲ್ಲಿ ಒಂದಾದ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಉದಾಹರಣೆಯನ್ನಾಗಿ ಕೊಡಬಹುದು. ವಿಶ್ವವಿದ್ಯಾನಿಲಯವು ಪ್ರಾರಂಭವಾಗು ವುದಕ್ಕೆ ಮುಂಚೆ ಸೆಂಟ್ರಲ್ ಕಾಲೇಜಿನ ಎಲ್ಲ ಶಾಖೆಗಳೂ ಈಗಿನ ಮಧ್ಯಭಾಗದ ಒಂದು ಕಟ್ಟಡದಲ್ಲಿಯೇ ಪೂರ್ಣವಾಗಿ ಅಡಕವಾಗಿದ್ದುವು. ಆದರೆ ಈಚೆಗೆ ಅದಕ್ಕೆ ಸೇರಿಸಿರುವ ಭಾಗಗಳು ಮೂಲಕಟ್ಟಡವನ್ನೇ ಮರೆಮಾಡಿರುವುದಲ್ಲದೆ ಆಕಾರದಲ್ಲಿ ಅದಕ್ಕೆ ನಾಲ್ಕೈದರಷ್ಟು ಬೆಳೆದುಹೋಗಿವೆ. ಈಗಿನ ಕಾಲದ ಆವಶ್ಯಕತೆಗೆ ತಕ್ಕಂತೆ ಬೇರೆಬೇರೆಯ ವ್ಯಾಸಂಗ ಶಾಖೆಗಳನ್ನು ಸ್ಥಾಪಿಸಿ ಬೆಳಸಿಕೊಂಡು ಬರಲು ನಾವು ಎಷ್ಟು ಕಷ್ಟಪಟ್ಟಿರುತ್ತೇವೆಯೆಂಬುದನ್ನು ನೀವು ಊಹಿಸಿಕೊಳ್ಳಬಹುದು. ನಮ್ಮಲ್ಲಿ ಎಲ್ಲ ವಿಜ್ಞಾನ ಶಾಸ್ತ್ರಗಳ ಪರಿಶೋಧನೆಗೂ—ಮನಶ್ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿ ಶಾಸ್ತ್ರಗಳಿಗೂ ಕೂಡ—ಉತ್ತಮವಾದ ಪ್ರಯೋಗಶಾಲೆಗಳಿವೆ. ನಮ್ಮ ವೈದ್ಯ ಸಂಸ್ಥೆಗಳಲ್ಲಿ ಚಿಕಿತ್ಸಾ ಸಾಮಗ್ರಿಗಳು ವಿಪುಲವಾಗಿವೆ. ನಮ್ಮ ವೈದ್ಯ ಮತ್ತು ಶಿಲ್ಪ ಕಲಾ ಶಾಲೆಗಳಲ್ಲಿ ಶಿಕ್ಷಿತರಾದ ಪದವೀಧರರು ಸಂಸ್ಥಾನದ ಒಳಗೂ ಹೊರಗೂ ತಮ್ಮ ಮೇಧಾಶಕ್ತಿಯಿಂದ ಉತ್ತಮವಾದ ಕೀರ್ತಿಯನ್ನು ಸಂಪಾದಿಸಿದ್ದಾರೆ. ನಾವು ವಿಶ್ವ ವಿದ್ಯಾನಿಲಯದ ಎಲ್ಲಾ ಶಾಖೆಗಳಿಗೂ ಶಕ್ತರಾದ ಉಪಾಧ್ಯಾಯರನ್ನು ನೇಮಿಸಿದ್ದೇವೆ. ಅವರು ಅಖಿಲಭಾರತ ಖ್ಯಾತಿಯನ್ನು ಪಡೆದಿರುವರಲ್ಲದೆ ತಾವು ವ್ಯಾಸಂಗಮಾಡುವ ವಿಷಯಗಳಲ್ಲಿ ಉದಾತ್ತ ಪರಿಶೋಧನೆಗಳನ್ನು ನಡೆಸಿ ಖ್ಯಾತಿವಂತರಾಗಿದ್ದಾರೆ. ಹೀಗೆ ಹೇಳುವುದರಿಂದ ನಮ್ಮನ್ನು ನಾವೇ ಪ್ರಶಂಸಿಸಿಕೊಳ್ಳುತ್ತಿರುವಂತೆ ತೋರಬಹುದು. ಆದರೆ ಹಿಂದೆಯೇ ತಿಳಿಸಿರುವಂತೆ ಈ ಸಂಸ್ಥೆಯನ್ನು ತಮ್ಮ ಅವಗಾಹನೆಗೆ ಪ್ರದರ್ಶ್ಯ ವಸ್ತುವನ್ನಾಗಿ ಸಮರ್ಪಿಸಿರುವುದು ತಮ್ಮ ಮೆಚ್ಚಿಗೆಗೆ ಮಾತ್ರವೇ ಅಲ್ಲದೆ ಸಹಾನು ಭೂತಿಯುತವಾದ ವಿಮರ್ಶೆಯಿಂದ ಉಪಯುಕ್ತವಾದ ಸೂಚನೆಗಳನ್ನು ಕೊಡುವು ದಕ್ಕೂ ಅಹುದೆಂಬುದನ್ನು ಸೂಚಿಸಲು ಬಯಸುತ್ತೇನೆ. ತಮಗೆ ಅವಕಾಶವಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಸಂಸ್ಥೆಗಳನ್ನು ಪರಿಶೀಲಿಸಿ ತಮ್ಮ ಘನ

ಸೂಚನೆಗಳ ಪ್ರಯೋಜನವನ್ನು ದಯಪಾಲಿಸಬೇಕೆಂಬುದಾಗಿ ಬೇಡುತ್ತೇನೆ. ಹಾಗೆಯೇ ಈ ನಮ್ಮ ವಿಶ್ವವಿದ್ಯಾನಿಲಯವು ತನ್ನ ಕ್ಷೇತ್ರದಿಂದ ಹೊರಗೆ ಜ್ಞಾನ ಪ್ರಸಾರಣೆ ಮಾಡುವುದರಲ್ಲಿಯೂ ಹಿಂದುಳಿದಿಲ್ಲವೆಂಬುದನ್ನು ತಿಳಿಸಲು ಸಂತೋಷಿಸುತ್ತೇನೆ. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಯುತ್ತಿರುವ ಪ್ರಚಾರೋಪನ್ಯಾಸ ಮಾಲೆಗಳೂ ವಯಸ್ಕರ ವಿದ್ಯಾಭ್ಯಾಸಕ್ರಮವೂ ಸಮಾಜಸೇವಾವ್ಯವಸ್ಥೆಯೂ ಸಾಮಾನ್ಯ ಜನಗಳಲ್ಲಿ ಜ್ಞಾನಜ್ಯೋತಿಯ ಬೆಳಕನ್ನು ಹರಡಲು ಬಹಳ ಉಪಯುಕ್ತವಾಗಿವೆ.

ಈಗ ನಾನು ಪ್ರಾರಂಭಮಾಡಬೇಕಾಗಿರುವ ಈ ಪ್ರದರ್ಶನವು ವಿಶ್ವವಿದ್ಯಾನಿಲಯದ ವಿವಿಧ ಶಾಖೆಗಳು ಮಾಡುತ್ತಿರುವ ಕೆಲಸಗಳ ಸಾಮಾನ್ಯ ಪರಿಚಯವನ್ನುಂಟುಮಾಡಿಕೊಡುತ್ತದೆ. ಇಲ್ಲಿ ಪ್ರದರ್ಶಿಸಿರುವ ವಸ್ತುಗಳು ವಿಶ್ವವಿದ್ಯಾನಿಲಯದ ಪ್ರತಿಯೊಂದು ಶಾಖೆಯಲ್ಲಿಯೂ ಶಿಕ್ಷಕರೂ ಶಿಕ್ಷಿತರೂ ಮಾಡುತ್ತಿರುವ ಕೆಲಸದ ಸಾಮಾನ್ಯ ಸ್ವರೂಪವನ್ನು ಪ್ರತಿಬಿಂಬಿಸುತ್ತವೆ. ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿರುವ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಮನಶ್ಶಾಸ್ತ್ರ, ವೈದ್ಯ, ಕಲೆ ಮೊದಲಾದ ಎಲ್ಲ ಶಾಖೆಗಳ ಪ್ರಾತಿನಿಧ್ಯವೂ ಅದರಲ್ಲಿದೆ. ನೀವು ಎಲ್ಲ ಪ್ರದರ್ಶಿತವಸ್ತುಗಳನ್ನೂ ನೋಡುವುದರಿಂದ ನಮ್ಮ ಅಧ್ಯಾಪಕರು ಏನು ಮಾಡುತ್ತಿರುವರೆಂಬುದೂ ನಮ್ಮ ವಿದ್ಯಾರ್ಥಿಗಳು ಹೇಗೆ ಶಿಕ್ಷಿತರಾಗುತ್ತಿರುವರೆಂಬುದೂ ವಿಶದಪಡುವುದು. ಈ (ಕಲಾ ಮತ್ತು ವಿಜ್ಞಾನಸಂಬಂಧವಾದ) ಪ್ರದರ್ಶನದ ಕೈಪಿಡಿಯನ್ನು ನಾನು ನೋಡಿದ್ದೇನೆ. ಅದರಲ್ಲಿ ಅಗತ್ಯವಾಗಿ ಪರಿಶೀಲಿಸಬೇಕಾದ ಅನೇಕ ಸ್ವಾರಸ್ಯವಾದ ವಸ್ತುಗಳಿವೆ. ಈಗ ವಿದ್ಯುಚ್ಛಕ್ತಿಯನ್ನು ತಯಾರಿಸಲು ಎಷ್ಟು ವಿಶೇಷ ದ್ರವ್ಯ ವ್ಯಯವಾಗುತ್ತಿರುವುದೆಂಬುದು ತಮಗೆಲ್ಲ ತಿಳಿದ ವಿಷಯವೇ ಆಗಿದೆ. ಅಂತಹ ವಿದ್ಯುಚ್ಛಕ್ತಿಯನ್ನು ಸುಮ್ಮನೆ ಯಾವುದಾದರೊಂದು ಪದಾರ್ಥದ ಮೇಲೆ ಬೆಳಕಿನ ಕಿರಣಗಳನ್ನು ಪ್ರಸರಿಸುವುದರಿಂದಲೇ ಉತ್ಪತ್ತಿ ಮಾಡಿಸುವ ಒಂದು ಕಾಲವೂ ಬರಬಹುದು. ಹಾಗೆ ತಯಾರಾದ ಶಕ್ತಿಯನ್ನು ಕೆಲವು ವಿಚಿತ್ರ ಸಾಧನೆಗಳನ್ನು ನಡೆಸುವುದಕ್ಕೆ ಉಪಯೋಗಿಸಲೂ ಬಹುದು. ಅಂತಹವುಗಳಲ್ಲಿ ಕೆಲವನ್ನು ಈಗ ಈ ಪ್ರದರ್ಶನದಲ್ಲಿ ನೋಡಬಹುದು. ಆರ್ಥಿಕದೃಷ್ಟಿಯಿಂದ ರಸಾಯನಶಾಸ್ತ್ರವು—ಅದು ಯುದ್ಧದಲ್ಲಿ ಮಾಡುತ್ತಿರುವ ಅನಾಹುತಗಳನ್ನು ಮನಸ್ಸಿಗೆ ತಂದುಕೊಳ್ಳದಿದ್ದರೆ—ಈಗ ಬಹಳ ಉಪಯುಕ್ತವಾದ ವಿಷಯವೆಂಬುದಾಗಿ ಪರಿಗಣಿಸಲ್ಪಟ್ಟಿದೆ. ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಅದು ಬಹಳ ಪ್ರಧಾನವಾದ ಪಾತ್ರವನ್ನು ವಹಿಸಿದೆ. ಆರ್ಥಿಕ ದೃಷ್ಟಿಯಿಂದ ಬಹು ಮುಖ್ಯವಾದ

ಎರಡು ಪ್ರಯೋಗಗಳನ್ನು ಕೈಪಿಡಿಯಲ್ಲಿ ನಾವು ನೋಡಬಹುದು. ಹತ್ತಿ, ಉಣ್ಣೆ ಮೊದಲಾದವುಗಳಿಂದ ಕೃತಕ ರೇಷ್ಮೆಯನ್ನು ತಯಾರಿಸುವುದು ಮೊದಲನೆಯದು. ಸಿಂಕೋನದಿಂದ ಕ್ವಿನೈನನ್ನು ತಯಾರಿಸುವುದು ಎರಡನೆಯದು. ಯುದ್ಧದ ಪ್ರಭಾವದಿಂದ ಕ್ವಿನೈನಿಗೆ ವಿಶೇಷ ಅಭಾವವುಂಟಾಗಿರುವ ಈ ಕಾಲದಲ್ಲಿ ಈ ಪ್ರಯೋಗದ ಮಹತ್ವವು ಅತಿಶಯವಾಗಿಯೇ ಇದೆ. ಭೂಗರ್ಭ ಪರಿಶೋಧನ ಶಾಖೆಯವರೂ ಅನೇಕ ಮಹತ್ವಪೂರಿತವಾದ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಇದರಲ್ಲಿ ಕೆಲವು, ಮೈಸೂರು ದೇಶವೂ ಕೂಡ ಒಂದಾನೊಂದು ಕಾಲದಲ್ಲಿ ಸಮುದ್ರದಲ್ಲಿ ಮುಳುಗಿತ್ತೆಂಬುದನ್ನು ಸೂಚಿಸುತ್ತದೆ. ಆದರೆ ಇದುವರೆಗೆ, ಪ್ರಸ್ಥಭೂಮಿಯಾದ ಮೈಸೂರು ದೇಶವು ಯಾವೊತ್ತೂ ಸಮುದ್ರದಲ್ಲಿ ಮುಳುಗಿರಲಿಲ್ಲವೆಂದೂ ಭೂಕಂಪವೇ ಮೊದಲಾದ ಭೂಮಿಯೊಳಗಣ ತೊಂದರೆಗಳಿಗೆ ಈಡಾಗಿರಲಿಲ್ಲವೆಂದೂ ತಿಳಿದುಕೊಂಡಿದ್ದೆವಾದ ಕಾರಣ ಈ ಸೂಚನೆಯು ನನಗೆ ಭಯವನ್ನುಂಟುಮಾಡುತ್ತಿದೆ. ಆದುದರಿಂದ ಹೇಗಾದರೂ ಈ ವಾದವು ಸುಳ್ಳಾಗಲೆಂದೇ ಹಾರೈಸುತ್ತೇನೆ. ಈ ಪ್ರದರ್ಶನದಲ್ಲೆಲ್ಲಾ ಬಹಳ ಸ್ವಾರಸ್ಯವಾಗಿರುವುದು ಮನಶ್ಶಾಸ್ತ್ರದ ಭಾಗ. ಡಾ|| ಗೋಪಾಲಸ್ವಾಮಿಯವರು ಮನುಷ್ಯನ ಬುದ್ಧಿಶಕ್ತಿ ವಿವೇಚನಾಶಕ್ತಿ ಮೊದಲಾದುವುಗಳನ್ನಳೆಯುವುದಕ್ಕೆ ಅನೇಕ ಉಪಕರಣಗಳನ್ನು ಕಂಡುಹಿಡಿದಿದ್ದಾರೆ. ಪ್ರತಿಯೊಬ್ಬನ ಬುದ್ಧಿಶಕ್ತಿಯ ಪ್ರಮಾಣವನ್ನೂ ಅವನ ಬೇರೆಬೇರೆಯ ವಿವೇಚನಾಕ್ರಿಯೆಯಲ್ಲಿ ವ್ಯಯವಾಗಬಹುದಾದ ಮಾನಸಿಕಶಕ್ತಿಯ ಪರಿಮಾಣವನ್ನೂ ಅಳೆಯಲು ಅಲ್ಲಿ ಸಾಧನಗಳಿವೆ. ಇವೆಲ್ಲವೂ ನಿಮಗೆ ಬಹಳ ಆಹ್ಲಾದಕರವಾಗಿರುತ್ತವೆ. ಆದರೆ ನಾನು ಮಾತ್ರ ಇದನ್ನು ನೋಡುವುದಕ್ಕೆ ಬರುವುದಿಲ್ಲವೆಂಬ ಭರವಸೆಯನ್ನು ಕೊಡುತ್ತೇನೆ. ದೇಹರಚನಾ ಶಾಸ್ತ್ರದ ಶಾಖೆಯೊಳಗೆ ಬೇರೆಬೇರೆ ಪ್ರಾಣಿಗಳ ಪರಿಣಾಮಕ್ರಮದಲ್ಲಿ ಉಂಟಾಗುವ ಮಿದುಳಿನ ಸಂಕೀರ್ಣತೆಯನ್ನು ಸೂಚಿಸುವ ಪಟಗಳು ಪರಿಶೀಲನಾರ್ಹವಾಗಿವೆ. ಶರೀರಶಾಸ್ತ್ರದ ಶಾಖೆಯಲ್ಲಿ ಸಹನಶಕ್ತಿಯ ಪರೀಕ್ಷೆ, ಶ್ವಾಸೋಚ್ಛ್ವಾಸಗಳ ಪರೀಕ್ಷೆ, ಮೊದಲಾದುವುಗಳಿಗೆ ಸಂಬಂಧಪಟ್ಟ ಪ್ರಯೋಗಗಳು ಗಮನಾರ್ಹವಾಗಿವೆ. ಅಲ್ಲದೆ ದೇಹಕ್ಕೆ ಬೇಕಾದ ಎಲ್ಲ ಪೋಷಕದ್ರವ್ಯಗಳನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುವ ಆಹಾರವಾವುದೆಂಬುದನ್ನು ಇಲ್ಲಿ ತಿಳಿಯಬಹುದು. ಅಜೀರ್ಣ ಮತ್ತು ಅಗ್ನಿಮಾಂದ್ಯವೇ ಮೊದಲಾದ ವ್ಯಾಧಿಗಳಿಂದ ನರಳುವವರು ಇದನ್ನು ಉಪಯೋಗಿಸಬಹುದು. ಗಣಿತಶಾಖೆಯಲ್ಲಿ, ಜೇನುಹುಳುಗಳ ಗಣಿತಜ್ಞಾನವೂ ಷೇಕ್ಸ್‌ಪಿಯರ್ ಮತ್ತು ಬರ್ನಾರ್ಡ್ ಷಾ ಇವರ ನಾಟಕಗಳಲ್ಲಿ ಬರುವ ಗಣಿತ ವಿಚಾರವೂ ಬಹಳ ಚಿತ್ತಾಕರ್ಷಕವಾಗಿವೆ. ಕನ್ನಡ ಸಾಹಿತ್ಯಶಾಖೆಯೂ ಈ ಪ್ರದರ್ಶನ

ದಲ್ಲಿ ಭಾಗವಹಿಸಿ ಕನ್ನಡ ವರ್ಣಮಾಲೆಯ ಬೆಳವಣಿಗೆಯ ಕ್ರಮವನ್ನು ಸೂಚಿಸುವ ಪಟವನ್ನು ಪ್ರದರ್ಶಿಸಿದೆ. ಹಿಂದಿನ ಅನೇಕ ಶತಮಾನಗಳಲ್ಲಿ ಕನ್ನಡದ ಪ್ರತಿಯೊಂದು ಅಕ್ಷರವೂ ಹೇಗೆ ಮಾರ್ಪಾಟಾಯಿತೆಂಬುದನ್ನು ಇದರಲ್ಲಿ ನೋಡಬಹುದು. ಪ್ರಾಚ್ಯ ಸಂಶೋಧನ ಶಾಖೆಯಲ್ಲಿ, ನಮ್ಮೂರಿಗೆ ಸಮೀಪದ ಭೂಮಿಯಲ್ಲಿ ಹೂತುಹೋಗಿದ್ದ ಚಂದ್ರವಳ್ಳಿ ಎಂಬ ಪ್ರಾಚೀನನಗರದ ಭೂಶೋಧನೆಯಲ್ಲಿ ಸಂಗ್ರಹಿಸಿರುವ ಅನೇಕ ವಸ್ತುಗಳು ಪ್ರದರ್ಶಿಸಲ್ಪಟ್ಟಿವೆ. ಈ ಪಟ್ಟಣವು ಈಗ ಸುಮಾರು ೧೮೦೦ ವರ್ಷಕ್ಕೆ ಹಿಂದೆ ಇದ್ದಿರಬೇಕೆಂಬುದಾಗಿ ಊಹಿಸಲ್ಪಟ್ಟಿದೆ. ಆಗ ಅಲ್ಲಿ ನಮ್ಮ ಪೂರ್ವಿಕರು ವಾಸಮಾಡುತ್ತಿದ್ದಿರಬಹುದು.

ಇಂತಹ ಪ್ರದರ್ಶನಗಳು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಡದಿರುವವರಿಗೆಲ್ಲ ಅರಿವಿನ ಬೆಳಕನ್ನು ಹರಡುವ ಸಾಧನವೆಂಬುದನ್ನು ಸೂಚಿಸಲು ಬಯಸುತ್ತೇನೆ. ವಿಶ್ವ ವಿದ್ಯಾನಿಲಯದ ಕಾರ್ಯಕಲಾಪಗಳು ಅದರ ವಿದ್ಯಾರ್ಥಿಗಳಿಗೇ ಅಲ್ಲದೆ ಸಂಸ್ಥಾನದ ಎಲ್ಲಾ ಭಾಗಗಳಿಗೂ ಪ್ರಸರಿಸಬೇಕೆಂಬುದು ಎಲ್ಲರ ನಿರೀಕ್ಷಣೆ. ಪ್ರಚಾರೋಪನ್ಯಾಸ ಗಳು, ವಯಸ್ಕರ ವಿದ್ಯಾಭ್ಯಾಸ, ಸೇವಾಸಂಸ್ಥೆ ಮೊದಲಾದುವು ವಿಶ್ವವಿದ್ಯಾನಿಲಯ ದಿಂದ ಹೊರಗೆ ಜ್ಞಾನಪ್ರಚಾರವಾಗುವ ಕೆಲವು ಸಾಧನಗಳು. ಹಾಗೆಯೇ ಇಂತಹ ಪ್ರದರ್ಶನಗಳ ಯೋಜನೆಯೂ ಸಾಮಾನ್ಯಜನರನ್ನು ವಿದ್ಯಾವಂತರನ್ನಾಗಿ ಮಾಡಲು ಒಂದು ಸಾಧನ. ವಿಶ್ವವಿದ್ಯಾನಿಲಯದ ಹೊರಗಿರುವರೆಲ್ಲರೂ ಬಂದು ಈ ಸಮಯದಲ್ಲಿ ಇಲ್ಲಿರುವ ಎಲ್ಲ ವಸ್ತುಗಳನ್ನೂ ಪರಿಶೀಲಿಸಬಹುದು. ಆಯಾ ಶಾಖೆಗಳಲ್ಲಿ ನಿಯೋಜಿತ ರಾದ ವಿದ್ಯಾರ್ಥಿಗಳು ಅವುಗಳ ಅರಿವನ್ನು ಹೊರಗಿನವರಿಗೆ ವಿಶದಪಡಿಸಲು ಆದಷ್ಟು ಪ್ರಯತ್ನಪಡುತ್ತಾರೆ. ಈ ಸುಸಮಯವನ್ನು ಬಹುಮಟ್ಟಿನ ಪ್ರಜೆಗಳು ಉಪಯೋಗಿಸಿ ಕೊಳ್ಳುತ್ತಾರೆಂದು ನಾನು ನಂಬುತ್ತೇನೆ.

ಮಹನೀಯರೇ, ಈ ದಿನ ಬೆಳಗ್ಗೆ ಆಳುವ ಮಹಾಸ್ವಾಮಿಯವರಿಂದ ಸೂಚಿತ ವಾಗಿರುವಂತೆ ಈ ಸ್ವಲ್ಪ ಕಾಲದಲ್ಲಿ ಬೇಕಾದಷ್ಟನ್ನು ನಾವು ಸಾಧಿಸಿದ್ದೇವೆ. ಆದರೂ ಮುಂದೆ ಸಾಧಿಸಬೇಕಾದುದು ವಿಪುಲವಾಗಿದೆ. ನಮ್ಮ ಮುಂದೆ ಅನೇಕ ಸಮಸ್ಯೆಗಳು ಎದ್ದು ನಿಲ್ಲುವುವು. ವಾಸ್ತವವಾಗಿ ಹೇಳುವುದಾದರೆ ಈ ಸಮಸ್ಯೆಗಳು ನಮ್ಮ ವಿಶ್ವ ವಿದ್ಯಾನಿಲಯಕ್ಕೆ ಮಾತ್ರ ವಿಶೇಷವಾಗಿರತಕ್ಕವುಗಳೇನೂ ಅಲ್ಲ. ಎಲ್ಲ ವಿಶ್ವವಿದ್ಯಾ ನಿಲಯಗಳಿಗೂ ಸಾಮಾನ್ಯವಾದುವು. ಅವುಗಳಲ್ಲಿ ಮೊದಲನೆಯದು ನಿರುದ್ಯೋಗ ನಿವಾರಣೆ. ಎರಡನೆಯದು ವಿಶೇಷವಾಗಿ ಹೆಚ್ಚುತ್ತಿರುವ ಪದವೀಧರರನ್ನು ಹೇಗೆ ಉಪಯೋಗಿಸಿಕೊಳ್ಳುವುದೆಂಬುದು. ಮೂರನೆಯದು ವಿಶ್ವವಿದ್ಯಾನಿಲಯದಲ್ಲಿ ಕೊಡು ತ್ತಿರುವ ಪ್ರೌಢ ವಿದ್ಯಾಭ್ಯಾಸದ ಧ್ಯೇಯದ ವಿಷಯದಲ್ಲಿರುವ ಭಿನ್ನಾಭಿಪ್ರಾಯಗಳು.

ಪ್ರೌಢ ವಿದ್ಯಾಭ್ಯಾಸದ ಗುರಿಯು ಸಂಸ್ಕೃತಿಯ ರಕ್ಷಣೆಯೆಂದೂ ಜ್ಞಾನಪ್ರಸಾರಣೆಯೇ ಅದರ ಮುಖ್ಯಕಾರ್ಯವೆಂದೂ ಕೆಲವರ ಮತ. ಪ್ರೌಢವಿದ್ಯಾಭ್ಯಾಸವು ಯಾವ ವಿಧದಲ್ಲೂ ಉಪಯುಕ್ತವಲ್ಲವೆಂಬುದು ಮತ್ತೆ ಕೆಲವರ ಅಭಿಪ್ರಾಯ. ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಕೊಡುವ ವಿಷಯವಾವುದೂ ಮುಂದಿನ ಜೀವನಕ್ಕೆ ಪ್ರಯೋಜನವಾಗುವುದಿಲ್ಲವೆಂಬುದು ಇನ್ನೂ ಕೆಲವರ ಪಕ್ಷ. ಪರೀಕ್ಷೆಗಳಾದ ಮೇಲೆ ಅವುಗಳನ್ನು ಸಂಪೂರ್ಣವಾಗಿ ಮರೆತುಬಿಡುವುದೇ ಪ್ರೌಢವಿದ್ಯಾಭ್ಯಾಸದ ಗುರಿಯೆಂಬುದು ಬೇರೆ ಕೆಲವರ ಭಾವ! ಆದುದರಿಂದ ಈ ಸಮಸ್ಯೆಗಳನ್ನು ಪರಿಹರಿಸಿ ಕಾರ್ಯರೂಪಕ್ಕೆ ತರಲು ಯೋಗ್ಯವಾದ ಸೂಚನೆಗಳನ್ನು ಕೊಡುವ ಭಾರವು ಪ್ರಖ್ಯಾತರೂ ದಕ್ಷರೂ ಆದ ಶ್ರೀಮಾನ್ ಸಿ. ಆರ್. ರೆಡ್ಡಿಯವರೇ ಮೊದಲಾದ ತಮ್ಮಂತಹವರ ಮೇಲೆ ಇದೆ. ಮಹಾಸ್ವಾಮಿಯವರು ಸೂಚಿಸಿರುವಂತೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಬಹಳ ತೊಡಕಾದುವು. ಅವುಗಳಿಗೆ ತೃಪ್ತಿಕರವಾದ ಸಮಾಧಾನಗಳನ್ನು ಪಡೆಯುವುದು ಕಷ್ಟಕರವಾದ ಕೆಲಸ. ಅವುಗಳು ಎಷ್ಟೇ ಕಷ್ಟವಾದರೂ ವಿದ್ಯಾರ್ಥಿಗಳ ಸ್ಥಿತಿಗತಿಗಳನ್ನೂ ಅವರ ಆರೋಗ್ಯವನ್ನೂ ಉತ್ತಮಗೊಳಿಸುವುದಕ್ಕೂ ಅವರು ವಿಶ್ವವಿದ್ಯಾನಿಲಯವನ್ನು ಬಿಟ್ಟು ಹೊರಗೆ ಹೋದ ಮೇಲೆ ಸುಖವಾಗಿ ಜೀವಿಸುವುದಕ್ಕೂ ಮಾಡಬೇಕಾದುದೆಲ್ಲವನ್ನೂ ಮಾಡಲು ವಿಶ್ವವಿದ್ಯಾನಿಲಯವು ತನ್ನ ಕೈಲಾದ ಮಟ್ಟಿಗೂ ಪ್ರಯತ್ನಪಡುವುದೆಂಬುದಾಗಿ ನಾನು ಧೈರ್ಯವಾಗಿ ಹೇಳಬಲ್ಲೆನು. ಈಗ ಈ ಪ್ರದರ್ಶನವು ಪ್ರಾರಂಭವಾಗಿದೆಯೆಂದು ಸೂಚಿಸಲು ತುಂಬ ಸಂತೋಷಿಸುತ್ತೇನೆ.

ಸಂಸ್ಕೃತ ಕನ್ನಡ ಕವಿಸಮ್ಮೇಳನ

ಸ್ವಾಗತ ಭಾಷಣ

ಮಹಿಳೆಯರೇ, ಮಹಾಶಯರೇ,

ಮೈಸೂರು ವಿಶ್ವವಿದ್ಯಾನಿಲಯದ ರಜತಮಹೋತ್ಸವದ ಅಂಗವಾಗಿ ನಡೆಯಲಿರುವ ಈ ಕವಿಸಮ್ಮೇಳನಕ್ಕೆ ತಮ್ಮೆಲ್ಲರನ್ನೂ ಬರಮಾಡಿಕೊಳ್ಳುವುದು ನನ್ನ ಅತ್ಯಂತ ಸಂತೋಷದ ಕರ್ತವ್ಯವಾಗಿದೆ.

ಕವಿಯ ಕೃತಿ ಕಾವ್ಯ; ಅದರಲ್ಲಿ ಪದ್ಯಕಾವ್ಯವೂ ಉಂಟು, ಗದ್ಯಕಾವ್ಯವೂ ಉಂಟು. ಆದರೂ ಉತ್ತಮವಾದ ಪದ್ಯಕಾವ್ಯಕ್ಕೆ ಸಾಹಿತ್ಯದಲ್ಲಿ ಮೇಲಿನ ಸ್ಥಾನ. ಭಾಷೆಯನ್ನು ನೀರಿಗೆ ಹೋಲಿಸಬಹುದಾದರೆ, ಗದ್ಯ ಹಾಲು; ಪದ್ಯಕಾವ್ಯ ಅದರ ಕೆನೆ. ಇಂಥ ಕಾವ್ಯ ಬರೆಯಲು ಕವಿಗೆ ಬೇಕಾದ ಪ್ರತಿಭೆ ರಸಿಕತೆಗಳು ಅದನ್ನು ಓದಿ ತಿಳಿಯಲು ಪಾಠಕನಿಗೂ ಬೇಕು. ಆದ್ದರಿಂದ ವಿದ್ವನ್ಮಣಿಗಳಾದ ತಾವೆಲ್ಲರೂ ಕವಿಗಳೇ. ಕವಿಗಳೆಂದೇ ಕರೆದು ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸುತ್ತೇನೆ.

ಇಂದು ನಡೆಯಲಿರುವುದು ಪದ್ಯಕವಿಗಳ ಸಮ್ಮೇಳನ; ಇದರಲ್ಲಿ ಗದ್ಯಕವಿಗಳಿಗೆ ಸ್ಥಾನವಿಲ್ಲದಿರುವುದಕ್ಕೂ, ಇಂದು ಬಂದಿರುವ ಕವಿಗಳಿಗಿಂತ ಹೆಚ್ಚು ಜನ ಬಾರದಿರುವುದಕ್ಕೂ ಬರೆಯದಿರುವುದಕ್ಕೂ, ನಮಗೆ ಇದ್ದ ಅಲ್ಪಕಾಲಾವಕಾಶ ಅಲ್ಪಾವಧಿಗಳೇ ಕಾರಣ. ಅಷ್ಟರಲ್ಲಿಯೇ ಸ್ಫೂರ್ತಿ ತಂದುಕೊಂಡು ಕವಿತೆಬರೆದು ಕಳುಹಿಸಿರುವ ನಮ್ಮ ಮಿತ್ರರು ಅಭಿನಂದ್ಯರು. ನಾವು ಅವರಿಗೆ ತುಂಬ ಕೃತಜ್ಞರಾಗಿದ್ದೇವೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕವಿಸಮ್ಮೇಳನ ನಡೆಯುವುದು ಇದು ಎರಡನೆಯ ಸಾರಿ. ಮೊದಲನೆಯ ಸಾರಿ ನಡೆದದ್ದು ೧೯೨೮ರಲ್ಲಿ; ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ಆಗ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿದ್ಯಾರ್ಥಿಕವಿಗಳ ಒಂದು ಸಮ್ಮೇಳನವನ್ನು ಸೇರಿಸಿತ್ತು. ಅಂದು ವಿದ್ಯಾರ್ಥಿಗಳಾಗಿ ಭಾಗವಹಿಸಿದ್ದವರು ಇಂದು ಉಪಾಧ್ಯಾಯರಾಗಿದ್ದಾರೆ, ಅಧಿಕಾರಿಗಳಾಗಿದ್ದಾರೆ. ಅಂಥವರಲ್ಲಿ ಕೆಲವರು ಇವೊತ್ತು ಇಲ್ಲಿಯೂ ಭಾಗವಹಿಸಿರುವುದು ನಮ್ಮೆಲ್ಲರಿಗೂ ಬಹು ಸಂತೋಷವನ್ನುಂಟುಮಾಡಿದೆ. ಹೀಗೆ ಮತ್ತೊಂದು ಸಾರಿ, ರಜತೋತ್ಸವ ಸಮಾರಂಭದ ಸಂಬಂಧದಲ್ಲಿ, ಕವಿಸಮ್ಮೇಳನವು ಹೆಚ್ಚಿನ ವಿಜೃಂಭಣೆ

ಯಿಂದ ನಡೆಯಲು ಅವಕಾಶ ಕಲ್ಪಿಸಿಕೊಟ್ಟದ್ದಾಗಿ ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಿಗೆ ಸಾಹಿತ್ಯಾಭಿಮಾನಿಗಳೆಲ್ಲರ ಕೃತಜ್ಞತೆಯು ಸಲ್ಲತಕ್ಕದ್ದಾಗಿದೆ.

ಈಗ್ಗೆ ಸುಮಾರು ೨೦ ವರ್ಷಗಳ ಕೆಳಗೆ ಕನ್ನಡ ಕವಿತೆಯ ಬೆಳೆ ಅಷ್ಟಾಗಿರಲಿಲ್ಲ. ನಮ್ಮ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಹುಟ್ಟಿ ಬೆಳೆದುಕೊಂಡು ಬಂದಿರುವ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿತವಾಗಿರುವ ಕವಿತೆಗಳಿಂದ ಇದನ್ನು ನಿರ್ಧರಿಸುವುದಾದರೆ, ಈಗ "ಬೆಳೆಯೇನೋ ಬೇಕಾದ ಹಾಗಿದೆ; ಆದರೆ ಕೊಯ್ಯುವವರು ಕಡಮೆ" ಎಂದು ಹೇಳಬಹುದು. ಮೊದಲು ಎರಡು ಮೂರು ವರ್ಷ ಪ್ರಬುದ್ಧ ಕರ್ಣಾಟಕವು ಗದ್ಯಮಯವಾಗಿತ್ತು; ಅದರಲ್ಲಿ ಪದ್ಯ ಹಾಕಬೇಕೆಂಬ ಯೋಚನೆಯೇ ಬಂದಿರಲಿಲ್ಲ; ಆಮೇಲೆ ಅದು ದೇವತಾಪ್ರಾರ್ಥನೆಯ ರೂಪದಲ್ಲಿ ಒಂದೊಂದಾಗಿ ಕಾಲಿಟ್ಟು, ಈಚೆಗೆ ಒಂದೊಂದು ಸಂಪುಟದಲ್ಲಿ ೧೫, ೨೦ ಕವನಗಳು ಕೂಡ ಬಂದಿವೆ. ಆಗ ಹೊಸ ಕನ್ನಡದಲ್ಲಿ ಕವಿತೆಮಾಡುವವರು ಯಾರಾದರೂ ಇದ್ದಾರೆಯೇ ಎಂದು ಹುಡುಕಬೇಕಾಗಿತ್ತು. ಈಗ ಕವಿತೆಮಾಡದವರು ಯಾರಾದರೂ ಇದ್ದಾರೆಯೇ ಎಂದು ಹುಡುಕಬೇಕಾಗಿದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟು ಮೈಸೂರು ಸಂಸ್ಥಾನದಲ್ಲಿರುವವರನ್ನು ಮಾತ್ರ ಇಂದು ಆಹ್ವಾನಿಸಲಾಗಿದೆ. ಆ ನಿರ್ಬಂಧವನ್ನಿಟ್ಟುಕೊಳ್ಳದಿದ್ದರೆ ಇಂದು ನೂರಾರು ಕವಿಗಳನ್ನು ಅನಾಯಾಸವಾಗಿ ಸೇರಿಸಬಹುದಾಗಿತ್ತು.

ಈ ಆಧುನಿಕ ಕಾವ್ಯದ ಬೆಳೆ ಮೊದಲಾದದ್ದು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಇಂಗ್ಲಿಷ್ ಗೀತಗಳ ಮುಂಗಾರು ಮಳೆಯಿಂದ; ಅವುಗಳಲ್ಲಿ ಕೆಲವು ಕರ್ಣಾಟಕ ಗ್ರಂಥಮಾಲೆಯಲ್ಲಿಯೂ ಆಮೇಲೆ ಪೂರ್ತಿಯಾಗಿ ಕರ್ಣಾಟಕ ಸಂಘದಿಂದ ಪ್ರಕಟಿತವಾದ ಬಹುಮಾನ ಗ್ರಂಥದಲ್ಲಿಯೂ ಬಂದುವು. ಕನ್ನಡ ಕವಿತೆಗೆ ಕನ್ನಡದ ಜಾಡು ಸಿಕ್ಕಿತು. ಕವಿತೆ ಹೊಳೆ ಹೊಳೆಯಾಗಿ ನಾಲೆ ಕಾಲುವೆಗಳಾಗಿ ಹರಿಹರಿದು ಎಲ್ಲೆಲ್ಲೂ ಹುಲುಸಾದ ಬೆಳೆಯಾಗಿ ಹಸುರೆರಚಿತು. ಅವರು ಹೀಗೆ ಗ್ರಂಥರೂಪವಾಗಿ ಕೊಟ್ಟ ಸ್ಫೂರ್ತಿಗೆ ಧನರೂಪವಾದ ಪ್ರೋತ್ಸಾಹವನ್ನೂ ಸೇರಿಸಿದರು. (ಕೀರೆಯ ಸೊಪ್ಪಾದರೂ ಬೀಜವಿಲ್ಲದೆ ಹುಟ್ಟದು; ಆದರೆ ಸುರತರುವಾದರೂ ಬೆಳೆಯುವದಕ್ಕೆ ಪೋಷಣೆ ಬೇಕು.) ೧೯೨೭ರಲ್ಲಿ ಒಂದು ಸಾವಿರ ರೂಪಾಯಿಗಳ ಪುದುವಟ್ಟನ್ನು ವಿಶ್ವವಿದ್ಯಾನಿಲಯಕ್ಕೆ ಕೊಟ್ಟು ಅದರಿಂದ ಶ್ರೀಮನ್ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಆಳಿಕೆಯ ರಜತ ಮಹೋತ್ಸವದ ಜ್ಞಾಪಕಾರ್ಥವಾಗಿ, ವಿದ್ಯಾರ್ಥಿರಚಿತವಾದ ಒಂದು ಕನ್ನಡದ, ಕನ್ನಡ ಛಂದಸ್ಸಿನ, ಉತ್ತಮ ಕವಿತೆಗೆ ಪ್ರತಿ ವರ್ಷವೂ ಒಂದು ಬಂಗಾರದ ಪದಕ ಬಹುಮಾನವಾಗಿ ದೊರೆಯುವಂತೆ ಏರ್ಪಡಿಸಿದರು. ಇದನ್ನು ಪಡೆದ ಮ|| ಗಳಾದ ಕೆ. ವಿ. ಪುಟ್ಟಪ್ಪ, ಎಲ್. ಗುಂಡಪ್ಪ,

ಜಿ. ಪಿ. ರಾಜರತ್ನಂ, ಎಂ. ವಿ. ಸೀತಾರಾಮಯ್ಯ, ಎಸ್. ವಿ. ಪರಮೇಶ್ವರಭಟ್ಟ, ಕೆ. ನರಸಿಂಹಮೂರ್ತಿ ಮುಂತಾದವರು ಈ ಕವಿಗೌರವದಿಂದ ವಿರಾಜಮಾನರಾಗಿದ್ದಾರೆ. ಶ್ರೀಮಾನ್ ಶ್ರೀಕಂಠಯ್ಯನವರು ಹೀಗೆ ನೆಟ್ಟ ಸಸಿಗಳು ಬೆಳೆದು ಪುಷ್ಪೋದ್ಯಾನವಾಗಿ, ಹಣ್ಣಿನ ತೋಟವಾಗಿ, ಅವನ್ನು ತಮ್ಮ ಶಿಷ್ಯಪ್ರಶಿಷ್ಯರು ವಿಸ್ತರಿಸಿ, ಅಲ್ಲಿ ಹೂವು ಹಣ್ಣುಗಳನ್ನೆತ್ತುತ್ತಿರುವುದನ್ನು ಗುರುಸಹಜವಾದ ಹೆಮ್ಮೆಯಿಂದ ನೋಡುತ್ತಿದ್ದಾರೆ. ಅಂಥವರನ್ನು ನಾವು ಇಂದಿನ ಸಮಾರಂಭದಲ್ಲಿ ಪಡೆದಿರುವುದು ನಮಗೆ ಅತ್ಯಂತ ಸಂತೋಷಕರವಾಗಿದೆ.

ಇದುವರೆಗೆ ನಾನು ಆಡಿದ ಮಾತಿನಲ್ಲಿ ತಕ್ಕಮಟ್ಟಿನ ಭಾಗವು ಸಂಸ್ಕೃತಕ್ಕೂ ಅನ್ವಯಿಸುತ್ತದೆ; ಆದರೆ ಇದು ಕನ್ನಡ ದೇಶ. ಕನ್ನಡವು ನಮ್ಮ ಉಸಿರು; ತಾಯಿಮಾತು; ಕುರಿತೋದದೆಯೂ ಬರತಕ್ಕದ್ದು. ಸಂಸ್ಕೃತವು ಎಷ್ಟಾದರೂ ಅನ್ಯಭಾಷೆ. ಅದಕ್ಕೆ ಹೆಚ್ಚು ಪರಿಶ್ರಮ ಬೇಕು; ಕೃಷಿ ಬೇಕು; ಇಲ್ಲದಿದ್ದರೆ ಅದು ಫಲಿಸುವುದಿಲ್ಲ; ಅದು ಫಲಕ್ಕೆ ಬಂದರೆ, ಕಲ್ಪವೃಕ್ಷ. ಹೀಗೆ ಸಂಸ್ಕೃತ ಕ್ಷೇತ್ರದಲ್ಲಿ ಪರಿಶ್ರಮಪಟ್ಟು ಬೆಳೆಮಾಡಿದವರೂ, ಕಡಮೆಯಾಗಿಲ್ಲ. ಇವೊತ್ತು ಕನ್ನಡದಲ್ಲಿ ಬರೆದವರು ಎಷ್ಟು ಜನ ಬಂದಿದ್ದಾರೋ ಸಂಸ್ಕೃತದಲ್ಲಿ ಬರೆದವರೂ ಸರಿಸುಮಾರು ಅಷ್ಟೇ ಜನ ಬಂದಿದ್ದಾರೆ. ಇವರಿಗೆ ಹಿರಿಯರಾಗಿ ಮಾರ್ಗದರ್ಶಕರಾಗಿ ವೇ|| ಬ್ರ|| ಸಾಹಿತ್ಯರತ್ನಂ ಅಲಂಕಾರರತ್ನಾಮಣಿ ಮಹಾವಿದ್ವಾನ್ ಗೋಪಾಲಕೃಷ್ಣ ಶಾಸ್ತ್ರಿಗಳು ಸಾಹಿತ್ಯ ವಿದ್ವಾಂಸರಾಗಿ ಹೆಸರುಗೊಂಡಿದ್ದಾರೆ. ಇವರು ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿಯೂ ಇಂಗ್ಲಿಷ್ ಕಾಲೇಜಿನಲ್ಲಿಯೂ ಬಹುಕಾಲ ಬೋಧಕರಾಗಿದ್ದು ಈಗ ಸ್ವಲ್ಪ ದಿನಕ್ಕೆ ಹಿಂದೆ ವಿಶ್ರಾಂತರಾಗಿದ್ದಾರೆ.

ಮಹಾಶಯರೇ, ವಿಶ್ವವಿದ್ಯಾನಿಲಯದ ರಜತೋತ್ಸವದ ಸಮಿತಿಯ ಪರವಾಗಿ ತಮ್ಮೆಲ್ಲರಿಗೂ ಮತ್ತೊಂದು ಸಾರಿ ಸ್ವಾಗತವನ್ನು ಬಯಸಿ, ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಈ ಕವಿಸಮ್ಮೇಳನದ ಕನ್ನಡ ವಿಭಾಗಕ್ಕೂ ಮಹಾವಿದ್ವಾನ್ ಸಾಹಿತ್ಯರತ್ನಂ ಅಲಂಕಾರರತ್ನಾಮಣಿ ಗೋಪಾಲಕೃಷ್ಣಶಾಸ್ತ್ರಿಗಳವರು ಸಂಸ್ಕೃತ ವಿಭಾಗಕ್ಕೂ ಅಧ್ಯಕ್ಷರಾಗಿ, ಇಂದಿನ ಕಾರ್ಯಕ್ರಮಗಳನ್ನು ನಡಸಿಕೊಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಇಂಥ ಸಭೆ ಸಮ್ಮೇಳನಗಳಲ್ಲಿ ಸ್ವಾಗತಗೀತವನ್ನು ಹಾಡುವುದುಂಟು. ಕವಿಸಮ್ಮೇಳನದಲ್ಲಿ ಸ್ವಾಗತವು ಕವಿತೆಯ ರೂಪದಲ್ಲಿದ್ದರೆ ಅದಕ್ಕೆ ನಿಜವಾದ ಔಚಿತ್ಯವಿರುತ್ತದೆ. ಆದ್ದರಿಂದ ಒಂದೆರಡು ಪದ್ಯಪಂಕ್ತಿಗಳಿಂದ ಈ ನನ್ನ ಭಾಷಣವನ್ನು ಮುಗಿಸುತ್ತೇನೆ :—

ಸಂಸ್ಕೃತದ ಕನ್ನಡದ ಸಾಹಿತ್ಯಸಾಗರವ
ತಮ್ಮೊಂದು ನುಡಿಯಿಂದ ಪಾಲ್ಗಡಲನಾಗಿಸಿಹ
ಕವಿಗಳೇ ಬನ್ನಿರೈ, ಕವಿತೆಗಳ ತನ್ನಿರೈ!
ಸಂಸ್ಕೃತವ ಕನ್ನಡವ ಕಡೆಕಡೆದು ನವನೀತ
ಕಾವ್ಯಗಳ ಪಡೆಯುತಿಹ ಕವಿರತ್ನರೇ ಬನ್ನಿ!
ಕನ್ನಡಕೆ ಮೆಚ್ಚಾದ ಸಂ-ಕ್ರಾಂತಿ ಪೊಸಕಬ್ಬ
ಕನ್ನಡದ ಬಾವುಟವ ಮಾಡಿ ಮುನ್ನುಗ್ಗಿದಾ
ಶ್ರೀಕಂಠಗುರುವರ್ಯ ಕನ್ನಡದ ಮಮತೆಯಿಂ
ಕಾವ್ಯನಿಧಿ ಕೂಡಿಡಲು ವಿಶ್ವವಿದ್ಯಾಲಯದೆ,
ಶ್ರೀನಿವಾಸರು ಪಲರು ಕಾವ್ಯಲಕ್ಷ್ಮಿಯನೊಲಿಸಿ
ಪ್ರತಿವರ್ಷ ಕೌಸ್ತುಭವ ಪಡೆದು ಧರಿಪಂತಾಯ್ತು.
ಮೈಸೂರ ಮಕ್ಕಳಿಗೆ ಅರಿವಿನಮೃತವನೂಡಿ
ವಿಶ್ವವಿದ್ಯಾಲಯವ ಸಂತತಂ ಪೋಷಿಸಿದ
ಸಂಸ್ಕೃತದ ಕನ್ನಡದ ಹಿರಿಯಣ್ಣರೇ ಬನ್ನಿ!
ಪುಟ್ಟಕವಿಗಳೆ ಬನ್ನಿ, ದೊಡ್ಡ ಕಾವ್ಯವ ತನ್ನಿ!
ಕನ್ನಡದ ಕಂದಗಳೆ, ಸಾಹಿತ್ಯಕಂದಗಳೆ,
ಕವಿತೆಯುಕ್ಕಂದಗಳೆ, ಕಾವ್ಯಮಾಕಂದಗಳೆ,
ದಯಮಾಡಿ! ತಮಗೆಲ್ಲ ಬಯಸುವೆವು ಸ್ವಾಗತವ,
ಸು-ಸ್ವಾಗತವ!

ಜಯತಿ ಜಯಚಾಮರಾಜಃ ಜಯತಿ ಚ ತತ್ಪ್ರೀತಿಪೋಷಿತಾ ಸಂಸ್ಥಾ
ಜಯತಿ ಕವಿಪರಿಷದೇಷಾ ಸಂಸ್ಕೃತವಾಣೀ ಚ ಕಾರ್ಣಾಟೀ ||

ಕನ್ನಡ ಕವಿತೆಗಳು

೧

(ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ.,ಬಿ.ಎಲ್. ಅವರಿಂದ)

ಓಂ, ಸಹ ನಾವವತು; ಸಹ ನೌ ಭುನಕ್ತು;
ಸಹ ವೀರ್ಯಂ ಕರವಾವಹೈ;
ತೇಜಸ್ವಿ ನಾವಧೀತಮಸ್ತು;
ಮಾ ವಿದ್ವಿಷಾವಹೈ.
ಓಂ ಶಾಂತಿಃ ಶಾಂತಿಃ ಶಾಂತಿಃ.

ಪೊತ್ತಮೊದಲ್, ಬೆಳಕಾಗಲೆಂದಾಗ, ಬೆಳಕಾಯ್ತು; ಬೆಳಕು ಚೆಲುವಾಯ್ತು;
ಕಿಡಿ ಸಿಡಿದು ಮಿನುಗಿದುವು ಜ್ಯೋತಿಗಳ್; ಮೂಡಿದರು ಸೂರ್ಯ ಚಂದಿರರು
ಲೋಕಚಕ್ಷುಗಳೆನಿಸಿ, ಸತ್ಯ ಧರ್ಮಗಳಂತೆ ಕ್ಷಮೆ ದಯೆಗಳಂತೆ.
ಹಸುರ ಸೊಬಗಂ ತೊಟ್ಟು, ಹಾಡುತ್ತ, ಬಾನ್‌ಬಯಲೊಳಾಟವಾಡುತ್ತ,
ಸೌಂದರ್ಯದಿಂ ತೀವಿ, ಭೂದೇವಿ ಬೆಳಗಿದಳು, ಜೀವ ಪರಮಾತ್ಮರಿಂ ತೊಳಗಿ.
ಆ ದಿವ್ಯ ದರ್ಶನಂ ಕಣ್ತುಂಬೆ ನೋಡಿದರ್
ದಿವಿಜರುಂ, ಋಷಿಗಳುಂ ; ನಲಿದು ಕುಣಿದಾಡಿದರ್ ;
ಪಾಟಮಂ ಪಾಡಿದರ್—
ಓಂ, ತತ್ಸವಿತುರ್ ವರೇಣಿಯಂ
ಭರ್ಗೋ ದೇವಸ್ಯ ಧೀಮಹಿ,
ಧಿಯೋ ಯೋ ನಃ ಪ್ರಚೋದಯಾತ್.
ಮತ್ತಮವರಿಂತೆಂದು ಬೇಡಿದರ್—
ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಂ :
ತತ್ ತ್ವಂ ಪೂಷನ್ ಅಪಾವೃಣು
ಸತ್ಯಧರ್ಮಾಯ ದೃಷ್ಟಯೇ.
ಇನ್ನುಮೊಂದಂ ಬಯಸಿ ಪೂಟಮಂ ಪೂಡಿದರ್—
ಅಸತೋ ಮಾ ಸದ್ಗಮಯ,

ತಮಸೋ ಮಾ ಜ್ಯೋತಿರ್‌ಗಮಯ,
ಮೃತ್ಯೋರ್ ಮಾ ಅಮೃತಂ ಗಮಯ.
ಇಂದಿಂಗಮೆಮಗದುವೆ ದರ್ಶನಂ, ಬಯಸಿದುದು ಆ ಅಮೃತಪುತ್ರರ್.
ಬ್ರಹ್ಮಮೀ ವಿಶ್ವಂ; ಬ್ರಹ್ಮಮುಂ ಪೂರ್ಣಮೆನೆ ಏನ್ ಚೆಲುವೊ ನಮ್ಮ
[ಬಾಳ್‌ಚೆಲುವು,
ಏನ್ ನಲಿವೊ ನಮ್ಮ ನಲಿವಾತ್ಮನಾನಂದಂ!

ಆನಂದವರಿಯದರ್,
ಆತ್ಮವನೆ ಒಲ್ಲದರ್,
ಬಾನ ಗಡಿಯಲಿ ಗಿಡಿದ ಕತ್ತಲೆಯ ಗುಹೆಯೊಳಡಗಿರ್ದವರ್—ಅಸುರರ್
ಕೇಳ್ದರಾ ಪಾಟಮಂ ಪಲ್ಮೊರೆದು, ಕಣ್ಣಿರಿಯೆ ಕಂಡರಾ ಬಿಡುಗಣ್ಣ ಬೆಳಕನ್,
ಪೊಳೆದು ಪೊಳೆಯಿಸುತಿರ್ಪ ಬಿಳಿಯ ಬಾನ್‌ಬೆಳಕನ್,
ಮೆಲ್ಲಮೆಲ್ಲನೆ ನುಸುಳಿ ದೇವರಾವರಣದಲಿ, ಆಳ ತೋಟದಲಿ,
ತೆಕ್ಕೆತೆಕ್ಕೆಯೊಳೆದ್ದು ಹೊರಬಿದ್ದು, ಕಾರಿರುಳ ಮೊತ್ತಂಗಳಾಗಿ,
ಪೊಗೆಯಾಗಿ ನೊಣೆವ ಪಿಡಿನೆಳಲಾಗಿ, ನಂಜಾಗಿ, ಕಣ್ಣ ಮಂಜಾಗಿ,
ಮುತ್ತಿ ಮರುಳ್ಗೊಳಿಸಿದರ್ ಸಂಶಯಂಗಳನೊತ್ತಿ ಪಾಪಮಂ ಬಿತ್ತಿ.
ಅಲ್ಲದುದನಹುದೆಂದು, ಅಹುದನಲ್ಲೆಂದು,
ಇಲ್ಲದುದನಿಹುದೆಂದು, ಇಹುದನಿಲ್ಲೆಂದು,
ನಲ್ಲದಂ ಪೊಲೆಯೆಂದು, ಪೊಲೆ ನಲ್ಲದೆಂದು,
ತಿರಿಸಿದರ್ ಮಾಯಾವಿಗಳ್ ಬಾಳ್ವ ಮಕ್ಕಳಂ ಸಾವ ಸಂಸಾರ ಸುತ್ತಿ.
ಪಲ ಪೆಸರ್, ಪುರುಳೊಂದು,
ಪಲ ತೆರನ್, ನೆರನೊಂದು,—
ಅಹಿ, ವೃತ್ರ, ಮಾರ, ಕಲಿ, ಅಹ್ರಿಮನ್, ಸೈತಾನ್!

ಅಂದು ಮೊದಲಾದುದೇ ದೇವಾಸುರಂ!
ಎಂದು ಕೊನೆಗಾಣ್ಬುದೋ ದೇವಾಸುರಂ!
ಮಾನವನ ಹೃದಯದಾಳದ ಕಡಲನೊಂದು ಕಡೆ ನಿರ್ಜರರ್ ದೇವರ್,
ಒಂದು ಕಡೆ ಕಾಮುಚರರಸುರರ್,
ಛಲದೆ ಬಿಡದಿರ್ಪರುಂ ಬಗಿಬಗಿದು ಮಥಿಸುವರ್, ಪೊಸೆವರ್,
ಅತ್ತಲಿತ್ತಲ್ ಪೊರಳೆ ಅಲೆ ಕಲಕಿ ನೊರೆ ತೂರಿ ಕಾಲಂ.

ಶಮೆ ದಮೆಗಳಿಂ, ಯಜ್ಞಬುದ್ಧಿಯಿಂ, ಶುದ್ಧಿಯಿಂ,
ಧಾತುಪ್ರಸಾದದಿಂ, ಪ್ರೇಮದಿಂದಾಳ್ವಾತನರುಳಿಂ,
ಇರುಳ್ ತೆಗೆದು ಹೊಳಪಾಗಿ, ತಿಳಿವಾಗಿ ಕಣ್ದೆರೆಯೆ ಕಣ್ಗೆಟ್ಟ ಕಣ್ಣು,
ವಿಷದಿನಮೃತವ ಕಡೆದು, ರೌದ್ರರೂಪಂಗಳಿಂ ರಮ್ಯತೆಯ ಪಡೆದು,
ವಕ್ರಮಂ ಋಜುಗೊಳಿಸಿ, ಒಲ್ಲದುದನೊಲ್ಮೆಯಿಂದೊಲಿಸಿ,
ಪಲ್ಮುರಿದ ಪಾವು ತೊಡವಪ್ಪಂತೆ ಕೈಗೆ ವರೆ ದೈತ್ಯರ್,
ಪುಣ್ಯಪುರಮಂ ಕಟ್ಟಿ ಪುರುಷನೊಳಗಗ್ನಿಯಂ ಕಾಪವರೆ ದೇವರ್,
ಯುಗಯುಗದೆ ಧರ್ಮಾಮೃತಂಗರೆವ ಗುರುಗಳ್.
ಏನೆಂದು ಪಾಡುವರ್, ಬೇಡುವರ್ ನಮಗಾಗಿ ಆ ಬ್ರಹ್ಮಪುತ್ರರ್ ?
ನಮಗೇನ ತೋರುವರು, ಸಾರುವರು ಬೆಳಕಿನಾ ಮಕ್ಕಳ್ ?

ಋತಮೊಂದೆ ಗೆಲ್ಲುವುದು, ಅನೃತವಲ್ತು;
ಅಮೃತವೆನೆ ವಿದ್ಯೆಯೆ ; ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.
ಸರ್ವ ಜೀವಂಗಳುಂ ಮುಕ್ತಿಯಂ ಕಾಣ್ಗೆ ;
ದೇವರೊಳ್ ಪಗೆವವರ ಕಾಳಗಂ ಮಾಣ್ಗೆ ;
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ.
ಜ್ಞಾನಧರ್ಮಂಗಳಿಂ ತಣ್ಪನಿಳೆ ತಾಳ್ಗೆ ;
ಶ್ರೀ ಜಯನ್ ನಿಡುಬಾಳಿ ನಮ್ಮನೊಲಿದಾಳ್ಗೆ ;
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ.

೨

(ಶ್ರೀಮಾನ್ ಕೆ. ವಿ. ಪುಟ್ಟಪ್ಪ, ಎಂ.ಎ. ಅವರಿಂದ)

ವ್ಯಕ್ತಿಗಿಪ್ಪತ್ತೈದು ವರ್ಷಗಳ್ ಪಿರಿದಾದೊಡಂ
ವಿಶ್ವವಿದ್ಯಾನಿಲಯದಂತಪ್ಪ ಸಂಸ್ಥೆಗದು
ಬರಿಯಲ್ಪವೈಸ ! ಅದರಿಂದಮಾಂ ಮುಂದೆ ಆ
ನಿನ್ನ ಸ್ವರ್ಣೋತ್ಸವಕೆ ಮುಡಿಪನಿಟ್ಟಿಹೆನೊಂದು
ಪರಿಣತಶ್ರೇಷ್ಠಪ್ರಗಾಥಮಂ. ಇಂದುಲಿವ
ಈ ಕವನವೊಂದು ಶಾಸ್ತ್ರಕ್ರಿಯಾಕರ್ಮದೊಲ್

ಬರಿಸಂಪ್ರದಾಯವೆಂದರಿವುದೌ, ಓ ನನ್ನ
ವಿಶ್ವವಿದ್ಯಾಮಾತೆ. ಶಿಶುತನವನುತ್ತರಿಸಿ
ಬಾಲ್ಯಕೌಮಾರಗಳ ನಡುವೆ ನಡೆವೀ ನಿನಗೆ
ನಾಂ ಚಿರಕೃತಜ್ಞನೆಂ : ಬುದ್ಧಿಗನ್ನವನಿತ್ತೆ ;
ಹೃದಯಕಮೃತವನಿತ್ತೆ ; ಮೇಣಂತೆ ಲೌಕಿಕದ
ಜೀವಿತಕ್ಕಾಶ್ರಯವನಿತ್ತೆ. ನಿನ್ನ ಬೆಳಕಿಗೆ
ಪೊಕ್ಕು, ಕವಿ ಋಷಿ ಕೃತಿಯ ರಸಸುಖವನೀಂಟಿದೆನ್ ;
ನಾನಾ ಮುಖದ ದಿವ್ಯವಿಜ್ಞಾನಿಗಳ ಜಗಜ್-
ಜಿಜ್ಞಾಸೆಯಿಂ ಗುಹ್ಯಸೃಷ್ಟಿಯ ರಹಸ್ಯಮಂ
ಸವಿದೆನಾಂ, ಬುದ್ಧಿಯ ಕ್ಷುರಸ್ಯ ಧಾರಾ ನಿಶಿತ
ಜಿಹ್ವೆಯಿಂ. ಮೇಣ್, ನರರ ನಡುವಿರ್ದೊಡಂ ದಲ್
ಚಿರಂತನೇಕಾಂಗಿ ನಾಂ, ಪಡೆದೆನೊರ್ವನ ಪುಣ್ಯ
ಸಹವಾಸಮಂ. ದಿವಂಗತನಾದನಾತನುಂ,
ಕವಿಯ ಕೃತಿಗಳನೊಲಿದು ಕೇಳ್ವ ಲೋಕಕೆ ಕಿವುಡು
ಬರ್ಪಂತೆ. ಓ ನನ್ನ ವಿಶ್ವವಿದ್ಯಾಜನನಿ,
ಹೇ ದೇವಿ, ಒರೆದಾ ಸಮಸ್ತ ಕೃಪೆಗಳಿಗೆ ನಾಂ
ನಿನಗಿದೊ ಕೃತಜ್ಞನೆಂ. ಮಣಿವೆ ಸಾಷ್ಟಾಂಗದಿಂ
ನಿನ್ನಡಿಗೆ, ಹರಕೆಯಂ ಬೇಡಿ.
ಕೇಳ್, ಆದೊಡಂ,
ನಿನ್ನ ಕವಿಶಿಶುವ ಪೆರ್ಮೆಯ ನುಡಿಗಳಂ ; ಕ್ಷಮಿಸಾ
ಕಿಡಿಗಳಂ : ದೇವಿ, ನೀನೊರ್ವಳಲ್ತೆನ್ನೆರ್ದೆಯ
ಗುಡಿಯ ಗೋಪುರ ಕೃತಿಗೆ ಕಾರಣಳ್. ನಿನಗಿನ್
ಮಿಗಿಲ್ ಇರ್ಪುವಾ ಗಿರಿಅರಣ್ಯ ಸಹ್ಯಾದ್ರಿಯುಂ,
ಮತ್ತಮಾ ದಕ್ಷಿಣೇಶ್ವರ ದೇವಮಾನವನ
ತಪಕೆ ಸಿದ್ಧಿಗೆ ಮೆಯ್ಯುವೋಲಿರ್ಪ ಗುರುಮಂದಿರಂ.
ನೀಂ ಬೋಧಿಸಿದ ತತ್ತ್ವಗಳನಲ್ಲಿ ಸಾಧಿಸಿದೆ
ನಾಂ. ಆ ಸ್ವತಂತ್ರತೆಗೆ ನೀನಿನ್ನು ಮಾಸೆಯಿಂ
ನೋಂತಿರ್ಪೆಯಾ. ಸಂಕಟದ ನೊಲ್ಲಿದಂ, ತಾಯೆ,
ಕೇಳ್ : ನೀನಸ್ವತಂತ್ರೆ ! ನಾಡಿಗಿಲ್ಲದುದೆಂತು

ನಿನಗೆ ದೊರೆಕೊಳ್ಳುವುದೌ, ಜನನಿ? ನಮಗಿಲ್ಲದುದು
ನಿನಗೆಲ್ಲಿ? ನಾಮಲ್ತೆ ನಿನ್ನ ಸಿರಿ? ಮುಂದೆ ಆ
ನಿನ್ನ ಸ್ವರ್ಣೋತ್ಸವಕ್ಕಾದೊಡಂ ಕವಿಯು ಈ
ಹೆಬ್ಬಯಕೆ ಕೈಗೂಡಿ, ಇಂದಿನ ಬೃಹನ್ನಿಶೆಯ
ನೇಮಿಯಿಂ ಮೂಡಿ ಬಹ ಸ್ವಾತಂತ್ರ್ಯಸೂರ್ಯನಾ
ದಿವ್ಯ ಜ್ಯೋತಿಃಸ್ಫೂರ್ತಿಯಿಂದೆನ್ನ ಅಂದಿನಾ
ಪಕ್ವತರ ಮಧುರ ಪರಿಣತ ವಾಣಿ ಉಲಿವವೋಲ್
ಮಹತ್ತರಪ್ರಗಾಥಮಮಂ, ಆ ಸರಸ್ವತಿ, ದೇವಿ,
ಸಿರಿಗನ್ನಡಂ ಗೆಲ್ವವೋಲೆಮಗೆ ದಯೆಗೆಯ್ಗೆ!

೩

(ಶ್ರೀಮಾನ್ ತೀ. ನಂ. ಶ್ರೀಕಂಠಯ್ಯ, ಎಂ.ಎ., ಅವರಿಂದ)

ಜನತೆಯಜ್ಞಾನರುಜೆ ಹರಿಯಲೆಂಬಾಸೆಯಲಿ
ಶಾರದೆಯ ಸನ್ನಿಧಿಯಲಿ
ಹಣತೆಯಿದನಂದು ಹೊತ್ತಿಸಿ ಮುಡಿಪುಕಟ್ಟಿದರು—
ಬೆಳಗು ಹಬ್ಬೆಂದು ಹರಸಿ.

ವರುಷವಿಪ್ಪತ್ತೈದು ಸಂದು, ಬಂದಿತು ಹಬ್ಬ:
ದಿನದಿನಕೆ ಕಾಂತಿಯೇರಿ
ಉರಿಯುತಿದೆ ಸೊಡರು, ಕುಡಿನಿಮಿರಿ ಕಳೆಬೀರುತಿದೆ,
ಹರಿಯುತಿದೆ ನಾಡ ಜಡತೆ.

ಇದರ ಪರಿಮಳತೈಲವುಡುಗಿ ಹಸಗೆಡದಂತೆ,
ಮಸಿಕಪ್ಪು ಕಟ್ಟದಂತೆ,
ಹದಗೆಟ್ಟ ಗಾಳಿಗಳು ಬೀಸಿ ನಂದಿಸದಂತೆ,
ಕರುಣಿಸಲಿ ದೇವಿ ವಾಣಿ.

ಜನತೆಯನು ತಮದಿಂದ ಬಿಡಿಸಿ ಬೆಳಕಿಗೆ ನಡಸಿ,
ಜನತೆಯಕ್ಕರೆಯ ಗಳಿಸಿ,
ಮಿಸುಗುತಿರಲೀ ನಮ್ಮ ವಿಶ್ವವಿದ್ಯಾನಿಲಯ-
ವೆಸುವ ನಂದಾದೀವಿಗೆ.

೪

(ಶ್ರೀಮಾನ್ ಕೆ. ಎಸ್. ಧರಣೇಂದ್ರಯ್ಯ, ಎಂ.ಎ., ಬಿ.ಟಿ., ಅವರಿಂದ)

ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರು ಸರಸ್ವತಿಯ ವರಪ್ರಸಾದವನ್ನು ಪಡೆದು ಅವಳನ್ನು ಕನ್ನಡನಾಡಿಗೆ ಕರೆದುಕೊಂಡು ಬರುವರು.

ಶಾರದೆಯೇರಿದ ತೇರಿನ ಸಾರಥಿ
ಸಾರಾತ್ಮ ಸಿರಿಕೃಷ್ಣರಾಯ |
ತೋರುವ ಸೋಡಲ್ಲಿ ಬೆಳ್ಗೊಡೆ ಹಿಡಿಯುತ
ಧೀರ ವಿಶ್ವೇಶ್ವರ ಮಂತ್ರಿ ||

ಬಿರುದು ಬಾವಲಿಗಳ ಧ್ವಜಮಾಲಿಕೆಗಳ
ಭರದಿಂದ ಹಿಡಿದು ಘೋಷವನು |
ಹರುಷೋತ್ಕರದಲಿ ಮಾಡುತ ಬರುತಿಹ
ಹಿರಿಯರ ಗುಂಪನು ನೋಡು ||

ಹಿರಿಯ ನಂಜುಂಡಯ್ಯ ಗುರುನಾಥ ಶೀಲನು
ಪರಮ ಪ್ರಖ್ಯಾತ ಮೆಟ್ಕಾಫ |
ವರರಾಜಕಾರ್ಯಪ್ರವೀಣನು ಸುಬ್ಬರಾಯ
ಬರುವರು ಚಾಮರಹಿಡಿದು ||

ಇಂಗ್ಲೀಷು ಕನ್ನಡ ಸಕ್ಕದ ತೆಲುಗಿನ
ಮಂಗಳ ತಮಿಳ ಪಂಡಿತರು |
ಸಿಂಗರದುರ್ದುವಿನ ಪಾರ್ಶಿಯರೇಬಿಯ
ದಿಂಗಿತ ಪಾರಗಾಮಿಗಳು ||

ವಿಜ್ಞಾನ ತೇಜಸ್ವಿ ತತ್ತ್ವಪರಾಯಣ
ಬಿಜ್ಜೆಯ ಶಾಸ್ತ್ರೋನ್ನತನು |
ಉಜ್ಜುಗ ಕಸುಬಿನ ಶಾಖಾಧಿಕಾರಿಯು
ಸಜ್ಜಿನಿಂದೈತರುತಿಹರು ||

ಅರ್ಥಶಾಸ್ತ್ರಜ್ಞ ಮನಶ್ಶಾಸ್ತ್ರಕೋವಿದ
ವರ್ತಕಕಲೆಯಧಿಪತಿಯು |

ಉತ್ತಮ ರಾಜ್ಯಾಂಗನೀತಿವಿಖ್ಯಾತರು
ಸುತ್ತುಗೊಂಡಿಹರಿಲ್ಲಿ ನೋಡು ||

ಇತಿಹಾಸಕಾರ ಶಾಸನಗಳ ರಕ್ಷಕ
ಮತಿಯುತ ಸಂಶೋಧಕನು |
ಜೊತೆಜೊತೆಯಾಗಿ ವಾಗ್ದೇವಿಯ ಹೊಗಳುವ
ರತಿಶಯದುತ್ಸಾಹದಿಂದ ||

ಬಂದಳು ವಾಗ್ದೇವಿ ಕನ್ನಡನಾಡಿಗೆ
ತಂದಳು ವಿಧವಿಧ ಫಲವ |
ನಿಂದಳು ಸಿರಿಕೃಷ್ಣರಾಯನ ಪುರಿಯೊಳು
ಹೊಂದುತ ಪರಮಸಂತಸವ ||

ಮುದದಿ ವಾಣಿ ನೆಲಸಲಂದು
ಸೊದೆಯು ಸೂಸಿ ಹರಿಯಲಂದು
ಪದುಳ ಕನಡ ಬುವಿಯೊಳಿಂದು ರಜತವಾಯಿತು
ಸದಯ ಕೃಷ್ಣಭೂಪನಿಂದ ಮುದವು ಮೂಡಿತು ||

ಇಪ್ಪತ್ತೈದು ವರುಷದಿಂದ
ಲೊಪ್ಪವಾಗಿ ನಮ್ಮ ನಾಡು
ಒಪ್ಪಪಡೆದು ಬಾಳಿ ಸುಖದಿ ಮಹಿಮೆಗಳಿಸಿತು
ಚಪ್ಪನಾರು ನಾಡುಗಳಿಗೆ ದಾರಿತೋರಿತು ||

ವಿಶ್ವದರಿವನೆಮಗೆ ಕೊಟ್ಟು
ವಿಶ್ವದಲ್ಲಿ ಮಹಿಮೆವೆತ್ತು
ವಿಶ್ವ ಕನ್ನಡಕ್ಕೆ ತಾನು ಹಿರಿಮೆಗಳಿಸಿತು
ವಿಶ್ವನಾಥನಾಗರಕ್ಕೆ ಪಾತ್ರವಾಯಿತು ||

ಕಿರಿಯ ಕನ್ನಡಿಗರನೆತ್ತಿ
ಹಿರಿಯ ಗುರಿಯ ಮನದೊಳೊತ್ತಿ
ಅರಿವ ತಂದು ಪೊರೆದು ಬೆಳಸಿ ವರವ ನೀಡಿತು
ಸುರರ ನಾಡಿದೆಂಬ ಹೆಸರ ಗಳಿಸಿ ಮೆರೆಯಿತು ||

ವರಕವೀಶಸಾಹಿತಿಗಳ
ಚರಿತತತ್ತ್ವಕೋವಿದರನು
ಮೆರೆವನೇಕ ಶಾಸ್ತ್ರಗಳಲಿ ನುರಿತ ನಿಪುಣರ
ಎರಕಹೊಯ್ದು ದೊರಕಿಸುತ್ತ ಪರಮಪುರುಷರ ||

ಜಯಚಾಮರಾಜನು ಜಯಶೀಲನಾಗಲಿ
ಜಯಿಸಲಿ ಮಾಧವಮಂತ್ರಿ
ಜಯಹೊಂದಿ ಬಾಳಲಿ ವಿಶ್ವವಿದ್ಯಾಲಯ
ಜಯಮೂರ್ತಿ ಯಿಾಶನ ದಯೆಯಿಂ ||

೫

(ಶ್ರೀಮಾನ್ ಜಿ. ಪಿ. ರಾಜರತ್ನಂ, ಎಂ.ಎ., ಅವರಿಂದ)

ಶ್ರೀಮನ್ನಾಲ್ವಡಿ ಕೃಷ್ಣರಾಜರ ಮಹಾಕಾರುಣ್ಯಕಲ್ಪಾಂಘ್ರಿಪಂ
ಸೀಮಾತೀತಮದರ್ಕೆ ಪತ್ತಿ ಲತೆಗಳ್ ನಾನಾಮಹಾಸಂಸ್ಥೆಗಳ್
ಜೋಮಾಲಾವಳಿಯಂತೆವೋಲ್ ಮಿಸುಗುಗುಂ ಮೇಣಾಮಹಾನಂತದೊಳ್
ಹೈಮಾಂಶುಪ್ರತಿಮಂ ಲತಾಭಗಣದೊಳ್ ಶ್ರೀವಿಶ್ವವಿದ್ಯಾಲಯಂ.

ಜನಪಂ ದಿನಪಂ ಮೇಣವ
ನನುಜಾತನುಮಾ ಸುಧಾಂಶುವಿದೆ ದಲ್ ವ್ಯೋಮಂ
ಎನೆ ಕೃಷ್ಣನೃಸಿಂಹಾಂಕರಿ
ನನುಗೊಂಡೆಸೆದತ್ತು ವಿಶ್ವವಿದ್ಯಾನಿಲಯಂ

ಗಿರಿ ಗಡ ಚಾಮುಂಡೇಶ್ವರಿ
ಗರವಿಂದಾಲಯೆಗೆ ರಾಜ್ಯಮಾ ಸರಸತಿಗಂ
ಇರುವೆಡೆಯೆ ವಲಂ ನಿಮ್ಮಾ
ದೊರೆ ಜಯಚಾಮೇಂದ್ರ ವಿಶ್ವವಿದ್ಯಾನಿಲಯಂ

ಸಂದಿರ್ಪತ್ತೈದಬ್ದದ
ಕುಂದದ ವಿಶ್ವೇಶ್ವರಾರ್ಯ ಸಚಿವರ ಸಾಸಂ
ತಂದಿಟ್ಟ ವಿಶ್ವವಿದ್ಯಾ
ಮಂದಿರರವೆಗೀ ರಜತಮಹೋತ್ಸವಹಾಸಂ

ಪಥಮಿಲ್ಲದಲ್ಲಿ ನಡೆಗುಮೆ
ರಥಮಾ ನಡೆಗಾ ರಥಿಕನೆ ಕಾರಣಮದರಿಂ
ಪ್ರಥಿತರ್ ನಂಜುಂಡಾರ್ಯರ್
ಪ್ರಥಮ ಸ್ಥಾನಪತಿ ವಿಶ್ವವಿದ್ಯಾಲಯಮಿದಾ

ವಂಗದೇಶದ ಸಿಂಗರಖಿಲ ವಿದ್ಯಾಪಾ
ರಂಗತರಸಮಾನ ಶೀಲರ್
ಸಂಗತಿಗೊಳಿಸಿದರೆಮ್ಮ ಕನ್ನಡಕು
ತ್ತುಂಗತೆಯನು ಸ್ಥಾನಪಾಲರ್

ಸ್ಥಾವರವಾಗದೆ ಜಂಗಮವಪ್ಪುದೆ
ಜಿನರ ಬುದ್ಧರ ರಾಜಮಾರ್ಗ
ಈ ವಿಶ್ವವಿದ್ಯಾನಿಲಯಕದೇ ಮಾರ್ಗ
ಮನು ಸುಬ್ಬರಾಯರಿನಾಯ್ತು

ಪಳಿಕಿನ ಕೀರ್ತಿ ತಂಬೆಳಕಿನ ಮೂರ್ತಿ ಸ-
ಮ್ಮೊಳಬೆಳಕಿನ ಸರ್ವಸ್ಫೂರ್ತಿ
ಕಳೆಕೊಟ್ಟು ಬೆಳೆಸಿದರೆಳೆಯ ಕನ್ನಡಕುಡಿಯ
ತಳಕಿನ ಸಿರಿ ವೆಂಕಣ್ಣಯ್ಯ

ಕನ್ನಡಾಂಗ್ಲಾದ್ವೈತಿ ಕನ್ನಡದೊಳು ಸುಪ್ರ-
ಪನ್ನ ಕನ್ನಡ ಮುಖ್ಯಪ್ರಾಣ
ಮುನ್ನಡೆಯಿತು ಸಿರಿಗನ್ನಡವವರಡೆ
ಬೆನ್ನೊಳೆ ಶ್ರೀಕಂಠವರರ

ಆದಿ ಅಂತಗಳಿಲ್ಲದೀ ದಿವ್ಯನಾಮಾಂ-
ಭೋಧಿಯನಳೆಯಲೆನ್ನಳವೆ
ಸಾಧನೆಯಿದು ಸಲ್ಲದೆಂದು ಸಿಲ್ಲಿಸುವೆನು
ಭೇದವಾರೊಳಮೆನಗಿಲ್ಲ

ಸರ್ವಕಾಲಕು ಮುಂದೆ ಸ್ವರ್ಣವಜ್ರೋತ್ಸವಾದಿ
ಪರ್ವಾಭಿಯೋಗನವಹುಂತೆ

ಪರ್ವಿಸಲೀ ವಿಶ್ವವಿದ್ಯಾನಿಲಯವನು
ಕರ್ವುವಿಲ್ಲನ ತಂದೆ ಬೆಳೆಸಿ

೬

(ಶ್ರೀಮಾರ್ಕ್ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ. ಅವರಿಂದ)

ಇದು ನಮ್ಮ ವಿಶ್ವವಿದ್ಯಾಲಯದ ಪಂಚವಟಿ
ಕನ್ನಡಿಗರಧಿದೇವಿ ತಪ ನಿಂದ ಪರ್ಣಕುಟಿ.
ಇದು ವೇದಿ ಕನ್ನಡದ ರಸವಿದ್ಯೆಯೋಜರಿಗೆ
ಇದು ಬೋಧಿ ಕನ್ನಡದ ಸಿದ್ಧಾರ್ಥರೆಲ್ಲರಿಗೆ
ಮೇಣಿದು ಕುರುಕ್ಷೇತ್ರ ಕನ್ನಡದ ಪಾರ್ಥರಿಗೆ
ಇದು ಪವಿತ್ರ ಕ್ಷೇತ್ರ ಜ್ಞಾನ ಗಂಗಾತೀರ್ಥ.
ಈ ಜ್ಞಾನ ತೀರ್ಥದಲಿ ಮಿಂದು ಜನ ಮಡಿಯುಟ್ಟು
ಈ ತಾಯಿಯಡಿಯಲ್ಲಿ ನಿಂದು ಜನ ಮುಡಿಯಿಟ್ಟು
ತೃಷೆ ನೀಗಿ ಕ್ಷುಧೆ ನೀಗಿ ಪೂತಾತ್ಮರೆನಿಸಿ
ಬಾಳುತಿಹರೊಲವಿನಿಂ ಕೃತಕೃತ್ಯರೆನಿಸಿ.

ಇಲ್ಲೆ ನಾಗರಿಕತೆಯು ತೂಗುಯ್ಯಲಾಡುವುದು
ಇಲ್ಲೆ ಸಂಸ್ಕೃತಿಯ ಶಿಶು ಪಾಲುಂಡು ಬೆಳೆಯುವುದು.
ರಾಜ ಪ್ರಜೆ ನಾಡು ನುಡಿಗಳ ಸೇವೆ ತಮದೆಂದು
ನೆಲದೇವಿಮಕ್ಕಳುಗಳಾಣೆಕೊಳ್ಳುವುದಿಲ್ಲೆ
ನುಡಿದೇವಿಭಕ್ತಜನ ಮುಡಿಪುಕಟ್ಟುವುದಿಲ್ಲೆ.
ಬಹುಜನದ ಬಹುಮತದ ಹಿತದ ಬೆಳಗಿಲ್ಲೆ ಮಳೆ-
ಯಾಗುವುದು; ಬಹುನಡೆಯ ಬಹುನುಡಿಯ ಜನದ ಕೆಳೆ-
ಯಿಲ್ಲೆ ಮೊಳೆದೋರುವುದು; ಬೆಳೆಯು ಕುಡಿಯೊಡೆಯುವುದು.
ಇಲ್ಲೆ ಸ್ವ-ಪರ ಕ್ಷೇಮ ಸಂಪತ್ಸಮೃದ್ಧಿ
ಇಲ್ಲೆ ಇಹ ಪರಲೋಕದಾನಂದ ಋದ್ಧಿ.

ತ್ಯಾಗ ಭೋಗವನಿಲ್ಲಿ ಕೈಹಿಡಿದು ನಡೆಸುತಿದೆ
ಚಿತ್ತ ಕರ್ಮವನಿಲ್ಲಿ ಧರ್ಮಪಥಕೊಯ್ಯುತಿದೆ

ಸಿದ್ಧಿ ಸಾಧಕರನಾಲಿಂಗಿಸುತ್ತಿಹುದಿಲ್ಲಿ
ಬುದ್ಧಿ ಭಾವುಕರನಾಕರ್ಷಿಸುತ್ತಿಹುದಿಲ್ಲಿ.
ಅವಿದ್ಯೆಯಂ ವಿದ್ಯೆ ಅಜ್ಞಾನಮಂ ಜ್ಞಾನ
ತಮದಂಧವನು ಜ್ಯೋತಿ ಕಾಳರಾತ್ರಿಯನರುಣ
ಕಳನಿಂದು ಗೆಲ್ಲುತಿಹರಾ ಗೆಲವಿನೋಲಗದಿ
ನಮ್ಮ ಶಾರದೆ ತನ್ನ ಶಿಷ್ಯರಂ ಕರೆದು
ಹರಸುವಳು ಮಕ್ಕಳನು ಪ್ರೀತಿಯಂ ಮೆರೆದು.

ಕವಿಗಳಂ ಪಡೆದೆ ರಸಋಷಿಗಳಂ ಪಡೆದೆ
ಜ್ಞಾನಿಯಂ ಪಡೆದೆ ವಿಜ್ಞಾನಿಯಂ ಪಡೆದೆ
ವೇದಶಾಸ್ತ್ರಾಭ್ಯಾಸನಿಷ್ಣಾತರಂ ಪಡೆದೆ
ವಾದಿ ವಿದ್ಯಾನಿಪುಣ ವಾಗ್ಮಿಗಳ ನೀಂ ಪಡೆದೆ
ಗಮಕ ಗಾನ ವಿನೋದ ವಿದ್ವಾಂಸರಂ ಪಡೆದೆ
ಇತಿಹಾಸವೇತ್ತರಂ ಶಾಸ್ತ್ರಸಂಶೋಧರಂ
ಪಡೆದೆ ನೀನೆಲ್ಲರಂ, ನಿನ್ನ ಬಳಗಂ ಪಿರಿದು
ಓ ತಾಯೆ! ಸರಸತಿಯೆ ಕನ್ನಡಿಗರರಸಿತಿಯೆ
ಚೆನ್ನ ಮಕ್ಕಳ ಪಡೆದ ತಾಯಿ ನೀನಮ್ಮ!
ನಿನ್ನ ತೇಜದ ಸೊಡರ ಕುಡಿಗಳಾವಮ್ಮ!

ಕಳೆದ ಇಪ್ಪತ್ತೈದು ವರುಷಗಳ ಹಿಂದಿಲ್ಲಿ
ಕನ್ನಡದ ರಾಜಋಷಿ ತೆರೆದ ವಿದ್ಯಾಲಯಂ
ಅವನ ತಪ ಅವನ ಕೃಪೆ ಅವನ ಪುಣ್ಯಂ ಸಂದು
ತನ್ನ ಹುಟ್ಟಿನ ಬೆಳ್ಳಿಯೊಸಗೆ ಹಬ್ಬದೊಳಿಂದು
ಕನ್ನಡರಮಾರಮಣ ಯಾದವಕುಲೋತ್ತುಂಗ-
ನೆಮ್ಮೊಡೆಯ ಜಯಚಾಮರಾಜೇಂದ್ರನಾಳಿಕೆಯ
ಕರ್ಮಬಲದಲಿ ನಿಂದು ಗುಡಿಗಟ್ಟಿ ಮೆರೆಯುತಿದೆ.
ಈ ಮೆರೆತದಲಿ ನಾವು ನಮ್ಮ ತಾಯುಡಿಯಲ್ಲಿ
ನಲಿದಾಡುತಿಹೆವಿಂದು ಹರ್ಷದಿಂದಾಡಿ
ಹಳೆ ನೆನಪು ಮರುಕೊಳಿಸಿ ಹೊಸ ಆಸೆ ಮೂಡಿ.

ಗರಿಮೆಯಲಿ ಹಿರಿಮೆಯಲಿ ಚೆಲುವಿನಲಿ ಚದುರಿನಲಿ
ವಿದ್ಯೆಯಲಿ ಬುದ್ಧಿಯಲಿ ಸಿದ್ಧಿ ಸಾಧನೆಗಳಲಿ
ನಯ ವಿನಯ ನೀತಿಯಲಿ ರುಚಿಯು ಸವಿಮಾತಿನಲಿ
ನಿನ್ನ ಮಕ್ಕಳು ನಾವು ನಿನ್ನ ಹಾದಿಯ ನಡೆದು
ನಿನ್ನ ಕೀರ್ತಿಧ್ವಜವನೆತ್ತಿ ಹಿಡಿವೆವು ತಾಯೆ.
ಬೆಳ್ಳಿಹಬ್ಬದ ಒಸಗೆ ಹಬ್ಬುವೀ ಬಳ್ಳಿಯಲಿ
ಕುಡಿಯೊಡೆದು ದಾಂಗುಡಿಯನಿಟ್ಟು ನನೆಕೊನೆವೋಗಿ
ಸ್ವರ್ಣಮಹೋತ್ಸವಗಳಾನಂದ ಕುಸುಮಿಸಲಿ.
ತಾಯ್ ಬಾಳಿ, ನುಡಿ ಬಾಳಿ, ನುಡಿಯ ಗುಡಿ ಬಾಳಿ
ಚಿರಮಿರಲಿ ತಾಯ್ನೆಲದ ದೊರೆ ನಮ್ಮನಾಳಿ !

೭

(ಶ್ರೀಮಾನ್ ಎಲ್. ಗುಂಡಪ್ಪ, ಎಂ.ಎ. ಅವರಿಂದ)

ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸುದ್ದಿ
ಹಲವು ಹಳನೆನಪುಗಳ ಮರುಕೊಳಿಸುತಿಹುದು.
ಆ ನೆನಪು ಮಗುಮಗುಳೆ ಮನವಲುಗಿ ಮೇಲೆದ್ದು
ಹಲವು ಹೊಸ ಬಯಕೆಗಳ ಮುಂದಿಡುತಲಿಹುದು.

ಎದೆಯೊಳಗೆ ಹೆಬ್ಬಯಕೆಗಳ ತುಂಬಿಕೊಂಡು
ಬಗೆಯೊಳಗೆ ಹೊಂಗನಸುಗಳ ಕಂಡು ಕಂಡು
ಹಿಗ್ಗಿನಲಿ ಹದಿನಾರು ವರ್ಷಗಳ ಹಿಂದೆ
ವಿಶ್ವವಿದ್ಯಾಲಯದ ಬಾಗಿಲಿಗೆ ಬಂದೆ.

ಮೈಸೂರು ನಗರದಲಿ ನೆಲೆಗಾಣದಲೆದು
ಕಡೆಗನಾಥಾಲಯದಲೆಡೆದೊರೆಯೆ ನಲಿದು
ತಾತಯ್ಯನಾಶ್ರಯದಿ ಕಳವಳವ ಕಳೆದು
ರಾಜ ಕಾಲೇಜ ಸೇರಿದೆನು ಮನವೊಲಿದು.

ಮನಗತ್ತಲಳಿಪ ನಂದಾದೀಪದಂತೆ
ಬಾಳ ದಾರಿಯ ತೋರ್ಪ ಕೈಗಂಬದಂತೆ

ಕುಗ್ಗಿದೆಗೆ ನೆಚ್ಚೂಡುವೂರುಗೋಲಂತೆ
ಮೆರೆವ ಗುರುಗಳ ಪಡೆದೆ ಕೆಳೆಗಳಸು ಕಂಡೆ.

ಗವಿಬಾಗಿಲಲಿ ನಿಂದ ಮೃಗರಾಜನಂತೆ
ಹಿಡಿನೋಟವನು ಬೀರಿ ಪಾಠಜಗುಲಿಯಲಿ
ಅತ್ತಿತ್ತ ಸುತ್ತುತ್ತ, ಗುಡುಗುದನಿಯಿಂದ,
ಎಲ್ಲ ಕಣ್ ತಮ್ಮಲ್ಲೆ ನೆಲೆಸಿಲ್ಲುವಂತೆ
ಮನಸೆಳೆದು ತಿಳಿವೂಡಿ ತಿಳಿನುಡಿಗಳಿಂದ,
ನೆಲಸಿ ನಿಂದಿಹರೆನ್ನ ಚಿತ್ತಭಿತ್ತಿಯಲಿ
ಸುಬ್ಬರಾಯರು ಅರ್ಥಶಾಸ್ತ್ರವನು ಕಲಿಸಿ,
ಶ್ರೀಯವರು ಷೇಕ್ಸ್‌ಪಿಯರ ನಾಟಕವನೊಲಿಸಿ.
ವೇದಋಷಿಗಳ ಮಾಗಿದರಿವ ತಳೆದವರು,
ಶಾಂತಿಸೂಸುತ ಮನದ ಕೊಳೆಯ ತೊಳೆದವರು,
ಗುರು ದೇವರೆಂಬ ಭಾವವನುಕ್ಕಿಸಿದರು
ಸಂಸ್ಕೃತದ ಹಿರಿಯ ಗುರು ಹಿರಿಯಣ್ಣನವರು.

ಮತ್ತೊಬ್ಬ ಗುರುವಿದ್ದರೆನಗಿಲ್ಲಿ, ಮೌನಿ.
ಹೊರನೋಟವನು ಹರಿಯಬಿಡದಿದ್ದ ಧ್ಯಾನಿ,
ಒಳಗಣ್ಣ ತೆರೆದು ಸತ್ಯವ ಕಂಡ ಜ್ಞಾನಿ,
ಕಂಡ ಸತ್ಯವ ಕಾಣಿಸಿದ ಹಿರಿಯ ದಾನಿ.
ಸುಳಿಯದಾಡಂಬರದ ಗಾಳಿಯವರೆಡೆಗೆ,
ಸೋಯಿಸುವ ಸಟೆಯ ನಡೆನುಡಿಯವರ ಕಡೆಗೆ.
ಕುಡಿನೋಟವೊಂದು ಮೆಲುನುಡಿಯೊಂದು ಸಾಕು ;
ಎದೆಯ ದುಗುಡವ ನೀಗಲಿನ್ನೇನು ಬೇಕು ?
ಗುರುವಾಗಿ, ಕೆಳೆಯಾಗಿ, ಹಿರಿಯಣ್ಣನಾಗಿ,
ಕಷ್ಟವಿರೆ ನೆರವಾಗಿ, ತಂದೆ ತಾನಾಗಿ,
ಹಲವು ಪರಿಯಲಿ ಬಾಳ ಗುರಿದೋರಿದವರು
ಎಳನಗೆಯ ತಳಕು ವೆಂಕಣ್ಣಯ್ಯನವರು.
ಅವರ ನಗುಮೊಗವಿಲ್ಲಿ ಕಾಣದಿಹುದಿಂದು.
ಅವರೆಣೆಯನಿನ್ನೊಮ್ಮೆ ಕಾಣುವುದದೆಂದು ?

*   *   *

ಕನ್ನಡದ ಸಾಹಿತ್ಯಬಾಂದಳದಿ ಮತ್ತೆ
ಹೊಸ ನೇಸರುದಿಸಿರಲು ಕಂಡು ಕಣ್‌ತೆರೆದು
ಕಿರಿಯ ಕಾಣಿಕೆಯರ್ಘ್ಯವೆತ್ತಿ ನಿಂದುದು
ಹಿರಿಯೊಲ್ಮೆ ಸಲ್ಮೆ ಕೆಳೆಗಳ ಕಂಡೆನಂದು.
ಒಡನಾಡಿ ಒಡನೋಡಿ ಸುಖದುಃಖಗಳನು
ಒಡನುಂಡು ಗಳಿಸಿದೆನು ಹಿತದ ಗೆಳೆಯರನು.
ಅವರನೆಲ್ಲರನಿಂದು ನೆನೆದು ಹಿಗ್ಗುವೆನು.
ಹಿಗ್ಗಿನಲಿ ಧನ್ಯನೆಂದೆಣಿಸಿ ತಣಿಯುವೆನು.

ನಾಡು ನುಡಿ ಕನ್ನಡದ ಗುಡಿಯಾಗಲೆಂದು
ನುಡಿ ಹಬ್ಬಿ ಹಲವರಿವು ಕೊನರೊಡೆಯಲೆಂದು
ಅರಿವಿಂದ ನಾಡಿಗರು ಕಣ್‌ತೆರೆಯಲೆಂದು
ತೆರೆದು ಹೊಸಬಾಳ ಹಸನಾಗಿಸಲಿ ಎಂದು
ಒಡೆಯರೀ ವಿಶ್ವವಿದ್ಯಾಲಯವನಂದೆ
ತೆರೆದರಿಪ್ಪತ್ತೈದು ವರ್ಷಗಳ ಹಿಂದೆ.
ಅದುವೆ ಗುರಿ ಗುರಿಯಾಗಿ ಕಾಣುತಿದೆ ಮುಂದೆ.
ಗುರಿಮುಟ್ಟಿ ಸೊಗ ಬರಲಿ ನಮ್ಮ ಕಣ್ಮುಂದೆ.

———

೮

(ಶ್ರೀಮಾನ್ ಎಂ. ವಿ. ಸೀತಾರಾಮಯ್ಯ, ಎಂ.ಎ. ಅವರಿಂದ)

ಶ್ರೀಕೃಷ್ಣನೃಪನ ಸಂಕಲ್ಪಮಂ ತಾನಾಂತು
ಮಂತ್ರಿ ವಿಶ್ವೇಶ್ವರಂ ನಿರ್ಮಿಸಿದ ನಿಲಯಂ
ಬೆಳೆದು ಬೆಳೆಯುತಲಿಹುದು, ಹೊಗಳೆ ಭೂವಲಯಂ,
ಜನಕೆ ತಿಳಿವನು ಕೊಡುವ ಹಿರಿಯ ನೋಹಿಯ ನೋಂತು.
ಇದರ ಬಿತ್ತರ ಪೈಮೆ ಗೈಮೆಗಳ ನಾನೆಂತು
ಬಣ್ಣಿಸಲಿ !—ಜ್ಞಾನ ವಿಜ್ಞಾನಗಳಿಗಾಗರಂ,
ಪಾಶ್ಚಾತ್ಯ ಪೌರಸ್ತ್ಯ ಸಾಹಿತ್ಯ ಸಾಗರಂ ;
ಹರಸುತಿಹಳೆಲ್ಲರನು ಶಾರದೆಯೆ ನೆಲೆನಿಂತು.
ಇಲ್ಲಿ ಕೃಷ್ಣನು ನೆಟ್ಟ ಕನ್ನಡವು ಮರವಾಗಿ

ಹಸುರುಟ್ಟು ಹೂಬಿಡಲು, ತೀಡೆ ಕನ್ನಡ ಗಾಳಿ,
ಶ್ರೀಕಂಠದಿಂದುಲಿಯೆ ಕಲಕಂಠ ತಾನೊಂದು,
"ಸುಗ್ಗಿ ಸಾರಿತು" ಎಂದು ನೆರೆದುದು ಪಿಕಾಳಿ !
ಜಯಚಾಮನಾಶ್ರಯದಿ ಕನ್ನಡಕೆ ಜಯವೆಂದು
ಹಾಡುತಿವೆ ಕೋಗಿಲೆಗಳೆಲ್ಲ ಒಕ್ಕೊರಲಾಗಿ.

೯

(ಶ್ರೀಮಾನ್ ಪು. ತಿ. ನರಸಿಂಹಾಚಾರ್, ಬಿ.ಎ. ಅವರಿಂದ)

ತಿರೆಯ ಭಾರವ ಹೊತ್ತು ಬಳಲಿರುವ ಫಣಿ ತನ್ನ
ಹೆಡೆಯೊಂದರೊಳು ಎದ್ದು ಉಳಿದುದರೊಳಾಲಸ್ಯ-
ವಡೆವಂತೆ, ಹೆರರ ಸಿರಿಬಾಳ್ತನದ ಭಾರವನು
ಶಿರದಿ ಪೊತ್ತೀ ಜನತೆ ತನ್ನ ಮಿಕ್ಕಂಗದೊಳು
ಪ್ರಾಣಮಾತ್ರಳೆ ಆಗಿ ಜ್ಞಾನಜಡತೆಯ ಪಡೆದು
ಇಲ್ಲಿ ಈ ದೇಗುಲದ ಸರಸತಿಯ ಕೃಪೆಯಿಂದ
ಬಲ್ಲತನವಾಂತಿಹಳು ತನ್ನೊಂದು ಮುಖದೊಳಗೆ
ತಾನಿಹೆನು ತನ್ನಳಲು ಹಿರಿದು ಹೊಣೆ ಹಿರಿದೆಂದು.
ಸಿದ್ಧಿಯಿಂದೆಚ್ಚರವೆ ಮಿಗಿಲಾತ್ಮ ಸುಸ್ಥಿತಿಗೆ.—
ಈ ಧರ್ಮವನು ತಿಳಿದು ಬಾಳುವರ ನಡೆನುಡಿಯ
ಮಧ್ಯಪೀಠದೊಳಿಟ್ಟು ಪೂಜಿಸಲಿಪೆವು ರೂಢ-
ವಿದ್ಯೆಗಳ ಸುತ್ತುಗುಡಿಗಟ್ಟುತೀ ಮಂದಿರದಿ.
ಇಂದಿಂತು ಮುಂದೆಂತೊ?—ಇಂದಾಗಲಿಂತೆ ಹರಕೆ:
ಜಡವಳಿದು ನಾಡು ಬದುಕಲಿ ಎಂದೆ ಎಲ್ಲರೆರಕೆ.

೧೦

(ಶ್ರೀಮಾನ್ ಎ. ಕೆ. ಪುಟ್ಟರಾಮು, ಬಿ.ಎ. ಅವರಿಂದ)

ವಿಶ್ವವಿದ್ಯಾನಿಲಯದುತ್ಸವದ ವಾರ್ತೆಯನು
ವಿಶ್ವಾಸದಿಂ ಕೇಳಿ ತಾಳಿದೆವು ಮುದವ.
ಹಿರಿಯರೇ, ಗುರುಗಳೇ, ನಿಮ್ಮೊಲುಮೆಯೋಲೆಯನು
ನೋಡಿ ಸಂತಸಮೂಡಿ ಬಂದಿಹೆವು ಬೇಗ.

ವಂದಿಪೆವು ಭಕ್ತಿಯಿಂ ಗುರುಪದಾಂಭೋಜಮಂ
ವಂದಿಪೆವು ಶಾರದೆಯ ಮಂದಿರವನಿದನು.
ಗುರುಗಳೇ ವಿಶ್ವವಿದ್ಯಾನಿಲಯ; ಆದರಿಂದ
ತಾರತಮ್ಯವ ಕಾಣೆ, ವಂದನದ್ವಯದಿ.

ಎಲೆ ವಿಶ್ವವಿದ್ಯಾಸದನ! ನಿನ್ನವದನಾಬ್ಜ-
ದೊಂದು ವಿಕಸನವಲ್ತೆ ರಜತೋತ್ಸವದಿನಂ!
ಜನನಿಯುತ್ಸವವೇನು? ಸಂಜಾತರುತ್ಸವಂ—
ಸಮವಲ್ತೆ—ನಮ್ಮಿಬ್ಬರೀ ದಿನದ ಕುಶಲಂ!

ಶಾಸ್ತ್ರಗಳನೋದಿಸಿದೆ ಕಲೆಗಳನು ಬೋಧಿಸಿದೆ
ವಿದ್ಯೆಯನು ಕೊಟ್ಟ ವಿದ್ಯಾಲಯವೆ ನೀನು!
ಸಾವು ಸುತ್ತಿದ ಬಾಳ್ಗೆ ನೀನಮೃತವನ್ನೆರೆದೆ
ಬಾಳಿಸಲಿ ಬೇರೇನ ಹಾರೈಸಬಹುದು!

ನೆನೆವೆನೀಗಲು ನನ್ನ ವಿಶ್ರಾಂತಿ ಸಮಯದಲಿ
ಲಲಿತಹರ್ಷಾಶ್ರು ತುಂಬಿದ ನಯನದಿಂದ
ನನಗೆ ಪಾಠವ ಹೇಳ್ದ ಗುರುವರೇಣ್ಯರ ಮುಖದ
ವಿಲಸದಭಿಜಾತವಾಗ್ವೈಖರಿಯ ಪರಿಯ.

ಅದು ಭಾವನೆಗೆ ಪಾವನಂ ಪ್ರತಿಭೆಗದು ಮಹಾ
ಮಂಗಲಂ ಪ್ರೇಮಧುನಿಗದು ಸುಧಾವರ್ಷಂ
ವಿದಲಿತಹೃದಂಬುಜಕೆ ಬೋಧರವಿಕಿರಣವದು
ನಮ್ಮ ಲಾಭದ ಸೀಮೆ, ಗುರುವಚನಮಹಿಮೆ.

ಸದ್ಭಾವನೆಗಳಿಂದ ಪಾವನತೆಯೊದಗುವುದು
ಸುವಿಚಾರದಿಂ ಬೆಳಗುವುದು ನಮ್ಮ ನಿಜವು.
ಕಲೆಗಳಿಂ ಶಾಸ್ತ್ರದಿಂ ನಮಗವನು ನೀನಿತ್ತೆ
ಪಾರಮಾರ್ಥಿಕವಹುದು ಬೋಧನೆಯ ಗುರಿಯು.

ವಿಶ್ವವಿದ್ಯಾಲಯವೆ, ನಿನ್ನ ರಜತೋತ್ಸವಕೆ
ಸಂದಿಹುದು ಪಾದಶತಮಾನದುನ್ನತಿಯು.

ಭಾವಿಪೆಸು—ನಿನ್ನ ಬಾಲ್ಯವು ಕಳೆದುದಸು—ಮುಂದೆ
ಬರಲಿರುವ ಯೌವನದ ಸ್ವರ್ಣಮಯದಿನವ.

ಪ್ರಾಚೀನ ಸಂಸ್ಕೃತಿಯು ವಾಹಿನಿಯು ವರ್ಧಿಪಾ
ನವಯುಗದ ಸಂಸ್ಕೃತಿಯು ಸಂಗಮದ ತೆರದಿ
ನೀನಾಗೆಲೌ ಪ್ರಯಾಗಕ್ಷೇತ್ರಸದೃಶವಹ
ಯಾತ್ರಾಸ್ಥಲಂ ವಿಶ್ವವಿದ್ಯಾನಿಲಯವೆ.

ವಿಜಯವಾಗಲಿ ಕೃಷ್ಣನೃಪನಿಟ್ಟ ಕಲ್ಪತರುಗೆ
ಕೃಷ್ಣಭೂಪನ ಸಂತತಿಯು ರಾಜರಿದ ಬೆಳೆಸಲಿ
ಈ ಮಹಾ ವಿದ್ಯಾಲಯದ ಬಾಗಿಲನು ಸಾರುವಾ
ವಿದ್ಯಾರ್ಥಿನಿಕರಕ್ಕೆ ನಿತ್ಯಮಂಗಳವಾಗಲಿ.

———

೧೧

(ಶ್ರೀಮಾನ್ ಡಿ. ಆರ್. ರಾಮಯ್ಯ, ಬಿ.ಎ. ಅವರಿಂದ)

ಜಯತು ಜಯ ಮೈಸೂರ ವಿಶ್ವವಿದ್ಯಾಮಾತೆ!
ಜಯತು ರಜತೋತ್ಸವದ ವಿಮಲ ವಿಖ್ಯಾತೆ!
ನಗೆಮೊಗದ ತಣ್ಪಿನಿಂ ನವಿನುಡಿಯ ಬಿಣ್ಪಿನಿಂ
ಬಗೆದೋರಿ ಭುವನದಲಿ ಮೆರೆವೆ ಸುಪ್ರೀತೆ.
ಬಾ ತಮ್ಮ, ಬಾ ತಂಗಿ, ರಜತೋತ್ಸವದ ಬಿಜ್ಜೆ
ಬಾನೆಡೆಯೊಳೆಸೆದಿರಲು ಯದುರಾಜ ಚಂದ್ರಮಂ
ಜಯ ಚಾಮರಾಜೇಂದ್ರನೆಡೆಗೊಂಡು ನಿಂದಿಹಂ
ಒಡನಾಡಿ, ಒಡನೋದಿ, ಕಂಗೊಳಿಸುತಿಂದು;
ಓ ಜನನಿ, ನೀಡೆಮಗೆ—ಪೆರತೇನು ಕೌತುಕಂ!
ಕೋರಿಕೆಯು ಸಂತವಿಸು ಶಾಂತಿ ಸೌರಭದಿ;
ನೀನಂದು ಪಾಲಿಸಿದ ಕುವರ ಕುವರಿಯರೆಲ್ಲ
ನೆರೆದಿಹರು ನಿನ್ನ ವೈಭವಕಾಗಿ ನಲಿದು.

ಕುಂದದನುರಾಗದಿಂ ನಂದ ದುಗುಡವ ಜಯಿಸಿ,
ಮುಂದಿ ಮಾರ್ಬಲಕೆಲ್ಲ ಸಂತಸವ ಬರಿಸಿ;

ಮುಂದಿನಂದವ ಕಾಂಬ ಚೆಂದವಿರೆ ಭೂವರಂ
ತಂದೆ ಕೃಷ್ಣ ನೃಪಾಲನೊಲಿಮೆಯಿದೆ ನಿನಗೆ!
ಕಲೆಯ ಕೈಗಾರಿಕೆಯ ಕುಶಲವಿದ್ಯೆಯ ಕಲಿತು,
ಸನುಮತಿಯ ಬಿತ್ತರಿಸಿ ಸೇವೆಯಂ ಸಲಿಸಿ;
ನೀನಿತ್ತ ಭಿಕ್ಷೆಯಂ ಶಿರದಿ ತಳೆಯುತ್ತೆ ನಡೆದು
ಮೇಳವಿಪ ಜನಪದದ ಭಕ್ತಿಯಿದೆ ನಿನಗೆ!
ಕನ್ನಡದ ಕಂದರಿಗೆ ಜೀವಮಣಿಯೌ ನೀನು!
ಇನ್ನಿತರ ಜನಪದಕೆ ದಾತೆ ನೀನು.
ಸನ್ನುತರ ನೆರವಿಯಲಿ ಸತ್ಪಾತ್ರಳೌ ನೀನು!
ಮನ್ನಣೆಯ ಸಲಿಸುವೊಡೆ ದೇವಿ ನೀನು.

ಇದೊ ನೋಡು ಸಾಹಿತ್ಯ ಸಾಮ್ರಾಜ್ಯದೋಕುಳಿಯ!
ಇದೊ ನೋಡು ಬಹುವಿಧದ ಶಾಸ್ತ್ರಗಳ ಸಿರಿಯ!
ಇದೊ ನೋಡು ಧಾರ್ಮಿಕದ ಸಂಸ್ಕೃತಿಯ ಸೀಗುರಿಯ!
ಇದೊ ನೋಡು ವಿಶ್ವತೋಮುಖಮಪ್ಪ ಕಲೆಯ!
ವರುಷವಿಪ್ಪತ್ತೈದು ಕಳೆಯುವನಿತರೊಳೆನ್ನ
ಧರೆಯ ಸಿರಿ ಪೆರ್ಚಿಸಿದೆ ಪಿರಿದು ಮೋದದಲಿ!
ಪಲವಗೆಯ ಸಂಪದದ ಮಾಳ್ಕೆಗಳ ನೆಗಪಿದೌ,
ಸಲೆ ನಿನ್ನ ಕೀರ್ತಿಯಂ ಪೊಗಳಲಳವೆ!
ಎಂತು ಭಜಿಸಲಿ ತಾಯೆ, ನಿನ್ನಂತರಂಗವಂ
ಎಂತು ತಿಳಿಯಲಿ ತಾಯೆ—ನಾನೊಬ್ಬ ಹಸುಳೆ!
ಕನ್ನಡದ ಕರಿಮಣಿಯ ನಿನ್ನ ಕೊರಳಲಿ ಕಂಡು
ಕಣ್ಣಿಗಿನಿದಾಗಿರಲು ಕುಣಿಯುವೆನು ಜನನಿ!
ಮಲೆನಾಡು ಮೈದಾನದೆಲ್ಲೆಡೆಗಳಂ ಬಳಸಿ,
ಮೆಲುಪಾದ ಕನ್ನಡದ ಕುಸುಮಗಳ ಬಿಡಿಸಿ,
ಪೂಜಿಪೆನು ಬಾರಮ್ಮ ವಿಶ್ವವಿದ್ಯಾಜನನಿ,
ಹರಸು ಘಟಿಕೋತ್ಸವದಿ ಭಕ್ತರನು ಮೆಚ್ಚಿ!

೧೨

(ಶ್ರೀಮಾನ್ ಕೆ. ಎಸ್. ನರಸಿಂಹಸ್ವಾಮಿ ಅವರಿಂದ)

ಇಂದು ನಮ್ಮ ನುಡಿಯ ಗುಡಿಯ
ಬೆಳ್ಳಿಯುತ್ಸವ;
ಇಂದು ಕವಿಯ ಕಲೆಯು ಎಲ್ಲ
ಜ್ಞಾನದುತ್ಸವ;
ಬೆಳ್ಳಿಬೆಳಕ ಬೀದಿಯಲ್ಲಿ
ಹೂವ ತೇರ ನೋಡಬನ್ನಿ;
ದಿವ್ಯಮೂರ್ತಿ ತೇರಿನಲ್ಲಿ!—
ಹಣ್ಣುದವನವೆಸೆಯಿರಿ.
ಉದಯ ರವಿಯೊ ನಾಡ ದೊರೆಯೊ—
ಯಾರು ನೋಡಿ ತೇರ ಮುಂದೆ.
ಹಾಡುತಿರುವನಾವ ಕವಿಯೊ!—
ಸುತ್ತ ಜೇನು ಮುತ್ತಿದೆ.
ಅರಳಿ ಅರಳಿ ಮಲ್ಲಿಗೆ
ಕರೆವುದೆಮ್ಮ ಸಲ್ಲಿಗೆ!

ಮೈಸೂರೆನ್ನಿ, ಕನ್ನಡವೆನ್ನಿ
ಮಲ್ಲಿಗೆಯೆನ್ನಿ, ಒಂದೆ!
ಒಡೆಯರ ಮಕುಟದ ರತ್ನವಿದೆನ್ನಿ;
ಒಡೆಯರ ಕನ್ನಡವೆನ್ನಿ!
ಇರುಳನು ಕಾಣದ ಕನ್ನಡವೆನ್ನಿ;
ಒಡೆಯದ ಕನ್ನಡವೆನ್ನಿ!
ಕವಿಗಳು ಬಳಸುವ ಭಾಷೆಯಿದೆನ್ನಿ
ಒಳಗಿನ ಹೂರಣ ಒಂದೆ!
ಸಾವಿರ ದಳಗಳ ತಾವರೆಯಂತೆ
ಬೆಳಗುವುದೀ ಗುಡಿ ಚಂದಿರನಂತೆ.
ಶಾರದೆ ಮರೆತಳು ವೀಣೆಯನಿಲ್ಲಿ;
ಅದ ನುಡಿಯಿಸುವರು ಜಾಣೆಯರಿಲ್ಲಿ.

ಶ್ರುತಿಲಯ ಬಿಡದೆ,
ರಸವನು ಹಿಡಿದೆ
ಹಾಡುತ ನಡೆವರು ಯುವಕರು ಇಲ್ಲಿ.
ಬೆಳ್ಳಿಯ ಹಬ್ಬಕೆ ಮುಂದಾಗಿ
ಅರಳಿವೆ ಹೂವೊಂದೊಂದಾಗಿ.

ಇಪ್ಪತ್ತು ವರ್ಷಗಳ ಮೇಲಯ್ದು ಸಾಗಿರಲು
ವಿಶ್ವವಿದ್ಯಾನಿಲಯ ರಂಜಿಸುವುದು.
ಓದುವರ ಗುರುವಾಗಿ ಬಾಳುವರ ಬೆಳಕಾಗಿ
ವಿಶ್ವಪ್ರೇಮದ ಮೂರ್ತಿಯಾಗಿರುವುದು.
ದೀವಿಗೆಯ ಬೆಳಕಿನಲಿ ಅಡಿಯನಿಡು, ಓ ಬದುಕೆ!
ಮರೆಯಲಾಗದ ತೊದಲ ಹಾಡನುಲಿದು.
ಮೈಸೂರ ಕನ್ನಡದ ನುಡಿಗುಡಿಯ ಸಂಸ್ಕೃತಿಯ
ಕಂಪು ಸುತ್ತಲು ಹರಡುವಂತೆ ಮಾಡು.

ಮೆಟ್ಟಲನು ಹತ್ತುವುದು ಕೆಲವು ಜೀವದ ಪುಣ್ಯ;
ಬೆಳಕ ತರುವರು ಅವರು ನಾಡಿಗೆಲ್ಲ.
ದೂರದಲೆ ಕಯ್‌ಮುಗಿವುದುಳಿದ ಜನತೆಯ ಭಾಗ್ಯ;
ಎಂತೊ, ಈ ನುಡಿಗುಡಿಗೆ ಋಣಿಗಳೆಲ್ಲ.

ಚೆಲುವಿನ ತೆನೆ, ಬಯಕೆಯ ಗೊನೆ,
ಜಾಣಿನ ಮನೆ ಮೈಸೂರು.
ಹೊನ್ನಿನ ಹೊಳೆ, ಹಾಡುವ ಶಿಲೆ,
ಒಲುಮೆಯ ಕೆನೆ, ಮೈಸೂರು.

ಎಲ್ಲ ಭಾಷೆಗಳಿಲ್ಲಿ ಸೇರಿವೆ;
ಹೊಸತು ಬಾಳನು ಕಡೆದಿವೆ;
ಎಲ್ಲ ಮೂಲೆಗೆ ಬೆಳಕು ಹರಡಿದೆ;
ಹಸುರು ಹೂವನು ಮುಡಿದಿದೆ.

ಬೆಳಕಿನರಮನೆಯ ಸುತ್ತ ಬನಬನದ
ಚಿಲುಮೆಯುಕ್ಕಿ ಹೂವರಳಲಿ!

ಬೆಳಗಿ ಬೆಳಗಿಸಲಿ ನೂರು ಹೊಳೆ ಹರಿವ
ನಾಡ ನಮ್ಮ ದೊರೆ ಆಳಲಿ!

———

೧೩

(ಶ್ರೀಮಾನ್ ಕೆ. ನರಸಿಂಹಮೂರ್ತಿ, ಬಿ.ಎ. ಆನರ್ಸ್ ಅವರಿಂದ)

ಚಂದ್ರಿಕೆಯ ಚಾರುತೆಯ ಮಧುಮಾಸ ಹಾಸವನು
ನಿರುಕಿಸುತ ನಲಿದು ಧರೆ ಸ್ನಿಗ್ಧವೆಂದು,
ಕ್ಷಾಮೋಗ್ರವೇದನೆಯ ಕ್ಷುಬ್ಧಪ್ರವಾಹವನು
ನೋಡಿ ಧರೆ ನರರುಧಿರದಿಗ್ಧವೆಂದು;

ಅನ್ಯೋನ್ಯ ಪ್ರೇಮಿಗಳ ಆಲಿಂಗನವನೊಮ್ಮೆ
ಅಂಧ ಶ್ರದ್ಧಾಢ್ಯತೆಗಳೊಡೆಯುವುದನು,
ಶುಭಕೆ ಶ್ರಮಿಸುವ ನರನ ವಿಜಯ ವರಿಪುದನೊಮ್ಮೆ
ಪರರ ಮಹದಾಕಾಂಕ್ಷೆ ತಡೆಯುವುದನು,

ನೋಡುತೀ ಜೀವನದ ನಾಟ್ಯವಿನ್ಯಾಸವನು
ಜನಮನದ ವರ್ಣಗಳ ಪರಿಕಿಸುತಲಿ,
ಪದದ ಮಂತ್ರಗಳಿಂದ ಲೋಕಹೃದಯದಿ ಮರಳಿ
ಅವುಗಳನು ಸೃಷ್ಟಿಸುತ ಸ್ಥಾಪಿಸುತಲಿ;

ನಮ್ಮ ಮನಸನು ಜೀವವೈವಿಧ್ಯದಿಂ ತುಂಬಿ
ಅಮರಕಾವ್ಯದ ಅಮೃತಕಲೆಯ ತೋರಿ
ಅಶರೀರರಾದಾರ್ಷ ದ್ರಷ್ಟಾರ ಕವಿಗಳೇ,
ನಿಮ್ಮಾತ್ಮವಾಸವಿದು ಶುಭವ ಕೋರಿ!

ನಿಮ್ಮ ಕಾವ್ಯಮಯೂರ ನಾಡ ಮನಬನದಲ್ಲಿ
ನರ್ತಿಸುತ ನಡೆಯುತಿದೆ ಮುಂದೆ ಮುಂದೆ,
ಜೀವನಾರಣ್ಯವಿದೊ! ತೆರೆಯುತಿದೆ, ಅರಳುತಿದೆ,
ತೂಗುತಿದೆ, ಬೆಳಗುತಿದೆ ಮುಂದೆ ಮುಂದೆ.

ನಿಮ್ಮ ಕಾವ್ಯದ ಬೆಳಕನಿಂತು ನಾಡಲಿ ಬೀರಿ,
ನಿಮ್ಮ ಕಾವ್ಯದ ಸುಖದ ಸವಿಯ ತೋರಿ

ಸಹೃದಯರ ಬೃಂದವಿದು ಮುಂದೆ ಸಾಗಿದೆ ಸಾರಿ,
ಪಂಚವಿಂಶತ್ಯಬ್ದಯೋಜನವ ಏರಿ.

ಜ್ಞಾನಸವನೆ ಗುರಿಗೊಂಡ ವಿಶ್ವವಿದ್ಯಾಲಯದ
ರಜತೋತ್ಸವವು ಇಂದು, ಶುಭವ ಕೋರಿ!
ಅಶರೀರರಾದಾರ್ಷ ದ್ರಷ್ಟಾರ ಕವಿಗಳೇ,
ನಿಮ್ಮಾತ್ಮವಾಸವಿದು ಶುಭವ ಕೋರಿ!

೧೪

(ಶ್ರೀಮಾನ್ ಜಿ. ವರದರಾಜಾರಾವ್ ಅವರಿಂದ)

ನಮ್ಮ ನಾಡಿನ ಹಿರಿಯ ಭಾಗ್ಯವೊಂದನು ಕಂಡು
ನುಡಿಗುಡಲು ಪುಟವೆದ್ದು ಕುಣಿಯುತಿದೆ ಹೃದಯ!
ಕಾಲು ಶತಮಾನ ತಾ ತುಂಬಿ ಬಂದಿಹುದಿಂದು
ಮಣಿದು ಕುಣಿಯುವ ಬಾರ ಓ, ನನ್ನ ಗೆಳೆಯ!

ಅಣ್ಣತಮ್ಮದಿರೆಲ್ಲ, ಅಕ್ಕ ತಂಗಿಯರೆಲ್ಲ,
ಒಡಗೂಡಿ, ಸರಸತಿಯ ವೀಣೆದನಿಗೂಡಿ,
ಒಗ್ಗೂರಲ ಮೇಳದಲಿ ಕಿರುನಗೆಯ ಹೂ ಚೆಲ್ಲಿ
ಮೆರೆದಿಹರು ನೆರೆದಿಹರು ನಲಿದಿಹರು ಪಾಡಿ.

ಅಕ್ಕಪಕ್ಕದ ನಾಡುಗಳ ಜತೆಗೆ ಜತೆಯಾಗಿ
ನಿಲ್ಲ ಕೆಚ್ಚನು ನೀಡಿದುದು ವಿದ್ಯೆ ಎದೆಗೆ.
ದಿನದಿನಕೆ ಎನಿತು ಜನ ಮುಂದುಮುಂದಕೆ ಸಾಗಿ
ಪಡೆಯ ಮೇಲ್ ಪಡೆಗೂಡಿ ನಿಂತಿಹರು ಬದಿಗೆ!

ಅರಸರಾಶ್ರಯದಲ್ಲಿ, ಗುರುವರರ ಅಡಿಯಲ್ಲಿ,
ಕಿರಿಯರೇಳ್ಗೆಯ ಬೆಳಸು ಬೆಳೆಯುತಿದೆ ಇಂದು.
ನೈಪು ರೂಪಾದವೊಲು ಮೆರೆಯುವೀ ಗುಡಿಯಲ್ಲಿ
ಕಂಕಣವ ತೊಡುತಿಹುದು ಎಳೆಬಳಗ ನಿಂದು.

ತವರು ನಾಡಿನ ಪ್ರೇಮ ಉಕ್ಕಿ ಹರಿಯುವುದೊಮ್ಮೆ,
ತಾಯ್ನುಡಿಗೆ ದುಡಿವ ಬಗೆ ಚಿಮ್ಮುವುದು ಒಮ್ಮೆ,

ವಿಜ್ಞಾನದಾರತಿಯನೆತ್ತುವರು ಮತ್ತೊಮ್ಮೆ,
ಇಂತು ಸಾಗಿದೆ ಸೋಟ, ಇದೆ ನಮ್ಮ ಹೆಮ್ಮೆ!

ಬಡವ ಬಲ್ಲಿದನಾದ, ಬಲ್ಲಿದನು ಮೇಲಾದ,
ಅರಿವಿನಮೃತವ ಸವಿದು ಹೊನ್ನಾಯ್ತು ಬದುಕು!
ನಾಡಿನಂಗಳವೆಲ್ಲ ಜ್ಞಾನದೀಪಕೆ ಬೆಳಗೆ,
ದೂರ ದೂರಕೆ ಸರಿದು ಓಡಿದುದು ಮಸುಕು.

ನಮ್ಮ ವಿದ್ಯಾನಿಲಯ ನಮ್ಮ ನಾಡಿನ ಹೃದಯ!
ಇದುವೆ ಹಿರಿಯರು ಕಂಡ ಹೊಂಗನಸಿನಭಯ!
"ನ ಹಿ ಜ್ಞಾನೇನ ಸದೃಶಮ್" ಎಂಬ ಹಿರಿನುಡಿಯೆ
ನಮ್ಮ ತಾರಕ ವಾಕ್ಯ, ನಮ್ಮ ಹೆಗ್ಗುರಿಯು.

೧೫

(ಶ್ರೀಮಾನ್ ಎ. ಲಕ್ಷ್ಮಣರಾವ್, ಬಿ.ಎ. ಅವರಿಂದ)

ಬೇಡಿಕೆಯ ನಡೆಸಿಕೊಡು, ಜ್ಞಾನಯೋಗೀಶ!
ಸೃಷ್ಟಿಸಕಲಕೆ ಮೂಲ, ಜಗದಂತ್ಯಶೇಷ!
ವಿಶ್ವಕವಿಜಿಹ್ವೆಗಳ ಚೇತನವಿಶೇಷ!
ನಾಡ ಕಲೆ ರೂಹುಗಳ ಚಿದ್ರೂಪಶೇಷ!
ಓ! ಆದಿಶೇಷ!

ಕನ್ನಡದ ಯದುಮಣಿಯ ಸವಿನೆನಹಶೇಷ!
ಕನ್ನಡಕಲಾನಿಲಯ ಬ್ರಹ್ಮಾಂಡಕೋಷ!
ನಾಡ ರೂವಾರಿಗಳ ನಿರ್ಮಿಸಿ ವಿಶೇಷ
ಅಮರತೆಯ ಪಡೆವಂತೆ ಹರಸು ಅನಿಮೇಷ!
ಹೇ! ವಿಶ್ವತೋಷ!

ನೇಮ ನಗು ನಯ ನೀತಿ ಬಲ್ಲಂಥ ನಾಡಿಗರು
ಗಚ್ಚುಗಾರೆಗಳಿಂದ ಕಟ್ಟಿದ್ದ ನಿಲಯಗಳು—
ಗುರುಶಿಷ್ಯಜಾಲಗಳ, ನಿಲುವುಗಳ ಬಲವುಗಳ

ಅರಿವುಗಳ ಸೋಹಿಗಳ ಪರುಸಮಣಿ ನೆಸಹುಗಳು
ಒಪ್ಪವಿಡೆ ಹೊಳವುಳ್ಳ ಪೀಠಪಡಸಾಲೆಗಳು
ಗೆಲುವಾಂತು ಚೆಲುವಾಂತು ಬೆಳೆಯುತಿವೆ ನೋಡಿ!

ಹೊಳೆಯುತಿವೆ ನೋಡಿ, ಕಳಸಗಳು ಕೂಡಿ,
ಜನಮನದೊಳಾಡಿ, ರಜತರಸ ಮೂಡಿ
ಅಮರಪಥಹೂಡಿ, ಬಾಳಲಿದೆ ನೋಡಿ
ಈ ವಿಶ್ವನಿಲಯ,
ಈ ಕಲೆಯ ವಲಯ,
ಈ ಲಲಿತನಿಲಯ!

ಇದೊ ಬಂತು ಕುಸುಮಹಾಸಗಳ ಈ ಕಾಲ,
ಪರಿಮಳದ ಪಥದಲ್ಲಿ ಬಂಭರದ ಲೀಲ,
ಬಿಜ್ಜೆದೆಯ ಪಕ್ಷಿಗಳ ನವಲೀಲಜಾಲ,
ಭಾವಗರಿಗಳ ಮೇಲೆ ಗುರುಶಿಷ್ಯಮೇಳ,
ಮೇಳಾ, ಆನಂದವೇಳಾ!

ಸಾಹಿತ್ಯವಿಜ್ಞಾನ ರಸದುಂಬಿ ಈಗ,
ಜನಮನದ ಶತದಲವು ಅರಳಿರುವುದೀಗ,
ಎಲ್ಲೆಲ್ಲು ಲಲಿತಯುಗ ಸಂದಿರುವುದೀಗ,
ಬೆಳ್ಳಿಹಬ್ಬಗಳೆಂಬ ಸುಖಸತ್ವಭೋಗ,
ಭೋಗ! ಬಿಜ್ಜೆಗಳ ಯೋಗ!

ಈ ಕಲೆಯ ನಿಲಯದಲಿ ಅರುವತ್ತುನಾಲ್ಕಾದ
ಬಿಜ್ಜೆಗಳು ಹೊಳೆದು, ಕ್ಷೋಣಿಯಕ್ಷೋಹಿಣೀ
ಹರೆಯರೇ ನೆರೆದು, ಪೂರ್ಣಪದ ಪಡೆದು,
ಕುಶಲಕಲೆವಾಹಿನಿಯು, ಹಳ್ಳಿಗಳ ಬಳಸಲ್ಕೆ,
ಪಾಮರರ ನಲಿಸಲ್ಕೆ, ಗುರು ತಿಳಿದು, ಕಲೆ ಬೆಳೆದು,
ಫಲಿಸಲ್ಕೆ ಛಾತ್ರರಲ್ಲಿ!

ಆ ಸೇವೆ ಈ ಗುಡಿಯ ಬೆಳ್ಳಿಯಾಗಿಸಲ್ಕೆ!
ತಾಗಿದವು ತಲೆಯಾಗಿ, ಮಾಗಿದವು ಮನವಾಗಿ

ಉತ್ಸಾಹದೆಡೆಯಾಗಿ, ಕಾಂತಿಮಣಿ ಕಣ್ಣಾಗಿ,
ಹೊಳೆಮೌಳಿ, ಸುಳಿವಾಕ್ಕು, ಗಡುಸುತರ ಕೊರಳು,
ಗುಂಡಾದ ಅಕ್ಷರದ, ಕಲೆಯರಿತ ಚಕ್ಷುಗಳ,
ಘಟಕರೇ ಹೊರಡಲ್ಕೆ ಗೋಪುರದ ಹೊರಗೆ !
ಹೊನ್ನುಹತ್ತಿಯನೆಲ್ಲ ಬೇಡುವುದು ಬಿಟ್ಟು,
ಹರೆಯರಸು ಬೇಡಲ್ಕೆ, ಜಗವೆಲ್ಲವೆಂಬೆ,
ಮೈಸೂರು ಅಂಥವರ ಕಳುಹಲಿನ್ನೆಂಬೆ !

ವಿಶ್ವವಿದ್ಯಾಲಯದ ನಿರ್ಮಿಸಿದ ವಿಭು ಕೃಷ್ಣ,
ತಮ್ಮ ಪುಣ್ಯವನೆಲ್ಲ ಧಾರೆಯೆರೆದಿಹರು—
ಮಾನಸದಯಾತ್ರೆಫಲ, ಕೈಲಾಸ ಕಂಡ ಫಲ,
ಪಡುವಲಲಿ ದಾನಫಲ, ಸಾಮ್ರಾಜ್ಯಭಕ್ತಿಫಲ,
ಜೀವನದ ಯೋಗಫಲ, ಪ್ರಜೆಯೊಲವ ಶುಭಫಲಗ-
ಳೆಲ್ಲವನು ಪಾಲಿಸುತ ಜ್ಞಾನಮಾನಸವಿದನು
ರಚಿಸಿದರು ಅಂದೆ ! ನಾಡಿನಾ ತಂದೆ !

ಕಾವೇರಿಕಾಸಾರ ಸಂಪದಕೆ ಮೂಲ !
ಈ ವಿಶ್ವಕಲೆನಿಲಯ ಸಂಸ್ಕೃತಿಗೆ ಮೂಲ !
ಇಲ್ಲಿರುವ ಶಿಲ್ಪಿಗರು ಸಮೆದಿರುವ ಮೂರ್ತಿಗಳು
ಭಾರತವನಲ್ಲಲ್ಲೆ ಆಳುತಿಹರಿಂದು ! . . .
ಹೆಚ್ಚೇನು ಈಗೀಗ ಕಲೆನಿಲಯಹೆಡೆಮಣಿಯು
ಈ ನಿಲಯದಚ್ಚಿನಲಿ ಮೂರ್ತಿವೆತ್ತಿರುವ—
ಸತ್ಯಪ್ರೇಮದ ಛಾಯ,
ನಿತ್ಯನೇಮದ ಕಾಯ,
ಅಮೃತಮಯಧ್ಯೇಯ,
ಜಯಚಾಮರಾಯ !

ಇಂಥ ಜಯಚಾಮರಾಜೇಂದ್ರರಾ ಸಲ್ಮೆ-
ಗಾಕರವು ಈ ನಿಲಯವಾಗಿರುವ ಹೆಮ್ಮೆ
ಇರಲೆಂದು ಬೇಡುವೆನು ಪರಮಾತ್ಮನಲ್ಲಿ ! . . .

ಹೊನ್ನಿನುತ್ಸವ ಬಂದು,
ರತ್ನದುತ್ಸವ ಸಂದು,
ನಮ್ಮೊಡೆಯ ತಾನೆಂದು,
ಕಲೆಗಳನು ಬೆಳಗಿಸುತ,
ಚಂದ್ರಮನ ನಾಚಿಸುತ,
ತಾನೆ ತಾನಾಗಿರುತ,
ಬಾಳುತಿರಲೆಂಬೆ,
ಈ ನೆಲದಲೆಂಬೆ
ನಮ್ಮೊಡೆಯನೆಂಬೆ!

ಸಂಸ್ಕೃತ ಕವಿತೆಗಳು

೧

(ಶ್ರೀಮಾನ್ ಕೆ. ಗೋಪಾಲಕೃಷ್ಣಶಾಸ್ತ್ರಿಗಳವರಿಂದ)

ಶ್ರೀ ವಿಶ್ವೇಶ್ವರಮಂತ್ರಿವರ್ಯಧಿಷಣಾವಾಲೇ ಸಮಾರೋಪಿತಃ
ಸರ್ ಮಿರ್ಜಾ ಸಚಿವೇಂದ್ರಭೂರಿಕೃಪಯಾ ಸಂಸೇಚಿತಃ ಸಂತತಂ |
ಅದ್ಯ ಶ್ರೀಜಯಚಾಮರಾಜಮಹಿಪಸ್ಯಾಭ್ರೈಃ ಕಟಾಕ್ಷೈರ್ನವೈಃ
ವಿದ್ಯಾನಾಂ ನಿಲಯೋಭಿವರ್ಧಿತತನುರ್ವೃಕ್ಷಃ ಫಲಾಢ್ಯೋಜನಿ ||

ಸಾನಂದಂ ರಜತೋತ್ಸವೇ ಪ್ರಚಲಿತೇ ಹ್ಯಂತೇವಸಂತೋ ಮುದಾ
ವಸ್ತೂನಾಂ ಭವನಂ ವಿಶಂತಿ ವಿವಿಧಾಸ್ತಾಸ್ತಾಃ ಕಲಾ ವೀಕ್ಷಿತುಂ |
ವಿದ್ವಾಂಸೋಪಿ ಸಸಂಭ್ರಮಂ ಸುಕವಿತಾಪಾನೇ ಚ ಬದ್ಧಾದರಾಃ
ಗೋಷ್ಠೀಂ ಸ್ವಾಂ ಪರಿಭೂಷಯಂತಿ ವಿವಿಧಂ ಸಲ್ಲಾಪಮಾತನ್ವತೇ ||

ಲೋಕೇ ಸಾ ಕವಿತಾ ವಿಭಾತಿ ಸರಸಾ ಸಾಲಂಕೃತಿಸ್ಸದ್ಗುಣಾ
ಮಲ್ಲೀಜಾತಿಸುಮಪ್ರಕಲ್ಪಿತಲಲನ್ಮಾಲೇವ ವಿದ್ವದ್ವರಾಃ |
ರಾಜ್ಞಾಂ ಸಂಸದಿ ಕೋವಿದೇಂದ್ರಸದಸಿ ಪ್ರೀತ್ಯಾದೃತಾ ಧಾರ್ಯತೇ
ಮೃದ್ವೀಕಾಧರಮಾಧುರೀ ಮಧುಸುಧಾಸ್ಯಕ್ಕಾರಧುರ್ಯಾ ಭೃಶಂ ||

ಮಾನ್ಯಾಃ ಪಂಡಿತಪುಂಗವಾಃ ಶೃಣುತ ಮೇ ವಿಜ್ಞಾಪನಾಂ ಸಾದರಂ
ಯನ್ಮಾಮದ್ಯ ವಿಸೃಕ್ವರೇ ಚ ಕವಿಭಿಃ ಸಂಮೇಳನೇಸ್ಮಿನ್ ಮಹೇ |
ಅಧ್ಯಕ್ಷಂ ಕುರುತೇ ಕೃತಶ್ಚಿರಮಹೋ ಕ್ಲಿಪ್ತೋಧಮರ್ಣೋಸ್ಮ್ಯಹಂ
ಶ್ರೀವಿದ್ಯಾಲಯಕಾರ್ಯಕರ್ತೃಸುಮನೋಬೃಂದಸ್ಯ ಮೂರ್ಧ್ನಾ ನಮನ್ ||

೨

(ಶ್ರೀಮಾನ್ ಸಿ. ಆರ್. ನರಸಿಂಹಶಾಸ್ತ್ರೀ, ಎಂ.ಎ. ಅವರಿಂದ)

ಜನನೀ ಯಾ ವಿಶ್ರುತಾನಾಂ ಯಾಜ್ಞವಲ್ಕ್ಯಾದಿಯೋಗಿನಾಮ್ |
ಪುಣ್ಯಶ್ಲೋಕಾಃ ಪುರಾ ಯಸ್ಯಾಂ ರಾಮಾದ್ಯಾ ಜನ್ಮ ಲೇಭಿರೇ ||

ವ್ಯಾಸವಾಲ್ಮೀಕಿಮುಖ್ಯೈರ್ಯಾ ಮುನಿಭಿರ್ಗೀತವೈಭವಾ।
ಸುಷುವೇ ಯಾ ರಾಜಪುತ್ರಾನ್ನಾಹವೇಷ್ವಪರಾಙ್ಮುಖಾನ್॥

ಅಶೋಕಾಕ್ಬರ್‌ಪ್ರಭೃತಿಭಿಃ ಭೂಪೈರ್ಯಾ ಪರಿಪಾಲಿತಾ।
ತ್ಯಾಗರಾಜಾದಯೋ ಯಸ್ಯಾಂ ಜಜ್ಞಿರೇ ಗಾಯಕೋತ್ತಮಾಃ॥

ರವೀನ್ದ್ರನಾಥಠಾಕೂರೋ ಯಾಮಲಙ್ಕುರುತೇ ಕವಿಃ।
ಜಗದ್ವನ್ದ್ಯಶ್ಚ ಗಾನ್ಧೀ ಯಾಂ ಮಹಾತ್ಮಾ ಸೇವತೇ ಸದಾ॥

ದೇಶೀಯನೃಪರಾಜ್ಯೇಷು ಪ್ರಥಮಃ ಸ್ಥಾಪನಕ್ರಮೇ।
ವಿಶ್ವೇಶ್ವರಮಹಾಮಾತ್ಯನೀತಿಬೀಜಬೃಹದ್ದ್ರುಮಃ॥

ಮಹೀಶೂರನೃಪೋತ್ತಂಸ ಕೃಷ್ಣರಾಜಾಭಿವರ್ಧಿತಃ।
ವಿಶ್ವವಿದ್ಯಾಲಯೋ ಯತ್ರ ರಾಜತೇ ರಾಜತೇ ಮಹೇ॥

ಸೇಯಂ ಭಾರತಭೂರಸ್ಮನ್ಮಾತಾ ವಿಜಯತಾಂ ಚಿರಮ್।
ಜಗತ್ಕಲ್ಯಾಣಸಿದ್ಧ್ಯರ್ಥಂ ಸ್ವತನ್ತ್ರಾ ಚಾಚಿರಾದ್ಭವೇತ್॥

೩

(ಶ್ರೀಮಾನ್ ಎಂ. ಲಕ್ಷ್ಮೀನರಸಿಂಹಯ್ಯ, ಎಂ.ಎ. ಅವರಿಂದ)

ವಾರಾಣಸೀವಿಶ್ವಕಲಾಲಯೇನ
ಸಾರ್ಧಂ ದಧಜ್ಜನ್ಮ ಕಲಾಲಯೋಽಸೌ।
ನಿಜಾಧಿಪಸ್ಯೈವ ತದೀಶಿತೃತ್ವಂ
ದೃಷ್ಟ್ವಾಽತ್ರ ಮುದಾ ಸ್ವಂ ಸುಭಗಂ ಸು ಮೇನೇ॥

ವಿದ್ಯಾಪ್ರೌಢಿಗುಣಸ್ತೋಮಸಫಲೀಕೃತಜನ್ಮಭಿಃ।
ಸಂಜುಂಡಯ್ಯಮುಖ್ಯೈರ್ಧೀರೈಃ ವರ್ಧಿತೋಽಯಂ ವಿರಾಜತೇ॥

ಚಿರಾತ್ಸನೀವೃತಂ ಲಬ್ಧ್ವಾ ವಾಣ್ಯಾಃ ಪ್ರಿಯತಮಂ ಸುತಮ್।
ಶ್ರೀಸುಬ್ಬರಾಯಮಧ್ಯಕ್ಷಂ ವಾಗ್ದೇವೀಸದ್ಮ ಮೋದತೇ॥

ವಾಣ್ಯಾಲಯೋಽದ್ಯ ನಿಜರೌಪ್ಯಮಹೋತ್ಸವೀಯ-
ಸೌಭಾಗ್ಯಭಾಕ್ ಸುವಿಶದಂ ಹಸತಿ ಪ್ರಮೋದಾತ್।

ಆಶ್ರಿತ್ಯ ರಾಜತಿಲಕಂ ಜಯಚಾಮಭೂಪಂ
ಸ್ವಚ್ಛಾತ್ರಸಂತತಿಪುರೋಗಮುದಾರಭಾವಾತ್ ||

ಜೀಯಾದ್ಯಾದವವಂಶಃ ಜೀಯಾಜ್ಜಯಚಾಮರಾಜಭೂಪಾಲಃ |
ಜೀಯಾದ್ವಾಣೀನಿಲಯೋ ಜೀಯಾಚ್ಛ್ರೀಸುಬ್ಬರಾಯಾರ್ಯಃ ||

೪

(ಶ್ರೀಮಾನ್ ಸಂಕೀಘಟ್ಟಂ ವೆಂಕಟಾಚಾರ್ಯರವರಿಂದ)

ಶ್ರೀಮನ್ನಾಲ್ವಡಿಕೃಷ್ಣಭೂಪಕರುಣಾವಾರಾಶಿಜನ್ಮಾ ಲಸ-
ತ್ಕರ್ಣಾಟಾಂಗಲಸಂಸ್ಕೃತಾದಿಮದಲೈಶ್ಯಾಖಾಶತೈಶ್ಶ್ರೋಭಿತಃ |
ವಿಜ್ಞಾನಂ ಫಲಮುದ್ಗಿರದ್ಭಿರಧಿಕಂ ಸಂಖ್ಯಾವತಾಂ ಮಂಡಲೈಃ
ಸತ್ಪುಷ್ಪೋ ಜಯತಾದಯಂ ಸುರತರುಃ ಶ್ರೀವಿಶ್ವವಿದ್ಯಾಲಯಃ ||

ವಿದ್ಯಾಪೀಠಸ್ತಥಾಯಂ ಬಹುಭಿರುಪಚಿತಿಂ ನೀಯಮಾನಃ ಸಮಂತಾತ್
ಪೀಠಾಧೀಶೈಶ್ಚ ತೈಸ್ತೈರ್ಬುಧಜನನಿವಹೈಃ ಸಮ್ಯಗುಲ್ಲಾಸ್ಯಮಾನಃ |
ಪ್ರಾಪ್ಯ ಪ್ರಖ್ಯಾತವಿದ್ಯಂ ಪ್ರಭುಮುದಿತತನುಃ ಸುಬ್ಬರಾಯಾಭಿಧಾನಮ್
ವರ್ಷಾನತ್ಯೇತಿ ದಿಷ್ಟ್ಯಾ ವಿಬುಧಜನಮುದೇ ಪಂಚವಿಂಶಾನಿದಾನೀಮ್ ||

ಪಾಶ್ಚಾತ್ಯಪೌರಸ್ತ್ಯವಿಭೇದಭಿನ್ನಾಃ ವಿನೇಯಶಿಕ್ಷಾ ವಿಪುಲೀಭವನ್ತ್ಯಃ |
ಕೌಮಾರಭಾವಂ ವಿನಿವರ್ತ್ಯ ವಾಣ್ಯಾಃ ಪ್ರೌಢಿಂ ಪರಾಮುಲ್ಲಲಯಂತಿ ನೂನಮ್ ||

ಜಯಚಾಮರಾಜವಿಭುವರಕಟಾಕ್ಷಕಲ್ಪದ್ರುಮಾಶ್ರಯಾ ಜಯತಾತ್ |
ವಿಜ್ಞಾನಫಲವಿನಮ್ರಾ ವಿಶ್ವಜ್ಞಾನಾಲಯಾಭಿಧಾ ವಲ್ಲೀ ||

೫

(ಶ್ರೀಮಾನ್ ಪಾಠಣಕರ ಚಂದ್ರಶೇಖರಭಟ್ಟರವರಿಂದ)

ಯಾ ವಾಗ್ದೇವೀ ನಿಗಮವಚಸಾಸ್ತ್ರಾವಿ ಗೋಪ್ತ್ರೀ ಮತೀನಾಂ
ಯಾ ವಾ ಭೂಮ್ನಾ ಭುವನಮಖಿಲಂ ಕಾಮಮಾವಿಶ್ಯ ಗೂಢಾ |
ಸಂವಿದ್ರೂಪಂ ಪ್ರಕಟಯತಿ ಯಾ ವಿಶ್ವವಿದ್ಯಾಲಯೇಽಸ್ಮಿನ್
ತಾಮೇವಾದೌ ಮನಸಿ ಕಲಯಾಮ್ಯುತ್ಸವೇ ರಾಜತೇಽದ್ಯ ||

ಜ್ಞಾನಾನ್ಯಾಸ್ಯತ್ಪರಮಧಿಗತಂ ಯತ್ನತೋಽನ್ವೇಷಣೇಷೀ-
ತ್ಯೇವಂ ಧ್ಯೇಯಂ ಮನಸಿ ಕಲಯನ್ ಶಿಕ್ಷಯಂಶ್ಛಾತ್ರವರ್ಗಾನ್ |
ಪ್ರೌಢಿಂ ನೀತ್ವಾ ನವನವಕಲಾದೇಶ್ಯವೈದೇಶ್ಯವರ್ಯೈಃ
ಸರ್ವಾನನ್ಯಾನ್ ಜಯತಿ ಕುತುಕಾದ್ವಿಶ್ವವಿದ್ಯಾಲಯೋ ನಃ ||

ತ್ರೇತಾಯಾಂ ಕಿಲ ರಾಮರಾಜ್ಯಮಭವದ್ಧರ್ಮೋತ್ತರೇ ಶಾಸತಿ
ಶ್ರೀರಾಮೇ ಸುಗುಣೇ ಪುರಾಣವಚನಾದೇವಂ ಪ್ರತೀಮೋ ವಯಮ್ |
ಅದ್ಯ ಶ್ರೀಜಯಚಾಮಭೂಪತಿಲಕೇ ವಿದ್ಯಾಲಯಸ್ಯಾಧಿಪೇ
ಬಿಭ್ರಾಣೇ ಭುವಮಾದರಾಜ್ಜಯಮಯಂ ರಾಜ್ಯಂ ಸಮೀಕ್ಷಾಮಹೇ ||

ವರ್ಷಾಣಾಂ ಖಲು ಪಂಚವಿಂಶತಿರಗಾದ್ಯತ್ಸ್ಥಾಪನಾನಂತರಂ
ಸೋಽಯಂ ಸಾಂಪ್ರತಮಾರ್ಜಿತೇನ ಯಶಸಾಂ ಸ್ತೋಮೇನ ರೂಪ್ಯಾಕೃತಿಃ |
ಇತ್ಯೇವಂ ಮಹಿಮಾ ತನೋತಿ ನಿತರಾಂ ರೂಪ್ಯೋತ್ಸವಾನ್ಸ್ಪರ್ಧತಾಂ
ಸಂಸ್ಪರ್ಧ್ಯಾಚಿರಮೇಧತಾಮತಿತಮಾಂ ಹೃದ್ಯಃ ಸುವರ್ಣೋತ್ಸವಃ ||

ಜಯತು ಜಯಚಾಮನೃಪತಿರ್ನಿರ್ಭರಸೌಭಾಗ್ಯಸಂಪದಾನಂದೈಃ |
ಜಯತು ತದಮಾತ್ಯವರ್ಯೋ ಜಯತು ಚ ವಿದ್ಯಾಲಯಾಧ್ಯಕ್ಷಃ ||

೬

(ಶ್ರೀಮಾನ್ ರಾ. ಅನಂತಕೃಷ್ಣ ಶರ್ಮರವರಿಂದ)

ಮಹೀಶೂರಪುರೀ ವಿಶ್ವವಿದ್ಯಾನಿಲಯರೂಪಿಣೀ |
ಭಾರತೀ ಜಗತಾಮೇಷಾ ಭದ್ರಾಯ ಚಿರಮೇಧತಾಮ್ ||

ಜ್ಞಾನವಿಜ್ಞಾನಸುರಭೀನ್ ವಸನ್ತಾನ್ ಪಞ್ಚವಿಂಶತಿಮ್ |
ಇಯಂ ನೀತವತೀ ನಿತ್ಯಯೌವನಾರಮ್ಭನಿರ್ಭರಾ ||

ನ ಹಿ ಜ್ಞಾನೇನ ಸದೃಶಮಿತ್ಯುದ್ದಾಮೈರ್ಧ್ವಜಾಕ್ಷರೈಃ |
ಜ್ಞಾನಸಾಧನಮಿತ್ಯೇವ ವಿಜ್ಞಾನಂ ಬೋಧ್ಯತೇಽನಯಾ ||

ಅದ್ಯಾರ್ಥಕಾಮೈಕರತಾಃ ನರಾಃ ಪ್ರಾಪ್ತಾಶ್ಚರಾರುತಾಮ್ |
ಅನ್ಯೋನ್ಯಧ್ವಂಸನೋಪಾಯದರ್ಶನೇ ಧನ್ಯಮಾನಿನಃ ||

ದೇಶಸ್ಯ ದೈವತಸ್ಯಾಪಿ ದ್ರೋಗ್ಧಾರಃ ಶಾಠ್ಯದೂಷಿತಾಃ |
ಆತ್ಮನಾಶಂ ಪರೀಣಾಮಮಜಾನನ್ತೋಽತಿಶೇರತೇ ||

ವಿಶ್ವಸೌಭ್ರಾತ್ರವಾಕ್ಕ್ರೂರಾಃ ಪರಹಿಂಸಾಪರಾಯಣಾಃ |
ನಯನ್ತಿ ಪೃಥಿವೀಂ ಕೃತ್ಸ್ನಾಮೇಕಸಂಗ್ರಾಮರಙ್ಗತಾಮ್ ||

ಅಕಾಲಪ್ರಳಯಾಧೀನಪ್ರಾಣಮಾನಧನಾಕುಲೇ |
ಸಮಯೇಽಸ್ಮಿನ್ ವಯಂ ಯಾಮಶ್ಯಮಾಧ್ವನಿ ದಮಧ್ವಜಾಃ ||

ನಾಸ್ಮಾಕಮಸ್ತ್ರಂ ಶಸ್ತ್ರಂ ವಾ ನ ಧನಂ ನಾಪಿ ದೋರ್ಬಲಮ್ |
ಲೋಕಕಲ್ಯಾಣಧೀರೇಕಾ ಜೇಷ್ಯಾಮಸ್ತದ್ಬಲಾಜ್ಜಗತ್ ||

ವಿಶ್ವಂ ವಿಷ್ಣುಮಯಂ ಜ್ಞಾತ್ವಾ ಧ್ಯಾತ್ವಾಽಸ್ಮಾಕಂ ಸಿಸೇವಿಷಾ |
ತೇನ ಪ್ರೀಣಾತು ಸ ಶ್ರೀಮಾನ್ ವಿಶ್ವಮೂರ್ತಿರುರುಕ್ರಮಃ ||

ಅತ್ರ ತೇಜಸ್ವಿನೀ ಭೂಯಾದಧೀತಿರ್ಗುರುಶಿಷ್ಯಯೋಃ |
ಸಂಗ್ರಾಮತಾಮಸೀಸುಪ್ತಜಗತೀಸುಪ್ರಭಾತಕೃತ್ ||

ಸ್ವಸ್ತಿ ಚಿತ್ಪೂರ್ತಯೇ ವಿಶ್ವವಿದ್ಯಾಸಮಿತಿಮೂರ್ತಯೇ |
ಯದುವಂಶಕ್ಷ್ಮಾಪಾಲನಿಸ್ತನ್ದ್ರಾಮಲಕೀರ್ತಯೇ ||

೭

(ಶ್ರೀಮಾನ್ ಎಚ್. ಎಲ್. ಹರಿಯಪ್ಪ, ಎಂ.ಎ. ಅವರಿಂದ)

ಶ್ರೀವಿಶ್ವೇಶಪ್ರಸಾದೇನ ವಿಶ್ವವಿದ್ಯಾನಿಕೇತನಮ್ |
ಜಯತೀದಂ ಮಹೀಶೂರಪುರ್ಯಾಂ ಕರ್ಣಾಟಭೂಷಣಮ್ ||

ವಿಶ್ವೇಶ್ವರಮಹಾಮಾತ್ಯಸನ್ತತೋದ್ಯಮಸತ್ಫಲಮ್ |
ಶ್ರೀಮತ್ಕೃಷ್ಣಮಹೀಪಾಲಕರುಣಾಪಾಙ್ಗಲಾಲಿತಮ್ ||

ಸಙ್ಜುಣ್ಡಾಖ್ಯಸುಧೀರ್ಯಸ್ಯ ಧೌರೇಯಾಣಾಂ ಪುರೋಹಿತಃ |
ಶ್ರೀಮಾನ್ ವ್ರಜೇನ್ದ್ರನಾಥೋಽಪಿ ಯಶೋಮುದ್ರಾಮದಾಸ್ಮದಾ ||

ರಾಜಕಾರ್ಯಪ್ರವೀಣಃ ಶ್ರೀಸುಬ್ಬರಾಯಸ್ಸುವಿಶ್ರುತಃ |
ಅದ್ಯ ಶೇಷಾಹಿವದ್ಯಸ್ಯ ಧುರಂ ವಹತಿ ಲೀಲಯಾ ||

ಸಮಯೇಽಸ್ಮಿನ್ ಸ್ಮರಾಮಸ್ತಾನಧ್ಯಾಪಕಮಹಾಮತೀನ್ |
ರಾಧಾಕೃಷ್ಣಮುಖಿಜರ್ಜ್ಯಾದೀನ್ ಯಶೋವ್ಯಾಪ್ತದಿಗಸ್ತರಾನ್ ||

ಸುಭಾಷಿತರಸಾನನ್ದಕೌಮುದೀಂ ವಿಕಿರನ್ ಶುಭಾಮ್ |
ರಾಲೋ ವಾ ರಾಮಲಿಜಜ್ಗೋವಾ ಕಥಂ ಭೋ ವಿಸ್ಮೃತೇಃ ಪದಮ್ ||

ಏವಂ ಕಲಾನಾಮಾವಾಸಃ ಜ್ಞಾನಾನನ್ದಮಹೋದಧಿಃ |
ಮನೋರಮೋಽಸೌ ವಾಗ್ದೇವ್ಯಾಃ ಪ್ರಾಸಾದಃ ಕಸ್ಯ ನ ಪ್ರಿಯಃ ||

ತಸ್ಮಾತ್ಸಭಾಯಾಮೇತಸ್ಯಾಂ ವಿತರಾಮಃ ಕೃತಜ್ಞತಾಮ್ |
ಯೈರಿಯಂ ವಿತತಾ ಭೂತಿಃ ಪಞ್ಚವಿಂಶತಿವಾರ್ಷಿಕೀ ||

ಜಯತು ಸಹೃದಯಾನಾಂ ಶ್ರೀಮತೀ ಗೋಷ್ಠಿರೇಷಾ
ಜಯತು ಚಿರಮವಿಘಾಷಾಂ ಸತ್ಕವೀನಾಂ ಚ ವಾಣೀ |
ಜಯತು ವಿತತಕೀರ್ತಿರ್ವಿಶ್ವವಿದ್ಯಾಲಯೋಽಸೌ
ಜಯತು ಜಯಸನಾಥಶ್ಚಾಮಭೂಪಾಲವರ್ಯಃ ||

೮

(ಶ್ರೀಮಾನ್ ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಅವರಿಂದ)

ಕರ್ಣಾಟರಾಷ್ಟ್ರರಮಣೀಮುಕುರೇ ಮನೋಜ್ಞೇ
ಶ್ರೀಯಾದವಾನ್ವಯಮಹೀಪತಿಪಾಲಿತೇಽಸ್ಮಿನ್ |
ಮೈಸೂರ್ಪುರೇಽಖಿಲಕಲಾನಿಲಯೋಽಯಮಾವಿ-
ರ್ಭೂತೋಽಸ್ಯ ರಾಜತಮಹೋತ್ಸವ ಏಧತೇಽದ್ಯ ||

ವಿದ್ಯಾಲಯೋಽಯಮವನೌ ಖಲು ಪಂಚವಿಂಶ-
ಸಂವತ್ಸರೇ ವಯಸಿ ಸೈಜಮಹಾಮಹಿಮ್ನಾ |
ಸಂಪಾದಯನ್ ರಜತಶುಭ್ರತಮಾಂ ಸುಕೀರ್ತಿಂ
ರಾರಾಜತಿ ಸ್ವರಜತೋತ್ಸವಸೂಚನಾಯ ||

ಸೋಽಯಂ ವಿಶ್ವಕಲಾಲಯೋ ಭುವಿ ಯಥಾ ಶ್ರೀಕೃಷ್ಣಸಂಸ್ಥಾಪಿತೋ
ದೇಶೀಯೇಷ್ವಖಿಲೇಷು ಭಾರತಮಹಾರಾಷ್ಟ್ರೇಷ್ವಭೂದಾದಿಮಃ |
ವಾಣಿಜ್ಯಾರ್ಥಿಕವೈದ್ಯಯಾನ್ತ್ರಿಕಕಲಾಶಾಖಾಸು ಶಿಕ್ಷಾಪ್ರದ-
ಸ್ಸತ್ಕೀರ್ತಿಂ ಸಮವಾಪ್ಯ ಭಾರತಕಲಾಗಾರೇಷ್ವಭೂದಗ್ರಿಮಃ ||

ವಿದ್ವದ್ಭಾಷಣಪುಸ್ತಕಪ್ರಕಟನೈರ್ಗ್ರಾಮೇಜನಾನ್ ಬೋಧಯನ್
ವಿಜ್ಞಾನಾಮಲತೇಜಸಾ ವಿಸೃಮರಾಜ್ಞಾನಾನ್ಧಕಾರಂ ತುದನ್ |
ವ್ಯಾಯಾಮೈರ್ಭಟಶಿಕ್ಷಣೈರ್ದೃಢತನೂನ್ ಕುರ್ವನ್ ಸ್ವವಿದ್ಯಾರ್ಥಿನೋ
ಮೈಸೂರ್ವಿಶ್ವಕಲಾನಿಧಿಸ್ತ್ವಿಹಪರಶ್ರೇಯೋಽಮೃತಂ ವರ್ಷತಿ ||

ಕರ್ಣಾಟರಾಷ್ಟ್ರಭವವಿಶ್ವಕಲಾಲಯೋಽಯಂ
ಕರ್ಣಾಟದೇಶಜನತೋದ್ಧೃತಿಬದ್ಧದೀಕ್ಷಃ |
ಕರ್ಣಾಟಜಾನಪದಸಂಸ್ಕೃತಿವರ್ಧನೇ ಸ
ಕೇನ್ದ್ರಂ ಹಿ ಶಸ್ತಗುಣಿಬಾಲಕಸಂಘಸಾನ್ದ್ರಃ ||

ಜನಪತಿ ಜಯಚಾಮರಾಧಿಷ್ಠಿತಸ್ಸುಬ್ಬರಾಯಾ-
ಹ್ವಯಬುಧತಿಲಕೋಪಾಧಿಷ್ಠಿತೋ ಧರ್ಮಮೂರ್ತಿಃ |
ಸುತಗುಣಬುಧಸಂಸಚ್ಛಾಸಿತಸ್ಸತ್ಯಕರ್ಮಾ
ಜಯತಿ ವಿಜಯಕೀರ್ತ್ಯಾ ವಿಶ್ವವಿದ್ಯಾಲಯೋಽಯಮ್ ||

೯

(ಶ್ರೀಮಾನ್ ತಿರು ತಿರು ಶ್ರೀನಿವಾಸಗೋಪಾಲಾಚಾರ್ಯರವರಿಂದ)

ಶ್ರೀಮತ್ಕರ್ಣಾಟದೇಶೇ ಬುಧಜನಮಹಿತೇ ಶ್ರೀಮಹೀಶೂರಪುರ್ಯಾಂ
ಶ್ರೀಮಾನ್ ಕೃಷ್ಣಕ್ಷಿತೀನ್ದ್ರೋ ನಿರುಪಮಮಹಿಮಾ ವಿಶ್ವವಿಖ್ಯಾತಕೀರ್ತಿಃ|
ನಾನಾ ವಿದ್ಯಾಭಿವೃದ್ಧ್ಯೈ ನಿರುಪಮಸುಬಹುಶ್ರೇಯಸಾಂ ಚ ಪ್ರಸೂತ್ಯೈ
ಸಂಸ್ಥಾಪ್ಯಾಚೀಕರತ್ಸ್ವಂ ಜನಪದಮಸಮಂ ವಿಶ್ವವಿದ್ಯಾಲಯಾಗ್ರ್ಯಮ್||

ನಾನಾದೇಶೇಷು ರಾಜದ್ಬಹುವಿಧಸುಮಹಾವಿಶ್ವವಿದ್ಯಾಲಯೇಷು
ಪ್ರಖ್ಯಾತಿಂ ಪ್ರಾಪ್ಯ ಹೃದ್ಯಾಮನಿತರಸುಲಭಾಂ ಮೇಧಯಾ ಜೃಮ್ಭಮಾಣಃ|
ಗಾಮ್ಭೀರ್ಯೌದಾರ್ಯಧೈರ್ಯಪ್ರಭೃತಿಶುಭಗುಣೋ ರಾಜಕಾರ್ಯಪ್ರವೀಣಃ
ಸೋಽಯಂ ಶ್ರೀಸುಬ್ಬರಾಯಾಹ್ವಯವಿಬುಧಮಣಿರ್ನಿತ್ಯಮಿನ್ಧಾಂ ಜಗತ್ಯಾಮ್ ||

ಜ್ಞಾನೇನೋಪಮಿತಂ ಪವಿತ್ರಮಿತರನ್ನಾಸ್ತೀತಿ ಗೀತಂ ಪುರಾ
ಶ್ರೀಕೃಷ್ಣೇನ ತದೇತದತ್ರ ಸುಮಹಾವಿದ್ಯಾಲಯೇ ಶೋಭತೇ|
ಅತ್ಯುಚ್ಚೇ ಧ್ವಜವರ್ಯ ಏತದಪಿ ಚ ಶ್ರೀಕೃಷ್ಣರಾಜಪ್ರಭೋಃ
ಸತ್ಯೋದ್ಧಾರಪರಸ್ವಸಂಗರವರಸ್ಯಾತ್ಯನ್ತಸೌಭ್ರಾತ್ರಕಮ್ ||

ಶ್ರೀಮಚ್ಛ್ರೀಜಯಚಾಮರಾಜಸುಮಣಿಃ ಶ್ರೀವಿಶ್ವವಿದ್ಯಾಲಯೇ
ಮೇಧಾಂ ಪ್ರಾಪ್ಯ ಸುಧೀವರ್ಯೈರಸುದಿನಂ ಸಂಶ್ಲಾಘಿತಾಂ ಭೂರಿಶಃ|
ಸರ್ವತ್ರೋಚ್ಚತರಾಃ ಪ್ರಶಸ್ತಿಪದವೀಸ್ಸಂಶ್ರಿತ್ಯ ದೇದೀಪ್ಯತೇ
ಶ್ಲಾಘ್ಯೋ ಭಾಗ್ಯವಿಲಾಸ ಏಷ ಸುಮಹಾವಿದ್ಯಾಲಯಸ್ಯಾಸ್ಯ ನಃ||

೧೦

(ಶ್ರೀಮಾನ್ ಸೋ. ನರಸಿಂಹಾಚಾರ್ಯರವರಿಂದ)

ಅವನೀತಲತಿಲಕಂ ಕಿಲ ರಾಜ್ಯಂ ಯದುವಂಶ್ಯಪಾರ್ಥಿವಮಣೀನಾಮ್ |
ಕರ್ಣಾಟಾಖ್ಯಾಭಿಖ್ಯಂ ವಿರಾಜತೇ ಭಾರತೇ ವಿಭವದೀಪ್ರಮ್ ||

ತುರ್ಯಃ ಕೃಷ್ಣನರೇನ್ದ್ರೋ ರಾಜ್ಯಶ್ರಿಯಮಾಪ್ಯ ರಞ್ಜಯನ್ ಜನತಾಃ |
ವಿದ್ಯಾಭಿರ್ವಿವಿಧಾಭಿಃ ಪ್ರಕರ್ಷಕಾಷ್ಠಾಂ ಪ್ರಚಾರಯಿತುಕಾಮಃ ||

ನಿಜಕುಲಜಚರಿತವಿದ್ಯಾವಿಭವಯಶೋಮೂರ್ತಿನಿತ್ಯನಿರವದ್ಯಮ್ |
ಹೃದ್ಯಂ ಚ ವಿಶ್ವವಿದ್ಯಾಸಂಸ್ಥಾನಂ ವ್ಯರರಚತ್ಸುಧೀವರ್ಯೈಃ ||

ಸಾನನ್ದಂ ದೇಶಭಾಷಾ ಇಹ ಹಿ ಬಹುವಿಧಾಸ್ತತ್ತದಜ್ಞೈಸ್ಸಹೈವ
ಪ್ರಖ್ಯಾತ್ಯೈಃ ಸ್ವಸ್ವದೇಶೇ ವಿಶದಪರಿಚಯಪ್ರೌಢಪಾಠಕ್ರಮೋತ್ಕೈಃ |
ನಿಸ್ತನ್ದ್ರಂ ದೇಹಪೋಷಾದ್ಯುಚಿತಪರಿಕರಶ್ಲಾಘ್ಯಸೌಖ್ಯಂ ಸುಧೀಭಿಃ
ಪಾಠ್ಯನ್ತೇ ಸ್ವಸ್ವಕಕ್ಷ್ಯಾನುಗುಣಗುಣಯಶಃಪ್ರೌಢಿಮೋತ್ಕರ್ಷಕಾಮಾಃ ||

ಪ್ರತ್ನಾನಿ ಗ್ರನ್ಥರತ್ನಾನ್ಯತಿಗಹನಮಹಾರ್ಥಾಢ್ಯತೇಜಾಂಸಿ ಭೂರೀ-
ಣ್ಯಾಸಾದ್ಯಕ್ಲೇಶಲಭ್ಯಾನ್ಯುರುಧನನಿಚಯಂ ಹರ್ಷತೋಽಪ್ಯರ್ಪಯಂಶ್ಚ |
ಹೃದ್ಯಾಂ ಮುದ್ರಾಭಿರಾಮಾಂ ಮತಿಸುರಭಿಲಸತ್ಪುಸ್ತಪುಷ್ಪಾಢ್ಯಮಾಲಾಮ್
ಕಣ್ಠೇ ಕುರ್ವನ್ ಬುಧಾನಾಂ ಲಸತಿ ಸುರತರುರ್ವಿಶ್ವವಿದ್ಯಾಲಯೋಽಯಮ್ ||

ಏವಂವಿಧವಿಭವಯುತಾಃ ಬಹುಗುಣಿತಾ ಉತ್ತರೋತ್ತರಂ ವಿಭವೈಃ |
ಸ್ವರ್ಣೋತ್ಸವಾದಯೋಽಪಿ ದ್ರಾಗೇವಾವೋದಯನ್ತು ಬುಧಬೃನ್ದಮ್ ||

೧೧

(ಶ್ರೀಮಾನ್ ವಿ. ನಾಗರಾಜಶಾಸ್ತ್ರೀ, ಎಂ.ಎ. ಅವರಿಂದ)

ನಿಸರ್ಗಕಾಂತಾಸುವಿಲಾಸರಂಗ-
ಸೌಂದರ್ಯಸಾರೋದಯಭವ್ಯರಂಗಃ |
ವಸಂತಲಕ್ಷ್ಮೀವರನಾಟ್ಯರಂಗೋ
ವಿಭಾತಿ ಕರ್ಣಾಟಕದೇಶ ಏಷಃ ||

ಶ್ರೀಮನ್ನಾಲ್ವಡಿಕೃಷ್ಣರಾಜನೃವರೇಣಾತ್ರೈವ ಸಂಸ್ಥಾಪಿತಃ
ಶ್ರೀವಿಶ್ವೇಶ್ವರವರ್ಯಮಂತ್ರಿಮಣಿನಾ ಸಂಕಲ್ಪಿತೋಽಯಂ ಪುರಾ |
ವಾಗ್ದೇವೀಸುವಿಲಾಸಖೇಲನವನಂ ಕರ್ಣಾಟಕಲ್ಪದ್ರುಮಃ
ಸುಜ್ಞಾನಾಮೃತವಾರಿಧಿರ್ವಿಜಯತೇ ಶ್ರೀವಿಶ್ವವಿದ್ಯಾಲಯಃ ||

ಸರ್ವೇಽಸ್ಮಿನ್ ಸುಕಲಾಲಯೇ ಹಿ ಗುರವಸ್ಸಿದ್ಧಾಶ್ಚ ವಿದ್ಯಾಧರಾಃ
ಸರ್ವೇತೇ ವಿಬುಧಾ ಯತಸ್ಸುಮನಸಸ್ಸರ್ವೇಽತ್ರ ಯೇ ಸಂಸ್ಥಿತಾಃ |
ಸರ್ವೇಚಾಪಿ ಕಲಾಧರಾಶ್ಚ ಕವಯೋ ಜ್ಞಾನಾಮೃತಾಸ್ವಾದಿನಃ
ತನ್ಮನ್ಯೇ ತ್ರಿದಶಾಲಯಾದ್ವರಮಿಮಂ ಶ್ರೀವಿಶ್ವವಿದ್ಯಾಲಯಂ ||

ಆಚಾರ್ಯೈಸ್ಸುಕಲಾಪ್ರಯೋಗನಿಪುಣೈಸ್ಸಂಶೋಧನೇ ಬೋಧನೇ
ಕ್ರೀಡಾವಾಚನವಾದಸಕ್ತಪರಿಷತ್ಸ್ವಾಮೋದನೇ ಚೋದನೇ |
ಮೌಢ್ಯಾನಕ್ಷರತಾನಿವಾರಣವಿಧೌ ಗ್ರಾಮೇಷು ವಿದ್ಯಾರ್ಥಿಭಿ-
ರ್ನೀತಾನ್ಯೇವ ಹಿ ಪಂಚವಿಂಶತಿಮಹಾವರ್ಷಾಣ್ಯಹೋ ನಿರ್ಭರಂ ||

ತಸ್ಮಾದತ್ರ ಸಮಾಗತಾಃ ಪ್ರಮುದಿತಾಃ ಸರ್ವೇ ವಯಂ ದೂರತ-
ಸ್ಸಂಪ್ರಾಪ್ತೇ ವೃಷವತ್ಸರೇ ಶುಭಕರೇ ಚಾಷಾಢಮಾಸೇ ತಥಾ |
ತಸ್ಯಾರ್ಧೇಽಸಿತಪಕ್ಷಗೇ ವರದಿನೇ ಮಾಸ್ವೇ ಚತುರ್ಥೇ ತಿಥೌ
ಭವ್ಯೇಽಸ್ಮಿನ್ ರಜತೋತ್ಸವೇ ಚ ಸುಕಲಾಽಽರಾಮಸ್ಯ ಹರ್ಷೋತ್ಸವೇ ||

ಶ್ರೀಮಾನಿನೀ ವಸತು ಸೋ ಮಂದಿರೇಷ್ವಖಿಲಕಾಮಪ್ರದಾ ಚ ಸುಕಲಾಽ-
ರಾಮಸ್ಸದಾ ಬುಧಲಲಾಮಾಶ್ರಯೋ ಜಯತು ಭೂಮೀತಲೇ ಸುಯಶಸಾ |
ಕ್ಷೇಮಂಕರೀ ರುಚಿರಹೇಮಾಂಬರಾ ತ್ರಿದಶಭಾಮಾರ್ಚಿತಾಬ್ಜಚರಣಾ
ಚಾಮುಂಡಿಕಾ ಭವತು ಭೂಮೀಶಮೌಳಿಜಯಚಾಮೇಂದ್ರಪಾಲನಪರಾ ||

೧೨

(ಶ್ರೀಮಾನ್ ಎಸ್. ವಿ. ಶ್ರೀನಿವಾಸರಾಘವಾಚಾರ್, ಎಂ.ಎ. ಅವರಿಂದ)

ವಿದ್ಯಾವಾಸಾಗ್ರಗಣ್ಯಾಃ ಪ್ರಭುವರಕೃಪಯಾ ವರ್ಧಮಾನಾಃ ಪ್ರಕೃಷ್ಟಾಃ
ಸಂಸ್ಥಾಪ್ಯಾನೇಕಶಾಖಾಃ ದಿಶಿದಿಶಿ ಯುವಕಾನ್ ಸತ್ವರಂ ಬೋಧಯಿಂಶ್ಚ |
ಗ್ರಾಮೇ ಗ್ರಾಮೇ ಚ ತನ್ವನ್ ಸಕಲಸುಖಕರೀಂ ಸಂಸ್ಕೃತಿಂ ಯಸ್ಸಮಂತಾ-
ದಸ್ಮದ್ವಿದ್ಯಾನಿವಾಸಸ್ಸವಿಭವಮನಿಶಂ ವರ್ಧತಾಂ ಮಾಹಿಶೂರಃ ||

ಯತ್ರ ಪ್ರಾಜ್ಞಾಃ ವಿಮಲಮತಯೋಽಧೀತವಿಜ್ಞಾನಶಾಸ್ತ್ರಾಃ
ಸ್ವೀಯಂ ದೇಶಂ ಸುಖದಮನಿಶಂ ಪ್ರಜ್ಞಯಾ ಕಲ್ಪಯಂತಃ |
ದೇಶೇ ದೇಶೇ ಪ್ರಥಿತಯಶಸೋ ಭಾಂತಿ ಕರ್ಣಾಟಕೀಯಾಃ
ವಿದ್ಯಾವಾಸಂ ಸುರತರುಸಖಂ ಸರ್ವದಾ ಸಂಸ್ಮರಂತಃ ||

ಪರಾಂ ಮೋಹಾಂಧಾನಾಮುಪಕೃತಿಮಭಿಪ್ರೇತ್ಯ ವಿಬುಧಾಃ
ಮಹಾಪ್ರಜ್ಞೈಃ ಸ್ಥಾನಾಧಿಪತಿಭಿರುದಾರೈರ್ದಿಶಿದಿಶಿ |
ಪ್ರಚಾರೋಪನ್ಯಾಸಾನತಿಸರಲಮಾಪಕ್ತುಮನಿಶಂ
ನಿಯುಕ್ತಾಸ್ಸುಬ್ಬಾಯರ್ಯಪ್ರಭೃತಿಭಿರಿದಾನೀಂ ಸುಮತಯಃ ||

ಪ್ರಾಚ್ಯಾಂ ವಿದ್ಯಾಮಮೋಘಾಮತಿಕಠಿನನಯಂ ಪ್ರಾಕೃತಂ ತತ್ತ್ವಶಾಸ್ತ್ರಂ
ವಿಜ್ಞಾನಂ ಚೇತಿಹಾಸಂ ಸಪರಿಕರಮಿಹಾಧೀತ್ಯ ಸಾಹಿತ್ಯವಿದ್ಯಾಂ |
ತೀಕ್ಷ್ಣಪ್ರಜ್ಞಾಃ ಪ್ರಗಲ್ಭಾಃ ಪ್ರವಿದಿತಗಣಿತಾಸ್ಸಾದರಂ ಚಾರ್ಥಶಾಸ್ತ್ರಂ
ವಿಖ್ಯಾತಾಂ ರಾಜನೀತಿಂ ಗುರುವರಸವಿಧೇಽಭ್ಯಸ್ಯ ಛಾತ್ರಾಃ ಕೃತಾರ್ಥಾಃ ||

೧೩

(ಶ್ರೀಮಾನ್ ಬಿ. ಎಚ್. ಶ್ರೀಧರ, ಬಿ.ಎ. ಆನರ್ಸ್ ಅವರಿಂದ)

ಶ್ರೀಮದ್ಯದುಕುಲಸಂಪದ್-
ವ್ಯೋಮಸ್ಥಿತಭಾಸುರಮಲಕೀರ್ತಿಶ್ರೀಶಃ |
ಪ್ರೇಮಾನ್ವಿತಹೃದಯೋ ಜಯ-
ಚಾಮೇಂದ್ರೋ ಜಯತು ಸರ್ವದಾ ಕರ್ಣಾಟೇ ||

ಕವಿತಾಂಬುಧಿಚಂದ್ರೋ ಜನ-
ಭುವನೋತ್ಸವಹೇತುರಸಮಪಂಡಿತವರ್ಯಃ |

ಸುವಿಮಲಕನ್ನಡಕಾವ್ಯ-
ಪ್ರವರ್ತಕಃ ಪಾತು ಪಂಪದೇವಃ ಸತತಂ ||

ಮೋದಾನ್ವಿತಕಾವೇರೀ-
ಪಾದಾದ್ಗೋದಾವರೀಶಿರಃಪರ್ಯಂತಂ |
ಅದ್ಯತನಕನ್ನಡೀಯಾ
ಮೋದಂತೇ ತದ್ವಿಭೂತಿಗುರುತಾವಿಷಯೇ ||

ಆಚಾರ್ಯವರ್ಯೈಃ ಶಾಸ್ತ್ರ-
ಪ್ರಾಚುರ್ಯಂ ವರ್ಧತೇ ಸುಧೀಭಿಃ ಶಿಷ್ಯಾಃ |
ವಾಚಾಭಿಜ್ಞೈಃ ಸಕಲಕ-
ಲಾಚಯಮರ್ಮಜ್ಞತಾಂ ಪ್ರಯಾಂತ್ಯತ್ರೈವ ||

ಏಕಕುಲಪ್ರಸವಾಶ್ಚಾ-
ನೇಕ ವಿಭಾಗೋಷಿತಾ ಅಪಿ ಪ್ರಾಂತೀಯಾಃ |
ಏಕೀಭವಂತು ಕನ್ನಡ-
ಲೋಕೇ ಪ್ರಜ್ವಾಲನಾಯ ತರುಣಸ್ಫೂರ್ತೇಃ ||

ಜಯಕರ್ಣಾಟಕದಯಿತೇ
ಜಯದೇ ಜಯವಾಣಿ ಕನ್ನಡಾಯತನಸ್ಥೇ |
ಜಯಕವಿಗಣನುತಗುಣಸಂ-
ಚಯೇ ನಮಸ್ತೇ ಶುಭೋದಯಃ ಸಂಭೂಯಾತ್ ||

PRINTED IN INDIA AT THE WESLEY PRESS AND PUBLISHING HOUSE, MYSORE CITY

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦, ಸಾದಾ ೧೨ ಆಣೆ.

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು: ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. **ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. **ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು: ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು: ಮಾಸ್ತಿ ವೆಂಕಟೇಶ ಐಯಂಗಾರ್, ಎಂ.ಎ.

೭. **ಆರೋಗ್ಯ ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು: ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು: ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು: ವಿ. ಸೀತಾರಾಮಯ್ಯ, ಎಂ.ಎ.

೧೦. **ಸಂಸ್ಕೃತ ನಾಟಕ**—ಲೇಖಕರು: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು: ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು.

೧೩. **ರಾಜನೀತಿ**—ಲೇಖಕರು: ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಶ್ರೀ ಡಿ. ಚಂಪಾಬಾಯಿ, ಎಂ.ಎ.

ಕ್ಯೂರೇಟರ್, ಓರಿಯೆಂಟಲ್ ಲೈಬ್ರೆರಿ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

ಬೆಲೆ: ಸಾಧಾರಣ ಪ್ರತಿಗೆ ೨ ಆಣೆ; ಉತ್ತಮ ಪ್ರತಿಗೆ ೩ ಆಣೆ

೧: ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎಸ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
೧೩. ಮದುವೆಯ ಇತಿಹಾಸ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕನ್ನಡ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.

೧೯೪೦—೪೧ ರಲ್ಲಿ ಅಚ್ಚಾಗಿರುವ ಪುಸ್ತಕಗಳು

೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಾ|| ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರಿ, ಎಂ.ಎ.
೨೪. ವಿಡಂಬನ—ಎಸ್. ವಿ ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಹೆಚ್. ಸುಬ್ಬಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಹೆಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

ವಾರ್ಷಿಕ ಚಂದಾ—ಸಾಧಾರಣ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೦—೦

ಜಿ. ಹನುಮಂತರಾವ್, ಎಂ.ಎ.,

ಸಂಪಾದಕ, ಪ್ರಚಾರ ಪುಸ್ತಕಮಾಲೆ, ಮಹಾರಾಜರವರ ಕಾಲೇಜು, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *United Karnataka*, Dharwar; *Annals of the Venkateswara Oriental Institute*, Tirupathi; *The Jaina Siddhantha Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Fergusson College Magazine*, Poona; *Karnataka College Miscellany*, Dharwar; *The Journal of the Literary Committee of the L.E. Association*, Dharwar.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತರುಣಕರ್ನಾಟಕ', ಹುಬ್ಬಳ್ಳಿ; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ರಾಷ್ಟ್ರಬಂಧು', ಮಂಗಳೂರು; 'ವಿಶ್ವಕರ್ಣಾಟಕ', ಬೆಂಗಳೂರು; 'ಸ್ವದೇಶಾಭಿಮಾನಿ', ಮಂಗಳೂರು.

ಮಾಸಪತ್ರಿಕೆಗಳು

'ಅಧ್ಯಾತ್ಮ ಪ್ರಕಾಶ', ಹೊಳೆನರಸೀಪುರ; 'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿಚಾರವಾಹಿನಿ', ತೀರ್ಥಹಳ್ಳಿ; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುದರ್ಶನ', ಮೈಸೂರು; 'ಸುಬೋಧ', ಬೆಂಗಳೂರು; 'ಜೀವನ', ಧಾರವಾಡ; 'ಕಥಾಂಜಲಿ', ಬೆಂಗಳೂರು; 'ವಿಭೂತಿ' (ತೆಲುಗು), ಸಿಕಿಂದ್ರಾಬಾದು; 'ಕಥಾವಳಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಗರಿಕೆ', ಮೈಸೂರು; 'ದೇಶೀಯ ವಿದ್ಯಾಶಾಲಾ ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ', ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಗಳು

ಇಂಗ್ಲಿಷ್ ಗೀತಗಳು—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ. ಬೆಂಡು ಕಾಗದದ ಪ್ರತಿ, ಬೆಲೆ ರೂ. ೧-೮-೦.

ಉಮರನ ಒಸಗೆ—ಡಿ. ವಿ. ಗುಂಡಪ್ಪನವರಿಂದ. ಬೆಲೆ ರೂ. ೧-೦-೦.

ಮುದ್ದಣ—ನಂದಳಿಕೆ ಲಕ್ಷ್ಮೀನಾರಣಪ್ಪನವರ ಜೀವನಚರಿತ್ರೆ ಮತ್ತು ಗ್ರಂಥಗಳ ವಿಮರ್ಶೆ. (ಪ್ರತಿಗಳು ಮುಗಿದುಹೋಗಿವೆ) ಬೆಲೆ ರೂ. ೨-೦-೦.

ಗದಾಯುದ್ಧ ನಾಟಕಂ (ದ್ವಿತೀಯ ಮುದ್ರಣ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ ಸಂಪಾದಿತವಾದದ್ದು. ಬೆಲೆ ೦-೮-೦.

ಭಕ್ತಿಭಾಂಡಾರಿ ಬಸವಣ್ಣನವರು (ದ್ವಿತೀಯ ಮುದ್ರಣ)—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರಿಂದ. ಬೆಲೆ ರೂ. ೧-೦-೦.

ತಾವರೆ—ಎಂ. ವೆಂಕಟೇಶ ಐಯಂಗಾರ್, ಎಂ.ಎ. ಅವರಿಂದ ರಚಿತವಾದ ಪದ್ಯ ಕಾವ್ಯ (ಸಚಿತ್ರ). ಬೆಲೆ ೦-೧೨-೦.

ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ. ಅವರಿಂದ. ಡಿ. ವಿ. ಗುಂಡಪ್ಪನವರ ಅವತರಣಿಕೆಯೊಡನೆ. ಬೆಲೆ ರೂ. ೧-೦-೦.

ಚೀನಾದೇಶದ ಬೌದ್ಧ ಯಾತ್ರಿಕರು—ಜಿ. ಪಿ. ರಾಜರತ್ನಂ, ಎಂ.ಎ. ಅವರಿಂದ. ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್. ಅವರ ಮುನ್ನುಡಿಯೊಡನೆ. ರೂ. ೧.

ಭಾಸನ ಏಕಾಂಕ ನಾಟಕಗಳು—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಸಾದಾ ಪ್ರತಿ, ಬೆಲೆ ರೂ. ೧-೦-೦ ; ಕ್ಯಾಲಿಕೋ ಪ್ರತಿ, ಬೆಲೆ ರೂ. ೧-೮-೦.

ಷೇಕ್ಸ್‌ಪಿಯರ್ ನಾಟಕ ಕಥೆಗಳು (ನಾಲ್ಕು)—ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದ. ಎಸ್. ವಿ. ರಂಗಣ್ಣ, ಎಂ.ಎ. ಅವರ ಅವತರಣಿಕೆಯೊಡನೆ. ಬೆಲೆ ೦-೧೨-೦.

ಮಲೆನಾಡಿನ ಚಿತ್ರಗಳು (ಸಚಿತ್ರ)—ಕೆ. ವಿ. ಪುಟ್ಟಪ್ಪ, ಎಂ.ಎ. ಅವರಿಂದ. ಬೆಲೆ ರೂ. ೧-೦-೦.

ಭಾಸಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಂದ. ಬೆಲೆ ರೂ. ೧-೪-೦.

ವಿಗಡ ವಿಕ್ರಮರಾಯ—ಸಂಸ ವಿರಚಿತ (ಎ. ಡಿ. ಎ. ಅವರಿಂದ ಪ್ರಕಾಶಿತವಾದ ದ್ವಿತೀಯ ಮುದ್ರಣ). ಬೆಲೆ ೦-೧೨-೦

ಮೈಸೂರು ದೇಶದ ವಾಸ್ತುಶಿಲ್ಪ (ಸಚಿತ್ರ), ಭಾಗ ೧—ಬಿ. ವೆಂಕೋಬರಾವ ಬಿ.ಎ. ಅವರಿಂದ. ಬೆಲೆ ರೂ. ೨-೦-೦

ಭಾಸಕವಿಯ ಚಾರುದತ್ತ—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಬೆಲೆ ೦-೮-

ಕುಮಾರವ್ಯಾಸ ಪ್ರಶಸ್ತಿ—(ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಾಶಿತವಾದದ್ದು) ಕ್ಯಾಲಿಕೊ ಪ್ರತಿ ರೂ. ೨-೮- ; ಸಾದಾ ರೂ. ...

PRINTED IN INDIA AT THE WESLEY PRESS AND PUBLISHING HOUSE, MYSORE CI